ಮಂಗಳವಾರ, ಮೇ 23, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 142 | ಪುಟ 12

www.prajavani.net

prajavani.net | prajavani | prajavani | prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಆಳ-ಅಗಲ: ₹2000 ನೋಟಿನ ಚಲಾವಣೆ ವಾಪಸ್ ಏನು, ಎತ್ತ?

ರಾಷ್ಟ್ರಪತಿಗಿಲ್ಲ ಆಹ್ವಾನ: ಪ್ರತಿಪಕ್ಷಗಳ ಟೀಕೆ 9

'ಪೆಟ್ರೋಲ್ ಬಂಕ್‌ಗಳಲ್ಲಿ ಹೆಚ್ಚಿದ ನಗದು ವಹಿವಾಟು' 8

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
61,963 ▲	18,314 ▲	₹62,720 (ಬೆಂಗಳೂರು)	₹74,500 (ಬೆಂಗಳೂರು)	82.85 ▼

19 ಯೋಜನೆಗಳ ಪೈಕಿ ಎರಡು ಕಾಮಗಾರಿಗಳಷ್ಟೇ ಪೂರ್ಣ: ಉಳಿದ ಕಾಮಗಾರಿಗಳು ಮಂದಗತಿ

ರಾಜ್ಯದಲ್ಲಿ 'ಭಾರತ್‌ಮಾಲಾ' ಗ್ರಹಣ

• ಮಂಜುನಾಥ ಹೆಬ್ಬಾರ್

ನವದೆಹಲಿ: ಕೇಂದ್ರ ಹೆದ್ದಾರಿ ಹಾಗೂ ಭೂ ಸಾರಿಗೆ ಸಚಿವಾಲಯವು 'ಭಾರತ್ ಮಾಲಾ ಪರಿಯೋಜನಾ' ಅಡಿ ಕರ್ನಾಟಕ ರಾಜ್ಯದಲ್ಲಿ ಅನುಷ್ಠಾನಗೊಳಿಸುತ್ತಿರುವ 19 ಯೋಜನೆಗಳ ಪೈಕಿ ಎರಡು ಯೋಜನೆಗಳಷ್ಟೇ ಪೂರ್ಣಗೊಂಡಿವೆ. ಉಳಿದ ಯೋಜನೆಗಳ ಕಾಮಗಾರಿಗಳು ತೆವಳುತ್ತಾ ಸಾಗಿವೆ.

19 ಕಾಮಗಾರಿಗಳ ಮೂಲಕ ₹17,668 ಕೋಟಿ ವೆಚ್ಚದಲ್ಲಿ 774 ಕಿ.ಮೀ. ಹೆದ್ದಾರಿಗಳ ವಿಸ್ತರಣೆ ಮಾಡಲಾಗುತ್ತಿದೆ. ಇದರಲ್ಲಿ ₹4,400 ಕೋಟಿ ಮೊತ್ತದ ಬೆಂಗಳೂರು–ಮೈಸೂರು ಹೆದ್ದಾರಿ (ರಾಷ್ಟ್ರೀಯ ಹೆದ್ದಾರಿ 275) ಆರು ಪಥದ ಕಾಮಗಾರಿ ಪೂರ್ಣಗೊಂಡಿದೆ. ಉಳಿದಂತೆ, ಕೆಲವು ಕಾಮಗಾರಿಗಳು ಶೇ 50ರಷ್ಟು ಪೂರ್ಣಗೊಂಡಿವೆ. ಮಂಗಳೂರಿನ ಕೂಳೂರಿನ ಫಲ್ಗುಣಿ ನದಿ ಮೇಲಿನ ಆರು ಪಥದ ಸೇತುವೆ ಕಾಮಗಾರಿ ಈವರೆಗೆ ಆರಂಭವಾಗಿಲ್ಲ. ₹580 ಕೋಟಿ ವೆಚ್ಚದ ಹುಬ್ಬಳ್ಳಿ–ಧಾರವಾಡ ನಡುವಿನ ಆರು ಪಥದ (30 ಕಿ.ಮೀ) ಕಾಮಗಾರಿಗೂ ಚಾಲನೆ ಸಿಕ್ಕಿಲ್ಲ. ₹1,437 ಕೋಟಿ ಮೊತ್ತದ ಅಕ್ಕಲಕೋಟ್–ತೆಲಂಗಾಣ ಗಡಿ ನಡುವಿನ ಗ್ರೀನ್‌ಫೀಲ್ಡ್ ಹೆದ್ದಾರಿ (71 ಕಿ.ಮೀ) ಯೋಜನೆಯ ಸ್ಥಿತಿ ಇದಕ್ಕಿಂತ ಭಿನ್ನವಾಗಿಲ್ಲ. ಬೆಂಗಳೂರು ವರ್ತುಲ ರಸ್ತೆ (ಹೊಸಕೋಟೆ–ತಮಿಳುನಾಡು ಗಡಿ) ಯೋಜನೆ ಕಾಗದದಲ್ಲಷ್ಟೇ ಉಳಿದಿದೆ. 20 ಕಿ.ಮೀ. ಉದ್ದದ ಈ ಯೋಜನೆಗೆ ಮಂಜೂರಾದ ಮೊತ್ತ ₹387 ಕೋಟಿ.

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹೊಸಕೋಟೆ ಬಳಿ ನಿರ್ಮಾಣ ಹಂತದಲ್ಲಿರುವ ಬೆಂಗಳೂರು ಚೆನ್ನೈ ಎಕ್ಸ್‌ಪ್ರೆಸ್ ವೇ – ಸಂಗ್ರಹ ಚಿತ್ರ

ಶಿರಸಿ–ಕುಮಟಾ–ಬೇಲೆಕೇರಿ ಬಂದರಿಗೆ ಸಂಪರ್ಕಿಸುವ ಹೆದ್ದಾರಿಯ ಶೇ 30ರಷ್ಟು ಕಾಮಗಾರಿ ಆಗಿದೆ. 58 ಕಿ.ಮೀ. ಕಾಮಗಾರಿಗೆ ₹360 ಕೋಟಿ ವ್ಯಯ ಮಾಡಲಾಗುತ್ತಿದೆ. ಚನ್ನರಾಯಪಟ್ಟಣದಿಂದ ಹಾಸನ ಬೈಪಾಸ್ ವರೆಗಿನ (₹555 ಕೋಟಿ ಮೊತ್ತ) ಹೆದ್ದಾರಿ ವಿಸ್ತರಣಾ ಕಾಮಗಾರಿಯಲ್ಲಿ ಶೇ 52ರಷ್ಟು ಪೂರ್ಣಗೊಂಡಿದೆ. ಹಾವೇರಿ–ಶಿರಸಿ ರಸ್ತೆಯ (ಹೆದ್ದಾರಿ 766 ಇ) 74 ಕಿ.ಮೀ. ಕಾಮಗಾರಿ ಪೈಕಿ ಮುಗಿದಿರುವುದು ಒಂದು ಕಿ.ಮೀ. ಯಷ್ಟೇ. ನೆಲಮಂಗಲ–ತುಮಕೂರು ನಡುವಿನ ಆರು ಪಥದ ಹೆದ್ದಾರಿ ಯೋಜನೆಯಲ್ಲಿ 9.37 ಕಿ.ಮೀ. ಕೆಲಸ ಆಗಿದೆ. ಬೆಳಗಾವಿ–ಸಂಕೇಶ್ವರ ಬೈಪಾಸ್ ಆರು ಪಥ ಹಾಗೂ ಸಂಕೇಶ್ವರದಿಂದ ಮಹಾರಾಷ್ಟ್ರದ ಗಡಿ ವರೆಗಿನ ಆರು ಪಥದ ಕಾಮಗಾರಿಗಳು ಸಹ ನಿಧಾನಗತಿಯಲ್ಲಿ ಸಾಗಿವೆ.

ಮಂಜೂರಾತಿ ನೀಡಿರುವ ಯೋಜನೆಗಳು

ಯೋಜನೆ	ಒಟ್ಟು ಉದ್ದ (ಕಿ.ಮೀ)	ಮೊತ್ತ (₹ಕೋಟಿಗಳಲ್ಲಿ)
ಹೊನ್ನಾವರ ಬಂದರು–ಕಾಸರಕೋಡ	4.58	87.5
ಬೆಂಗಳೂರು ವರ್ತುಲ ರಸ್ತೆ (ಎಸ್‌ಟಿಆರ್‌ಆರ್)	135	972
ಸ್ವಾಂಕ್ವೆಲಿನ್– ಬೆಳಗಾವಿ ದ್ವಿಪಥ ರಸ್ತೆ	69.48	131.96
ಅಕ್ಕಲಕೋಟ್–ಕೆಎನ್‌ಟಿ/ತೆಲಂಗಾಣ ಗಡಿ	65	1,606
ಬೆಳಗಾವಿ ಬೈಪಾಸ್ (ಪ್ಯಾಕೇಜ್ 1)	34.48	897.37
ಬೆಳಗಾವಿ–ಹುನಗುಂದ–ರಾಯಚೂರು (ಪ್ಯಾಕೇಜ್ 4)	46.2	716.47
ಬೆಳಗಾವಿ–ಹುನಗುಂದ–ರಾಯಚೂರು (ಪ್ಯಾಕೇಜ್ 5)	44.9	740.77

ಬೆಂಗಳೂರು–ಚೆನ್ನೈ ಎಕ್ಸ್‌ಪ್ರೆಸ್ ವೇ ಕಾಮಗಾರಿಯೂ ನಿಧಾನ

ಬೆಂಗಳೂರು–ಚೆನ್ನೈ ಎಕ್ಸ್‌ಪ್ರೆಸ್ ವೇ ಯೋಜನೆಯನ್ನು ಮೂರು ಪ್ಯಾಕೇಜ್‌ಗಳ ಮೂಲಕ ಅನುಷ್ಠಾನಗೊಳಿಸಲಾಗುತ್ತಿದೆ. 27 ಕಿ.ಮೀ. ಉದ್ದದ ಪ್ಯಾಕೇಜ್ 1 ಕಾಮಗಾರಿಗೆ ಮೀಸಲಿಟ್ಟ ಮೊತ್ತ ₹1,160 ಕೋಟಿ. ಈ ತನಕ 14 ಕಿ.ಮೀ. ಕಾಮಗಾರಿ ಮುಗಿದಿದೆ. ಎರಡನೇ ಪ್ಯಾಕೇಜ್‌ನಲ್ಲಿ (ಮಾಲೂರು–ಬಂಗಾರಪೇಟೆ) ₹1,279 ಕೋಟಿ ಮೊತ್ತದಲ್ಲಿ 27 ಕಿ.ಮೀ. ಕಾಮಗಾರಿ ಮಾಡಲಾಗುತ್ತಿದೆ. ಪೂರ್ಣಗೊಂಡಿರುವುದು 12 ಕಿ.ಮೀ. ಮಾತ್ರ. ಮೂರನೇ ಪ್ಯಾಕೇಜ್‌ಗೆ (ಬಂಗಾರಪೇಟೆ–ಬೇತಮಂಗಲ ನಡುವಿನ 17 ಕಿ.ಮೀ) ₹863 ಕೋಟಿ ಮಂಜೂರಾಗಿದ್ದು, 5 ಕಿ.ಮೀ. ಕಾಮಗಾರಿ ಮುಗಿದಿದೆ.

ಈ ಕಾಮಗಾರಿಯನ್ನು ಜನವರಿಯಲ್ಲಿ ವೈಮಾನಿಕ ಸಮೀಕ್ಷೆ ಮಾಡಿದ್ದ ಕೇಂದ್ರ ಭೂಸಾರಿಗೆ ಸಚಿವ ನಿತಿನ್ ಗಡ್ಕರಿ, 'ಅರಣ್ಯ ಭೂಮಿ ಸ್ವಾಧೀನಕ್ಕೆ ಸಂಬಂಧಿಸಿದಂತೆ ಇರುವ ಅನುಮತಿಗಳನ್ನು ರಾಜ್ಯ ಸರ್ಕಾರ ನೀಡಿದರೆ ಈ ಹೆದ್ದಾರಿಯನ್ನು 2024ರ ಜನವರಿ 26ರಂದು ವಾಹನ ಸಂಚಾರಕ್ಕೆ ಸಮರ್ಪಿಸಲಾಗುವುದು' ಎಂದಿದ್ದರು.

ಕರ್ನಾಟಕದಲ್ಲಿ 71 ಕಿ.ಮೀ, ಆಂಧ್ರಪ್ರದೇಶದಲ್ಲಿ 85 ಕಿ.ಮೀ ಮತ್ತು ತಮಿಳು–ನಾಡಿನಲ್ಲಿ 106 ಕಿ.ಮೀ. ರಸ್ತೆ ಇರಲಿದೆ. ಒಟ್ಟಾರೆ ₹17 ಸಾವಿರ ಕೋಟಿ ಮೊತ್ತದ ಯೋಜನೆಯಲ್ಲಿ ಕರ್ನಾಟಕ ಭಾಗದ ರಸ್ತೆಗೆ ₹5,069 ಕೋಟಿ ವೆಚ್ಚವಾಗುತ್ತಿದೆ.

2028ಕ್ಕೆ ಪೂರ್ಣ

'19 ಯೋಜನೆಗಳಲ್ಲಿ 314 ಕಿ.ಮೀ. ಹೆದ್ದಾರಿ ವಿಸ್ತರಣೆ ಕಾಮಗಾರಿಗಳು ಮುಗಿದಿವೆ. ಎಲ್ಲ ಕಾಮಗಾರಿಗಳನ್ನು 2027–28ರಲ್ಲಿ ಮುಗಿಸಿ ಸಂಚಾರಕ್ಕೆ ಮುಕ್ತಗೊಳಿಸಲಾಗುತ್ತದೆ' ಎಂದು ಕೇಂದ್ರ ಹೆದ್ದಾರಿ ಸಚಿವಾಲಯದ ಮೂಲಗಳು ತಿಳಿಸಿವೆ.

'ರಾಜ್ಯದಲ್ಲಿ ₹5,152 ಕೋಟಿ ಮೊತ್ತದಲ್ಲಿ 301 ಕಿ.ಮೀ.ಯ 6 ಯೋಜನೆಗಳಿಗೆ ಮಂಜೂರಾತಿ ನೀಡಿದ್ದು, ಕಾಮಗಾರಿಗಳು ಇನ್ನಷ್ಟೇ ಆರಂಭವಾಗಬೇಕಿದೆ' ಎಂದಿವೆ.

ವಿಧಾನಸಭೆ ಅಧಿವೇಶನದಲ್ಲಿ ಭಾಗವಹಿಸಲು ಮಂಡ್ಯ ಶಾಸಕ ಗಣಿಗ ಪಿ. ರವಿಕುಮಾರ್ ಅವರು ಸೋಮವಾರ ಎತ್ತಿನಗಾಡಿಯಲ್ಲಿ ಬಂದರು – ಪ್ರಜಾವಾಣಿ ಚಿತ್ರ

ಚುಕ್ಕಾಣಿ ಹಿಡಿದವರ ನಗು, ಕಳೆದುಕೊಂಡವರಿಗೆ ಬೇಸರ

ಪ್ರಮಾಣ: ಶಾಸಕರ ಸಂಭ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚುನಾವಣಾ ಕಣದಲ್ಲಿ ರೋಷಾವೇಶದಿಂದ ಹೋರಾಡಿ ಮೊದಲ ಬಾರಿ ಗೆದ್ದು ಬಂದ ಶಾಸಕರ ಸಂಭ್ರಮ, ಹಿರಿಯರ ಸಮಾಧಾನದ ನಿಟ್ಟುಸಿರು, ಹಳೆ ಮಿತ್ರರ ಪುನರ್ ಸಮಾಗಮಕ್ಕೆ ವಿಧಾನಸಭೆ ಅಧಿವೇಶನದ ಮೊದಲ ದಿನ ವೇದಿಕೆಯಾಯಿತು. ನಗು, ಹಾಸ್ಯ, ಪರಸ್ಪರ ಕಾಲೆಳೆಯುವಿಕೆಯ ಮಧ್ಯೆಯೇ ನೂತನವಾಗಿ ಆಯ್ಕೆಯಾದ ಶಾಸಕರ ಪ್ರಮಾಣ ವಚನ ಸ್ವೀಕಾರ ನಡೆಯಿತು.

ಮೊದಲ ದಿನವೇ ವಿಧಾನಸಭೆಯಲ್ಲಿ ಶಾಸಕರು ತುಂಬಿ ತುಳುಕಬಹುದು ಎಂಬ ನಿರೀಕ್ಷೆ ಹುಸಿಯಾಯಿತು. ಮೊದಲ ಬಾರಿ ಆಯ್ಕೆ ಆದವರೂ ಸೇರಿ ಸಾಕಷ್ಟು ಶಾಸಕರು ಅಧಿವೇಶನಕ್ಕೆ ಬಂದಿರಲಿಲ್ಲ. ಒಟ್ಟು 182 ಶಾಸಕರು ಪ್ರಮಾಣ ಸ್ವೀಕರಿಸಿದ್ದು, ಮಂಗಳವಾರ 42 ಮಂದಿ ಪ್ರಮಾಣ ಸ್ವೀಕರಿಸಲಿದ್ದಾರೆ.

ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಇತರ ಎಲ್ಲರಿಗಿಂತಲೂ ಹೆಚ್ಚು ಚುರುಕಿನಿಂದ ಓಡಾಡುತ್ತಿದ್ದರು.

5ನೇ ಪುಟ ನೋಡಿ

ಅಜ್ಜಯ್ಯ, ಹಿಂದುತ್ವ, ಡಿಕೆಶಿ, ಎಚ್‌ಡಿಡಿ, ಅಲ್ಲಾಹ್ ಹೆಸರಲ್ಲಿ ಪ್ರಮಾಣ

'ಸಂವಿಧಾನ ಮತ್ತು ದೇವರ ಹೆಸರಲ್ಲಿ ಮಾತ್ರ ಪ್ರಮಾಣ ಸ್ವೀಕರಿಸಬಹುದು. ಇತರ ಯಾವುದೇ ಹೆಸರಿನಲ್ಲಿ ಪ್ರಮಾಣ ಸ್ವೀಕರಿಸಿದರೆ ಕಾನೂನು ಬದ್ಧ ಆಗುವುದಿಲ್ಲ' ಎಂದು ಹಂಗಾಮಿ ಸಭಾಧ್ಯಕ್ಷ ಆರ್.ವಿ.ದೇಶಪಾಂಡೆ ಸೂಚನೆ ನೀಡಿದ್ದರೂ, ಕೆಲವು ಶಾಸಕರು ಅದನ್ನು ಪಾಲಿಸಲಿಲ್ಲ.

ಮುಖ್ಯಮಂತ್ರಿ ಸಿದ್ದರಾಮಯ್ಯ ಭಗವಂತನ ಹೆಸರಿನಲ್ಲಿ ಪ್ರಮಾಣ ಸ್ವೀಕರಿಸಿದರೆ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ 'ಭಗವಂತ ಗಂಗಾಧರ (ನೊಣವಿನಕೆರೆ) ಅಜ್ಜಯ್ಯ' ಹೆಸರಿನಲ್ಲಿ ಪ್ರಮಾಣ ಸ್ವೀಕರಿಸಿದರು.

ಸಿದ್ದರಾಮಯ್ಯ ಅವರು ಪ್ರಮಾಣ ಓದಿದ ಬಳಿಕ 'ಎಲ್ಲಿ ಸಹಿ ಹಾಕಬೇಕು' ಎಂದು ಪ್ರಶ್ನಿಸಿದರು. 'ಸಭಾಧ್ಯಕ್ಷರ ಪೀಠವನ್ನು ಬಳಸಿ ಬಂದು ಪುಸ್ತಕದಲ್ಲಿ ಸಹಿ ಹಾಕಿ' ಎಂದು ಕಾರ್ಯದರ್ಶಿ ವಿಶಾಲಾಕ್ಷಿ ಹೇಳಿದರು. ಪೀಠ ಬಳಸಿ ಬರುವಾಗ ಅಲ್ಲಿ ನಿಂತಿದ್ದ ಮಾರ್ಷಲ್ ಅವರ ಬಳಿ 'ಎಲ್ಲಿ ಸಹಿ ಹಾಕಬೇಕು' ಎಂದು ಮತ್ತೊಮ್ಮೆ ಪ್ರಶ್ನಿಸಿದರು.

5ನೇ ಪುಟ ನೋಡಿ

'ಇಂಡಿಯಾ: ದಿ ಮೋದಿ ಕ್ವೆಶ್ಚನ್': ಬಿಬಿಸಿಗೆ ದೆಹಲಿ ಹೈಕೋರ್ಟ್ ನೋಟಿಸ್ 9

ಕಾಶ್ಮೀರದಲ್ಲಿ ಜಿ–20 ಶೃಂಗಸಭೆ: ಹಿಂದೆ ಸರಿದ ಚೀನಾ, ಟರ್ಕಿ 9

'ನೋಟು ವಿನಿಮಯ: ಗಾಬರಿ ಬೇಡ'

ನವದೆಹಲಿ (ಪಿಟಿಐ): ₹2 ಸಾವಿರದ ನೋಟುಗಳನ್ನು ಬದಲಿಸಿಕೊಳ್ಳಲು ಅಥವಾ ಖಾತೆಗೆ ಜಮಾ ಮಾಡಲು ಸಾಕಷ್ಟು ಸಮಯ ಇರುವ ಕಾರಣ, ಜನರು ಗಾಬರಿಗೆ ಒಳಗಾಗಬೇಕಿಲ್ಲ ಎಂದು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಗವರ್ನರ್ ಶಕ್ತಿಕಾಂತ ದಾಸ್ ಸೋಮವಾರ ಹೇಳಿದ್ದಾರೆ.

ನೋಟನ್ನು ಚಲಾವಣೆಯಿಂದ ಹಿಂಪಡೆಯುವ ನಿರ್ಧಾರ ಘೋಷಿಸಿದ ಬಳಿಕ ಮೊದಲ ಬಾರಿಗೆ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಈ ನಿರ್ಧಾರವು ಕರೆನ್ಸಿ ನಿರ್ವಹಣೆಯ ಭಾಗವಾಗಿದೆ ಎಂದಿದ್ದಾರೆ.

ಮುದ್ರಣ ಆಗಿರುವ ನೋಟುಗಳ ಪ್ರಮಾಣವು ಅವಶ್ಯಕತೆಗಿಂತಲೂ ಹೆಚ್ಚಿಗೆ ಇದೆ. ಯಾವುದೇ ಆತಂಕ ಪಡುವ ಅಗತ್ಯ ಇಲ್ಲ. ಆರ್‌ಬಿಐ ಬಳಿಯಷ್ಟೇ ಅಲ್ಲದೆ ಬ್ಯಾಂಕ್‌ಗಳು ನಿರ್ವಹಿಸುತ್ತಿರುವ ಕರೆನ್ಸಿ ಚೆಸ್ಟ್‌ಗಳಲ್ಲಿಯೂ ಕರೆನ್ಸಿಗಳ ದಾಸ್ತಾನು ಬೇಕಾದಷ್ಟು ಇದೆ. ವ್ಯವಸ್ಥೆಯಲ್ಲಿ ಇರುವ ನಗದು ಕುರಿತು ನಿತ್ಯವೂ ಮೇಲ್ವಿಚಾರಣೆ ಮಾಡಲಾಗುವುದು ಎಂದು ಅವರು ತಿಳಿಸಿದ್ದಾರೆ.



ಚಲಾವಣೆಯಲ್ಲಿ ಇರುವ ಒಟ್ಟು ಕರೆನ್ಸಿಯಲ್ಲಿ ₹2 ಸಾವಿರದ ನೋಟುಗಳ ಪ್ರಮಾಣ ಶೇ 10.8ರಷ್ಟು ಮಾತ್ರ. ಹೀಗಾಗಿ ಆರ್ಥಿಕತೆಯ ಮೇಲೆ ಅದರ ಪರಿಣಾಮವು ಅತ್ಯಲ್ಪ

ಶಕ್ತಿಕಾಂತ ದಾಸ್, ಆರ್‌ಬಿಐ ಗವರ್ನರ್

ಚಲಾವಣೆಯಲ್ಲಿ ಇರುವ ₹2 ಸಾವಿರ ಮುಖಬೆಲೆಯ ನೋಟುಗಳಲ್ಲಿ ಬಹುಪಾಲು ನೋಟುಗಳು ಸೆಪ್ಟೆಂಬರ್ 30ರ ವೇಳೆಗೆ ಬ್ಯಾಂಕ್‌ಗಳಲ್ಲಿ ಜಮಾ ಆಗುವ ನಿರೀಕ್ಷೆ ಇದೆ ಎಂದು ದಾಸ್ ಹೇಳಿದ್ದಾರೆ.

2016ರಲ್ಲಿ ನೋಟು ರದ್ದತಿ ಘೋಷಣೆ ಮಾಡಿದಾಗ ಚಲಾವಣೆಯಿಂದ ಹಿಂಪಡೆದ ಕರೆನ್ಸಿ ನೋಟುಗಳಿಗೆ ಬದಲಾಗಿ ₹2 ಸಾವಿರದ ನೋಟನ್ನು ಪರಿಚಯಿಸಲಾಯಿತು ಎಂದು ಹೇಳಿದ್ದಾರೆ.

₹50 ಸಾವಿರ ಅಥವಾ ಅದಕ್ಕಿಂತ ಹೆಚ್ಚಿನ ನಗದನ್ನು ಬ್ಯಾಂಕ್‌ಗೆ ಜಮಾ ಮಾಡಲು ಪ್ಯಾನ್ ನೀಡಬೇಕು. ₹2 ಸಾವಿರದ ನೋಟನ್ನು ಖಾತೆ ಜಮಾ ಮಾಡುವಾಗ ಸಹ ಈ ನಿಯಮ ಅನ್ವಯವಾಗುತ್ತದೆ ಎಂದು ದಾಸ್ ತಿಳಿಸಿದ್ದಾರೆ.

ನೋಟು ಬದಲಿಸಿಕೊಳ್ಳಲು ಜನರಿಗೆ ನೆರಳಿನ ವ್ಯವಸ್ಥೆ, ಕುಡಿಯುವ ನೀರಿನ ಸೌಲಭ್ಯ ಕಲ್ಪಿಸುವಂತೆ ಎಲ್ಲಾ ಬ್ಯಾಂಕ್‌ಗಳಿಗೂ ಆರ್‌ಬಿಐ ಸಲಹೆ ನೀಡಿದೆ.

₹2 ಸಾವಿರದ ಮುಖಬೆಲೆಯ ನೋಟುಗಳ ಕಾನೂನು ಮಾನ್ಯತೆಯ ಬಗ್ಗೆ ಪ್ರತಿಕ್ರಿಯೆ ನೀಡಿದ ದಾಸ್ ಅವರು, 'ಇದರ ಕಾನೂನು ಮಾನ್ಯತೆಯು ಮುಂದುವರಿಯಲಿದೆ' ಎಂದರು.

8ನೇ ಪುಟ ನೋಡಿ

ಬಹುಭಾಷಾ ನಟ ಶರತ್ ಬಾಬು ಇನ್ನಿಲ್ಲ

ಪ್ರಜಾವಾಣಿ ವಾರ್ತೆ

ಹೈದರಾಬಾದ್: ಬಹುಅಂಗಾಂಗ ವೈಫಲ್ಯದಿಂದ ಬಳಲುತ್ತಿದ್ದ ಬಹುಭಾಷಾ ನಟ ಶರತ್ ಬಾಬು(71) ಸೋಮವಾರ ಮಧ್ಯಾಹ್ನ ಇಲ್ಲಿನ ಎಐಜಿ ಆಸ್ಪತ್ರೆಯಲ್ಲಿ ನಿಧನರಾದರು.

ತೀವ್ರ ಅಸ್ವಸ್ಥಗೊಂಡಿದ್ದ ಅವರನ್ನು ಏ. 20ರಂದು ಆಸ್ಪತ್ರೆಗೆ ದಾಖಲಿಸಿ ಕೃತಕ ಉಸಿರಾಟದ ಸಾಧನ ಅಳವಡಿಸಲಾಗಿತ್ತು. ಬಾಬು ಅವರು ತೆಲುಗು, ತಮಿಳು, ಮಲಯಾಳ, ಹಿಂದಿ, ಕನ್ನಡ ಸೇರಿದಂತೆ 250ಕ್ಕೂ ಹೆಚ್ಚು ಸಿನಿಮಾಗಳಲ್ಲಿ ನಟಿಸಿದ್ದರು. ಮನೋಜ್ಞ ಅಭಿನಯದ ಮೂಲಕ ಪ್ರೇಕ್ಷಕರ ಮನ ಗೆದ್ದಿದ್ದರು.


1951-2023

ಕಿರುತೆರೆಯ ಹಲವು ಧಾರಾವಾಹಿಗಳಲ್ಲೂ ಅವರು ಬಣ್ಣ ಹಚ್ಚಿದ್ದರು.

ಅವರು ಜನಿಸಿದ್ದು 1951ರ ಜುಲೈ 31ರಂದು. ಅವರ ಹುಟ್ಟೂರು ಆಂಧ್ರಪ್ರದೇಶದ ಶ್ರೀಕಾಕುಳಂ ಜಿಲ್ಲೆಯ ಅಮದಾಲವಲಸ ಪಟ್ಟಣ. ಬಿ.ಎಸ್ಸಿ ಪದವಿ ಓದುತ್ತಿದ್ದ ವೇಳೆ ನಾಟಕಗಳಲ್ಲಿ ಅಭಿನಯಿಸಿದ್ದರು. ಬಣ್ಣದ ಲೋಕದಲ್ಲಿ ಅದೃಷ್ಟ ಪರೀಕ್ಷೆ ಅರಸಿ ಮದ್ರಾಸ್‌ಗೆ ತೆರಳಿದರು.

8ನೇ ಪುಟ ನೋಡಿ

ಪ್ರಧಾನಿ ಮೋದಿ ಅವರಿಗೆ ಸೋಮವಾರ ಪಪುವಾ ನ್ಯೂಗಿನಿ ಮತ್ತು ಫಿಜಿ ದೇಶಗಳ ಅತ್ಯುನ್ನತ ನಾಗರಿಕ ಪುರಸ್ಕಾರವನ್ನು ನೀಡಿ ಗೌರವಿಸಲಾಯಿತು – ಪಿಟಿಐ ಚಿತ್ರ

ಮೋದಿಗೆ ಪಪುವಾ ನ್ಯೂಗಿನಿಯ ಅತ್ಯುನ್ನತ ನಾಗರಿಕ ಪುರಸ್ಕಾರ

ಪೋರ್ಟ್ ಮೊರೆಸ್ಬಿ (ಪಿಟಿಐ): ಭಾರತದ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಪಪುವಾ ನ್ಯೂಗಿನಿ ಮತ್ತು ಫಿಜಿ ದ್ವೀಪ ರಾಷ್ಟ್ರಗಳ ದೇಶದ ಅತ್ಯುನ್ನತ ನಾಗರಿಕ ಪುರಸ್ಕಾರವನ್ನು ಸೋಮವಾರ ನೀಡಿ ಗೌರವಿಸಲಾಯಿತು. ಅನಿವಾಸಿಯರಿಗೆ ಈ ಪ್ರಶಸ್ತಿ ನೀಡಿ ಗೌರವಿಸಿದ ಅಪರೂಪದ ವಿದ್ಯಮಾನ ಇದಾಗಿದೆ.

'ವಿಶೇಷ ಸಮಾರಂಭದಲ್ಲಿ ಪಪುವಾ ನ್ಯೂಗಿನಿ ಗವರ್ನರ್ ಜನರಲ್ ಸರ್ ಬಾಬ್ ದಾಡೇ ಅವರು ನರೇಂದ್ರ ಮೋದಿ ಅವರಿಗೆ 'ಗ್ರಾಂಡ್ ಚಾಂಪಿಯನ್ ಆಫ್ ದಿ ಆರ್ಡರ್ ಆಫ್ ಲೊಗೊಹು' ಪುರಸ್ಕಾರ ನೀಡಿ ಗೌರವಿಸಿದರು' ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ ತಿಳಿಸಿದೆ.

ಈ ಪುರಸ್ಕಾರ ಪಡೆದವರನ್ನು 'ಚೀಫ್' ಎಂದು ಗುರುತಿಸಲಾಗುವುದು ಎಂದು ಸಚಿವಾಲಯ ಹೇಳಿದೆ. ದ್ವೀಪ ರಾಷ್ಟ್ರಗಳ ಏಕತೆಗಾಗಿ ನೀಡಿದ ಕೊಡುಗೆಯನ್ನು ಪರಿಗಣಿಸಿ, ಈ ಪ್ರಶಸ್ತಿ ನೀಡಲಾಗಿದೆ.

'ಸಿದ್ದರಾಮಯ್ಯ ಪೂರ್ಣಾವಧಿ ಸಿ.ಎಂ'

ಪ್ರಜಾವಾಣಿ ವಾರ್ತೆ

ಮೈಸೂರು: 'ಸಿದ್ದರಾಮಯ್ಯ ಪೂರ್ಣಾವಧಿ ಮುಖ್ಯಮಂತ್ರಿಯಾಗಿರಲಿದ್ದಾರೆ' ಎಂದು ಸಚಿವ ಎಂ.ಬಿ. ಪಾಟೀಲ ಪ್ರತಿಪಾದಿಸಿದರು.

ಜಿಲ್ಲೆಯ ಸುತ್ತೂರು ಮಠಕ್ಕೆ ಸೋಮವಾರ ಭೇಟಿ ನೀಡಿ, ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿಯವರೊಂದಿಗೆ ಮಾತುಕತೆ ನಡೆಸಿದ ಬಳಿಕ ಸುದ್ದಿಗಾರರೊಂದಿಗೆ ಅವರು ಮಾತನಾಡಿದರು.

'ಅಧಿಕಾರ ಹಂಚಿಕೆ ಬಗ್ಗೆ ಯಾವುದೇ ಮಾತುಕತೆ ನಡೆದಿಲ್ಲ. ಲೋಕಸಭೆ ಚುನಾವಣೆ ಬಳಿಕವೂ ಯಾವುದೇ ಬದಲಾವಣೆ ಇಲ್ಲ. ಮುಖ್ಯಮಂತ್ರಿ ಬದಲಾವಣೆ ಬಗ್ಗೆ ಎಐಸಿಸಿ ಮಟ್ಟದಲ್ಲಿ ಚರ್ಚೆಯೇ ಆಗಿಲ್ಲ. ಸಿದ್ದರಾಮಯ್ಯ ಐದು ವರ್ಷ ಪೂರ್ತಿ ಮುಖ್ಯಮಂತ್ರಿಯಾಗಿರಲಿದ್ದಾರೆ ಎಂದು ಎಐಸಿಸಿ ಕಾರ್ಯದರ್ಶಿ ವೇಣುಗೋಪಾಲ್ ಸ್ಪಷ್ಟಪಡಿಸಿದ್ದಾರೆ' ಎಂದು ಹೇಳಿದರು.

ತನಿಖೆ ಖಚಿತ

'ಬಿಜೆಪಿ ಅಧಿಕಾರದಲ್ಲಿದ್ದಾಗ ನಡೆದ ಪಿಎಸ್‌ಐ ನೇಮಕಾತಿ ಹಗರಣ, ಆರೋಗ್ಯ, ನೀರಾವರಿ ಸೇರಿದಂತೆ ಎಲ್ಲ ಇಲಾಖೆಗಳ ಹಗರಣಗಳ ಬಗ್ಗೆಯೂ ತನಿಖೆ ನಡೆಸಿ, ತಪ್ಪಿತಸ್ಥರಿಗೆ ಶಿಕ್ಷೆ, ನೊಂದವರಿಗೆ ನ್ಯಾಯ ಕೊಡಿಸುತ್ತೇವೆ' ಎಂದು ಸಚಿವ ಎಂ.ಬಿ. ಪಾಟೀಲ ಭರವಸೆ ನೀಡಿದರು.

'ಗ್ಯಾರಂಟಿಗಳನ್ನು ಜಾರಿಗೊಳಿಸಿಯೇ ತೀರುತ್ತೇವೆ. ಈ ವಿಚಾರದಲ್ಲಿ ಯಾವುದೇ ಬದಲಾವಣೆಯಾಗದು' ಎಂದರು.

ಮರಗಳ 'ಉಷ್ಣ ಸಹಿಷ್ಣುತೆ' ಅಧ್ಯಯನದ ಮಾಹಿತಿ

ಅತಿ ಉಷ್ಣಾಂಶಕ್ಕೆ ನಲುಗಿದ ಸಸ್ಯಗಳು

• ರಾಜೇಂದ್ರ ಹೆಗಡೆ

ಪ್ರಜಾವಾಣಿ ವಿಶೇಷ

ಶಿರಸಿ: ವಾತಾವರಣದಲ್ಲಿ ಹೆಚ್ಚಿದ ಉಷ್ಣಾಂಶದಿಂದ ಕೃಷಿ ಸಂಬಂಧಿ ಸಸ್ಯಗಳ ಜೊತೆಗೆ ನಿತ್ಯಹರಿದ್ವರ್ಣ ಕಾಡಿನ ಕೆಲ ಸಸ್ಯಗಳು ಬದುಕಲು ಏದುಸಿರು ಬಿಡುತ್ತಿರುವ ಆತಂಕಕಾರಿ ಮಾಹಿತಿ ಪಶ್ಚಿಮಘಟ್ಟದ ಕಾಡೊಳಗೆ ನಡೆಯುತ್ತಿರುವ ಸಂಶೋಧನೆಯಿಂದ ತಿಳಿದುಬಂದಿದೆ.

ಇಲ್ಲಿನ ಪರಿಸರ ವಿಜ್ಞಾನಿ ಬಾಲಚಂದ್ರ ಸಾಯಿಮನೆ ಅವರು ಕೆಲ ವರ್ಷಗಳಿಂದ ಪಶ್ಚಿಮಘಟ್ಟ ಕಾಡಿನ ಸಾಲಿನಲ್ಲಿರುವ ಗುಡ್ಡೇಕೋಟೆಯ ಪ್ರಯೋಗಾಲಯದಲ್ಲಿ ಬೆಂಗಳೂರಿನ ಎನ್‌ಸಿಬಿಎಸ್ ಸಂಸ್ಥೆಯ ಪರವಾಗಿ ಕಾಡುಗಳ ಅಧ್ಯಯನ ಕೈಗೊಂಡಿದ್ದಾರೆ. ಅದರ ಜೊತೆಗೆ ತಾಪಮಾನದ ಏರಿಳಿತಗಳಿಗೆ ಮರಗಳ ಸ್ಪಂದನೆಯ 'ಥರ್ಮಲ್ ಟಾಲರೆನ್ಸ್' (ಉಷ್ಣಸಹಿಷ್ಣುತೆ) ಕುರಿತೂ ಸಂಶೋಧನೆ ನಡೆಸಿದ್ದಾರೆ. ಈ ಸಂಶೋಧನೆಯಲ್ಲಿ ಈ ಅಂಶವು ಬೆಳಕಿಗೆ ಬಂದಿದೆ.

ಪ್ರಸಕ್ತ ಸಾಲಿನಲ್ಲಿ ದಾಖಲಾದ ಅತಿಯಾದ ಉಷ್ಣಾಂಶದಿಂದ ನಿತ್ಯಹರಿದ್ವರ್ಣ ಕಾಡಿನ ಕೆಲ ಸಸ್ಯ ಪ್ರಬೇಧಗಳಿಗೆ ಧಕ್ಕೆಯಾಗಿದೆ. ದಟ್ಟ ಅರಣ್ಯದ 10 ಎಕರೆ ವಿಸ್ತೀರ್ಣದಲ್ಲಿ ಪ್ರಯೋಗಕ್ಕೆ ಒಳಪಟ್ಟ 40 ಜಾತಿಯ ಸಸ್ಯಗಳಲ್ಲಿ 15 ಬಗೆಯ ಸಸ್ಯಗಳಿಗೆ ಅತಿ ಉಷ್ಣಾಂಶವನ್ನು ತಡೆದುಕೊಳ್ಳಲು ಸಾಧ್ಯವಾಗಿಲ್ಲ ಎಂಬುದನ್ನು ಕಂಡುಕೊಳ್ಳಲಾಗಿದೆ.

ಎಲೆ ಉದುರದ ಕೆಲವು ಜಾತಿಯ ತಳಿಗಳು ಸಂಕಷ್ಟಕ್ಕೆ ಒಳಗಾಗಿರುವುದು ಕಂಡು ಬಂದಿದೆ. ಇವುಗಳ ಮುಂದಿನ ಹಂತದ ಪ್ರಯೋಗವೂ ನಡೆದಿದೆ

ಬಾಲಚಂದ್ರ ಸಾಯಿಮನೆ
ಪರಿಸರ ವಿಜ್ಞಾನಿ

ಬೃಹತ್ ಗಾತ್ರದಲ್ಲಿ ಬೆಳೆಯುವ ತಳಿಗಳಾದ ಸುರಗಿ, ಉಪ್ಪಗೆ, ಮುರುಗಲಿನಂಥ ಮರಗಳು ನಿರಂತರ ತಾಪಮಾನದಲ್ಲಿ ದ್ಯುತಿ ಸಂಶ್ಲೇಷಣೆ ಕ್ರಿಯೆ ನಿಲ್ಲಿಸಿದ್ದ ಬಗ್ಗೆ ಅವರು ದಾಖಲಾತಿ ಮಾಡಿದ್ದಾರೆ. ಅಪ್ಪೆಮಿಡಿ ಮಾವಿನ ತಳಿಯ ಸಸ್ಯಗಳು ಎಲೆ ಒಣಗಿಸಿಕೊಳ್ಳುತ್ತಿರುವ ಬಗೆಯನ್ನು ದಾಖಲಿಸಿದ್ದಾರೆ.

ಪ್ರಸಕ್ತ ಸಾಲಿನಲ್ಲಿ ಈವರೆಗೆ ಸುಮಾರು 20 ದಿನಗಳು 40 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ ದಾಖಲಾಗಿದೆ. ವರ್ಷದುದ್ದಕ್ಕೂ ನಡೆದ ಸಂಶೋಧನೆಯ ಜೊತೆ ಅತಿಯಾದ ಉಷ್ಣಾಂಶದ ದಿನಗಳಲ್ಲಿ ಎಲೆಗಳ ಬಣ್ಣ, ವಿಸ್ತೀರ್ಣದ ಬದಲಾವಣೆ, ಪರಾಗ ಮತ್ತು ಭಾಷ್ಪ ವಿಸರ್ಜನೆ ಪ್ರಮಾಣಗಳ ಏರಿಳಿತ, ಉಷ್ಣಾಂಶಕ್ಕೆ ಮರಗಳ ಪ್ರತಿಕ್ರಿಯೆ ಏನು? ಅವುಗಳಲ್ಲಿ ಬಾಹ್ಯ ಮತ್ತು ಆಂತರಿಕ ಬದಲಾವಣೆಗಳೇನು? ಎಂಬಿತ್ಯಾದಿ ಅಂಶಗಳನ್ನು ಥರ್ಮಾಮೀಟರ್, ಥರ್ಮಲ್ ಕ್ಯಾಮೆರಾ, ಮಣ್ಣಿನ ತೇವಾಂಶ ಅಳೆಯುವ ಉಪಕರಣ ಹಾಗೂ ಇನ್ನಿತರ 5ಕ್ಕೂ ಹೆಚ್ಚು ಆಧುನಿಕ ಗ್ಯಾಜೆಟ್ ಮೂಲಕ ಅಳೆದು ಈ ಮಾಹಿತಿ ದಾಖಲಿಸಲಾಗಿದೆ.

'ಅತಿ ಉಷ್ಣಾಂಶದಿಂದ ನಿತ್ಯಹರಿದ್ವರ್ಣದ ಕಾಡಿನ ಸಸ್ಯ ವೈವಿಧ್ಯ ಬದಲಾಗುವ ಸಾಧ್ಯತೆಯಿದೆ. ಇದರ ಜೊತೆ ಕೃಷಿ ಸಂಬಂಧಿತ ಏಲಕ್ಕಿ, ಕಾಫಿ, ವೆನಿಲ್ಲಾ, ಜಾಯಿಕಾಯಿ, ಮುರುಗಲ, ಕಾಳುಮೆಣಸು ಸೇರಿದಂತೆ 15 ಜಾತಿಯ ಸಸ್ಯ ಪ್ರಬೇಧಗಳು ಅತಿಯಾದ ಉಷ್ಣಾಂಶದಿಂದ ಬಳಲುತ್ತಿವೆ. ಇದೇ ಧಗೆ ಮುಂದುವರಿದರೆ ಆ ಪ್ರಬೇಧಗಳು ಬದುಕಿಗಾಗಿ ಹೋರಾಡಬೇಕಾಗುತ್ತದೆ. ಹವಾಮಾನ ಬದಲಾವಣೆಗೆ ತಕ್ಕಂತೆ ಕೃಷಿಯಲ್ಲೂ ಬದಲಾವಣೆ ಆಗಬೇಕಿದೆ' ಎಂದರು.

ಚಿನಕುರಳಿ

ಪ್ರಕಾಶ್ ಶೆಟ್ಟಿ



ಒಳ ಪುಟಗಳು

ವಿಪಕ್ಷ ಸದಸ್ಯರ ಜತೆ ಡಿಸಿಎಂ ಡಿಕೆಶಿ ಕುಶಲೋಪರಿ 5

ಇಂಫಾಲ್ ಮತ್ತೆ ಉದ್ವಿಗ್ನ: ಕರ್ಫ್ಯೂ ವಿಸ್ತರಣೆ 9

ಪ್ಲೇ ಆಫ್ ಪ್ರವೇಶ ಅರ್ಹತೆ ಇರಲಿಲ್ಲ: ಡುಪ್ಲೆಸಿ 10

₹2,000 ನೋಟು: ಪೆಟ್ರೋಲ್ ಬಂಕ್ ಮಾಲೀಕರ ಸಂಘದಿಂದ ಕೇಂದ್ರಕ್ಕೆ ಪತ್ರ

ಪೆಟ್ರೋಲ್ ಬಂಕ್‌ಗಳಲ್ಲಿ ಗೊಂದಲ

• ಚಿರಂಜೀವಿ ಕುಲಕರ್ಣಿ

ಬೆಂಗಳೂರು: ಭಾರತೀಯ ರಿಸರ್ವ್ ಬ್ಯಾಂಕ್ ₹2,000ರ ಮುಖಬೆಲೆಯ ಕರೆನ್ಸಿ ನೋಟುಗಳನ್ನು ಚಲಾವಣೆಯಿಂದ ಹಿಂಪಡೆಯುವ ನಿರ್ಧಾರ ಮಾಡಿದ ಬಳಿಕ ಅದೇ ನೋಟುಗಳನ್ನು ಹಿಡಿದು ಪೆಟ್ರೋಲ್ ಬಂಕ್‌ಗಳಿಗೆ ಬರುವವರ ಸಂಖ್ಯೆ ಹೆಚ್ಚುತ್ತಿದೆ. ಇದರಿಂದಾಗಿ ನಿತ್ಯವೂ ಬಂಕ್‌ಗಳಲ್ಲಿ ಗೊಂದಲದ ವಾತಾವರಣ ಸೃಷ್ಟಿಯಾಗುತ್ತಿದೆ.

₹2,000ರ ನೋಟುಗಳನ್ನು ಸ್ವೀಕರಿಸಿದರೆ ತೆರಿಗೆ ಇಲಾಖೆಗಳಿಂದ ಸಮಸ್ಯೆ ಎದುರಿಸಬಹುದು ಎಂಬ ಆತಂಕ ಪೆಟ್ರೋಲ್ ಬಂಕ್ ಮಾಲೀಕರನ್ನು ಕಾಡುತ್ತಿದೆ. ಪೆಟ್ರೋಲ್ ಬಂಕ್ ಮಾಲೀಕರ ಸಂಘವು ಈ ಕುರಿತು ಸ್ಪಷ್ಟನೆ ಕೋರಿ ಕೇಂದ್ರ ಸರ್ಕಾರಕ್ಕೆ ಪತ್ರ ಬರೆದಿದೆ.

‘ನಾನು ಪೆಟ್ರೋಲ್ ಬಂಕ್‌ಗೆ ಹೋದಾಗ ಯಾವ ವಿಧಾನದಲ್ಲಿ ಪಾವತಿಸುತ್ತೀರಿ ಎಂದು ಅಲ್ಲಿನ ಕ್ಯಾಷಿಯರ್ ಪ್ರಶ್ನಿಸಿದರು. ಡಿಜಿಟಲ್ ಪಾವತಿ ಮೂಲಕ ಎಂದು ಉತ್ತರಿಸಿದೆ. ಅಷ್ಟರಲ್ಲಾಗಲೇ ₹ 2,000 ಕರೆನ್ಸಿ ನೋಟು ನೀಡಿದ ಗ್ರಾಹಕರೊಬ್ಬರ ಜತೆ ಕ್ಯಾಷಿಯರ್ ವಾಗ್ವಾದಕ್ಕೆ ಇಳಿದಿರುವುದು ಕಂಡು ಬಂತು’ ಎಂದು ಮನೋಹರ್ ಜಿ. ಎಂಬ ಗ್ರಾಹಕ ವಿವರಿಸಿದರು.

‘ಪ್ರಜಾವಾಣಿ’ಯು ನಗರದ ಮೂರು ಪೆಟ್ರೋಲ್ ಬಂಕ್ ಮಾಲೀಕರನ್ನು ಸಂಪರ್ಕಿಸಿತು. ‘₹ 2,000ರ ನೋಟಿನ ಮೂಲಕ ಪಾವತಿಸುವುದಿಲ್ಲ ಎಂಬುದನ್ನು ಖಾತರಿಪಡಿಸಿಕೊಂಡೇ ಪೆಟ್ರೋಲ್, ಡೀಸೆಲ್ ಪೂರೈಸುತ್ತಿದ್ದೇವೆ. ₹2,000ರ ಮುಖಬೆಲೆಯ ನೋಟುಗಳನ್ನು ಬದಲಾವಣೆ ಮಾಡಿಕೊಳ್ಳಲು ಪೆಟ್ರೋಲ್ ಬಂಕ್‌ಗಳನ್ನು ಬಳಸಿಕೊಳ್ಳುತ್ತಿರುವುದು ಕಂಡುಬಂದಿದೆ’ ಎಂದರು.

‘ಕಳೆದ ಎರಡು ವರ್ಷಗಳಲ್ಲಿ ನಾಲ್ಕರಿಂದ ಐದು ತಿಂಗಳಿಗೊಮ್ಮೆ ₹ 2,000ರ ನೋಟುಗಳನ್ನು ನೋಡುತ್ತಿದ್ದೆವು. ಈಗ ಪೆಟ್ರೋಲ್, ಡೀಸೆಲ್ ಖರೀದಿಗೆ ಬರುವ ಹೆಚ್ಚಿನವರು ₹ 2,000ರ ನೋಟು ಕೊಡುತ್ತಿದ್ದಾರೆ. ಇದರಿಂದ ಚಿಲ್ಲರೆ ಸಮಸ್ಯೆ ಎದುರಾಗಿದೆ’ ಎಂದು ರಾಜಾನುಕುಂಟೆಯ ಪೆಟ್ರೋಲ್ ಬಂಕ್ ಒಂದರ ಮಾಲೀಕ ಹರೀಶ್ ರೆಡ್ಡಿ ಹೇಳುತ್ತಾರೆ.

‘ಈಗ ₹ 2,000 ನೋಟುಗಳನ್ನು ನೀಡುವವರ ಸಂಖ್ಯೆ ಹೆಚ್ಚಾಗಿದೆ. ನಾವು ಹೆಚ್ಚಿನ ಪ್ರಮಾಣದಲ್ಲಿ ₹ 2,000ರ ನೋಟುಗಳನ್ನು ಬ್ಯಾಂಕ್‌ಗೆ ಪಾವತಿಸಿದರೆ ಆದಾಯ ತೆರಿಗೆ ಇಲಾಖೆ ನೋಟಿಸ್ ನೀಡುತ್ತದೆ. ಈ ಸಮಸ್ಯೆಯನ್ನು ಪರಿಹರಿಸುವಂತೆ ಸಂಬಂಧಿಸಿದ ಇಲಾಖೆಗಳಿಗೆ ಪತ್ರ ಬರೆಯಲಾಗಿದೆ’ ಎಂದು ಅಖಿಲ ಕರ್ನಾಟಕ ಪೆಟ್ರೋಲಿಯಂ ಮಾರಾಟಗಾರರ ಒಕ್ಕೂಟದ ಅಧ್ಯಕ್ಷ ಕೆ.ಎಂ. ಬಸವೇಗೌಡ ತಿಳಿಸಿದರು.

ಹೋಟೆಲ್, ಬಾರ್‌ಗಳಲ್ಲೂ ಹೆಚ್ಚಳ

ನಗರದ ಹೋಟೆಲ್, ರೆಸ್ಟೋರೆಂಟ್ ಮತ್ತು ಬಾರ್‌ಗಳಲ್ಲೂ ₹2,000ರ ನೋಟುಗಳನ್ನು ಹಿಡಿದು ಬರುವ ಗ್ರಾಹಕರ ಸಂಖ್ಯೆ ಹೆಚ್ಚುತ್ತಿದೆ.

‘ಹಿಂದಿನ ದಿನಗಳಿಗೆ ಹೋಲಿಸಿದರೆ ₹ 2,000ರ ನೋಟುಗಳನ್ನು ನೀಡುವವರ ಸಂಖ್ಯೆ ಒಂದರಿಂದ ಒಂದೂವರೆ ಪಟ್ಟಿನಷ್ಟು ಹೆಚ್ಚುತ್ತಿದೆ’ ಎನ್ನುತ್ತಾರೆ ಹೋಟೆಲ್ ಮಾಲೀಕರು.

‘₹100–500ರ ನೋಟು ಕೊಟ್ಟು ಮದ್ಯ ಖರೀದಿಸುತ್ತಿದ್ದವರು, ₹2000 ಮುಖಬೆಲೆಯ ನೋಟುಗಳನ್ನು ಬದಲಿಸಿಕೊಳ್ಳಲು 750 ಎಂಎಲ್ ಅಥವಾ ಒಂದು ಲೀಟರ್ ಬಾಟಲಿಯ ಮದ್ಯವನ್ನು ಖರೀದಿ ಮಾಡಲು ಶುರು ಮಾಡಿದ್ದಾರೆ. ಇಂತಹವರ ಸಂಖ್ಯೆ ಮೊದಲಿಗೆ ಹೋಲಿಸಿದರೆ ಈಗ ಹೆಚ್ಚಿದೆ’ ಎನ್ನುತ್ತಾರೆ ಬಾರ್ ಮಾಲೀಕರು.

ಯಕ್ಷಗಾನ ಸಂಘಟಕ ಪಂಜಾಜೆ ನಿಧನ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಯಕ್ಷಗಾನ ಕಲಾವಿದ ಹಾಗೂ ಸಂಘಟಕ ಎಸ್.ಎನ್.ಪಂಜಾಜೆ (71) ಅವರು ಸೋಮವಾರ ಬೆಂಗಳೂರಿನಲ್ಲಿ ನಿಧನರಾದರು.

ಬಂಟ್ವಾಳ ತಾಲ್ಲೂಕಿನ ಕನ್ಯಾನದವರಾದ ಸೂರ್ಯನಾರಾಯಣ ಪಂಜಾಜೆ ಅವರು 1980ರ ದಶಕದಲ್ಲಿ ಬೆಂಗಳೂರಿಗೆ ಬಂದು ಯಕ್ಷಗಾನ ಸಂಬಂಧಿತ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದರು. ಯಕ್ಷಗಾನದ ಪಾತ್ರಧಾರಿಯಾಗಿ, ತಾಳಮದ್ದಳೆ ಅರ್ಥಧಾರಿಯಾಗಿದ್ದ ಅವರು, ರಾಜ್ಯದ ವಿವಿಧೆಡೆ ಅಖಿಲ ಭಾರತ ಯಕ್ಷಗಾನ ಬಯಲಾಟ ಸಾಹಿತ್ಯ ಸಮ್ಮೇಳನಗಳನ್ನು ಸಂಘಟಿಸಿದ್ದರು.

ಕರ್ನಾಟಕ ಸಾಂಸ್ಕೃತಿಕ ಕಲಾ ಪ್ರತಿಷ್ಠಾನ ಹೆಸರಿನಲ್ಲಿ ಯಕ್ಷಗಾನದ ಸೇವೆಯಲ್ಲಿ ತೊಡಗಿದ್ದ ಪಂಜಾಜೆ ಅವರಿಗೆ ಪತ್ನಿ ಮನೋರಮಾ, ಪುತ್ರ ಕೈಲಾಸ್ ಭಟ್ ಇದ್ದಾರೆ.

ಯಕ್ಷಗಾನ ಸಂಘಟಕರಾಗಿ ದೇಶ ವಿದೇಶಗಳಲ್ಲಿಯೂ ತಂಡವನ್ನು ಒಯ್ದು ಪ್ರದರ್ಶನ ಮಾಡಿದ್ದಾರೆ. ಬೆಂಗಳೂರಿನ ಹವ್ಯಾಸಿ ಕಲಾವಿದರಿಗೆ ವೇಷಭೂಷಣಗಳನ್ನು ಒದಗಿಸಿ ತೆಂಕುತಿಟ್ಟು ಯಕ್ಷಗಾನ ಬೆಳೆಸಿದ್ದರು. 13ನೇ ಅಖಿಲ ಭಾರತ ಯಕ್ಷಗಾನ ಸಾಹಿತ್ಯ ಸಮ್ಮೇಳನವನ್ನು 2018ರಲ್ಲಿ ಕುಂದಾಪುರದಲ್ಲಿ ಅವರು ಸಂಘಟಿಸಿದ್ದರು. ಕೇರಳ ರಾಜ್ಯಮಟ್ಟದ ಪ್ರಶಸ್ತಿ, ತೆಂಕುತಿಟ್ಟು ಯಕ್ಷಗಾನ ಪ್ರತಿಷ್ಠಾನ, ಚಿಟ್ಟಾಣಿ ಪ್ರಶಸ್ತಿ, ಕಲಾ ಕೌಮುದಿ ಪ್ರಶಸ್ತಿ, ಕೆರೆಮನೆ ಶಂಭು ಹೆಗಡೆ ರಾಷ್ಟ್ರೀಯ ನೃತ್ಯೋತ್ಸವ ಪುರಸ್ಕಾರ, ಕೆಂಪೇಗೌಡ ಪ್ರಶಸ್ತಿ, ಆರ್ಯಭಟ ಪ್ರಶಸ್ತಿಗಳು ಸಂದಿವೆ. ಕೆಂಗೇರಿಯಲ್ಲಿ ಸೋಮವಾರ ಸಂಜೆ ಅಂತ್ಯಸಂಸ್ಕಾರ ನಡೆಯಿತು.

ನಗರದಲ್ಲಿ ಇಂದು

ಹೋರಾಟನಿರತ ಕುಸ್ತಿಪಟುಗಳಿಗೆ ಬೆಂಬಲ ಸೂಚಿಸಿ ರಾಜ್ಯಮಟ್ಟದ ಸಮಾವೇಶ: ಭಾಷಣಕಾರರು: ಪಿ.ಜಿ.ಆರ್. ಸಿಂಧ್ಯಾ, ಪಲ್ಲವಿ ಅಕ್ಕುರತಿ, ಎಂ.ಕೆ. ಆಶಾ, ಅಪರ್ಣಾ ಬಿ.ಆರ್., ಮಧುಲತಾ ಗೌಡರ, ಅಧ್ಯಕ್ಷತೆ: ಶೋಭಾ ಎಸ್., ಆಯೋಜನೆ: ಅಖಿಲ ಭಾರತ ಮಹಿಳಾ ಸಾಂಸ್ಕೃತಿಕ ಸಂಘಟನೆ, ಸ್ಥಳ: ಯುವಿಸಿಇ ಅಲೂಮ್ನಿ ಅಸೋಸಿಯೇಷನ್, ಕೆ.ಆರ್. ವೃತ್ತ, ಬೆಳಿಗ್ಗೆ 10.30

ಕೆ.ಸಿ. ರಾಮಮೂರ್ತಿ ದತ್ತಿ ಉಪನ್ಯಾಸ: ‘ಭಾರತೀಯ ದೃಷ್ಟಿಕೋನದಿಂದ ಸಾಂವಿಧಾನಿಕ ಆಡಳಿತ ಮತ್ತು ಸಾರ್ವಜನಿಕ ನೀತಿ’ ಕುರಿತು ಉಪನ್ಯಾಸ: ಆರ್. ವೆಂಕಟರಮಣಿ, ಅತಿಥಿ: ಕೆ.ಸಿ. ರಾಮಮೂರ್ತಿ, ಅಧ್ಯಕ್ಷತೆ: ಸಬಿತಾ ರಾಮಮೂರ್ತಿ, ಆಯೋಜನೆ ಮತ್ತು ಸ್ಥಳ: ಸಿಎಂಆರ್ ಯೂನಿವರ್ಸಿಟಿಯ ಸ್ಕೂಲ್ ಆಫ್ ಲೀಗಲ್ ಸ್ಟಡೀಸ್, ಭುವನಗಿರಿ, ಒಎಂಬಿಆರ್ ಲೇಔಟ್, ಬೆಳಿಗ್ಗೆ 11

‘ರುಕ್ಮಿಣೀಶ ವಿಜಯ’ ಪ್ರವಚನ: ಬ್ರಹ್ಮಣ್ಯಾಚಾರ್ ಭಾವೀಸಮೀರ, ಆಯೋಜನೆ ಮತ್ತು ಸ್ಥಳ: ಗೀತಾ ಮಂದಿರ ಟ್ರಸ್ಟ್, ಶ್ರೀರಾಮಪುರ, ಸಂಜೆ 6.30

ತಿಲಕ್ ನಗರದ ಶಕ್ತಿಮರಿ ಅಮ್ಮನಗುಡಿ ಬಳಿ ಸರಕುಗಳಿಂದ ಭರ್ತಿಯಾಗಿದ್ದ ಆಟೋರಿಕ್ಷಾ ಮಳೆಯಲ್ಲಿ ಸಾಗಿತು – ಪ್ರಜಾವಾಣಿ ಚಿತ್ರ/ ಪ್ರಶಾಂತ್ ಎಚ್‌.ಜಿ.

ಸೋಮವಾರವೂ ಸುರಿದ ಭಾರಿ ಗಾಳಿ ಸಹಿತ ಮಳೆ

ಬೆಂಗಳೂರು: ನಗರದಲ್ಲಿ ಸೋಮವಾರವೂ ಅಲ್ಲಲ್ಲಿ ಬಿರುಗಾಳಿ ಸಹಿ ಮಳೆ ಸುರಿಯಿತು.

ಸಂಜೆ ಗುಡುಗು ಸಹಿತ ಮಳೆ ಆರಂಭವಾಯಿತು. ತಿಲಕನಗರ, ಜಯನಗರ, ಅಶೋಕ ಪಿಲ್ಲರ್, ರಾಜಾಜಿನಗರ, ವಿಲ್ಸನ್ ಗಾರ್ಡನ್, ಆರ್.ಟಿ.ನಗರ, ವಸಂತನಗರ ಸುತ್ತಮುತ್ತ ಮಳೆ ಸುರಿಯಿತು.

ಜಯನಗರದ ಕ್ರೀಡಾಂಗಣದ ಪಕ್ಕದಲ್ಲಿ ಮರದ ಟೊಂಗೆಯೊಂದು ರಸ್ತೆಗೆ ಉರುಳಿತು. ಅಲ್ಲಲ್ಲಿ ರಸ್ತೆಗಳಲ್ಲಿ ನೀರು ನಿಂತು ಸಂಚಾರಕ್ಕೂ ತೊಂದರೆ ಆಯಿತು.

ನೆಲಕ್ಕೆ ಬಿದ್ದ 40ಕ್ಕೂ ಹೆಚ್ಚು ಮರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಿಲಿಕಾನ್ ಸಿಟಿಯಲ್ಲಿ ಭಾನುವಾರ ಸುರಿದ ಭಾರಿ ಮಳೆಗೆ ಕಬ್ಬನ್ ಉದ್ಯಾನದಲ್ಲಿನ 40ಕ್ಕೂ ಹೆಚ್ಚು ಮರಗಳು ಬುಡಸಮೇತ ಧರೆಗುರುಳಿವೆ.

‘ಕಬ್ಬನ್ ಉದ್ಯಾನದಲ್ಲಿರುವ ಕೇಂದ್ರ ಗ್ರಂಥಾಲಯ, ಬ್ಯಾಂಡ್ ಸ್ಟ್ಯಾಂಡ್ ಸೇರಿ ವಿವಿಧ ಭಾಗಗಳಲ್ಲಿರುವ ಬೃಹತ್ ಮರಗಳು ನೆಲಕ್ಕುರುಳಿದ್ದು, ಕೆಲ ಮರಗಳ ರಂಬೆ–ಕೊಂಬೆಗಳು ಬಿದ್ದಿವೆ. ಪ್ರತಿವರ್ಷ ಮಳೆಗಾಲದಲ್ಲಿ ಮರಗಳು ಬೀಳುವುದು ಸಹಜ. ಬಿಬಿಎಂಪಿಯಿಂದ ಅನುಮತಿ ಪಡೆದು ಅವುಗಳನ್ನು ತೆರವು ಗೊಳಿಸಲಾಗುವುದು. ಬಿಬಿಎಂಪಿಯೇ ನಿಗದಿಪಡಿಸಿದ ಬೆಲೆಗೆ ಮರಗಳನ್ನು ಹರಾಜು ಹಾಕಲಾಗುತ್ತದೆ. ಬಿದ್ದ ಮರಗಳ ಸ್ಥಳದಲ್ಲಿ ಬೇರೆ ಸಸಿಗಳನ್ನು ನೆಡಲಾಗುವುದು’ ಎಂದು ತೋಟಗಾರಿಕೆ ಇಲಾಖೆ ಉಪನಿರ್ದೇಶಕ (ಕಬ್ಬನ್ ಉದ್ಯಾನ) ಎಚ್‌.ಟಿ. ಬಾಲಕೃಷ್ಣ ಮಾಹಿತಿ ನೀಡಿದರು.

‘ಉದ್ಯಾನದಲ್ಲಿ 150ಕ್ಕೂ ಹೆಚ್ಚು ಮರಗಳು ಬಿದ್ದಿದ್ದು, ಹಲವಾರು ಮರಗಳಿಗೆ ಹಾನಿಯಾಗಿದೆ’ ಎಂದು ಕಬ್ಬನ್ ಉದ್ಯಾನ ನಡಿಗೆದಾರರ ಸಂಘ ದೂರಿದೆ.

ಲಾಲ್‌ಬಾಗ್ ಉದ್ಯಾನದಲ್ಲೂ ಹಲವಾರು ಮರಗಳು ಬುಡಸಮೇತ ಬಿದ್ದಿದ್ದು, ಬಹಳಷ್ಟು ಮರಗಳಿಗೆ ಹಾನಿಯಾಗಿದೆ ಎಂದು ಲಾಲ್‌ಬಾಗ್ ವಾಯುವಿಹಾರಿಗಳಾದ ಸುಷ್ಮಾ, ಶಿಲ್ಪಾ ಗಿರಿಧರ್ ತಿಳಿಸಿದರು.

ಭಾನುವಾರ ಸುರಿದ ಭಾರಿ ಮಳೆ ಮತ್ತು ಗಾಳಿಗೆ ಕಬ್ಬನ್ ಉದ್ಯಾನದಲ್ಲಿ ಮರವೊಂದು ಧರೆಗುರುಳಿದೆ – ಪ್ರಜಾವಾಣಿ ಚಿತ್ರ

ಇನ್ನೂ ನಾಲ್ಕು ದಿನ ಮಳೆ ಸಾಧ್ಯತೆ

ಬೆಂಗಳೂರು: ರಾಜ್ಯದ ಹಲವು ಜಿಲ್ಲೆಗಳಲ್ಲಿ ಮಂಗಳವಾರದಿಂದ (ಮೇ 23) ನಾಲ್ಕು ದಿನಗಳ ಕಾಲ ಗುಡುಗು ಸಹಿತ ಭಾರಿ ಮಳೆಯಾಗುವ ಸಾಧ್ಯತೆಯಿದೆ ಎಂದು ಭಾರತೀಯ ಹವಾಮಾನ ಇಲಾಖೆ (ಐಎಂಡಿ) ಮುನ್ಸೂಚನೆ ನೀಡಿದೆ.

ಬೆಂಗಳೂರು ನಗರದಲ್ಲಿ ಭಾಗಶಃ ಮೋಡ ಕವಿದ ವಾತಾವರಣ ಇರಲಿದ್ದು, ಸಂಜೆ ಅಥವಾ ರಾತ್ರಿ ಗುಡುಗು ಸಹಿತ ಮಳೆಯಾಗುವ ಬಹಳಷ್ಟು ಸಾಧ್ಯತೆಯಿದೆ ಎಂದು ಎಚ್ಚರಿಸಿದೆ.

ಉರುಳಿದ 546 ವಿದ್ಯುತ್ ಕಂಬಗಳು

ಬೆಂಗಳೂರು: ಬೆಸ್ಕಾಂ ವ್ಯಾಪ್ತಿಯಲ್ಲಿ ಕಳೆದ ಮೂರು ದಿನಗಳಿಂದ ಸುರಿದ ಭಾರಿ ಗಾಳಿ-ಮಳೆಗೆ 546ಕ್ಕೂ ಹೆಚ್ಚು ವಿದ್ಯುತ್ ಕಂಬಗಳು ಧರೆಗುರುಳಿವೆ.

64 ವಿದ್ಯುತ್ ಪರಿವರ್ತಕಗಳು ಹಾಗೂ 9 'ಡಬಲ್ ಪೋಲ್ ಸ್ಟ್ರಕ್ಚರ್'ಗಳು ಹಾನಿಗೊಂಡ ಪರಿಣಾಮ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಿದೆ.

ಸತತ ಸುರಿಯುತ್ತಿರುವ ಗಾಳಿ-ಮಳೆಗೆ ವಿದ್ಯುತ್ ಕಂಬಗಳು ಮುರಿದಿದ್ದು, ದುರಸ್ತಿ ಕಾರ್ಯ ಭರದಿಂದ ಸಾಗಿದೆ. ಭಾರೀ ಮಳೆ-ಗಾಳಿಗೆ ವಿದ್ಯುತ್ ಕಂಬಗಳಿಗೆ ಹಾನಿಯಾಗಿದೆ. ವಿದ್ಯುತ್ ವ್ಯತ್ಯಯ ಉಂಟಾಗಿರುವ ಪ್ರದೇಶಗಳಲ್ಲಿ ಮರು ಸ್ಥಾಪಿಸಲು ಕ್ರಮಕೈಗೊಳ್ಳಲಾಗಿದೆ ಎಂದು ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ಮಹಾಂತೇಶ ಬೀಳಗಿ ತಿಳಿಸಿದ್ದಾರೆ.

ಶನಿವಾರ ಸುರಿದ ಭಾರೀ ಮಳೆಗೆ ಬೆಂಗಳೂರು ನಗರ ಸೇರಿ ಬೆಸ್ಕಾಂ ವ್ಯಾಪ್ತಿಯ ಹಲವು ಭಾಗಗಳಲ್ಲಿ 142 ಕಂಬಗಳು ಮುರಿದ್ದಿದ್ದು, 20 ವಿದ್ಯುತ್ ಪರಿವರ್ತಕಗಳು ಹಾನಿಗೊಳಗಾಗಿವೆ. ಹಾಗೆಯೇ, ಭಾನುವಾರ ಸುರಿದ ಗಾಳಿ- ಮಳೆಗೆ 404 ಕಂಬಗಳು ಮುರಿದ್ದಿದ್ದು, 44 ಟಿಸಿಗಳು ಹಾಗೂ 9 ಡಬಲ್ ಪೋಲ್ ಸ್ಟ್ರಕ್ಚರ್‌ಗಳು ಹಾನಿಗೊಳಗಾಗಿವೆ.



ವಿದ್ಯುತ್ ವ್ಯತ್ಯಯಗೊಂಡಿರುವ ಪ್ರದೇಶಗಳು: ಬೆಂಗಳೂರು ನಗರ ವ್ಯಾಪ್ತಿಯ ಹೆಬ್ಬಾಳ, ಮಲ್ಲೇಶ್ವರ, ಯಲಹಂಕ, ವಿಜಯನಗರದ, ನಾಗರಬಾವಿ, ಮಹಾಲಕ್ಷ್ಮಿ, ಬಡಾವಣೆ, ಹೆಸರಘಟ್ಟ, ಕೋರಮಂಗಲ, ರಾಜನಕುಂಟೆ, ಜಯನಗರ, ಶಿವಾಜಿನಗರ, ಇಂದಿರಾನಗರ, ಕೆಂಗೇರಿ, ಆರ್. ಆರ್. ನಗರ, ಪೀಣ್ಯ ಸೇರಿದಂತೆ ಮತ್ತಿತ್ತರ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಿದೆ.

ಸಹಾಯವಾಣಿಗೆ ದೂರುಗಳ ಸುರಿಮಳೆ: ಭಾನುವಾರ ಒಟ್ಟು 44,784 ಕರೆಗಳು ಬೆಸ್ಕಾಂ ಸಹಾಯವಾಣಿ 1912ಕ್ಕೆ ಬಂದಿದ್ದು, ಈ ಪೈಕಿ 22,249 ದೂರುಗಳನ್ನು ದಾಖಲಿಸಿಕೊಳ್ಳಲಾಗಿದೆ.

ಹಾಗೆಯೇ ಪ್ರತಿ 1 ಗಂಟೆ ಅವಧಿಯಲ್ಲಿ ಸರಾಸರಿ 1691 ಕರೆಗಳು ಬಂದಿದ್ದು, 779 ದೂರುಗಳು ದಾಖಲಾಗಿವೆ. ಹೆಚ್ಚಿನ ಕರೆಗಳು ಗಾಳಿ-ಮಳೆಯಿಂದಾಗಿ ವಿದ್ಯುತ್ ವ್ಯತ್ಯಯಕ್ಕೆ ಸಂಬಂಧಿಸಿದ್ದಾಗಿದೆ. ವಿದ್ಯುತ್ ಅವಘಡ ಮತ್ತು ಅಪಘಾತ ತಡೆಗೆ ಸಹಾಯವಾಣಿ ಕಾರ್ಯನಿರ್ವಹಿಸುತ್ತಿದ್ದು, ದೂರುಗಳನ್ನು ದಾಖಲಿಸಿಕೊಂಡು ಪರಿಹಾರಕ್ಕೆ ಸಂಬಂಧಪಟ್ಟ ಅಧಿಕಾರಿಗಳಿಗೆ ರವಾನಿಸಲಾಗುತ್ತಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

18 ಕೆಳ ಸೇತುವೆಗಳ ಸ್ಥಿತಿಗತಿ ಮೌಲ್ಯಮಾಪನ

ಬೆಂಗಳೂರು: ‘ನಗರದಲ್ಲಿ 53 ಕೆಳ ಸೇತುವೆಗಳಿದ್ದು, ಅವುಗಳ ಪೈಕಿ 18 ಕೆಳ ಸೇತುವೆಗಳ ಸ್ಥಿತಿಗತಿ ಮೌಲ್ಯಮಾಪನ ಮಾಡಿಸಲಾಗುತ್ತಿದೆ’ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ತಿಳಿಸಿದರು.

ನೀರು ಸರಾಗವಾಗಿ ಹರಿದು ಹೋಗುತ್ತಿದೆಯೇ ಎಂಬುದನ್ನು ಪರಿಶೀಲಿಸಿ ತೊಂದರೆ ಇದ್ದರೆ ವಾಹನ ಸಂಚಾರ ಬಂದ್ ಮಾಡಿ ದುರಸ್ತಿಪಡಿಸಲಾಗುವುದು ಎಂದು ಸುದ್ದಿಗಾರರಿಗೆ ವಿವರಿಸಿದರು.

50 ಮಿಲಿ ಮೀಟರ್ ಮಳೆ 45 ನಿಮಿಷದಲ್ಲಿ ಸುರಿದದ್ದರಿಂದ ನೀರಿನ ಹರಿವು ಹೆಚ್ಚಾಯಿತು. ಮತ್ತೆ ಈ ರೀತಿಯ ಘಟನೆ ಸಂಭವಿಸದಂತೆ ಪರಿಹಾರ ಕಾಮಗಾರಿ ಕೈಗೊಳ್ಳಲಾಗುವುದು ಎಂದರು.

ರಾಜಕಾಲುವೆ ಒತ್ತುವರಿ ತೆರವು ಕಾರ್ಯವೂ ನಡೆಯುತ್ತಿದೆ. 607 ಕಡೆ ಒತ್ತುವರಿಯಾಗಿದ್ದು, 108 ಕಡೆ ತೆರವಿಗೆ ನ್ಯಾಯಾಲಯದ ತಡೆ ಇದೆ. ಉಳಿದ ಕಡೆಗಳಲ್ಲಿ ಕಾರ್ಯಾಚರಣೆ ಮುಂದುವರಿದಿದೆ ಎಂದು ಹೇಳಿದರು.

ವಿದ್ಯಾರಣ್ಯಪುರದಲ್ಲಿ ವಾಲಿರುವ ಕಟ್ಟಡದಿಂದ ಅಕ್ಕ-ಪಕ್ಕದ ಕಟ್ಟಡಗಳಿಗೆ ತೊಂದರೆಯಾಗಿದ್ದು, ತೆರವುಗೊಳಿಸಲಾಗುತ್ತಿದೆ ಎಂದರು.

ಪ್ರಕರಣ ಇತ್ಯರ್ಥವಾದ ಬಳಿಕ 309 ಎಕರೆ ಅಭಿವೃದ್ಧಿ

ಪ್ರಜಾವಾಣಿ ವಾರ್ತೆ

ಬಿಡಿಎ ಸುದ್ದಿ

ಬೆಂಗಳೂರು: ‘ಕೆಂಪೇಗೌಡ ಬಡಾವಣೆಯ ನಿವೇಶನಗಳ ಹಂಚಿಕೆದಾರರು ಆತಂಕ ಪಡುವ ಅಗತ್ಯವಿಲ್ಲ. ನಾನಾ ಕಾರಣಕ್ಕೆ ವಿಳಂಬವಾಗಿದ್ದ ಕಾಮಗಾರಿಗೆ ವೇಗ ನೀಡಲಾಗುವುದು’ ಎಂದು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಎಂಜಿನಿಯರಿಂಗ್ ಸದಸ್ಯ ಶಾಂತರಾಜಣ್ಣ ಅವರು ಭರವಸೆ ನೀಡಿದ್ದಾರೆ.

ಮೇ 18ರಂದು ‘ಪ್ರಜಾವಾಣಿ’ಯಲ್ಲಿ ಪ್ರಕಟವಾಗಿದ್ದ ‘ದರ ವ್ಯತ್ಯಾಸ: ಕಾಮಗಾರಿ ಸ್ಥಗಿತ’ ವಿಶೇಷ ವರದಿಗೆ ಪ್ರತಿಕ್ರಿಯಿಸಿರುವ ಅವರು, ‘ಬೆಂಗಳೂರು ಉತ್ತರ ತಾಲ್ಲೂಕಿನ ಯಶವಂತಪುರ ಹೋಬಳಿಯ ನಾಲ್ಕು ಗ್ರಾಮಗಳಾದ ಸೀಗೆಹಳ್ಳಿ, ಕನ್ನಲ್ಲಿ, ಕೊಡಿಗೇಹಳ್ಳಿ, ಮಂಗನಹಳ್ಳಿ ಮತ್ತು ಬೆಂಗಳೂರು ದಕ್ಷಿಣ ತಾಲ್ಲೂಕಿನ ಕಂಗೇರಿ ಹೋಬಳಿಯ 8 ಗ್ರಾಮಗಳಾದ ಕೊಮ್ಮಘಟ್ಟ, ಭೀಮನಕುಪ್ಪೆ–ರಾಮಸಾಗರ, ಸೂಲಿಕೆರೆ, ಕೆಂಚನಪುರ, ರಾಮಸಂದ್ರ ಕೊಮ್ಮಘಟ್ಟ, ಕೃಷ್ಣಸಾಗರ, ಚಲ್ಲಘಟ್ಟ ವ್ಯಾಪ್ತಿಯಲ್ಲಿ ಒಟ್ಟು 4,043 ಎಕರೆ ಜಮೀನನ್ನು ಈ ಬಡಾವಣೆ ಒಳಗೊಂಡಿದೆ. ಅದರಲ್ಲಿ ಪ್ರಸ್ತುತ 2,694 ಎಕರೆಯಷ್ಟು ಜಮೀನು ಸ್ವಾಧೀನ ಪಡಿಸಿಕೊಂಡು ಎಂಜಿನಿಯರಿಂಗ್ ವಿಭಾಗಕ್ಕೆ ಹಸ್ತಾಂತರಿಸಲಾಗಿದೆ' ಎಂದು ವಿವರಿಸಿದ್ದಾರೆ.

‘ಹಸ್ತಾಂತರವಾದ 2,217 ಎಕರೆ ಜಮೀನಿನಲ್ಲಿ ಬಡಾವಣೆ ನಿರ್ಮಾಣ ಕಾಮಗಾರಿ ಭೌತಿಕವಾಗಿ ಪೂರ್ಣಗೊಳಿಸಲಾಗಿದೆ. ಉಳಿದ 167 ಎಕರೆಯಲ್ಲಿ ಬಡಾವಣೆ ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿದೆ. 309 ಎಕರೆ 13 ಗುಂಟೆ ಜಮೀನಿನ ಮೇಲೆ ವಿವಿಧ ನ್ಯಾಯಾಲಯದಲ್ಲಿ ಮೊಕದ್ದಮೆಗಳು ವಿಚಾರಣೆ ಹಂತದಲ್ಲಿವೆ. ನ್ಯಾಯಾಲಯದಲ್ಲಿ ಇತ್ಯರ್ಥವಾದ ಮೇಲೆ ಅಲ್ಲಿ ಅಭಿವೃದ್ಧಿ ಕೆಲಸ ಕೈಗೊಳ್ಳಲಾಗುವುದು’ ಎಂದು ಭರವಸೆ ನೀಡಿದ್ದಾರೆ.

‘2014ರ ಮಾರ್ಚ್ ವರೆಗೆ ಹಸ್ತಾಂತರಿಸಿದ 2,080 ಎಕರೆ ಜಮೀನು ಅಭಿವೃದ್ಧಿ ಪಡಿಸಲು ಒಟ್ಟು 10 ಪ್ಯಾಕೇಜ್‌ಗಳಾಗಿ ವಿಂಗಡಿಸಲಾಗಿತ್ತು. ₹ 768.18 ಕೋಟಿಗಳಲ್ಲಿ ಗುತ್ತಿಗೆ ಕಾಮಗಾರಿಯನ್ನು ವಿವಿಧ ಕಂಪನಿಗಳಿಗೆ ವಹಿಸಲಾಗಿತ್ತು. ಪ್ಯಾಕೇಜ್–1 ಅನ್ನು ಕೆಎಂಸಿ ಸಂಸ್ಥೆಗೆ ಹಾಗೂ ಪ್ಯಾಕೇಜ್– 2, 3ರ ಕಾಮಗಾರಿಯನ್ನು ರಾಮಲಿಂಗಂ ಕನ್‌ಸ್ಟ್ರಕ್ಷನ್ ಕಂಪನಿ'ಗೆ (ಆರ್‌ಸಿಸಿ) ನೀಡಲಾಗಿದೆ. ಗುತ್ತಿಗೆದಾರರು ₹ 564 ಕೋಟಿ ಮೊತ್ತದ ಕಾಮಗಾರಿ ನಿರ್ವಹಿಸಿದ್ದಾರೆ. ಬಾಕಿಯಿರುವ ₹ 212 ಕೋಟಿ ಮೊತ್ತದ ಕಾಮಗಾರಿ ಪ್ರಗತಿಯಲ್ಲಿದೆ’ ಎಂದು ವಿವರಿಸಿದ್ದಾರೆ.

‘ದರ ವ್ಯತ್ಯಾಸದ ಬಗ್ಗೆ ಗುತ್ತಿಗೆದಾರರು ಪ್ರಾಧಿಕಾರದ ಜತೆಗೆ ಪತ್ರ ವ್ಯವಹಾರ ನಡೆಸಿಲ್ಲ. ನ್ಯಾಯಾಲಯದಲ್ಲಿ ಪ್ರಕರಣಗಳಿರುವ ಕಾರಣಕ್ಕೆ ಕಾಮಗಾರಿ ಕುಂಠಿತವಾಗಿದೆ. ಜಮೀನು ಹಸ್ತಾಂತರ ವಿಳಂಬದಿಂದಲೂ ಕಾಮಗಾರಿಗೆ ತೊಡಕಾಗಿದೆ. ಮಳೆಗಾಲ ಸಮೀಪಿಸಿದ್ದು ಬಡಾವಣೆಯ 35 ಸೇತುವೆಗಳ ನಿರ್ಮಾಣ ಕಾಮಗಾರಿಗೆ ವೇಗ ಪಡೆದುಕೊಂಡಿದೆ’ ಎಂದು ಸ್ಪಷ್ಟನೆ ನೀಡಿದ್ದಾರೆ.

‘ಮಾಗಡಿ ಮುಖ್ಯರಸ್ತೆಯಿಂದ ಮೈಸೂರು ಮುಖ್ಯರಸ್ತೆ ತನಕ ಪ್ರಾಧಿಕಾರದಿಂದ ₹ 588.79 ಕೋಟಿ ವೆಚ್ಚದಲ್ಲಿ 100 ಮೀಟರ್ ಅಗಲದ ಮುಖ್ಯರಸ್ತೆ ನಿರ್ಮಿಸಲಾಗುತ್ತಿದೆ. ಈಗಾಗಲೇ ₹ 418.30 ಕೋಟಿ ವೆಚ್ಚದಲ್ಲಿ ಕಾಮಗಾರಿ ನಡೆಸಲಾಗಿದೆ. ಉಳಿದ ₹ 170.49 ಕೋಟಿ ವೆಚ್ಚದ ಕಾಮಗಾರಿ ಮುಂದುವರಿದಿದೆ. ಬಡಾವಣೆಯ ವಿವಿಧ ಬ್ಲಾಕ್‌ಗಳಿಗೆ ಸಂಪರ್ಕ ಕಲ್ಪಿಸುವ ರಸ್ತೆ ಕಾಮಗಾರಿಗೆ ಟೆಂಡರ್ ಹಂತದಲ್ಲಿದೆ’ ಎಂದು ಶಾಂತರಾಜಣ್ಣ ಪ್ರಕಟಣೆಯಲ್ಲಿ ಸ್ಪಷ್ಟನೆ ನೀಡಿದ್ದಾರೆ.

ನೈಋತ್ಯ ರೈಲ್ವೆ G20

ಟೆಂಡರ್ ಸೂಚನೆ ಸಂ. CAO/CN/BNC/145/2023 ದಿನಾಂಕ: 07.02.2023 ಗೆ ತಿದ್ದುಪಡಿ

ಕಾಮಗಾರಿಯ ವಿವರಣೆ	ಅಂದಾಜು ಮೌಲ್ಯ
ಇಪಿಸಿ ಮೋಡ್‌ನಲ್ಲಿ ದೂರಸಂಪರ್ಕ ಮತ್ತು ಎಲೆಕ್ಟ್ರಿಕಲ್ ವರ್ಕ್ಸ್ ಸೇರಿದಂತೆ ಧಾರವಾಡ – ಬೆಳಗಾವಿ ಹೊಸ ಮಾರ್ಗ ಯೋಜನೆ (73.10 ಕಿಮೀ) ಅಡಿಯಲ್ಲಿ ಕ್ಯಾರಕೊಪ್ಪ (ಹೊರತುಪಡಿಸಿ) (ಸಿಎಚ್:6100) ಮತ್ತು ಮುಮ್ಮಿಗಟ್ಟಿ (ಸೇರಿದಂತೆ) (ಸಿಎಚ್:17800) (11.700 ಕಿಮೀ) ನಡುವೆ ಹೊಸ ಬ್ರಾಡ್ ಗೇಜ್ ಲೈನ್ ಟ್ರ್ಯಾಕ್ ನಿರ್ಮಾಣ. (ಟೆಂಡರ್ ಉಲ್ಲೇಖ ಸಂಖ್ಯೆ: DWR-BGM-EPC-01).	ರೂ. 243,66,29,736/-

ಅಸ್ತಿತ್ವದಲ್ಲಿರುವ ಮುಕ್ತಾಯ ದಿನಾಂಕ: 06.06.2023, 11:00 ಗಂಟೆಯವರೆಗೆ.
ಮುಕ್ತಾಯದ ಪರಿಷ್ಕೃತ ದಿನಾಂಕ: 05.08.2023, 11:00 ಗಂಟೆಯವರೆಗೆ.

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಉಪ ಮುಖ್ಯ ಎಂಜಿನಿಯರ್ / ನಿರ್ಮಾಣ ಕಾಮಗಾರಿಗಳು / ಬೆಂಗಳೂರು ಕಂಟೋನ್ಮೆಂಟ್

PUB/109/AAV/PRB/SWR/2023-24

S.W.Railways SWRRLY SWRRLY

ನೈಋತ್ಯ ರೈಲ್ವೆ G20

ಟೆಂಡರ್ ಸೂಚನೆ ಸಂ. 02/Bridges/UBL 2023-24 ದಿನಾಂಕ: 17.05.2023

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕ್ರ	ಕಾಮಗಾರಿಗಳ ಹೆಸರು	ಅಂದಾಜು ವೆಚ್ಚ
1	ಹುಬ್ಬಳ್ಳಿ ವಿಭಾಗ: ಗದಗ–ಹೊಟಗಿ ವಿಭಾಗದಲ್ಲಿ ಕಿಮೀ 125/700– 126/700 ನಲ್ಲಿ ಸೇತುವೆ ನಂ. 63 (ಸ್ಪ್ಯಾನ್ 44x18.3ಮೀ) ರ ಮತ್ತು ಕಿಮೀ 128/700–129/ 100 ನಲ್ಲಿ 63ಡಿ (ಸ್ಪ್ಯಾನ್ 14x18.3+2x45.72) ರ ಬಾಗಿದ ತುದಿ ಮತ್ತು ಸ್ಟೀಲ್ ಗಿರ್ಡರ್‌ನ ಮಧ್ಯಂತರ ಸ್ಟಿಫ್ಫೆನರ್‌ಗಳ ಬದಲಿ.	ರೂ. 1,20,94,000/-
2	ಉಪ ಕಾಮಗಾರಿ I: ಹುಬ್ಬಳ್ಳಿ ವಿಭಾಗ: ಹಿರಿಯ ವಿಭಾಗದ ಇಂಜಿನಿಯರ್ / ಸೇತುವೆ / ಹುಬ್ಬಳ್ಳಿ ನ್ಯಾಯವ್ಯಾಪ್ತಿಯ ಅಡಿಯಲ್ಲಿ ಹುಬ್ಬಳ್ಳಿ–ಗದಗ ವಿಭಾಗದಲ್ಲಿ ಸೇತುವೆ ಸಂಖ್ಯೆ 10 ಡೌನ್, 13ಡೌನ್, 25 ಡೌನ್ ಗದಗ – ಹೊಸಪೇಟೆ ವಿಭಾಗದಲ್ಲಿ ಸೇತುವೆ ಸಂಖ್ಯೆ 63ಡೌನ್, 86/ಎ ಡೌನ್, 104 ಡೌನ್, 31/ಎ, ಹೊಸಪೇಟೆ – ಬಳ್ಳಾರಿ ವಿಭಾಗದಲ್ಲಿ ಸೇತುವೆ ಸಂಖ್ಯೆ 139/ ಎ ಅಪ್ & ಡೌನ್, 157 ಅಪ್ & ಡೌನ್, 184 ಅಪ್ ಡೌನ್ & ಲೂಪ್, 200 ಅಪ್ & ಡೌನ್, 204 ಅಪ್ & ಡೌನ್, 206 ಅಪ್ & ಡೌನ್, 240 ಅಪ್&ಡೌನ್, 243 ಅಪ್ & ಡೌನ್, 266/ಎ ಅಪ್ & ಡೌನ್, ಬಳ್ಳಾರಿ–ರಾಯದುರ್ಗ ವಿಭಾಗದಲ್ಲಿ ಸೇತುವೆ ಸಂಖ್ಯೆ 4,53, ಬಳ್ಳಾರಿ–ತುಮಕೂರು ವಿಭಾಗದಲ್ಲಿ ಸೇತುವೆ 42, ಹೊಸಪೇಟೆ – ವ್ಯಾಸ ಕಾಲೋನಿ – ಕೊಟ್ಟೂರು ವಿಭಾಗದಲ್ಲಿ ಸೇತುವೆ ಸಂಖ್ಯೆ 39, 47, 66, 121,133, 155, ತೋರಣಗಲ್ಲು – ರಂಜಿತ್‌ಪುರ ವಿಭಾಗದಲ್ಲಿ ಸೇತುವೆ ನಂ. 3,19, ಗಿಣಿಗೇರಾ–ರಾಯಚೂರು ವಿಭಾಗದಲ್ಲಿ ಸೇತುವೆ ಸಂಖ್ಯೆ 7, 8, 19, 59, 93, 122, ಗದಗ–ಹೊಟಗಿ ವಿಭಾಗದಲ್ಲಿ ಸೇತುವೆ ಸಂಖ್ಯೆ 8, 33, 36, 63, 63/ಡಿ, 76 ಅಪ್ & ಡೌನ್, 78, 83, 84, 62/ಇ, ಹುಬ್ಬಳ್ಳಿ – ಹಾವೇರಿ ವಿಭಾಗದಲ್ಲಿ ಸೇತುವೆ ಸಂಖ್ಯೆ 8, 11, 16, 18, 38, ಸೇತುವೆ ಸಂಖ್ಯೆ 253 ಗಾಗಿ ತಪಾಸಣೆ ಏಣಿಗಳನ್ನು ಒದಗಿಸುವುದು. **ಉಪ ಕಾಮಗಾರಿ II:** ಹುಬ್ಬಳ್ಳಿ ವಿಭಾಗ: ಹಿರಿಯ ವಿಭಾಗ ಇಂಜಿನಿಯರ್/ಸೇತುವೆ/ಓ/ಬೆಳಗಾವಿ ಅಧಿಕಾರ ವ್ಯಾಪ್ತಿಯ ಅಡಿಯಲ್ಲಿ ಧಾರವಾಡ – ಲೋಂಡಾ ವಿಭಾಗದಲ್ಲಿ ಸೇತುವೆ ಸಂಖ್ಯೆ 228/ಎ ಗೆ ಅಪ್&ಡೌನ್ (ಆರ್‌ಯುಬಿಗಳು), 176 ಅಪ್, 16, 91 ಡೌನ್, ಲೋಂಡಾ–ಮಿರಜ್ ವಿಭಾಗದಲ್ಲಿ ಸೇತುವೆ ಸಂಖ್ಯೆ 126/ಎ (ಎಲ್‌ಎಚ್‌ಎಸ್), 126/ ಎ (ಆರ್‌ಎಚ್‌ಎಸ್), 6/ಎ, 15/ಎ, 26, 26/ಎ (ಎಲ್‌ಎಚ್‌ಎಸ್), 26/ಎ (ಆರ್‌ಎಚ್‌ಎಸ್), 102 (ಪಿಸಿಎಚ್), 109, 119/ ಎ, 125, 128, 129, 142/ಎ ಅಪ್ & ಡೌನ್ (ಆರ್‌ಯುಬಿಗಳು), 208 (ವಿಜೆಆರ್), ಲೋಂಡಾದಲ್ಲಿ – ವಾಸ್ಕೋ–ಡ–ಗಾಮಾ ವಿಭಾಗದಲ್ಲಿ ಸೇತುವೆ ಸಂಖ್ಯೆ 3, 69, 79, 171, 192, 208, 212 ಮತ್ತು 218 ರಲ್ಲಿ ಎಲ್ಲ ಸೇತುವೆಗಳಿಗೆ ತಪಾಸಣೆ ಏಣಿಗಳನ್ನು ಒದಗಿಸುವುದು. **ಉಪ ಕಾಮಗಾರಿ III:** ಹಿರಿಯ ವಿಭಾಗದ ಇಂಜಿನಿಯರ್ / ಸೇತುವೆ / ಹುಬ್ಬಳ್ಳಿ ನ್ಯಾಯವ್ಯಾಪ್ತಿಯ ಅಡಿಯಲ್ಲಿ ರೋಡ್ ಓವರ್ ಬ್ರಿಡ್ಜ್ ಗಾಗಿ ತಪಾಸಣೆ ವೇದಿಕೆ ವ್ಯವಸ್ಥೆಗಳನ್ನು ಒದಗಿಸುವುದು.	ರೂ. 2,12,58,486/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 16–06–2023, 11:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಹಿರಿಯ ವಿಭಾಗೀಯ ಇಂಜಿನಿಯರ್/ಕೋ– ಆರ್ಡ್ ಹುಬ್ಬಳ್ಳಿ

PUB/108/AAV/PRB/SWR/2023-24

S.W.Railways SWRRLY SWRRLY

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ:

080 - 45557160 /161/ 162/ 163/ 164
9845114560 / 9731810277/ 9886213331

CONNECT ಕ್ಲಾಸಿಫೈಡ್ಸ್

BUSINESS

Business Offers

Finance

NRI'S INVESTMENT
And Finance Available
On Low Interest
Against Properties,
Land&
Building,Sites,Flats,
Converted&
Agriculture Lands
Call:7204995189

WANTED BUSINESS
PARTNERS GREEN HERBAL AYURVEDIC PRODUCTS, 10 LAKHS INVESTMENT ATTRACTIVE INCOME CONTACT: 8892501007/ 9606701007

JOB OPPORTUNITIES

Part-Time Jobs

RETIRED/ VRS Persons, Age Above 45 Years, Earn 50K-60K PM, Here no Retirement: 9886641282/ 7019215243

PERSONAL

Change of Name

CHANGE OF NAME
I, **DAVID SEELAN,** R/at. Golden Palms Apt. A2-603, K.Narayanapura, Near Kristu Jayanti College, K.R. Puram, Bangalore. Have changed my Daughter's Name from **LYNETTE SEELAN** to **LYNETTE DAVID** vide affidavit dated 24/12/2022 before Notary Somannavar. B.N., Dharwad.

WE, SRINIVAS ANAND .N s/o GS Nagaraju and SHILPA K.C w/o Srinivas Anand N Husband and Wife Residing at No.150 3rd Stage 4th Block NHCS Layout Basaveswarnagar Bengaluru 560079 declare that we have changed our minor son name from SRIBHAGAVAN ANAND to KISHORE ANAND vide affidavit dated 20-05-2023 sworn before Notary R Raghunath Rao Bangalore

CHANGE OF NAME
I, **DAVID SEELAN,** R/at. Golden Palms Apt. A2-603, K.Narayanapura, Near Kristu Jayanti College, K.R. Puram, Bangalore. Have changed my Son's Name from **KENNETH D SEELAN** to **KENNETH DAVID** vide affidavit dated 24/12/2022 before Notary Somannavar. B.N., Dharwad.

I, ABBAS HUSSAIN S/O MIR ASAD ALI Residence at Alipur, Gowribidanur taluk, Chikkaballapur district, have changed my name MIR ABBAS HUSSAIN vide affidavit dated 22.05.2023 before notary N.S Ashok Kumar, Gowribidanur

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

Lost

DOCUMENT LOST
I, **Dr. B. PRADEEP KUMAR** Residing at # 27, Chruch Road, 3rd Cross, Thippasandra, Bengaluru-560075, have lost the Sale Deed of the property located at the above address with the Registration **No-5880/97-98 Dtd. 08-09-1997,** while in transit, *Finder please contact:* **8150983368**

DOCUMENT LOST
I, Smt. Anjali V Joshi Residing at #865, 1st Block, 8th Phase J P Nagar, Bangalore have misplaced / lost original BDA site **ALLOTMENT letter No. 404 Dated 22/7/1993** in respect of site No. 24, 2nd Stage, 10th Block, Nagarabhavi, Bangalore
If found please return.
Contact :
9483760713

ತಗ್ಗಿದ ವರುಣ, ನೋವಿನ ಅನುರಣನ...

1. ಶೇಷಾದ್ರಿಪುರ ರೈಲ್ವೆ(ಶಿವಾನಂದ ವೃತ್ತ) ಕೆಳ ಸೇತುವೆ ಬಳಿ ನೀರು ತುಂಬಿಕೊಂಡಿರುವುದು 2. ಹೊಸದಾಗಿ ನಿರ್ಮಾಣ ಆಗಿರುವ ಓಕಳಿಪುರ ರೈಲ್ವೆ ಕೆಳ ಸೇತುವೆಯಲ್ಲೂ ನೀರು ಸರಾಗವಾಗಿ ಹರಿದು ಹೋಗದೆ ನಿಂತಿರುವುದು 3. ಕೆ.ಆರ್‌.ವೃತ್ತದ ಅಂಡರ್ ಪಾಸ್‌ನಲ್ಲಿ ವಾಹನ ಸಂಚಾರಕ್ಕೆ ಮುಕ್ತವಾಗಿರುವುದು –ಪ್ರಜಾವಾಣಿ ಚಿತ್ರಗಳು

ಮಳೆಗಾಲಕ್ಕೂ ಮುನ್ನ ಹೂಳು ತೆರವುಗೊಳಿಸಬೇಕು, ನಿರ್ವಹಣೆಯ ಕೊರತೆಯಿಂದ ದುರಂತ: ತಜ್ಞರ ಅಭಿಪ್ರಾಯ

ಮೃತ್ಯುಕೂಪವಾದವೇ ಅಂಡರ್‌ಪಾಸ್?

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಅಂಡರ್‌ಪಾಸ್‌ಗಳು ಮೃತ್ಯುಕೂಪವಾಗುತ್ತಿವೆಯೆ ಎಂಬ ಅನುಮಾನ ಜನರನ್ನು ಕಾಡುತ್ತಿದ್ದು, ವಾಹನ ಸವಾರರಲ್ಲಿ ಭಯ ಹುಟ್ಟಿಸಿದೆ.

ಕೆ.ಆರ್.ವೃತ್ತದ ಅಂಡರ್‌ಪಾಸ್‌ನಲ್ಲಿ ಭಾನುವಾರ ನೀರಿನಲ್ಲಿ ಮುಳುಗಿ ಆಂಧ್ರಪ್ರದೇಶದ ಯುವತಿ ಭಾನುರೇಖಾ ಮೃತಪಟ್ಟ ಘಟನೆ ವಾಹನ ಸವಾರರನ್ನು ಬೆಚ್ಚಿ ಬೀಳಿಸಿದೆ. ಅಂಡರ್‌ಪಾಸ್‌ನಲ್ಲಿ ವಾಹನ ಚಾಲನೆ ಮಾಡುವ ಮುನ್ನ ಯೋಚಿಸುವ ಸ್ಥಿತಿ ನಿರ್ಮಾಣವಾಗಿದೆ. ಮಳೆ ಬಂತೆಂದರೆ ಅಂಡರ್‌ಪಾಸ್‌ನಲ್ಲಿ ವಾಹನ ಸಿಲುಕಿಕೊಳ್ಳುವುದು ಇತ್ತೀಚೆಗೆ ಸಾಮಾನ್ಯವಾಗಿದೆ. ಬಸ್‌ಗಳೇ ಮುಳುಗುವಷ್ಟು ನೀರು ತುಂಬಿಕೊಂಡು ಪ್ರಯಾಣಿಕರು ಪರದಾಡಿದ ಹಲವು ಸಂದರ್ಭಗಳಿಗೆ ನಗರ ಸಾಕ್ಷಿಯಾಗಿದೆ.

ಹೆಬ್ಬಾಳದಲ್ಲಿ ಪಾದಚಾರಿ ಕೆಳ ಸೇತುವೆಯಲ್ಲಿ ನೀರು ತುಂಬಿಕೊಂಡಿದ್ದರಿಂದ ರಸ್ತೆ ದಾಟಲು ಯತ್ನಿಸಿದ ವಿದ್ಯಾರ್ಥಿನಿಗೆ ಬಿಬಿಎಂಪಿ ಟಿಪ್ಪರ್ ಡಿಕ್ಕಿ ಹೊಡೆದು ಇತ್ತೀಚೆಗೆ ಮೃತಪಟ್ಟಿದ್ದರು. ಶಿವಾನಂದ ವೃತ್ತದಲ್ಲಿನ ರೈಲ್ವೆ ಸೇತುವೆ ಕೆಳಗೆ ಬೈಕ್ ಸವಾರನೊಬ್ಬ ಚರಂಡಿಯಲ್ಲಿ ಕೊಚ್ಚಿ ಹೋಗಿದ್ದರು. ಅಂಡರ್‌ಪಾಸ್‌ಗಳು ಹೀಗೆ ಮೃತ್ಯುಕೂಪವಾಗಲು ನಿರ್ವಹಣೆ ಕೊರತೆ ಮತ್ತು ವೃತ್ತಿಪರತೆ ಇಲ್ಲದವರು ಕಾಮಗಾರಿ ನಿರ್ವಹಿಸಿರುವುದೇ ಕಾರಣ ಎನ್ನುತ್ತಾರೆ ತಜ್ಞರು.

ನೀರು ಹರಿದು ಹೋಗಲು ಎಲ್ಲಾ ಅಂಡರ್ ಪಾಸ್‌ಗಳಲ್ಲೂ ಸರಳುಗಳಿಂದ ಮುಚ್ಚಿದ(ಗ್ರೇಡಿಂಗ್) ಚರಂಡಿ ಇರುತ್ತದೆ. ಆದರೆ, ಅಲ್ಲಿಂದ ರಾಜಕಾಲುವೆಗೆ ನೀರು ಸರಾಗವಾಗಿ ಹರಿದು ಹೋಗುತ್ತಿದೆಯೇ ಎಂಬುದು ಮುಖ್ಯ. ಮುಖ್ಯ ನಾಲೆ ಇದ್ದರೂ ಅದನ್ನು ನಿರ್ವಹಣೆ ಮಾಡಲಾಗುತ್ತಿದೆಯೇ ಇಲ್ಲವೋ ಎಂಬುದನ್ನು ಗಮನಿಸಬೇಕು ಎಂದು ಅವರು ಹೇಳುತ್ತಾರೆ.

'ಮಳೆಗಾಲಕ್ಕೂ ಮುನ್ನ ನಿರ್ವಹಣೆ ಮಾಡಬೇಕು. ಅಂಡರ್‌ಪಾಸ್‌ಗೆ ನೀರು ಬಂದರೆ ಸರಾಗವಾಗಿ ಹರಿದು ಹೋಗಲು ಸಾಧ್ಯವಿದೆಯೇ ಎಂಬುದನ್ನು ಪರಿಶೀಲಿಸಿಕೊಳ್ಳಬೇಕು. ಹೂಳು ತೆರವುಗೊಳಿಸಬೇಕು. ಅದನ್ನು ಮಾಡದಿದ್ದರೆ, ಈರೀತಿಯಅನಾಹುತಗಳುಸಂಭವಿಸುತ್ತವೆ'ಎಂದುಬಿಬಿಎಂಪಿ ನಿವೃತ್ತ ಮುಖ್ಯ ಎಂಜಿನಿಯರ್ ಕೆ.ಟಿ.ನಾಗರಾಜ್ ಅಭಿಪ್ರಾಯಪಡುತ್ತಾರೆ. 'ಕಿನೊ ಥಿಯೇಟರ್ ಬಳಿಯ ರೈಲ್ವೆ ಅಂಡರ್‌ಪಾಸ್‌ನಲ್ಲಿ ಸದಾ ನೀರು ತುಂಬಿಕೊಳ್ಳುತ್ತಿತ್ತು. ಬಸ್‌ಗಳೇ ಮುಳುಗಿದ ಉದಾಹರಣೆಗಳಿವೆ. 20 ಅಡಿ ಆಳದಲ್ಲಿ 800 ಮೀಟರ್ ಉದ್ದದ ಮುಖ್ಯ ಚರಂಡಿ ನಿರ್ಮಿಸಲಾಯಿತು. ನಂತರ ರಾಜಕಾಲುವೆಗೆ ನೀರು ಸರಾಗವಾಗಿ ಹರಿದು ಹೋಗುತ್ತಿದೆ. ಕೆ.ಆರ್.ವೃತ್ತದ ಅಂಡರ್‌ಪಾಸ್‌ನಲ್ಲಿ ನೀರು ತುಂಬಿಕೊಂಡಿದ್ದ ಉದಾಹರಣೆ ಇಲ್ಲ. ಹೂಳು ತೆಗೆಯದ ಕಾರಣ ಈಗ ತೊಂದರೆಯಾಗಿರಬಹುದು' ಎಂದು ಅವರು ವಿವರಿಸಿದರು.

ಎಲೆಗಳ ರಾಶಿ ಕಾರಣ: ಬಿಬಿಎಂಪಿ ವರದಿ

'ಮಳೆ ಸುರಿಯುವ ಮುನ್ನ ಬೀಸಿದ ಜೋರು ಗಾಳಿಗೆ ಮರದ ಕಿರು ರೆಂಬೆಗಳು ಮತ್ತು ಎಲೆಗಳು ಉದುರಿ ಅಂಡರ್ ಪಾಸ್‌ನಲ್ಲಿ ತುಂಬಿಕೊಂಡಿದ್ದೇ ದುರಂತಕ್ಕೆ ಕಾರಣ' ಎಂದು ಬಿಬಿಎಂಪಿ ರಾಜಕಾಲುವೆ ವಿಭಾಗದ ಎಂಜಿನಿಯರ್‌ಗಳು ಅಭಿಪ್ರಾಯಪಟ್ಟಿದ್ದಾರೆ.

ಕೆ.ಆರ್.ವೃತ್ತದಲ್ಲಿನ ಅಂಡರ್ ಪಾಸ್‌ನಲ್ಲಿ ನೀರು ಹರಿದು ಹೋಗದೆ ತುಂಬಿಕೊಳ್ಳಲು ಕಾರಣ ಏನು ಎಂಬುದರ ಬಗ್ಗೆ ಪರಿಶೀಲನೆ ನಡೆಸಿ ಮುಖ್ಯ ಎಂಜಿನಿಯರ್ ಬಿ.ಎಸ್. ಪ್ರಹ್ಲಾದ್ ಅವರು ವರದಿ ಸಿದ್ಧಪಡಿಸಿದ್ದು, ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರಿಗೆ ಸಲ್ಲಿಸಿದ್ದಾರೆ. ಈ ಸೇತುವೆಯನ್ನು 2011ರಲ್ಲಿ ನಿರ್ಮಿಸಲಾಗಿದ್ದು, ನೀರು ಹರಿಯಲು ಚರಂಡಿ ವ್ಯವಸ್ಥೆ ಮಾಡಲಾಗಿದೆ. ಅದಕ್ಕೆ ಕಬ್ಬಿಣದ ಹೊದಿಕೆ ಹಾಕಲಾಗಿದೆ. ಲೋಕೋಪಯೋಗಿ ಕಚೇರಿ ಆವರಣದಲ್ಲಿನ ರಾಜಕಾಲುವೆಗೆ ನೀರು ಹರಿಯುತ್ತಿದೆ.

'ಕಾಲಕಾಲಕ್ಕೆ ಹೂಳು ತೆಗೆಯುವ ಕೆಲಸ ಆಗುತ್ತಲೇ ಇದೆ. ಭಾನುವಾರ ಚಂಡಮಾರುತದ ರೀತಿಯಲ್ಲಿ ಜೋರಾಗಿ ಬೀಸಿದ ಗಾಳಿಯಲ್ಲಿ ರಸ್ತೆಯ ಮೇಲೆ ಬಿದ್ದಿದ್ದ ಎಲೆಗಳು ನೀರಿನಲ್ಲಿ ತೇಲಿ ಬಂದು ಗ್ರೇಡಿಂಗ್‌ನಲ್ಲಿ ತುಂಬಿಕೊಂಡಿದ್ದವು. ಏಕಾಏಕಿ ಅಸಹಜವಾದ ಜೋರು ಮಳೆ ಸುರಿದಿದ್ದರಿಂದ ನೀರಿನ ಪ್ರಮಾಣವೂ ಹೆಚ್ಚಾಯಿತು. ನೀರು ಹರಿದು ಹೋಗದಂತೆ ಎಲೆಗಳ ರಾಶಿ ಅಡ್ಡವಾಗಿತ್ತು. ಈ ಕಾರಣದಿಂದ ಅನಾಹುತ ಸಂಭವಿಸಿದೆ' ಎಂದು ಪ್ರಹ್ಲಾದ್ ಅವರು ವರದಿಯಲ್ಲಿ ವಿವರಿಸಿದ್ದಾರೆ. 'ಕೆಳ ಸೇತುವೆಗೆ ನಾಲ್ಕು ಕಡೆಯಿಂದ ನೀರು ಹರಿದು ಬರುತ್ತಿದ್ದು, ಅದನ್ನು ತಪ್ಪಿಸಲು ಪ್ರತ್ಯೇಕ ಚರಂಡಿಗಳನ್ನು ನಿರ್ಮಿಸಲಾಗುವುದು. 15 ದಿನಗಳಲ್ಲಿ ಶಾಶ್ವತ ಪರಿಹಾರ ಕಾಮಗಾರಿ ಪೂರ್ಣಗೊಳಿಸಲಾಗುವುದು' ಎಂದು ವರದಿಯಲ್ಲಿ ತಿಳಿಸಿದ್ದಾರೆ.

ಪಾದಚಾರಿ ಸುರಂಗ ಮಾರ್ಗಗಳೂ ಅಪಾಯ

ಜೋರು ಮಳೆ ಬಂದರೆ ಪಾದಚಾರಿ ಸುರಂಗ ಮಾರ್ಗಗಳಲ್ಲೂ ನೀರು ತುಂಬಿಕೊಳ್ಳುವ ಆತಂಕ ಜನರಲ್ಲಿ ಕಾಡುತ್ತಿದೆ.

ಸಿಬಿಐ ಜಂಕ್ಷನ್, ಹೆಬ್ಬಾಳದಲ್ಲಿ ಪಾದಚಾರಿಗಳು ರಸ್ತೆ ದಾಟಲು ಇರುವ ಸುರಂಗ ಮಾರ್ಗಗಳಲ್ಲಿ ಆಗಾಗ ನೀರು ತುಂಬಿಕೊಳ್ಳುವುದು ಸಾಮಾನ್ಯ. ಭಾನುವಾರ ಸುರಿದ ಮಳೆಯಲ್ಲೂ ನೀರು ಆವರಿಸಿ ಜನ ಪರದಾಡಿದ್ದಾರೆ.

ನೀರು ತುಂಬಿಕೊಂಡಾಗ ಸುರಂಗ ಮಾರ್ಗ ಬಳಸದೆ ರಸ್ತೆ ದಾಟಲು ಜನ ರಸ್ತೆಯ ಮೇಲೆಯೇ ಬರುತ್ತಾರೆ. ಇದು ಕೂಡ ಅಪಾಯ, ಇತ್ತೀಚೆಗಷ್ಟೆ ವಿದ್ಯಾರ್ಥಿನಿಯೊಬ್ಬರು ಅಪಘಾತದಲ್ಲಿ ಮೃತಪಟ್ಟರು ಎಂದು ಸ್ಥಳೀಯರು ಹೇಳುತ್ತಾರೆ.

ಯಶವಂತಪುರದಲ್ಲಿ ಮೀನು ಮಾರುಕಟ್ಟೆಗೆ ಸಂಚರಿಸಲು ಪಾದಚಾರಿ ಸುರಂಗ ಮಾರ್ಗವಿದ್ದು, ಭಾನುವಾರ ಮಳೆ ಸುರಿದಾಗ ಅದು ಕೂಡ ಜಲಾವೃತಗೊಂಡಿತ್ತು. 'ಇದು ಹೊಸ ಸಮಸ್ಯೆಯಲ್ಲ, ದೂರು ನೀಡಿದರೂ ಈ ಸಮಸ್ಯೆ ಪರಿಹಾರವಾಗಿಲ್ಲ' ಎಂದು ಸ್ಥಳೀಯರು ದೂರುತ್ತಾರೆ.

ಟೋಲ್ ಮಾದರಿಯ ಬೂಮ್ ಗೇಟ್

ಕೆ.ಆರ್.ವೃತ್ತದ ಅಂಡರ್ ಪಾಸ್ ಪ್ರವೇಶ ದ್ವಾರಕ್ಕೆ ಟೋಲ್‌ಗಳಲ್ಲಿ ಅಳವಡಿಕೆಯಾಗಿರುವ ಮಾದರಿಯ ಬೂಮ್ ಬ್ಯಾರಿಯರ್ ಗೇಟ್‌ಗಳನ್ನು ಅಳವಡಿಸಲು ಬಿಬಿಎಂಪಿ ಮುಂದಾಗಿದೆ. ಸಿ.ಸಿ.ಟಿ.ವಿ ಕ್ಯಾಮೆರಾ ಅಳವಡಿಸಿ ಅಂಡರ್ ಪಾಸ್‌ನಲ್ಲಿ ಮಳೆ ನೀರು ತುಂಬಿಕೊಳ್ಳುವ ಸ್ಥಿತಿ ಇದ್ದರೆ ಈ ಗೇಟ್ ಮುಚ್ಚಿ ವಾಹನ ಸಂಚಾರ ನಿರ್ಬಂಧಿಸಲು ಸಂಚಾರ ಪೊಲೀಸರ ಸಹಕಾರ ಪಡೆದುಕೊಳ್ಳಲು ಬಿಬಿಎಂಪಿ ಉದ್ದೇಶಿಸಿದೆ. ಬಿಬಿಎಂಪಿ ಸಿದ್ಧಪಡಿಸಿರುವ ವರದಿಯಲ್ಲಿ ಈ ವಿಷಯವನ್ನು ಪ್ರಸ್ತಾಪಿಸಿದೆ.

ವೃತ್ತಿಪರತೆಯ ಕೊರತೆ ಕಾರಣ

'ಸರ್ಕಾರಿ ಕಾಮಗಾರಿಗಳನ್ನು ನಿರ್ವಹಿಸುವಾಗ ವೃತ್ತಿಪರತೆಗೆ ಆದ್ಯತೆ ನೀಡದಿರುವುದೇ ಈ ರೀತಿಯ ಅವಘಡಗಳಿಗೆ ಕಾರಣ' ಎಂದು ಸಿವಿಲ್ ಎಂಜಿನಿಯರ್ಸ್ ಸಂಸ್ಥೆಯ ಬೆಂಗಳೂರು ಕೇಂದ್ರದ ಅಧ್ಯಕ್ಷ ಶ್ರೀಕಾಂತ್ ಚನ್ನಾಳ್ ಅಭಿಪ್ರಾಯಪಟ್ಟರು. 'ಸೇತುವೆಗಳ ನಿರ್ಮಾಣ ಮತ್ತು ನಿರ್ವಹಣೆ ವಿಷಯದಲ್ಲಿ ಸಿವಿಲ್ ಎಂಜಿನಿಯರ್‌ಗಳು ಪರಿಣತಿ ಹೊಂದಿರುತ್ತಾರೆ. ಕಾಮಗಾರಿ ಗುತ್ತಿಗೆ ನೀಡುವ ಮುನ್ನ ಆ ಸಂಸ್ಥೆ ತಾಂತ್ರಿಕವಾಗಿ ಬಲಿಷ್ಠವಾಗಿದೆಯೇ ಎಂಬುದನ್ನು ಗಮನಿಸಬೇಕು. ಆದರೆ, ಅದು ಆಗುತ್ತಿಲ್ಲ' ಎಂದು ಹೇಳಿದರು.

'ತಾಂತ್ರಿಕ ಬಿಡ್‌ಗೆ ಶೇ 25ರಷ್ಟು ಪ್ರಾತಿನಿಧ್ಯ ನೀಡಿದರೆ, ಹಣಕಾಸು ಬಿಡ್‌ಗೆ ಶೇ 75ರಷ್ಟು ಆದ್ಯತೆ ದೊರೆಯುತ್ತಿದೆ. ರಾಜಕೀಯ ಹಾಗೂ ಇನ್ನಿತರ ಒತ್ತಡಗಳೂ ಕಾರಣವಾಗುತ್ತಿವೆ' ಎಂದು ವಿವರಿಸಿದರು.

IAS COACHING CLASS
Degree + Integrated Prelims & Mains
100% Result Oriented Coaching
Starts on 20-06-2023
Selected Top 100 Seats Only
Upto 100% Scholarship for Top 30 Seats **
Call : Scholarship & Entrance Test
Last Date : 28-05-2023
9108982242
INDIAN CIVIL SERVICES TRAINING ACADEMY
MYSORE - 23

Dr. AMBEDKAR INSTITUTE OF TECHNOLOGY
BDA Outer Ring Road, Mallathahally, Bengaluru-560056
Tel: 080-23211232 & Mob No. 9986003865
AIT/SS/244/2023-24 Date: 22.05.2023
TENDER NOTIFICATION
Sealed quotations are invited from Reputed/ Authorized firms for supply of the following items.
A) Printing & Supply of Stationary items to Autonomous exam Section.
B) Aircraft Structures Lab equipments for the departement of Aeronautical Engg.
C) Corporate enterprise advanced End point total Security Anti-virus solution for 1500 users & for a period of 3 years for the Institution.
Details and specification of requirements can be downloaded from college website: www.drait.edu.in. The sealed quotation shall be attached with a DD of Rs. 500/- for each item on or before **15.06.2023** and submit the sealed quotations on or before **16.06.2023 by 1.00 PM.** Quotations will be opened on the same day i.e., **16.06.2023 at 4.00 PM.**
Principal Secretary, PVPWT

ಕಾಲುವೆಯಲ್ಲಿ ಕೊಚ್ಚಿ ಹೋದ ಚಿನ್ನ!

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಭಾನುವಾರ ಸುರಿದ ಮಳೆಯಿಂದ ಕಾಲುವೆಯ ನೀರು ಮಲ್ಲೇಶ್ವರದ ನಿಹಾನ್ ಚಿನ್ನಾಭರಣ ಮಳಿಗೆಗೆ ನುಗ್ಗಿ, ಲಕ್ಷಾಂತರ ಮೌಲ್ಯದ ಚಿನ್ನಾಭರಣಗಳು ನೀರಿನಲ್ಲಿ ಕೊಚ್ಚಿ ಹೋಗಿವೆ.

ಹೊಳೆಯುತ್ತಿದ್ದ ಚಿನ್ನ ಹಾಗೂ ಬೆಳ್ಳಿ ಆಭರಣಗಳು ಕಾಲುವೆಯಲ್ಲಿ ಕೊಚ್ಚಿ ಹೋಗಿದ್ದು, ಲಕ್ಷಾಂತರ ರೂಪಾಯಿ ನಷ್ಟವಾಗಿದೆ.

ಮಳಿಗೆ ಪಕ್ಕದಲೇ ಕಾಲುವೆಯಿತ್ತು. ಮಳೆಯಿಂದ ಕಾಲುವೆ ಭರ್ತಿಯಾಗಿತ್ತು. ಪಕ್ಕದಲ್ಲಿದ್ದ ಮಳಿಗೆ ಒಳಗೆ ನೀರು ನುಗ್ಗಿದೆ. ಕ್ಷಣಾರ್ಧದಲ್ಲಿ ಇಡೀ ಮಳಿಗೆಯಲ್ಲಿ ಮಳೆ ನೀರು ಆವರಿಸಿತು. ಸಿಬ್ಬಂದಿ ಹೊರಗೆ ಹೋಗಿ ಪ್ರಾಣ ಉಳಿಸಿಕೊಂಡಿದ್ದಾರೆ. ಸೋಮವಾರ ಸಿಬ್ಬಂದಿ ಕಾಲುವೆ, ಮಳಿಗೆ ಆವರಣದಲ್ಲಿ ಸಿಕ್ಕಷ್ಟು ಆಭರಣವನ್ನು ಆಯ್ದು ಸ್ವಚ್ಛಗೊಳಿಸಿದರು.

'ಅಪಾರ ನಷ್ಟವಾಗಿದೆ. ಬಿಬಿಎಂಪಿ ಅವೈಜ್ಞಾನಿಕ ಕಾಮಗಾರಿಯಿಂದ ನೀರು ಕಾಲುವೆಯಲ್ಲಿ ಹರಿಯದೇ ಮಳಿಗೆಗೆ ನುಗ್ಗಿದೆ' ಎಂದು ಮಾಲೀಕರು ಕಣ್ಣೀರು ಹಾಕಿದರು.

ಮಳೆ ನೀರು ನುಗ್ಗಿದ ನಿಹಾನ್ ಚಿನ್ನಾಭರಣ ಮಳಿಗೆಯ ಸ್ಥಿತಿ

ನೆಲಕಚ್ಚಿದ ಮಾವಿನ ಬೆಳೆ

ಪ್ರಜಾವಾಣಿ ವಾರ್ತೆ

ಯಲಹಂಕ: ಭಾನುವಾರ ಸುರಿದ ಆಲಿಕಲ್ಲು ಮಳೆ ಹಾಗೂ ಬಿರುಗಾಳಿಗೆ ರಾಜಾನುಕುಂಟೆಯ ಅದ್ದೆ ವಿಶ್ವನಾಥಪುರ ಗ್ರಾಮದಲ್ಲಿ ಕೊಯ್ಲಿಗೆ ಬಂದಿದ್ದ ಮಾವಿನ ಕಾಯಿಗಳು ನೆಲಕಚ್ಚಿವೆ.

ಹೆಸರಘಟ್ಟ ಹೋಬಳಿಯ ಅದ್ದೆ ವಿಶ್ವನಾಥಪುರ ಗ್ರಾಮದ ರೈತರಾದ ಸಂಪಂಗಿರಾಮಯ್ಯ ಮತ್ತು ರಾಮಯ್ಯ ಅವರ 9 ಎಕರೆ ತೋಟದಲ್ಲಿ ಬೆಳೆದಿದ್ದ ಮಾವಿನ ಬೆಳೆಗೆ ಹಾನಿಯಾಗಿ ಕಾಯಿಗಳು ಉದುರಿದ್ದು, ಅಪಾರ ನಷ್ಟವಾಗಿದೆ. ಅರಕೆರೆ ಗ್ರಾಮದ ಮಂಜುನಾಥ್ ಎಂಬುವರು ಮೂರು ಎಕರೆ ಪ್ರದೇಶದಲ್ಲಿ ಬೆಳೆದಿದ್ದ ಬಾಳೆ ಬೆಳೆಗೂ ಸಹ ಹಾನಿಯಾಗಿದೆ.

ಸೊಣ್ಣೇನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಚನ್ನಸಂದ್ರ ಗ್ರಾಮದಲ್ಲಿ ಗೋಪಾಲ್ ಎಂಬುವರಿಗೆ ಸೇರಿದ ಪಾಲಿಹೌಸ್ ಬಿರುಗಾಳಿಗೆ ಹಾರಿಹೋಗಿದೆ. ಹನಿಯೂರಿನ ಕೆಲ ಮನೆಗಳ ಶೀಟ್‌ಗಳು ಹಾರಿಹೋಗಿವೆ.

ಸೋಮವಾರ ತಾಲ್ಲೂಕು ಸಹಾಯಕ ತೋಟಗಾರಿಕಾ ಅಧಿಕಾರಿ ಶಿವಣ್ಣ, ರೈತರ ಜಮೀನುಗಳಿಗೆ ಭೇಟಿ ನೀಡಿ ಪರಿಶೀಲಿಸಿದರು. ಮಳೆಯಿಂದ ಹಾನಿಯಾಗಿರುವ ಬಗ್ಗೆ ಸರ್ಕಾರಕ್ಕೆ ವರದಿ ನೀಡಿ ಪರಿಹಾರ ನೀಡುವುದಾಗಿ ಭರವಸೆ ನೀಡಿದರು.

'ಕಳೆದ ಮೂರ್ನಾಲ್ಕು ವರ್ಷಗಳಿಂದ ಫಸಲ್ ಭಿಮಾ ಯೋಜನೆಯಡಿ, ಬೆಳೆವಿಮೆ ಪಾವತಿ ಮಾಡುತ್ತಿದೆ. ಆದರೆ, 2-3 ವರ್ಷಗಳಿಂದ ಬೆಳೆ ಹಾನಿಯಾದರೂ ಪರಿಹಾರ ಬಂದಿರಲಿಲ್ಲ. ಆದ್ದರಿಂದ, ಈ ಬಾರಿ ವಿಮೆ ಹಣ ಪಾವತಿಸಿರಲಿಲ್ಲ' ಎಂದು ರೈತ ಸಂಪಂಗಿರಾಮಯ್ಯ ಬೇಸರ ವ್ಯಕ್ತಪಡಿಸಿದರು.

ಭಾನುವಾರ ಸುರಿದ ಮಳೆಗೆ ಹೆಸರಘಟ್ಟ ಹೋಬಳಿಯ ಅದ್ದೆ ವಿಶ್ವನಾಥಪುರ ಗ್ರಾಮದಲ್ಲಿ ಕೊಯ್ಲಿಗೆ ಬಂದಿದ್ದ ಮಾವಿನ ಕಾಯಿಗಳು ಉದುರಿವೆ.

ಜಾಲಿಮ್ ಲೋಷನ್® + ಗ್ರೀನ್ ಆಯಿಂಟ್ಮೆಂಟ್
ಈ ಜೋಡಿಯು
ಗಜಕರ್ಣ,
ಇಸಬು ಮತ್ತು
ಗರಿಕಜ್ಜಿ ತುರಿಕೆಯಿಂದ ತಕ್ಷಣ ಆರಾಮ ನೀಡುತ್ತದೆ.
BUY ONLINE: www.zalimlotion.in | amazon | meesho | Flipkart | TATA 1mg
ANIL PUB.

ರಾಜಕಾಲುವೆಯಲ್ಲಿ 5 ಕಿ.ಮೀ ದೂರಕ್ಕೆ ಕೊಚ್ಚಿ ಹೋಗಿದ್ದ ಯುವಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಭಾನುವಾರ ಸುರಿದ ಮಳೆಯ ಸಂದರ್ಭದಲ್ಲಿ ಕೆ.ಪಿ.ಅಗ್ರಹಾರ ನಿವಾಸಿ ಲೋಕೇಶ್ (31) ಅವರು ರಾಜಕಾಲುವೆಯಲ್ಲಿ ಭಾನುವಾರ ಕೊಚ್ಚಿ ಹೋಗಿದ್ದರು. ಐದು ಕಿ.ಮೀ ದೂರದಲ್ಲಿ ಅವರ ಮೃತದೇಹ ಸೋಮವಾರ ಮಧ್ಯಾಹ್ನ ಸಿಕ್ಕಿದ್ದು, ಮಳೆ ಅನಾಹುತದಿಂದ ಮೃತಪಟ್ಟವರ ಸಂಖ್ಯೆ ಎರಡಕ್ಕೆ ಏರಿಕೆಯಾಗಿದೆ.

ರಾಜಧಾನಿಯಲ್ಲಿ ಭಾನುವಾರ ಸಂಜೆ ಸುರಿದ ಮಳೆಗೆ ರಾಜಕಾಲುವೆಯಲ್ಲಿ ಭಾರಿ ಪ್ರಮಾಣದಲ್ಲಿ ನೀರು ಹರಿಯುತ್ತಿತ್ತು. ಆಗ ನೀರಿನ ರಭಸಕ್ಕೆ ಕೊಚ್ಚಿ ಹೋಗಿದ್ದರು. ಸೋಮವಾರ ಲೋಕೇಶ್ ಅವರ ಮೃತದೇಹ ಮೈಸೂರು ರಸ್ತೆ ನಾಯಂಡಹಳ್ಳಿ ಜಂಕ್ಷನ್ ಬಳಿಯ ರಾಜಕಾಲುವೆಯಲ್ಲಿ ಪತ್ತೆಯಾಗಿದೆ. ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ನಡೆಸಿ ಮೃತದೇಹವನ್ನು ಕುಟುಂಬಸ್ಥರಿಗೆ ಹಸ್ತಾಂತರಿಸಲಾಯಿತು ಎಂದು ಪೊಲೀಸರು ತಿಳಿಸಿದರು. ಲೋಕೇಶ್ ಅವರು ಜಿ.ಟಿ. ಮಾಲ್‌ನಲ್ಲಿ ಹೌಸ್ ಕೀಪಿಂಗ್ ಕೆಲಸ ಮಾಡುತ್ತಿದ್ದರು. ಭಾನುವಾರ ಮನೆಯಲ್ಲೇ ಇದ್ದರು. ಸಂಜೆ 4 ಗಂಟೆಗೆ ವೇಳೆ ರಾಜಕಾಲುವೆ ಹೊಳೆಯಂತೆ ಹರಿಯುತ್ತಿತ್ತು. ಅದೇ ವೇಳೆಯಲ್ಲಿ ಔಷಧದ ಅಂಗಡಿಗೆ ತೆರಳಿ ವಾಪಸ್ ಬರುವಾಗ ರಾಜಕಾಲುವೆಯಲ್ಲಿ ಕೊಚ್ಚಿ ಹೋಗಿದ್ದರು.

ಲೋಕೇಶ್

ಬಿಬಿಎಂಪಿ ಅಧಿಕಾರಿಗಳಿಗೆ ನೋಟಿಸ್ ಜಾರಿ ಸಾಧ್ಯತೆ

ಟೆಕ್ಕಿ ಸಾವು: ಕಾರು ಚಾಲಕನ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆ.ಆರ್.ವೃತ್ತದ ಅಂಡರ್‌ಪಾಸ್‌ನಲ್ಲಿ ಕಾರು ಮುಳುಗಿ ಟೆಕ್ಕಿ ಭಾನುರೇಖಾ ಮೃತಪಟ್ಟ ಪ್ರಕರಣ ಸಂಬಂಧ ಕ್ಯಾಬ್ ಚಾಲಕ ಹುಣಸೂರಿನ ಹರೀಶ್ (37) ಎಂಬಾತನನ್ನು ಹಲಸೂರುಗೇಟ್ ಠಾಣೆ ಪೊಲೀಸರು ಸೋಮವಾರ ಬಂಧಿಸಿದ್ದಾರೆ.

'ನಿರ್ಲಕ್ಷ್ಯ, ಬೇಜವಾಬ್ದಾರಿ ತೋರಿದ ಆರೋಪ ಮೇರೆಗೆ ಚಾಲಕನನ್ನು ಬಂಧಿಸಲಾಗಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

ಭಾನುವಾರ ಮಧ್ಯಾಹ್ನ ನಗರದಲ್ಲಿ ಸುರಿದ ಮಳೆಗೆ ಅಂಡರ್‌ಪಾಸ್‌ನಲ್ಲಿ ಅಪಾರ ಪ್ರಮಾಣದ ನೀರು ಸಂಗ್ರಹಗೊಂಡಿತ್ತು. ಅದೇ ನೀರಿನಲ್ಲಿ ಕಾರನ್ನು ಚಲಾಯಿಸಿದ್ದರಿಂದ ಕಾರು ಅಂಡರ್‌ಪಾಸ್‌ನಲ್ಲಿ ಮುಳುಗಿ ಯುವತಿ ಮೃತಪಟ್ಟಿದ್ದರು.

ಆಂಧ್ರಪ್ರದೇಶ ವಿಜಯವಾಡದ ಭಾನುರೇಖಾ ಎಲೆಕ್ಟ್ರಾನಿಕ್ ಸಿಟಿ ಪ್ರಗತಿ ನಗರದಲ್ಲಿ ಹೊಸ ಮನೆ ಖರೀದಿಸಿದ್ದರು. ಹೊಸ ಮನೆ ನೋಡಲು ಕುಟುಂಬದವರು ಬಂದಿದ್ದರು. ಭಾನುವಾರ ರಜೆಯಿದ್ದ ಕಾರಣಕ್ಕೆ ಕುಟುಂಬದ ಸದಸ್ಯರಿಗೆ ಬೆಂಗಳೂರು ಸುತ್ತಾಡಿಸಲು ಕ್ಯಾಬ್ ಬುಕ್ ಮಾಡಿದ್ದರು.

'ಕಬ್ಬನ್ ಉದ್ಯಾನ ವೀಕ್ಷಿಸಿ ವಾಪಸ್ ತೆರಳುವಾಗ ಮಳೆಯ ನೀರು ಅಂಡರ್‌ಪಾಸ್‌ನಲ್ಲಿ ಸಂಗ್ರಹಗೊಂಡಿತ್ತು. ಈ ಮಾರ್ಗದಲ್ಲಿ ತೆರಳುವುದು ಬೇಡವೆಂದರೂ ಚಾಲಕ ಅದೇ ಮಾರ್ಗದಲ್ಲಿ ಕಾರು ಚಲಾಯಿಸಿದ್ದ. ಕಾರು ಮುಳುಗಿ ಎಂಜಿನ್ ಆಫ್ ಆಗಿತ್ತು. ಪ್ರಯಾಣಿಕರು ಕಾರಿನಿಂದ ಇಳಿಯಲು ಯತ್ನಿಸಿದರೂ ಕಾರು ಸ್ಟಾರ್ಟ್ ಮಾಡುತ್ತೇನೆಂದು ಹೇಳಿದ್ದ. ಅಷ್ಟರಲ್ಲಿಯೇ ನೀರಿನಮಟ್ಟ ಏರಿಕೆ ಆಗುತ್ತಲೇ ಹೋಯಿತು. ಯಾರಿಗೂ ಕಾರಿನಿಂದ ಹೊರಬರಲು ಆಗಿರಲಿಲ್ಲ. ಚಾಲಕ ನಿರ್ಲಕ್ಷ್ಯ ತೋರಿದ್ದರಿಂದ ಈ ಅನಾಹುತವಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಚಾಲಕ, ಬಿಬಿಎಂಪಿ ಅಧಿಕಾರಿಗಳ ವಿರುದ್ಧ ಭಾನುರೇಖಾ ಸಹೋದರ ದೂರು ನೀಡಿದ್ದು ಚಾಲಕನನ್ನು ಬಂಧಿಸಲಾಗಿದೆ. ಬಿಬಿಎಂಪಿ ಅಧಿಕಾರಿಗಳಿಗೆ ನೋಟಿಸ್ ನೀಡಿ ವಿಚಾರಣೆ ನಡೆಸಲಾಗುವುದು' ಎಂದು ಪೊಲೀಸರು ತಿಳಿಸಿದರು.

ನೀರಿನಲ್ಲಿ ಮುಳುಗಿದವರ ಬದುಕಿಸಲು ಉಟ್ಟ ಸೀರೆಯನ್ನೇ ಬಿಚ್ಚಿ ಕೊಟ್ಟ ಮಹಿಳೆ

6 ಜನರ ಜೀವ ಉಳಿಸಿದ 'ಪಬ್ಲಿಕ್ ಟಿವಿ' ಕಾರಿನ ಚಾಲಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆ.ಆರ್. ವೃತ್ತದ ಅಂಡರ್ ಪಾಸ್‌ನಲ್ಲಿ ನೀರಿನಲ್ಲಿ ಮುಳುಗಿದ್ದ ಕಾರಿನಲ್ಲಿ ಸಿಲುಕಿದ್ದ ಆರು ಮಂದಿಯ ಜೀವ ರಕ್ಷಣೆ ಮಾಡಿದ್ದು 'ಪಬ್ಲಿಕ್ ಟಿವಿ'ಯ ಕಾರು ಚಾಲಕ ವಿಜಯಕುಮಾರ್.

'ಲೋಕಾಯುಕ್ತ ಕಚೇರಿ ಎದುರಿನ ರಸ್ತೆಯಲ್ಲಿ ನೀರು ತುಂಬಿಕೊಂಡಿದ್ದನ್ನು ಚಿತ್ರೀಕರಿಸಿಕೊಳ್ಳುವಾಗ ಅಂಡರ್ ಪಾಸ್‌ನಲ್ಲಿ ಕೂಗಾಡುತ್ತಿರುವ ಆಕ್ರಂದನ ವರದಿಗಾರ ನಾಗೇಶ್ ಅವರಿಗೆ ಕೇಳಿಸಿತು. ಅವರ ಸೂಚನೆಯಂತೆ ಕೂಡಲೇ ಅಲ್ಲಿಗೆ ಹೋದೆವು. ಕಾರು ಎರಡು ಅಡಿ ಮಾತ್ರ ಕಾಣಿಸುತ್ತಿತ್ತು. ಕಾಪಾಡಿ ಎನ್ನುವ ಶಬ್ದ ಕೇಳಿಸುತ್ತಿತ್ತು.'

'ಕ್ಯಾಮರಾಮನ್ ಅವಿರಾಜ್ ಸೇರಿ ಮೂವರಿದ್ದೆವು. ನನಗೆ ಮಾತ್ರ ಈಜಲು ಬರುತ್ತಿತ್ತು. ಕೂಡಲೇ ನೀರಿಗಿಳಿದು ಅಲ್ಲಿಗೆ ಸಾಗಿದೆ. ಚಾಲಕನ ಪಕ್ಕದ ಸೀಟಿನಲ್ಲಿ ಒಬ್ಬರ ತಲೆ ಹೊರಗೆ ಹಾಕಿದ್ದರು. ಅವರನ್ನು ಎಳೆದು ಬಾನೆಟ್ ಮೇಲೆ ನಿಲ್ಲಿಸಿ, ಬಳಿಕ ಚಾಲಕ ಸೇರಿ ಆರು ಜನರನ್ನು ಹೊರಗೆಳೆದೆ. ಮತ್ತೊಬ್ಬರು ಒಳಗಿದ್ದಾರೆ ದಯವಿಟ್ಟು ರಕ್ಷಣೆ ಮಾಡಿ ಎಂದು ಎಲ್ಲರೂ ಬೇಡಿಕೊಂಡರು. ಅಷ್ಟರಲ್ಲಿ ಕಾರು ಸಂಪೂರ್ಣ ಮುಳುಗಿ ಮೇಲ್ಭಾಗ ಎರಡು ಅಡಿಯಷ್ಟು ನೀರು ಆವರಿಸಿತು. ಒಳಗೆ ನುಗ್ಗಿ ತಡಕಾಡಿದಾಗ ಭಾನುರೇಖಾ ಅವರ ತಲೆ ಕೂದಲು ಸಿಕ್ಕಿತು. ಕಾರು ಚಾಲಕನ ಸಹಾಯದಿಂದ ಹೊರಗೆ ಎಳೆದುಕೊಂಡೆ' ಎಂದು ವಿಜಯಕುಮಾರ್ ವಿವರಿಸಿದರು.

'ಅಂಡರ್ ಪಾಸ್‌ನ ಮತ್ತೊಂದು ಬದಿಯಿಂದ ಒಬ್ಬರು ಪೊಲೀಸ್ ಮತ್ತು ನಾಗರಿಕರೊಬ್ಬರು ರಕ್ಷಣೆಗೆಂದು ಬಂದರು. ಆದರೆ, ಈಜಲು ಸಾಧ್ಯವಾಗದೆ ಚಡಪಡಿಸಿದರು. ಅವರನ್ನು ಎಳೆದು ಕಾರಿನ ಮೇಲೆ ನಿಲ್ಲಿಸಿದೆ. ಎಲ್ಲರನ್ನು ಮೇಲೆಳೆದುಕೊಳ್ಳಲು ಸೇತುವೆ ಮೇಲೆ ನಿಂತಿದ್ದ ಮಹಿಳೆಯೊಬ್ಬರು ಉಟ್ಟಿದ್ದ ಸೀರೆಯನ್ನು ಬಿಚ್ಚಿ ಎಸೆದರು.

ಈ ಎಲ್ಲಾ ಪ್ರಯತ್ನಗಳ ನಡುವೆ ವರದಿಗಾರ ನಾಗೇಶ್ ಅವರು ಅಗ್ನಿ ಶಾಮಕ ದಳಕ್ಕೆ ಕರೆ ಮಾಡಿದ್ದರು. ಅವರು ಬಂದು ಲೈಫ್ ಜಾಕೆಟ್ ಎಸೆದರು. ಭಾನುರೇಖಾ ಅವರನ್ನೂ ಮೇಲೆತ್ತಿ ಆಸ್ಪತ್ರೆಗೆ ಕಳುಹಿಸಿದೆವು. ಆದರೂ, ಅವರು ಬದುಕುಳಿಯಲಿಲ್ಲ. ಅವರ ಜೀವವೂ ಉಳಿದಿದ್ದರೆ ಸಂತಸವಾಗುತ್ತಿತ್ತು' ಎಂದು ವಿಜಯಕುಮಾರ್ ಬೇಸರದಲ್ಲೇ ಹೇಳಿದರು.

ವಿಜಯಕುಮಾರ್ ಅವರನ್ನು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಸನ್ಮಾನಿಸಿ ಅಭಿನಂದಿಸಿದರು

Get ready, Bangaloreans!
The biggest Bazaar in Bangalore is Back!
Bengaluru
Dastkar Bazaar
23RD – 29TH MAY - 2023
10.30 am to 8.30 pm
Entry Fee - Rs. 50/- | Free Parking
We are proud to present the 22nd edition of the BENGALURU DASTKAR BAZAAR.
Dastkar brings you over 150+ craft groups and entrepreneurs from 25+ states across India will come together to showcase their unique creations.
Be ready for Craft demonstrations, Cultural performances, Craft workshops and Regional delicacies at
Jayamahal Palace Hotel
Mob: 9742801793 | Email- info@dastkar.org

ಮಕ್ಕಳನ್ನು ಪ್ರೀತಿಯಿಂದ ಶಾಲೆಗೆ ಕಳುಹಿಸಿ

> ಮಗುವಿನ ಪಾಲಿಗೆ ಹೊರಜಗತ್ತಿನ, ಸಮಾಜದ, ವ್ಯವಸ್ಥೆಯ ಪ್ರತಿನಿಧಿಯಂತಿರುವ ಶಾಲೆಗೆ ಮಗು ಹೇಗೆ ಸ್ಪಂದಿಸುತ್ತದೆ, ಸ್ವೀಕರಿಸುತ್ತದೆ, ಒಗ್ಗಿಕೊಳ್ಳುತ್ತದೆ ಎನ್ನುವುದು ಮಗುವಿನ ಭಾವನಾತ್ಮಕ ಬೆಳವಣಿಗೆಯ ಮೈಲಿಗಲ್ಲು.

ರಮ್ಯಾ ಶ್ರೀಹರಿ

ಮಗು ಮನೆಯಿಂದ ಶಾಲೆಗೆ ಹೊರಡುತ್ತದೆ; ಇದರಲ್ಲೇನು ವಿಶೇಷ? ಇದು ಲೋಕದ ರೂಢಿ. ಪ್ರಪಂಚದಾದ್ಯಂತ ಹಲವಾರು ವರ್ಷಗಳಿಂದ ಲಕ್ಷಾಂತರ ಮಕ್ಕಳು ಹೀಗೆ ಮನೆಯಿಂದ ಶಾಲೆಗೆ ಹೋಗಿದ್ದಾರೆ, ಹೋಗುತ್ತಲಿದ್ದಾರೆ; ಮುಂದೆಯೂ ಹೋಗುತ್ತಲಿರುತ್ತಾರೆ. ದಿನನಿತ್ಯದ ಈ ಸಾಧಾರಣ ವಿಷಯ ಒಂದು ಮಗುವಿನ ಬದುಕಿನ ಅಸಾಧಾರಣ ಘಟ್ಟವೇ ಹೌದು. ಒಂದು ಮಗು ಮನೆಯಿಂದ ಶಾಲೆಗೆ ಹೋಗುವುದು ತನ್ನ ಮನೆಯನ್ನು ಬಿಟ್ಟು ವಿಶಾಲವಾಗಿ ವಿಸ್ತರಿಸಿಕೊಂಡಿರುವ ಹೊರಜಗತ್ತಿಗೆ ಕಾಲಿರಿಸುವ ಒಂದು ಸಾಂಕೇತಿಕ ಕ್ರಿಯೆ; ಮಗುವಿನ ಬದುಕಿನಲ್ಲಿ ಅದೊಂದು ಪರ್ವಕಾಲ ಎಂದರೂ ಅತಿಶಯೋಕ್ತಿಯಲ್ಲ.

ಬದಲಾವಣೆ ಯಾವುದೇ ಇರಬಹುದು; ಅದು ಎಷ್ಟೇ ಒಳ್ಳೆಯದಿದ್ದರೂ, ಎಷ್ಟೇ ಸಂತೋಷ ತರುವಂತಿದ್ದರೂ ಅದರೊಟ್ಟಿಗೆ ಸಣ್ಣ ಆತಂಕವೂ ಇರುತ್ತದೆ. ವಯಸ್ಸು ಯಾವುದೇ ಇರಲಿ ದಿನನಿತ್ಯದ ಸಾಧಾರಣ ಬದಲಾವಣೆಗಳಿಗೆ ಕೂಡ ನಮ್ಮ ಮನಸ್ಸು ಹೇಗೆ ಬೇರೆ ಬೇರೆ ರೀತಿಯಾಗಿ ಸ್ಪಂದಿಸುತ್ತದೆ ಎನ್ನುವುದು ಸೂಕ್ಷ್ಮವಾಗಿ ತಮ್ಮನ್ನು ತಾವು ಅವಲೋಕಿಸಿಕೊಳ್ಳುವವರಿಗೆ ಅರಿವಾಗುತ್ತದೆ. ಅತಿ ಸೂಕ್ಷ್ಮ ಸ್ಥಿತ್ಯಂತರಗಳನ್ನೂ ((micro transitions) ಕೂಡ ನಮ್ಮ ದೇಹ-ಮನಸ್ಸು ತನಗೇ ವಿಶಿಷ್ಟವಾದ ರೀತಿಯಲ್ಲಿ ಗ್ರಹಿಸುತ್ತಿರುತ್ತದೆ. ಬೆಳಗ್ಗೆ ಹಾಸಿಗೆಯಿಂದ ಏಳುವುದು, ದಿನದ ಕೆಲಸಕ್ಕೆ ತಯಾರಾಗುವುದು, ಹಗಲು ನಿಧಾನಕ್ಕೆ ಸಂಜೆಗೆ ತಿರುಗುವುದನ್ನು, ಸಂಜೆ ರಾತ್ರಿಯಾಗುವುದನ್ನು ನೋಡುವುದು, ನಮ್ಮ ಆರಾಮದಾಯಕ ವಲಯವನ್ನು ಬಿಟ್ಟು ಹೊಸತನ್ನು ಮಾಡಲು ಹೊರಡುವುದು, ಹೊಸ ಜಾಗಕ್ಕೆ ಹೋಗುವುದು, ಅಪರಿಚಿತರನ್ನು ಭೇಟಿಯಾಗುವುದು - ಇಂಥದ್ದೆಲ್ಲವನ್ನು ಅನೇಕ ಸಲ ಹಾದುಬಂದ ಅನುಭವವಿದ್ದರೂ ಮತ್ತೆ ಒಂದು ಸೂಕ್ಷ್ಮ ಸ್ಥಿತ್ಯಂತರವನ್ನು ಎದುರಿಸಬೇಕಾದಾಗ ವಯಸ್ಕರೂ ಕೂಡ ಒಂದು ಅತಿ ಸಣ್ಣ ಇರುಸುಮುರುಸಿಗೆ ಒಳಗಾಗುತ್ತಾರೆ. ವಿಷಯ ಹೀಗಿರುವಾಗ ತಮ್ಮ ಮನಸ್ಸಿನಲ್ಲೇನಾಗುತ್ತಿದೆ ಎಂದು ಹೇಳಿಕೊಳ್ಳಲು ಬಾರದ, ತಂದೆ/ ತಾಯಿ/ ತನ್ನ ಮನೆಯನ್ನೇ ಸುರಕ್ಷಿತ ಭಾವಕ್ಕಾಗಿ ನೆಚ್ಚಿಕೊಂಡಿರುವ ಮಗುವಿಗೆ 'ಶಾಲೆಗೆ ಹೋಗುವುದು' ಎನ್ನುವುದು ಎಷ್ಟು ದೊಡ್ಡ ಸ್ಥಿತ್ಯಂತರವಲ್ಲವೇ?

ಬದುಕಿನ ಬದಲಾವಣೆಗಳಿಗೆ ತೆರೆದುಕೊಳ್ಳುವಾಗ ಸಹಜವಾಗಿ ಆಗುವ ಉದ್ವೇಗವನ್ನು ನಿರ್ವಹಿಸಲು ನಮಗೆ ಸಹಾನುಭೂತಿ ಮತ್ತು ಮಾನಸಿಕ ಬೆಂಬಲದ ಅಗತ್ಯವಿರುತ್ತದೆ. ದಿನನಿತ್ಯದ ಸೂಕ್ಷ್ಮ ಪರಿವರ್ತನೆಗಳನ್ನು ಸಹಜವಾಗಿ ಸ್ವೀಕರಿಸಲು ಮತ್ತು ಬದುಕಿಗೆ ಒಂದು ಲಯ ಕಂಡುಕೊಳ್ಳಲು ನಮಗೆ ಕೆಲವೊಂದು ಕಲಾಪ(ritual)ಗಳ ಅವಶ್ಯಕತೆಯಿರುತ್ತದೆ. ಮಕ್ಕಳಿಗೂ ಹೀಗೆಯೇ, ಅವರು ಶಾಲೆಗೆ ಹೋಗಲು, ಹೊಸ ಜಾಗಕ್ಕೆ, ಹೊಸ ಜನರಿಗೆ ಹೊಂದಿಕೊಳ್ಳಲು ತಮ್ಮನ್ನು ತಾವು ಕಂಡುಕೊಂಡು, ತಾವಿರುವಂತೆ ತಮ್ಮನ್ನು ಪ್ರಪಂಚಕ್ಕೆ ತೋರ್ಪಡಿಸಿಕೊಳ್ಳಲು ಪೋಷಕರ, ಶಿಕ್ಷಕರ, ಸಮಾಜದ ಬೆಂಬಲ ಬೇಕು, ಬದುಕಿಗೆ ಹೊಂದಿಕೊಳ್ಳಲು ಅನುವಾಗುವಂತಹ ಕಲಾಪಗಳು ಬೇಕು. ಮಗು ಹಾಸಿಗೆಯಿಂದ ಏಳುವಾಗ ಅದನ್ನು ಮುದ್ದಿಸುವುದಿರಬಹುದು, ಶಾಲೆಗೆ ಹೋಗಲು ತಯಾರಾಗುವಾಗ ತನ್ನಿಷ್ಟದ ಹಾಡು ಕೇಳಿಸಿಕೊಳ್ಳುವುದಿರಬಹುದು, ಸ್ನಾನ ಮಾಡುವಾಗ ಸೋಪಿನ ನೀರಿನಲ್ಲಿ ಕೆಲನಿಮಿಷ ಆಟವಾಡುವುದಿರಬಹುದು, ತಿಂಡಿ ತಿನ್ನುವಾಗ ಅಪ್ಪ ಅಮ್ಮ ಹೇಳಿಕೊಡುವ ಪದ್ಯವಿರಬಹುದು, ಶಾಲೆಯಿಂದ ಬಂದ ಮೇಲೆ ಮಾಡಬಹುದಾದ ಆಸಕ್ತಿಕರ ಚಟುವಟಿಕೆಯ ಬಗ್ಗೆ, ಹೊರಗೆ ಸುತ್ತಾಡುವುದರ ಬಗ್ಗೆ, ಮಗುವಿಗೆ ಇಷ್ಟವಾದ ತಿಂಡಿಯ ಬಗ್ಗೆ ಮಾತನಾಡುವುದಿರಬಹುದು, ಒಟ್ಟಿನಲ್ಲಿ ಮಕ್ಕಳಿಗೆ ಒಂದು ಸ್ಥಿರವಾದ, ಆಹ್ಲಾದಕಾರಿಯಾದ, ತಂದೆ-ತಾಯಿಯ ಕೂಗಾಟ, ಧಾವಂತವಿರದ ದಿನಚರಿಯ ಅಗತ್ಯವಿದೆ.

ಬೇಸಿಗೆ ರಜೆಯನ್ನು ಮುಗಿಸಿ ಶಾಲೆಗೆ ಹೊರಡುವ ಸ್ವಲ್ಪ ದೊಡ್ಡ ಮಕ್ಕಳು, ಶಾಲೆಗೆ ಹಲವು ವರ್ಷಗಳಿಂದ ಹೋಗುತ್ತಿದ್ದರೂ ಮಿಶ್ರ ಭಾವನೆಗಳಿಗೆ ಒಳಗಾಗುವ ಸಾಧ್ಯತೆಯಿದೆ. ಬೇಸಿಗೆ ರಜೆಯನ್ನು ಹೇಗೆಲ್ಲಾ ಸಾರ್ಥಕವಾಗಿ ಕಳೆದೆವು, ಎಷ್ಟೊಂದು ನೆನಪಿನಲ್ಲುಳಿಯುವ ಅನುಭವಗಳನ್ನು ಪಡೆದೆವು, ಮುಂದಿನ ತರಗತಿಯಲ್ಲಿ ಎಷ್ಟೆಲ್ಲಾ ಹೊಸ ವಿಷಯಗಳನ್ನು ಕಲಿಯುವುದಿದೆ ಮುಂತಾದ ಆಯಾ ವಯಸ್ಸಿಗೆ ಸೂಕ್ತವಾದ ಮಾತುಕತೆಯನ್ನು ಪೋಷಕರೊಂದಿಗೆ ಅಥವಾ ಸಹಪಾಠಿಗಳೊಂದಿಗೆ ನಡೆಸುವುದು ಮಕ್ಕಳು 'ರಜೆ ಮುಗಿಸಿ ಮತ್ತೆ ಶಾಲೆಗೆ ಹೋಗುವುದು' ಎನ್ನುವ ಸ್ಥಿತ್ಯಂತರಕ್ಕೆ ಹೊಂದಿಕೊಳ್ಳಲು ಸಹಕಾರಿಯಾಗಬಲ್ಲ ಕಲಾಪವೇ ಹೌದು. ಒಟ್ಟಿನಲ್ಲಿ ಮಕ್ಕಳ ಜೀವನದ ಸಣ್ಣ ಸಣ್ಣ ಬದಲಾವಣೆಗಳನ್ನೂ ಪೋಷಕರು ಗಮನಿಸುತ್ತಿರುತ್ತಾರೆ. ಅದಕ್ಕೆ ಪ್ರೀತಿಯಿಂದ ಸಹಾನುಭೂತಿಯಿಂದ ಸ್ಪಂದಿಸುತ್ತಾರೆ ಎನ್ನುವ ವಿಶ್ವಾಸವೇ ಮಕ್ಕಳಿಗೆ ಸುರಕ್ಷಿತ ಭಾವವನ್ನು ಹುಟ್ಟಿಸುತ್ತದೆ.

ಮಗುವಿನ ಪಾಲಿಗೆ ಹೊರಜಗತ್ತಿನ, ಸಮಾಜದ, ವ್ಯವಸ್ಥೆಯ ಪ್ರತಿನಿಧಿಯಂತಿರುವ ಶಾಲೆಗೆ ಮಗು ಹೇಗೆ ಸ್ಪಂದಿಸುತ್ತದೆ, ಸ್ವೀಕರಿಸುತ್ತದೆ, ಒಗ್ಗಿಕೊಳ್ಳುತ್ತದೆ ಎನ್ನುವುದು ಮಗುವಿನ ಭಾವನಾತ್ಮಕ ಬೆಳವಣಿಗೆಯ ಮೈಲಿಗಲ್ಲು. ಮಗುವಿಗೆ ಶಾಲೆಯ ಬಗೆಗಿನ ಧೋರಣೆ/ ದೃಷ್ಟಿಕೋನ ಎನ್ನುವುದು ಮಗುವಿನ ಮನಸ್ಸಿನಲ್ಲೇನಾಗುತ್ತಿದೆ, ಕುಟುಂಬದಲ್ಲೇನಾಗುತ್ತಿದೆ, ಸಮಾಜದಲ್ಲೇನಾಗುತ್ತಿದೆ ಎನ್ನುವುದಕ್ಕೆ ಹಿಡಿದ ಕೈಗನ್ನಡಿ. ನಾವು ಒಂದು ಕ್ಷಣ ನಮ್ಮ ಬಾಲ್ಯಕ್ಕೆ ಹೋಗಿ ಶಾಲೆಗೆ ಹೋಗುವಾಗಿನ ನಮ್ಮ ಮಾನಸಿಕ ಸ್ಥಿತಿ ಹೇಗಿತ್ತು ಎನ್ನುವುದನ್ನು ನೆನಪಿಸಿಕೊಳ್ಳಬಹುದು, ಅದು ನಮ್ಮ ವ್ಯಕ್ತಿತ್ವ, ನಾವು ಬೆಳೆದುಬಂದ ಪರಿಸರ, ನಮ್ಮ ಲೋಕಗ್ರಹಿಕೆ - ಈ ಎಲ್ಲದರ ಕುರಿತು ಸಮೃದ್ಧ ಮಾಹಿತಿಯನ್ನೊದಗಿಸುತ್ತದೆ!!

ಚಿಕ್ಕ ಮಗು ಪೋಷಕರನ್ನು, ಮನೆಯನ್ನು ತೊರೆದು ಶಾಲೆಗೆ ಹೋಗಲು ಮುಖ್ಯ ತೊಡಕಾಗಿರುವ, ಮಗುವಿನ ಭಾವನಾತ್ಮಕ ಬದುಕಿನ ಮಹತ್ವದ ಅಂಶವೆಂದರೆ: ಮಗುವಿನ ಮನಸ್ಸಿನಲ್ಲಿರುವ ಅಭದ್ರತೆಯ ಭಾವನೆ. 'ನನ್ನನ್ನು ತಂದೆ/ತಾಯಿ ಶಾಲೆಯಿಂದ ಮನೆಗೆ ಕರೆತರಲು ಬಾರದೇ ಇದ್ದರೆ? ಶಾಲೆಯಿಂದ ಮನಗೆ ಬರುವಷ್ಟರಲ್ಲಿ ತಂದೆ/ತಾಯಿ ಕಾಣದೇ ಹೋದರೆ, ತಂದೆ/ತಾಯಿಗೇ ಏನಾದರೂ ಅಪಾಯವಾದರೆ, ತನ್ನಿಂದ ಅವರು ದೂರವಾಗಿಬಿಟ್ಟರೆ' ಎಂಬಂತಹ ಆತಂಕ ಒಂದು ಮಟ್ಟ ಮೀರಿ ಮಗುವಿಗಿದ್ದಾಗ ಶಾಲೆಗೆ ಹೋಗದಿರಲು, ತಂದೆ/ ತಾಯಿಗೇ ಅಂಟಿಕೊಂಡಿರಲು ಮಗು ಏನಾದರೂ ನೆಪವನ್ನು ಹುಡುಕುತ್ತಿರುತ್ತದೆ.

ಮಗುವಿನ ಮನಸ್ಸಿನಲ್ಲಿ ಆಳವಾಗಿ ಬೇರೂರಿರುವ ಈ ಭಯಕ್ಕೆ, ಅಪನಂಬಿಕೆಗೆ ಮಗುವಿನ ದೈಹಿಕ ಸ್ಥಿತಿ, ಕೌಟುಂಬಿಕ ಸ್ಥಿತಿ, ಮಗುವಿಗೆ ತೀರ ಎಳವೆಯಲ್ಲಿ ಆದ ಅನುಭವಗಳು - ಹೀಗೆ ಹಲವು ಬಲವಾದ ಕಾರಣಗಳಿರುತ್ತವೆ. ಇಂತಹ ಮಕ್ಕಳಿಗೆ ಶಾಲೆಗೆ ಹೋಗಲು ಶಿಕ್ಷೆಯ ಭಯವನ್ನುಂಟುಮಾಡಿಯೋ, ಯಾವುದಾದರೂ ಆಮಿಷವೊಡ್ಡಿಯೋ, ಬೇರೆ ಮಕ್ಕಳೊಂದಿಗೆ ಹೋಲಿಸಿ ಮನವೊಲಿಸುವುದೋ, ಸುಮ್ಮನೇ ಕಾರಣ ತಿಳಿಯದೇ ಬಲವಂತಪಡಿಸುವುದೋ ಅಷ್ಟೇನೂ ಪರಿಣಾಮಕಾರಿ ತಂತ್ರವಲ್ಲ. ಮಗುವಿನ ಮನಸ್ಸಿನಲ್ಲಿ ವಿಶ್ವಾಸವನ್ನು ತುಂಬಿಸಲು ಸಮಯ, ಪರಿಶ್ರಮ, ಅಗತ್ಯಬಿದ್ದರೆ ತಜ್ಞರ ಸಹಾಯವೂ ಬೇಕು. ಮಗು ದಿನವೂ ತಪ್ಪದೆ ಶಾಲೆಗೆ ಹೋಗುವುದು ಅನಿವಾರ್ಯ; ಅದರಲ್ಲಿ ಯಾವುದೇ ವಿನಾಯಿತಿಯಿಲ್ಲ ಎನ್ನುವುದನ್ನು ಪ್ರೀತಿಯಿಂದ ಅರ್ಥಮಾಡಿಸಬೇಕಾಗುತ್ತದೆ.

ಶಾಲೆಯಲ್ಲಿ ತನ್ನನ್ನು ಶಿಕ್ಷೆಗೊಳಪಡಿಸಬಹುದೆಂಬ ಭಯ, ಶಾಲೆಯ ವಾತಾವರಣ ಯಾವ ರೀತಿಯಲ್ಲೂ ಸಂತಸದಾಯಕವಾಗಿಲ್ಲದಿರುವುದು, ಸಹಪಾಠಿಗಳ ಗೇಲಿ, ಅವರೊಂದಿಗೆ ಜಗಳ, ಆತ್ಮೀಯತೆಯಿಂದ ಮಕ್ಕಳನ್ನು ಕಾಣದ ಶಿಕ್ಷಕರು, ಓದಿನ ಒತ್ತಡ ಹೀಗೆ ಮಕ್ಕಳು ಶಾಲೆಗೆ ಹೋಗಲು ಬೇಸರಪಟ್ಟುಕೊಳ್ಳಲು ಹಲವು ಕಾರಣಗಳಿದ್ದರೂ ಅವೆಲ್ಲವನ್ನೂ ಪೋಷಕರ ಸ್ವಲ್ಪ ಬೆಂಬಲದೊಂದಿಗೆ ಯಶಸ್ವಿಯಾಗಿ ನಿರ್ವಹಿಸುವ ಶಕ್ತಿ ಮಕ್ಕಳಿಗಿರುತ್ತದೆ. ತನ್ನನ್ನು ಅತ್ಯಂತ ಪ್ರೀತಿಯಿಂದ ಕಾಣುವ, ಸದಾ ಗಮನಿಸುವ, ತನ್ನ ಕನಸುಗಳನ್ನು ನನಸು ಮಾಡಿಕೊಳ್ಳಲು ಪ್ರೇರೇಪಿಸುವ, ತನ್ನನ್ನು ಅನನ್ಯ ವ್ಯಕ್ತಿಯೆಂದು ಕಾಣುವ ಒಬ್ಬರಾದರೂ ಹಿರಿಯರು/ ಪೋಷಕರಿದ್ದಾಗ ಮಕ್ಕಳು ಜೀವನದ ಸವಾಲುಗಳನ್ನು ಸಹಜವಾಗಿ ಸ್ವೀಕರಿಸಿ, ಹಗಲಿರುಳೂ ಶ್ರಮಿಸಿ ಕಷ್ಟಪಟ್ಟಾದರೂ ಏನನ್ನಾದರೂ ಕಲಿತು ಸಾಧಿಸುತ್ತಾರೆ.



ಟೀಕೆಗಳ 'ಟಾಕು'

ರಘು ವಿ.

ನಮ್ಮ ಜೀವನದ ಬಹುತೇಕ ಭಾಗ ಅವರಿವರ ಮಾತಿನಿಂದ ಪ್ರಭಾವಿತವಾಗುವುದು. ಬದುಕು ನಮ್ಮದಾದರೂ ಅದರ ಬಗ್ಗೆ ಇತರರು ಟೀಕೆ-ಟಿಪ್ಪಣಿ ಮಾಡುತ್ತಿರುತ್ತಾರೆ. ಹೇಗೆ ಬಾಳಿದರೂ ಅಳೆದು ತೂಗುವವರು ಎತ್ತಿ ಆಡುವವರು ಇರುತ್ತಾರೆ. ಟೀಕೆಗಳನ್ನು ಹೇಗೆ ಸ್ವೀಕರಿಸಬೇಕು, ಅಥವಾ ಯಾವ ರೀತಿ ನಿರಾಕರಿಸಬೇಕು ಎಂಬುದನ್ನು ತಿಳಿದುಕೊಂಡರೆ ಜೀವನ ನೆಮ್ಮದಿ ಕಾಣಬಹುದು. ಗೀತೆಯನ್ನು ಬೋಧಿಸಿದ ಶ್ರೀಕೃಷ್ಣ, ಮರ್ಯಾದಾ ಪುರುಷೋತ್ತಮ ಶ್ರೀರಾಮನೂ ಜನರ ಟೀಕೆಗೆ ಒಳಗಾದವರೇ. ತಿದ್ದಿಕೊಳುವುದೆಷ್ಟು, ತಾಳಿಕೊಳುವುದೆಷ್ಟು, ತಿರುಗಿಬೀಳುವುದೆಷ್ಟು ಎಂಬ ಗುಟ್ಟು ಅರಿತಿರಬೇಕು. ಮಹನೀಯರ ಬದುಕಿನಲ್ಲಿ ನಾವಿದನ್ನು ಕಾಣುತ್ತೇವೆ.

ಟೀಕೆಗಳನ್ನು ಮುಖ್ಯವಾಗಿ ಎರಡು ಬಗೆಯದಾಗಿ ಪರಿಗಣಿಸಬಹುದು. ಒಂದು ಸಕಾರಾತ್ಮಕ ಟೀಕೆ ಮತ್ತೊಂದು ನಕಾರಾತ್ಮಕ ಟೀಕೆ. ಇವೆರಡೂ ಮನಸ್ಸಿನ ಮೇಲೆ, ವ್ಯಕ್ತಿತ್ವದ ಮೇಲೆ ಪ್ರಭಾವ ಬೀರಬಲ್ಲವು. ಈ ಮಾತುಗಳು ಆತ್ಮವಿಶ್ವಾಸವನ್ನು ಹೆಚ್ಚಿಸಬಲ್ಲವು, ಹಾಗೇ ಅದನ್ನು ಕುಗ್ಗಿಸಲೂ ಬಲ್ಲವು. ಪ್ರತಿಯೊಬ್ಬ ವ್ಯಕ್ತಿಗೂ ತನ್ನದೇ ಆದ ಬಲ ದೌರ್ಬಲ್ಯಗಳಿರುತ್ತವೆ. ಏನೇ ಆದರೂ ತಾನೊಬ್ಬ ವಿಶಿಷ್ಟ ಎಂಬ ಭಾವವೂ ಅವನಲ್ಲಿರುತ್ತದೆ. ಆದರೆ ಟೀಕೆಗಳು ಅವನ ಮೇಲೆ ಪರಿಣಾಮ ಬೀರಿ ಅವನು ಕುಗ್ಗುವಂತೆ ಮಾಡುವ ಗುಣ ಹೊಂದಿವೆ. ಸಜ್ಜನರು ಇತರರ ದೌರ್ಬಲ್ಯಗಳನ್ನು ಪರಿಗಣಿಸದೆ ಅವರ ಸದ್ಗುಣಗಳನ್ನು ಕಂಡು ಪ್ರೋತ್ಸಾಹಿಸುತ್ತಾರೆ. ಶ್ರೀರಾಮಕೃಷ್ಣರು ಸೌಜನ್ಯಮೂರ್ತಿ. ಅವರೆನ್ನುತ್ತಾರೆ: 'ಒಬ್ಬ ಕುಂಟನನ್ನು 'ನೀನು ಹೇಗೆ ಕುಂಟನಾದೆ?' ಎಂದು ಕೇಳಬಾರದು.' ಆದರೆ ಜಗತ್ತಿನಲ್ಲಿ ಇಂತಹವರು ವಿರಳ. ಗೇಲಿ ಮಾಡಿ ಕುಂದಿಸಲು ಪ್ರಯತ್ನಿಸುವವರೇ ಹೆಚ್ಚು. ಆದರೆ ವ್ಯಕ್ತಿಯೊಳಗಿನ ಕಿಚ್ಚು ಹೆಚ್ಚಲೂ ಇಂತಹ ಗೇಲಿಗಳೇ ಕಾರಣವಾದದ್ದಿದೆ. ಪುರಾತನ ಗ್ರೀಕ್‌ನ ಡೆಮಾಸ್ತನೀಸ್ ಹುಟ್ಟನಿಂದ ಹೊಂದಿದ್ದ ಉಗ್ಗನ್ನು ಕಳೆದುಕೊಂಡು ಪ್ರಚಂಡ ವಾಗ್ಮಿಯಾದದ್ದು ಇಂತಹ ಕೆಚ್ಚಿನಿಂದಲೇ.

ಸಕಾರಾತ್ಮಕ ಟೀಕೆಗೆ ಕಾರಣವಾಗುವುದು ಅಂತಹವರು ನಮ್ಮ ಬಗ್ಗೆ ಹೊಂದಿರಬಹುದಾದ ಕಾಳಜಿಯಿಂದ. ಇದು ನಾವು ತಿದ್ದಿಕೊಳ್ಳಬೇಕೆಂಬ ಆಶಯದ ಟೀಕೆ. ಇಂತಹ ಸಕಾರಾತ್ಮಕ ಟೀಕೆಗಳು ಹೆಚ್ಚು ಸೌಜನ್ಯಯುತವಾಗಿಯೂ ನಿರ್ದಿಷ್ಟವೂ ನಮ್ಮ ಭಾವನೆಗಳಿಗೆ ಸ್ಪಂದಿಸುವ ಮತ್ತು ನಮ್ಮನ್ನು ಉತ್ತಮಪಡಿಸುವ ಆಶಯ ಹೊಂದಿರುತ್ತವೆ. ಇದರಲ್ಲಿ ಲೇವಡಿ ಮಾಡುವ ಉದ್ದೇಶ ಇರದು. ಆದರೆ ಇದನ್ನು ಸ್ವೀಕರಿಸುವಾಗಲೂ ಎಚ್ಚರವಿರಬೇಕು. ಇದು ನಮ್ಮನ್ನು ಮೆಚ್ಚಿಸಲು ಆಡುವ ನುಡಿಯೋ ಅಥವಾ ತಿದ್ದುವ ಮನಸ್ಸಿನದೋ ಎಂದು ಆಲೋಚಿಸಬೇಕು. ಮತ್ತೊಂದು ಮುಖ್ಯವಾದ ಅಂಶವೆಂದರೆ ನಮ್ಮ ಒಳಿತಿಗೇ ಹೇಳಿದ್ದಾದರೂ ಅದೇನಾದರೂ ನಮ್ಮತನವನ್ನೂ ಕಳೆಯುವಂತಹದ್ದಾದರೆ ಅದನ್ನು ನಿರಾಕರಿಸುವ ಧಾರ್ಷ್ಟ್ಯವನ್ನು ನಾವು ಹೊಂದಿರಬೇಕು. ನಮ್ಮ ನಿತ್ಯಜೀವನದಲ್ಲಿ ನಮ್ಮನ್ನು ಹತ್ತಿರದಿಂದ ಬಲ್ಲವರು ಈ ಬಗೆಯ ಸಕಾರಾತ್ಮಕ ಟೀಕೆ ಮಾಡಬಲ್ಲರು. ಅವರ ಮಾತಿಗೆ ಮನ್ನಣೆ ಕೊಡಬೇಕಾಗುತ್ತದೆ.

ನಕಾರಾತ್ಮಕ ಟೀಕೆಗಳು ವ್ಯಕ್ತಿಯನ್ನು ಕುಗ್ಗಿಸಲೆಂದೇ ಬಳಕೆಯಾಗುವಂತಹವು. ಅಸೂಯೆ, ಕೋಪ, ತಿರಸ್ಕಾರದ ಬೀಜಗಳು ಟೀಕೆಗಳಾಗಿ ರೂಪ ತಳೆದು ಗಾಳಿಮಾತಿನಿಂದ ಮೊದಲ್ಗೊಂಡು ಚಾರಿತ್ರ್ಯಹನನದವರೆಗೂ ಇದು ಸಾಗಬಲ್ಲದು. ಇಂತಹ ಸಂದರ್ಭಗಳಲ್ಲಿ ಆತ್ಮಸಾಕ್ಷಿಗನುಗುಣವಾಗಿ ವರ್ತಿಸಿ ಸುಮ್ಮನಿರುವುದು ಉಚಿತ. ಸಂದರ್ಭಕ್ಕೆ ತಕ್ಕಂತೆ ಕಡೆಗಣಿಸುವುದೋ ಅಥವಾ ಬಾಯಿಮುಚ್ಚಿಸುವುದೋ ಸೂಕ್ತಕ್ರಮ. ಸಂಬಂಧಗಳಲ್ಲಿ, ಉದ್ಯೋಗವಲಯದಲ್ಲಿ ಇಂತಹ ನಕಾರಾತ್ಮಕ ಟೀಕೆಗಳು ಹೆಚ್ಚು. ಅದರಲ್ಲೂ ಸಾರ್ವಜನಿಕ ವ್ಯಕ್ತಿಗಳು, ಸಿನೆಮಾತಾರೆಯರು, ರಾಜಕಾರಣಿಗಳು - ಈ ಬಗೆಯ ನಕಾರಾತ್ಮಕ ಟೀಕೆಗಳಿಗೆ ಪಕ್ಕಾಗುತ್ತಾರೆ. ಆದರೆ ಅದನ್ನು ಅವರು ಸಮರ್ಥವಾಗಿ ಎದುರಿಸುವುದನ್ನೂ ಕಾಣುತ್ತೇವೆ. ಅಂದರೆ, ಟೀಕೆಗಳಲ್ಲಿ ಹುರುಳಿಲ್ಲ ಎಂಬ ನಂಬಿಕೆ ವ್ಯಕ್ತಿಗಿದ್ದರೆ ಅವನು ಒಂದು ಬಗೆಯ ಭಂಡತನದಿಂದಲೇ ಅದನ್ನು ಜಯಿಸಿಬಿಡುತ್ತಾನೆ. ಇದರರ್ಥ ಲಜ್ಜೆಗೇಡಿಗಳಾಗಿರಬೇಕು ಎಂದಲ್ಲ. ಆದರೆ, ಟೀಕೆ ನಿರಾಧಾರವಾದದ್ದು ಎಂಬ ನಂಬಿಕೆ ಇದ್ದಾಗ ಹಾಗೆ ವರ್ತಿಸಿ ಅದರ ನಕಾರಾತ್ಮಕ ಪ್ರಭಾವದಿಂದ ಪಾರಾಗಬಹುದು ಎಂಬ ಗಮನಿಕೆ. ಟೀಕೆ ಸಕಾರಾತ್ಮಕವೋ ನಕಾರಾತ್ಮಕವೋ ಎಂದು ದೃಢಪಟ್ಟಮೇಲೆ ಅದಕ್ಕೆ ತಕ್ಕಂತೆ ಪ್ರತಿಕ್ರಿಯೆ ತೋರುವುದು ಜಾಣತನ. ಅದು ಸಕಾರಾತ್ಮಕವಾಗಿದ್ದಾರೆ ಹಾಗೆ ಟೀಕಿಸಿದವರಿಗೆ ಕೃತಜ್ಞತೆ. ಏಕೆಂದರೆ ನಾವು ಉತ್ತಮಗೊಳ್ಳಲು ಅವರು ನೆರವಾಗುತ್ತಿದ್ದಾರೆ. ನಕಾರಾತ್ಮಕವಾಗಿದ್ದರೆ, ಅದು ಸತ್ಯವಾಗಿದ್ದರೆ ತಿದ್ದಿಕೊಳ್ಳುವ ಪ್ರಾಮಾಣಿಕ ಪ್ರಯತ್ನ ಮಾಡಬೇಕು. ವರ್ತನೆಗಳಿಂದ ಪರಿವರ್ತನೆ ಸಾಧ್ಯವಾಗುವುದಾದರೆ ತಿದ್ದಿಕೊಳ್ಳುವ ಅವಕಾಶ ಬಳಸಿಕೊಳ್ಳಬೇಕು. ನಿಂದಕರನ್ನೂ ವಂದಿಸೋಣ. ನಿಂದಕರಿರಬೇಕು ನಿಜ ಆದರೆ ಸುತ್ತಲೂ ನಿಂದಕರೇ ಇದ್ದರೆ ಬದುಕು ಬರ್ಬರವಾಗುವ ಮುನ್ನ ಅವರಿಂದ ದೂರಾಗುವುದು ಕ್ಷೇಮಕರ.

ಸಂತೆಯೊಳಗೆ ಮನೆ ಮಾಡಿ ಶಬ್ದಕ್ಕೆ ಅಂಜಬೇಡಿ ಎಂಬಂತೆ ಜಗತ್ತಿನೊಳಗಿದ್ದು ಟೀಕೆಗೆ ಹೆದರಬೇಡಿ ಎಂದೆನ್ನಬೇಕು. ಸಾರಾಂಶ ಇಷ್ಟೆ. ಟೀಕೆಯ ಉದ್ದೇಶ ಅರಿಯಬೇಕು, ತಾಳ್ಮೆಯಿಂದ ಗ್ರಹಿಸಬೇಕು, ಅದರಿಂದ ನಮ್ಮ ಉತ್ತಮೀಕರಣ ಸಾಧ್ಯವೆನಿಸಿದರೆ ಬದಲಾವಣೆ ತಂದುಕೊಳ್ಳಬೇಕು. ನಿರಾಕಾರಣವಾಗಿದ್ದರೆ ನಿಂದಕರನ್ನು ದೂರ ಮಾಡಬೇಕು. ಎಂತಾದರಾಗಲಿ, ಛಲದಿಂದ ಬಾಳಬೇಕು. ಸಾವು ಕೂಡ ಒಂದು ವಿರಾಮವೆಂದು ಭಾವಿಸುವ ಮನಸ್ಸು ನಮ್ಮದಾದಾಗ ಇನ್ನು ಲೋಕದ ಹೊಗಳಿಕೆ ನಿಂದೆಗಳು ಹೆಚ್ಚು ಪರಿಣಾಮ ಬೀರವು. ಅಂತಹ ನಿಲುವು ನಮ್ಮದಾಗಲಿ. ಲೋಕನಿಂದೆಗೆ ಕುಗ್ಗುವ ಮನಗಳಿಗೆ ಕಗ್ಗದ ಈ ಪದ್ಯ ಅನ್ವಯಿಕ: 'ಸತ್ತೆನೆಂದೆನಬೇಡ; ಸೋತೆನೆಂದೆನಬೇಡ, ಬತ್ತಿತೆನ್ನೊಳು ಸತ್ತ್ವದೂಟೆಯೆನಬೇಡ, ಮೃತ್ಯುವೆನ್ನುವುದೊಂದು ತೆರೆಯಿಳಿತ; ತೆರೆಯೇರು ಮತ್ತೆ ತೋರ್ಪುದು ನಾಳೆ.' ಹೀಗೆ ಟೀಕೆಯ ಟಾಕುಗಳಿಗೆ ಕುಗ್ಗದೆ ಠೀಕಾಗಿ ಬದುಕೋಣ.

ಯಾವ ನೋವಿಗೆ ಯಾವ ರೋಗ?

ಡಾ.ವಿನಯ ಶ್ರೀನಿವಾಸ್

ನೋವು - ರೋಗಲಕ್ಷಣಗಳಲ್ಲಿ ಮುಖ್ಯವಾದುದು. ದೇಹದ ಯಾವುದೇ ಭಾಗದಲ್ಲಿ ನೋವು ಕಾಣಿಸಿಕೊಳ್ಳಬಹುದು. ನೋವಿನ ತೀವ್ರತೆ ಮತ್ತು ಬಗೆ ವೈದ್ಯರಿಗೆ ಕಾಯಿಲೆಯ ಬಗ್ಗೆ ಮಹತ್ವದ ಸೂಚನೆಯನ್ನು ಕೊಡುತ್ತದೆ. ನೋವಿನ ಜೊತೆಯಲ್ಲಿಯೇ ಕಾಣಿಸಿಕೊಳ್ಳುವ ಇತರ ಲಕ್ಷಣಗಳೂ ರೋಗಪತ್ತೆಯಲ್ಲಿ ನೆರವಾಗುತ್ತವೆ. ಆದ್ದರಿಂದಲೇ ನಾವು ನಮ್ಮನ್ನು ಬಾಧಿಸುತ್ತಿರುವ ನೋವನ್ನು ವೈದ್ಯರ ಬಳಿ ಸಮರ್ಪಕವಾಗಿ ವಿವರಿಸುವುದು ಮುಖ್ಯ.

ಯಾವ ಕಾಯಿಲೆ, ಎಂತಹ ನೋವು?

- ವೈರಾಣು ಜ್ವರದಲ್ಲಿ (ವೈರಲ್ ಫಿವರ್) ವ್ಯಕ್ತಿಗೆ ದೇಹದಾದ್ಯಂತ ನೋವು ಕಾಣಿಸಿಕೊಳ್ಳುತ್ತದೆ. ಇದು ಒಮ್ಮೊಮ್ಮೆ ತೀವ್ರವಾಗಿರುವುದೂ ಉಂಟು. ಕೈಕಾಲುಗಳಲ್ಲಿಯೂ ಕಂಡು ಬರುವ ಈ ನೋವಿನಿಂದ ವ್ಯಕ್ತಿ ನಿತ್ಯದ ಕೆಲಸಗಳನ್ನು ಮಾಡಲೂ ನಿತ್ರಾಣನಾಗುತ್ತಾನೆ. ಸಾಮಾನ್ಯವಾಗಿ ಆರರಿಂದ ಏಳು ದಿನಗಳ ಕಾಲ ಬಾಧಿಸುವ ವೈರಾಣು ಜ್ವರದ ನಿಯಂತ್ರಣದೊಂದಿಗೆ ದೈಹಿಕ ನೋವೂ ಶಮನವಾಗುವುದು. ಈ ಸಮಯದಲ್ಲಿ ಸಾಕಷ್ಟು ವಿಶ್ರಾಂತಿ, ನೀರು ಹಾಗೂ ಇತರ ದ್ರವ ರೂಪದ ಪೌಷ್ಟಿಕ ಆಹಾರದ ಸೇವನೆ ಅತ್ಯಗತ್ಯ. ಹೆಚ್ಚಿನ ಸಂದರ್ಭಗಳಲ್ಲಿ ನೋವು ನಿವಾರಕ ಔಷಧಗಳು ಅಗತ್ಯವೆನಿಸುತ್ತವೆ.
- ಮೂತ್ರಪಿಂಡ ಅಥವಾ ಮೂತ್ರನಾಳಗಳಲ್ಲಿ ಕಲ್ಲುಗಳಾದಾಗ ವಕ್ತಿ ವಿಪರೀತ ನೋವಿನಿಂದ ಬಳಲುತ್ತಾನೆ. ಸೊಂಟದ ಭಾಗದಲ್ಲಿ ಕಾಣಿಸಿಕೊಳ್ಳುವ ಈ ನೋವು ಒಮ್ಮೊಮ್ಮೆ ಕೆಳ ಹೊಟ್ಟೆಗೂ ಹರಿಯುವುದಲ್ಲದೆ, ತೀವ್ರ ಸ್ವರೂಪದ್ದೂ ಆಗಿರುತ್ತದೆ. ಈ ನೋವನ್ನು ತಾತ್ಕಾಲಿಕವಾಗಿ ಶಮನಗೊಳಿಸಲು ನೋವು ನಿವಾರಕ ಚುಚ್ಚುಮದ್ದುಗಳೇ ಬೇಕಾಗುತ್ತವೆ. ಹೊಟ್ಟೆಯ ಸ್ಕ್ಯಾನಿಂಗ್ ಮಾಡಿ, ಕಲ್ಲು ಎಲ್ಲಿದೆ, ಅದರ ಗಾತ್ರ ಎಷ್ಟಿದೆ ಎಂಬುದನ್ನು ಗಮನಿಸಿ ನಂತರ ಸೂಕ್ತ ಚಿಕಿತ್ಸೆಯನ್ನು ಮಾಡಬೇಕಾಗುತ್ತದೆ.
- ಅಪಘಾತಗಳಲ್ಲಿ ಚರ್ಮ ತುಂಡರಸಿ ಅಥವಾ ತರಚಿ ಆಗುವ ಗಾಯಗಳು ವಿಪರೀತ ಉರಿಯಿಂದ ಕೂಡಿರುತ್ತವೆ. ಒಮ್ಮೊಮ್ಮೆ ಅಲ್ಲಿ ರಕ್ತಸ್ರಾವವೂ ಇರುತ್ತದೆ. ಇಂತಹ ಗಾಯಗಳನ್ನು ಸ್ವಚ್ಛಗೊಳಿಸಿ, ಸೂಕ್ತ ಔಷಧಗಳನ್ನು ಲೇಪಿಸಿದಾಗ ಉರಿ ಕಡಿಮೆಯಾಗುವುದು. ಕೆಲವೊಮ್ಮೆ ನೋವು ನಿವಾರಕ ಮಾತ್ರೆಗಳೂ ಬೇಕಾಗಬಹುದು.
- ದಂತಕ್ಷಯ ಮತ್ತು ದಂತಕುಳಿಯಲ್ಲಿ ಹಲ್ಲುನೋವು ಸಾಮಾನ್ಯ. ಒಮ್ಮೊಮ್ಮೆ ಈ ನೋವು ಕಿವಿನೋವು ಮತ್ತು ತಲೆನೋವಿನ ಸ್ವರೂಪವನ್ನೂ ಪಡೆಯಬಹುದು.
- ದೀರ್ಘಕಾಲದವರೆಗೆ ಕಂಪ್ಯೂಟರ್ ಮುಂದೆ ಕುಳಿತು ಕೆಲಸ ಮಾಡಬೇಕಾದ ಅನಿವಾರ್ಯತೆಯಿರುವ ಈ ದಿನಗಳಲ್ಲಿ ಬೆನ್ನು ಮತ್ತು ಕುತ್ತಿಗೆಯ ನೋವು ಸಾಮಾನ್ಯ. ಸರಿಯಾದ ಭಂಗಿಯಲ್ಲಿ ಕುಳಿತುಕೊಳ್ಳುವುದು ಮತ್ತು ಆಗಾಗ್ಗೆ ಎದ್ದು ದೇಹವನ್ನು ಸ್ಟ್ರೆಚ್ ಮಾಡುವುದು ನೋವನ್ನು ಕಡಿಮೆ ಮಾಡಲು ಸ್ವಲ್ಪ ಮಟ್ಟಿಗೆ ನೆರವಾಗಬಹುದು.
- ಯಾವುದೇ ಕಾರಣದಿಂದ ದೇಹದ ಮೂಳೆ ಮುರಿತಕ್ಕೆ ಒಳಗಾದಾಗ, ಆ ಭಾಗದಲ್ಲಿ ತೀವ್ರತರವಾದ ನೋವು ಮತ್ತು ಊತ ಕಾಣಿಸಿಕೊಳ್ಳುತ್ತದೆ. ಪೆಟ್ಟು ಬಿದ್ದ ಭಾಗದಲ್ಲಿ ಈ ರೀತಿ ಊತ ಮತ್ತು ನೋವು ಎರಡೂ ಲಕ್ಷಣಗಳು ಒಟ್ಟಿಗೇ ಇದ್ದು, ಸಹಜ ಚಲನೆ ಇಲ್ಲದಿದ್ದಾಗ ಮತ್ತು ಆ ಭಾಗವು ತನ್ನ ಮೂಲ ಆಕಾರ ಹಾಗೂ ಸ್ಥಿತಿಯನ್ನು ಕಳೆದುಕೊಂಡಾಗ ಅಲ್ಲಿನ ಮೂಳೆ ಮುರಿತಕ್ಕೆ ಒಳಗಾಗಿರುವುದು ಖಚಿತ. ಮುಂದಿನ ಚಿಕಿತ್ಸಾ ಕ್ರಮಕ್ಕಾಗಿ ಎಕ್ಸ್-ರೇ ಪರೀಕ್ಷೆ ಬೇಕಾಗುತ್ತದೆ.
- ಎದೆಯ ಭಾಗದ ನೋವನ್ನು ಎಂದಿಗೂ ನಿರ್ಲಕ್ಷಿಸಬಾರದು. ಈ ಭಾಗದ ನೋವು ಹೃದಯ, ಶ್ವಾಸಕೋಶ ಮತ್ತು ಎದೆಗೂಡಿನ ಮೂಳೆಗಳಿಗೆ ಸಂಬಂಧಿಸಿದ್ದಾಗಿರುತ್ತದೆ. ಹೃದಯಾಘಾತದ ನೋವು ಎಡಭಾಗದ ಎದೆಯ ಮೇಲೆ ಚುಚ್ಚಿದಂತೆ ಅಥವಾ ಒತ್ತಿದಂತೆ ಭಾಸವಾಗಬಹುದು. ನೋವು ಒಮ್ಮೊಮ್ಮೆ ಎಡತೋಳು, ಬೆನ್ನು, ಕುತ್ತಿಗೆ ಮತ್ತು ಎದೆಯ ಬಲಭಾಗಕ್ಕೂ ಹರಿದಂತೆ ಭಾಸವಾಗಬಹುದು. ಶರೀರ ಬೆವರುವುದು, ವಾಕರಿಕೆ, ವಾಂತಿ, ಉಸಿರಾಡಲು ಕಷ್ಟೆನಿಸುವುದು ಮೊದಲಾದ ಇತರ ಗುಣಲಕ್ಷಣಗಳು ಎದೆಯ ನೋವಿನ ಜೊತೆ ಇದ್ದಾಗ ವ್ಯಕ್ತಿಯನ್ನು ಕೂಡಲೇ ಆಸ್ಪತ್ರೆಗೆ ಕರೆದೊಯ್ಯಬೇಕು.
- ಪ್ರತಿಬಾರಿ ಉಸಿರಾಡುವಾಗ ಅಥವಾ ಕೆಮ್ಮುವಾಗ ಕಾಣಿಸಿಕೊಳ್ಳುವ ಪಕ್ಕೆ ಅಥವಾ ಎದೆನೋವು ಶ್ವಾಸಕೋಶಗಳ ಅಥವಾ ಮೇಲಿನ ರಕ್ಷಣಾ ಕವಚಗಳಲ್ಲಿನ ಉರಿಯೂತದಿಂದಾಗಿರಬಹುದು. ಶ್ವಾಸಕೋಶಗಳ ರಕ್ಷಣಾ ಪದರಗಳ ನಡುವೆ ಅಸಹಜ ನೀರಿನಾಂಶ ತುಂಬಿಕೊಂಡಾಗಲೂ ಈ ಬಗೆಯ ನೋವು ಸಾಮಾನ್ಯ. ಇಂತಹ ಸಂದರ್ಭಗಳಲ್ಲಿ ವೈದ್ಯರ ಸಲಹೆ ಅತ್ಯಗತ್ಯ.
- ಮೇಲು ಹೊಟ್ಟೆಯಲ್ಲಿ ಚುಚ್ಚಿದಂತಹ ಅಥವಾ ಉರಿಯಂತಹ ನೋವಿಗೆ ಸಾಮಾನ್ಯವಾಗಿ ಜಠರ ಅಥವಾ ಸಣ್ಣ ಕರುಳುಗಳಲ್ಲಿನ ಉರಿಯೂತವೇ (ಗ್ಯಾಸ್ಟ್ರೈಟಿಸ್) ಕಾರಣ. ಆಹಾರದಲ್ಲಿ ಅತಿಯಾದ ಮಸಾಲೆ, ಸಮಯಕ್ಕೆ ಸರಿಯಾಗಿ ಆಹಾರ ಸೇವಿಸದಿರುವುದು, ಕೆಲವು ಔಷಧಗಳ ಸೇವನೆ, ಅತಿಯಾದ ಕಾಫಿ, ಚಹದ ಬಳಕೆ, ಧೂಮಪಾನ, ಮದ್ಯಪಾನ ಮೊದಲಾದುವು ಈ ಜಠರದ ಮತ್ತು ಕರುಳುಗಳ ಉರಿಯೂತಕ್ಕೆ ಕಾರಣ. ಆಹಾರಶೈಲಿ ಮತ್ತು ಜೀವನಶೈಲಿಯಲ್ಲಿನ ಸೂಕ್ತ ಬದಲಾವಣೆ ಈ ಸಮಸ್ಯೆಯನ್ನು ನಿಯಂತ್ರಿಸಲು ಸಹಕಾರಿ.
- ಕರುಳುಬೇನೆಯಲ್ಲಿ ಕೆಳ ಹೊಟ್ಟೆಯಲ್ಲಿ ನೋವು ಕಾಣಿಸಿಕೊಳ್ಳಬಹುದು. ಕಲುಷಿತ ಆಹಾರಸೇವನೆ ಇದಕ್ಕೆ ಮುಖ್ಯ ಕಾರಣ. ಇಲ್ಲಿ ವ್ಯಕ್ತಿ ಹೊಟ್ಟೆ ಹಿಂಡಿದಂತಹ ನೊವು ಎಂದೂ ಮತ್ತು ಬಿಟ್ಟಿ ಬಿಟ್ಟಿ ಬರುತ್ತದೆ ಎಂದೂ ದೂರಬಹುದು. ನೋವಿನ ಜೊತೆಯಲ್ಲಿ ಭೇದಿ ಮತ್ತು ವಾಂತಿಯೂ ವ್ಯಕ್ತಿಯನ್ನು ಬಾಧಿಸುತ್ತದೆ. ಆ್ಯಂಟಿಬಯೋಟಿಕ್ ಔಷಧಗಳು ನೋವನ್ನು ಶಮನಗೊಳಿಸುತ್ತವೆ. ಸುರಕ್ಷಿತ ಆಹಾರ ಮತ್ತು ನೀರಿನ ಸೇವನೆ ಮತ್ತು ನಿಯಮಿತ ಜಂತುಹುಳು ನಿವಾರಕ ಔಷಧದ ಬಳಕೆ ಇಂತಹ ಹೊಟ್ಟೆನೋವು ಬರದಂತೆ ತಡೆಯಲು ಸಹಕಾರಿ.
- ಅಪೆಂಡಿಕ್ಸ್ ಉರಿಯೂತದಲ್ಲಿ ವ್ಯಕ್ತಿ ಕೆಳ ಹೊಟ್ಟೆಯ ಬಲಭಾಗದಲ್ಲಿ ನೋವನ್ನು ಅನುಭವಿಸುತ್ತಾನೆ. ಒಮ್ಮೊಮ್ಮೆ ಜ್ವರ, ವಾಂತಿ, ಆಯಾಸದಂತಹ ಲಕ್ಷಣಗಳೂ ಇರಬಹುದು. ಈ ಬಗೆಯ ನೋವು ಪದೇ ಪದೇ ಬಾಧಿಸುತ್ತಿದ್ದರೆ ವೈದ್ಯರ ಸಲಹೆ ಅತ್ಯಗತ್ಯ.
- ಟಾನ್ಸಿಲ್, ಗಂಟಲಕುಳಿ ಮತ್ತು ಧ್ವನಿಪೆಟ್ಟಿಗೆಯ ಉರಿಯೂತದಲ್ಲಿ ಗಂಟಲು ನೋವು ಸಾಮಾನ್ಯ. ದಿನದಲ್ಲಿ ಎರಡು ಮೂರು ಬಾರಿ ಬೆಚ್ಚಗಿನ ನೀರಿಗೆ ಸ್ವಲ್ಪ ಉಪ್ಪು ಬೆರೆಸಿ ಬಾಯಿಯನ್ನು ಮುಕ್ಕಳಿಸವುದು ನೋವು ಹಾಗೂ ಉರಿಯೂತವನ್ನು ನಿಯಂತ್ರಿಸಬಲ್ಲದು. ಕಡಿಮೆಯಾಗದಿದ್ದಾಗ ಆ್ಯಂಟಿಬಯೋಟಿಕ್ ಔಷಧ ಬೇಕಾಗಬಹುದು.
- ಜುಮ್ಮೆನಿಸುವ ಮತ್ತು ಮರಗಟ್ಟುವಂತಹ ಸಂವೇದನೆಗೆ ನರಗಳ ಉರಿಯೂತವೇ ಕಾರಣ. ಎರಡೂ ಪಾದಗಳಲ್ಲಿ ಕಂಡು ಬರುವ ಈ ಬಗೆಯ ನೋವು ಒಮ್ಮೊಮ್ಮೆ ಮಧುಮೇಹದ ದೀರ್ಘಕಾಲದ ಸಂಭವನೀಯ ಪರಿಣಾಮವಿರಬಹುದು. ವೈದ್ಯರ ಸಲಹೆ ಅತ್ಯಗತ್ಯ.

ಪೊಲೀಸ್ ಮಹಾನಿರ್ದೇಶಕರಾಗಿ ಅಲೋಕ್ ಮೋಹನ್ ಅಧಿಕಾರ ಸ್ವೀಕಾರ

‘ಸೈಬರ್ ಠಾಣೆ ಮೇಲ್ದರ್ಜೆಗೆ ಒತ್ತು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಪೊಲೀಸ್ ಮಹಾನಿರ್ದೇಶಕರಾಗಿ (ಡಿಜಿ–ಐಜಿಪಿ) ಡಾ.ಅಲೋಕ್ ಮೋಹನ್ ಅವರು ಸೋಮವಾರ ಪ್ರವೀಣ್ ಸೂದ್ ಅವರಿಂದ ಅಧಿಕಾರ ಸ್ವೀಕರಿಸಿದರು. ಡಿಜಿ–ಐಜಿಪಿಯಾಗಿದ್ದ ಪ್ರವೀಣ್ ಸೂದ್ ಅವರನ್ನು ಸೋಮವಾರ ಈ ಹುದ್ದೆಯಿಂದ ಬಿಡುಗಡೆ ಮಾಡಲಾಯಿತು.

ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆಯ ಡಿಜಿಪಿ ಅಲೋಕ್ ಅವರಿಗೆ ರಾಜ್ಯ ಪೊಲೀಸ್ ಮಹಾನಿರ್ದೇಶಕ (ಡಿಜಿ–ಐಜಿಪಿ) ಹುದ್ದೆಯನ್ನು ಹೆಚ್ಚುವರಿಯಾಗಿ ನೀಡಿ ಎರಡು ದಿನಗಳ ಹಿಂದೆ ಆದೇಶಿಸಲಾಗಿತ್ತು.

ಬಿಹಾರದ ಪಟ್ನಾದ ಅಲೋಕ್ ಮೋಹನ್, 1987ನೇ ಬ್ಯಾಚ್‌ನ ಅಧಿಕಾರಿ. 1965ರ ಏಪ್ರಿಲ್ 18ರಂದು ಜನಿಸಿರುವ ಇವರು ಉತ್ತರಾಖಂಡದ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಲ್ಲಿ ಎಂಎಸ್ಸಿ ಪೂರೈಸಿದ್ದರು. ಭಾರತೀಯ ಆಂತರಿಕಾ ಭದ್ರತೆ ಬಗ್ಗೆ ಪಿ.ಎಚ್‌ಡಿ ಮಾಡಿದ್ದಾರೆ.

ರಾಜ್ಯದ ಕರಾವಳಿ, ಉತ್ತರ ಕರ್ನಾಟಕ ಭಾಗದಲ್ಲಿ ಎಸ್‌ಪಿಯಾಗಿ ಕಾರ್ಯ ನಿರ್ವಹಿಸಿದ ಅನುಭವವಿದೆ. ಸಿಐಡಿಯ ಡಿಜಿಪಿಯಾಗಿ, ಸಿಸಿಬಿ ಜಂಟಿ ಪೊಲೀಸ್ ಆಯುಕ್ತರಾಗಿ, ಪಶ್ಚಿಮ ವಲಯದ ಐಜಿಪಿಯಾಗಿ ಕೆಲಸ ಮಾಡಿದ್ದರು. ಆಡಳಿತ ಹಾಗೂ ಕಾರಾಗೃಹ ಮತ್ತು ಅಗ್ನಿಶಾಮಕ ದಳದ ಡಿಜಿಪಿಯಾಗಿಯೂ ಕಾರ್ಯ ನಿರ್ವಹಿಸಿದ್ದರು.

ಸೈಬರ್ ಠಾಣೆ ಮೇಲ್ದರ್ಜೆಗೆ: ಅಧಿಕಾರ ಸ್ವೀಕರಿಸಿದ ಬಳಿಕ ಅಲೋಕ್ ಮೋಹನ್ ಮಾತನಾಡಿ, ರಾಜ್ಯದಲ್ಲಿರುವ ಎಲ್ಲ ಸೈಬರ್ ಪೊಲೀಸ್ ಠಾಣೆಗಳನ್ನು ಮೇಲ್ದರ್ಜೆಗೇರಿಸಲಾಗುವುದು. ಇದರಿಂದ ಸೈಬರ್ ಅಪರಾಧ ಪ್ರಕರಣ ತಡೆಗಟ್ಟಲು ಸಾಧ್ಯವಾಗಲಿದೆ. ಜತೆಗೆ ಜಿಲ್ಲಾ ವ್ಯಾಪ್ತಿಯಲ್ಲೂ ಸೈಬರ್ ಪೊಲೀಸ್ ಠಾಣೆ ಹೆಚ್ಚಿಸಲು ಕ್ರಮ ಕೈಗೊಳ್ಳಲಾಗುವುದು’ ಎಂದರು.

ರಾಜ್ಯದಲ್ಲಿ ಅಪರಾಧ ಪ್ರಕರಣಗಳನ್ನು ತಗ್ಗಿಸುವುದು, ಸೈಬರ್ ಅಪರಾಧ ತಡೆಗಟ್ಟಲಾಗುವುದು. ಅಕ್ರಮಗಳಲ್ಲಿ ಭಾಗಿಯಾದ ಪೊಲೀಸ್ ಅಧಿಕಾರಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಸಿದರು.

‘ಠಾಣೆ ಹಂತದಲ್ಲಿ ದೂರು ಬಂದ ತಕ್ಷಣವೇ ಕ್ರಮ ಕೈಗೊಳ್ಳಬೇಕು. ಕೃತ್ಯ ನಡೆದ ಸ್ಥಳಕ್ಕೆ ಭೇಟಿ ಕೊಡಬೇಕು. ಉತ್ತಮ ಅಧಿಕಾರಿಗಳನ್ನು ಪ್ರಶಂಸೆ ಮಾಡುತ್ತೇನೆ. ಅದಕ್ಷ ಅಧಿಕಾರಿಗಳಿಗೆ ಶಿಕ್ಷೆ ಕಾದಿದೆ’ ಎಂದು ಅವರು ಎಚ್ಚರಿಸಿದರು.

‘ಸ್ವಚ್ಛ ಆಡಳಿತಕ್ಕೆ ಬದ್ಧನಿದ್ದೇನೆ. ಕಾನೂನು ಸುವ್ಯವಸ್ಥೆ ಹಾಳು ಮಾಡುವ ಕಿಡಿಗೇಡಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು’ ಎಂದು ಹೇಳಿದರು.

‘ಮಾರ್ಗ ಮಧ್ಯದಲ್ಲಿ ವಾಹನಗಳನ್ನು ತಡೆದು ತಪಾಸಣೆ ನಡೆಸುವುದಕ್ಕಿಂತ ಸಂಚಾರ ಸುಧಾರಣೆಗೆ ಆದ್ಯತೆ ನೀಡಲಾಗುವುದು. ಸಿಬ್ಬಂದಿಗಳ ಕೌಶಲ ಹೆಚ್ಚಿಸಲು ಆದ್ಯತೆ ನೀಡಲಾಗುವುದು’ ಎಂದರು.

ಪ್ರವೀಣ್ ಸೂದ್ (ಎಡಬದಿ) ಅವರಿಂದ ಡಾ.ಅಲೋಕ್ ಮೋಹನ್ ಅವರು ಅಧಿಕಾರ ಸ್ವೀಕರಿಸಿದರು

ಕರ್ನಾಟಕದಲ್ಲಿ 37 ವರ್ಷಗಳ ಕಾಲ ಸೇವೆ ಸಲ್ಲಿಸಿದ್ದೇನೆ.ಈ ಅವಧಿಯಲ್ಲಿ ರಾಜ್ಯದ ಜನರು ಉತ್ತಮ ಸಹಕಾರ ನೀಡಿದರು. ಅವರಿಗೆ ಚಿರಋಣಿ.
ಪ್ರವೀಣ್ ಸೂದ್, ನೂತನ ಸಿಬಿಐ ನಿರ್ದೇಶಕ

ಸೂದ್‌ಗೆ ಬೀಳ್ಕೊಡುಗೆ

ಬೆಂಗಳೂರು: ಸಿಬಿಐ ನೂತನ ನಿರ್ದೇಶಕರಾಗಿ ನೇಮಕಗೊಂಡಿರುವ ಪ್ರವೀಣ್ ಸೂದ್ ಅವರನ್ನು ರಾಜ್ಯ ಪೊಲೀಸ್ ಮಹಾನಿರ್ದೇಶಕ ಹುದ್ದೆಯಿಂದ ಸೋಮವಾರ ಬಿಡುಗಡೆ ಮಾಡಲಾಯಿತು. ಅವರಿಗೆ ಪೊಲೀಸ್ ಇಲಾಖೆಯಿಂದ ಕೋರಮಂಗಲದ ಕೆಎಸ್‌ಆರ್‌ಪಿ ಕವಾಯತು ಮೈದಾನದಲ್ಲಿ ಬೀಳ್ಕೊಡುಗೆ ನೀಡಲಾಯಿತು.

ಗೌರವ ವಂದನೆ ಸ್ವೀಕರಿಸಿ ಮಾತನಾಡಿದ ಸೂದ್, ‘ಪೊಲೀಸ್ ಇಲಾಖೆ ಬೇರೆ ಇಲಾಖೆಯಂತೆ ಅಲ್ಲ. ವಿಭಿನ್ನವಾದ ಇಲಾಖೆ. ಕಾನೂನು ಸುವ್ಯವಸ್ಥೆ ಕಾಪಾಡುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ರಾಜ್ಯ ಸರ್ಕಾರದಲ್ಲಿ ಹೆಚ್ಚಿನ ಮಹತ್ವವುಳ್ಳ ಇಲಾಖೆ ಇದಾಗಿದೆ’ ಎಂದು ಹೇಳಿದರು.

‘ಇಲಾಖೆ ಸಿಬ್ಬಂದಿ ರಸ್ತೆಯಲ್ಲೇ ನಿಂತು ಬಂದೋಬಸ್ತ್ ಕೆಲಸ ಮಾಡುತ್ತಾರೆ. ಕಾರಣಾಂತರಗಳಿಂದ ಸಿಬ್ಬಂದಿ ರಜೆ ತೆಗೆದುಕೊಳ್ಳುವುದು ಸಹ ಕಷ್ಟಸಾಧ್ಯವಾಗುತ್ತದೆ. ಪೊಲೀಸ್ ಸಿಬ್ಬಂದಿ ತಮ್ಮ ಕುಟುಂಬದ ಬಗ್ಗೆಯೂ ಯೋಚಿಸಬೇಕು’ ಎಂದು ಸಲಹೆ ನೀಡಿದರು.

‘ನನ್ನ ಸೇವಾವಧಿಯಲ್ಲಿ ಉತ್ತಮ ತರಬೇತಿ, ಉತ್ತಮ ಪೊಲೀಸ್ ಠಾಣೆ ನಿರ್ಮಾಣ, ಸಿಬ್ಬಂದಿಗಳ ವಸತಿ ಸೌಕರ್ಯಕ್ಕೆ ಹೆಚ್ಚಿನ ಆದ್ಯತೆ ನೀಡಿದ್ದೆ’ ಎಂದರು. ‘ಈ ಬಾರಿಯ ವಿಧಾನಸಭಾ ಚುನಾವಣೆ ವೇಳೆಯಲ್ಲಿ ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಪೊಲೀಸ್ ಅಧಿಕಾರಿ-ಸಿಬ್ಬಂದಿ ಉತ್ತಮ ಕರ್ತವ್ಯ ನಿರ್ವಹಿಸಿದ್ದಾರೆ. ಎಲ್ಲಿಯೂ ಮರು ಚುನಾವಣೆ ನಡೆದಿಲ್ಲ’ ಎಂದರು.

ಎಡಿಜಿಪಿ ಸೀಮಂತ್‌ಕುಮಾರ್ ಸಿಂಗ್ ಹಾಜರಿದ್ದರು.

ಎಡಿಜಿಪಿ ಕಚೇರಿಯಲ್ಲಿನ ತಾಮ್ರದ ಪೈಪ್ ಕಳವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ವಿವಿಧೆಡೆ ಎ.ಸಿಗಳಿಗೆ ಅಳವಡಿಸಿದ್ದ ತಾಮ್ರದ ಪೈಪ್‌ಗಳನ್ನು ಕಳವು ಮಾಡುತ್ತಿದ್ದ ಆರೋಪಿಗಳು, ಇದೀಗ ಎಂ.ಜಿ. ರಸ್ತೆಯ (ಅನಿಲ್ ಕುಂಬ್ಳೆ) ಎಡಿಜಿಪಿ ಕಚೇರಿಯಲ್ಲೇ ತಾಮ್ರದ ಪೈಪ್‌ಗಳನ್ನು ಕಳವು ಮಾಡಿದ್ದಾರೆ. ಈ ಸಂಬಂಧ ಕಬ್ಬನ್‌ಪಾರ್ಕ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವೈರ್‌ಲೆಸ್ ವಿಭಾಗದ ಪೊಲೀಸ್ ಇನ್‌ಸ್ಪೆಕ್ಟರ್ ವೆಂಕಟೇಶ್ ಎಚ್.ಜಿ ಅವರು ದೂರು ನೀಡಿದ್ದಾರೆ. ಎರಡು ತಾಮ್ರದ ಪೈಪ್‌ಗಳು ಮತ್ತು ಕಚೇರಿಯಲ್ಲಿದ್ದ ಸುಮಾರು ₹ 15 ಸಾವಿರ ನಗದು ಕಳವು ಮಾಡಲಾಗಿದೆ.

ಕಚೇರಿಯಲ್ಲಿ ಎರಡು ಎ.ಸಿ.ಗಳನ್ನು ಅಳವಡಿಸಲಾಗಿತ್ತು. ಅವುಗಳ ದುರಸ್ತಿಗೆ ಬಂದಿದ್ದ ಸಿಬ್ಬಂದಿ ಪರಿಶೀಲನೆ ನಡೆಸಿದಾಗ ತಾಮ್ರದ ಪೈಪ್ ಕಳವು ಮಾಡಿರುವುದು ಗೊತ್ತಾಗಿದೆ. ಈ ಹಿಂದೆ ಕಿದ್ವಾಯಿ ಸಂಸ್ಥೆಯಿಂದ ತಾಮ್ರದ ಪೈಪ್‌ಗಳನ್ನು ಕಳವು ಮಾಡಲಾಗಿತ್ತು.

ಸರಣಿ ಅಪಘಾತ: ಬೈಕ್ ಸವಾರ ಸಾವು

ಅಪರಾಧ ಸುದ್ದಿಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನೈಸ್ ರಸ್ತೆಯಲ್ಲಿ ನಡೆದ ಸರಣಿ ಅಪಘಾತದಲ್ಲಿ ದ್ವಿಚಕ್ರ ವಾಹನ ಸವಾರ, ಕೆಂಗೇರಿ ನಿವಾಸಿ ವೆಂಕಟಕೃಷ್ಣನ್ (47) ಮೃತಪಟ್ಟಿದ್ದಾರೆ. ಘಟನೆ ಸಂಬಂಧ ಎಲೆಕ್ಟ್ರಾನಿಕ್ ಸಿಟಿ ಸಂಚಾರ ಠಾಣೆ ವ್ಯಾಪ್ತಿಯಲ್ಲಿ ಪ್ರಕರಣ ದಾಖಲಾಗಿದೆ.

ವೆಂಕಟಕೃಷ್ಣನ್, ಸೋಮವಾರ ಬೆಳಿಗ್ಗೆ 7.30ರ ಸುಮಾರಿಗೆ ಕೆಂಗೇರಿಯಿಂದ ಎಲೆಕ್ಟ್ರಾನಿಕ್ ಸಿಟಿಗೆ ಬೈಕ್‌ನಲ್ಲಿ ತೆರಳುತ್ತಿದ್ದರು. ನೈಸ್ ರಸ್ತೆಯ ಬಸವಪುರ ಸೇತುವೆ ಬಳಿ ಸಾಗುವಾಗ ಹಿಂಬದಿಯಿಂದ ವೇಗವಾಗಿ ಬಂದ ಟಿಪ್ಪರ್, ಈಚರ್ ವಾಹನಕ್ಕೆ ಡಿಕ್ಕಿ ಹೊಡೆದಿತ್ತು. ಬಳಿಕ ಈಚರ್ ವಾಹನವು ಬೈಕ್‌ಗೆ ಗುದ್ದಿತ್ತು. ವೆಂಕಟಕೃಷ್ಣನ್ ಅವರು ಗಂಭೀರವಾಗಿ ಗಾಯಗೊಂಡಿದ್ದರು. ಆಸ್ಪತ್ರೆಗೆ ಕರೆದೊಯ್ಯುವ ಮಾರ್ಗ-ಮಧ್ಯದಲ್ಲಿ ಅವರು ಮೃತಪಟ್ಟರು ಎಂದು ಸಂಚಾರ ಠಾಣೆಯ ಪೊಲೀಸರು ಹೇಳಿದರು.

‘214 ಕೈದಿಗಳ ಅವಧಿಪೂರ್ವ ಬಿಡುಗಡೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ವಿವಿಧ ಕೇಂದ್ರ ಕಾರಾಗೃಹಗಳಲ್ಲಿ ಇರುವ ಜೀವಾವಧಿ ಶಿಕ್ಷೆಗೆ ಒಳಗಾದ 214 ಕೈದಿಗಳನ್ನು ಸನ್ನಡತೆ ಆಧಾರದಲ್ಲಿ ಅವಧಿಪೂರ್ವ ಬಿಡುಗಡೆ ಮಾಡಲು ಸರ್ಕಾರ ಆದೇಶಿಸಿದೆ.

ಈ ಕುರಿತಂತೆ ಕಾರಾಗೃಹ ಮತ್ತು ಸುಧಾರಣಾ ಸೇವೆ ಇಲಾಖೆಯ ಮಹಾನಿರ್ದೇಶಕರು ಆದೇಶ ಹೊರಡಿಸಿದ್ದು, ಒಟ್ಟು 234 ಕೈದಿಗಳ ಬಿಡುಗಡೆಗೆ ಶಿಫಾರಸು ಮಾಡಲಾಗಿತ್ತು. ಇವುಗಳಲ್ಲಿ ಅಪ್ರಾಪ್ತ ವಯಸ್ಸಿನ ಮಕ್ಕಳ, ಮಹಿಳೆಯರ ಮೇಲಿನ ಅಪರಾಧ ಪ್ರಕರಣಗಳಲ್ಲಿ ಭಾಗಿಯಾಗಿರುವ ಉಳಿದ 20 ಜೀವಾವಧಿ ಶಿಕ್ಷಾ ಬಂದಿಗಳ ಪ್ರಕರಣಗಳನ್ನು ತಿರಸ್ಕರಿಸಲಾಗಿದೆ.

ಹಳೆ ದ್ವೇಷ: ವ್ಯಕ್ತಿ ಕೊಲೆ

ಪ್ರಜಾವಾಣಿ ವಾರ್ತೆ

ಸಂತೋಷ್

ಮಾಗಡಿ: ಹಳೆಯ ದ್ವೇಷದ ಹಿನ್ನೆಲೆಯಲ್ಲಿ ವ್ಯಕ್ತಿಯೊಬ್ಬರನ್ನು ಕೊಂದು ಶವವನ್ನು ಗುಡೇಮಾರನಹಳ್ಳಿ ಕೆರೆ ಬಳಿ ಎಸೆಯಲಾಗಿದೆ.

ಬೆಂಗಳೂರಿನ ಭೋವಿಪಾಳ್ಯದ ನಂಜಪ್ಪ ಅವರ ಪುತ್ರ ಸಂತೋಷ್(34) ಕೊಲೆಯಾದ ವ್ಯಕ್ತಿ. ಬೆರಳಚ್ಚು ತಜ್ಞರು ಸ್ಥಳಕ್ಕೆ ಭೇಟಿ ಪರಿಶೀಲನೆ ನಡೆಸಿದ್ದಾರೆ. ಶವವನ್ನು ನೆಲಮಂಗಲ ಸರ್ಕಾರಿ ಆಸ್ಪತ್ರೆಯಲ್ಲಿ ಇಡಲಾಗಿದೆ.

ಕೌತುಕದ ನೋಟ...

ಕರ್ನಾಟಕ ಚಿತ್ರಕಲಾ ಪರಿಷತ್ತು ಆಯೋಜಿಸಿರುವ ‘ದೃಶ್ಯೋತ್ಸವ’ದಲ್ಲಿ ಯುವತಿಯರಿಬ್ಬರು ಕಲಾಕೃತಿಯೊಂದನ್ನು ಸೋಮವಾರ ಕುತೂಹಲದಿಂದ ವೀಕ್ಷಿಸಿದರು –ಪ್ರಜಾವಾಣಿ ಚಿತ್ರ

ತಂತ್ರಾಂಶ: ಸವಿವರ ಮನವಿಗೆ ನಿರ್ದೇಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಡೆತಡೆ ರಹಿತ ನೋಂದಣಿ ವ್ಯವಸ್ಥೆ ಒದಗಿಸುವ ಉದ್ದೇಶದ ಕಾವೇರಿ 2.0 ತಂತ್ರಾಂಶ ಜಾರಿಯಲ್ಲಿ ಕಂಡು ಬರುತ್ತಿರುವ ಸಮಸ್ಯೆಗಳ ಬಗ್ಗೆ ಸಂಬಂಧಿಸಿದ ಪ್ರಾಧಿಕಾರಕ್ಕೆ ವಿವರವಾದ ಮನವಿ ಸಲ್ಲಿಸುವಂತೆ ಹೈಕೋರ್ಟ್ ಅರ್ಜಿದಾರರಿಗೆ ಸೂಚಿಸಿದೆ.

ತಂತ್ರಾಂಶ ಜಾರಿಯಲ್ಲಿ ಉಂಟಾಗುತ್ತಿರುವ ಸಮಸ್ಯೆಯ ಬಗ್ಗೆ ಬಿ.ರಾಮಾಚಾರ್ ಮತ್ತಿತರರು ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಪಿ.ಬಿ.ವರಾಳೆ ನೇತೃತ್ವದ ವಿಭಾಗೀಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲರು, ‘ನೋಂದಣಿಗೆ ಹಾಜರುಪಡಿಸಿರುವ ದಸ್ತಾವೇಜನ್ನು ತಿರಸ್ಕರಿಸಲು ಅಥವಾ ರದ್ದುಪಡಿಸಲು ಅವಕಾಶ ನೀಡಲಾಗಿದೆ. ಆದರೆ, ನಿಯಮದ ಪ್ರಕಾರ ಆ ರೀತಿ ನೋಂದಣಿಗೆ ಸಲ್ಲಿಸಿದ ದಸ್ತಾವೇಜನ್ನು ತಿರಸ್ಕರಿಸಲು ಅವಕಾಶವಿಲ್ಲ’ ಎಂದರು.

ದಾಖಲೆಗಳನ್ನು ಪರಿಶೀಲಿಸಿದ ನ್ಯಾಯಪೀಠ, ’ಈ ವಿಷಯದ ಬಗ್ಗೆ ಅರ್ಜಿದಾರರು ಇದೇ 2ರಂದು ಸಂಬಂಧಿಸಿದ ಇಲಾಖೆಗೆ ಮನವಿ ಸಲ್ಲಿಸಿದ್ದಾರೆ. ಆದರೆ ಉತ್ತರಕ್ಕೂ ಕಾಯದೆ ಇದೇ 5ಕ್ಕೆ ಹೈಕೋರ್ಟ್ ಮೆಟ್ಟಿಲೇರಿದ್ದಾರೆ. ಇಲಾಖೆ ಅರ್ಜಿದಾರರ ಮನವಿಗೆ ಉತ್ತರಿಸಲು ಕಾಲಾವಕಾಶ ನೀಡದೆ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿರುವುದು ಸರಿಯಲ್ಲ’ ಎಂದು ಅತೃಪ್ತಿ ವ್ಯಕ್ತಪಡಿಸಿತು.

ಸರ್ಕಾರದ ಪರ ವಕೀಲರು, ‘ಕಾವೇರಿ 2.0 ತಂತ್ರಾಂಶ ಪಾರದರ್ಶಕ ವ್ಯವಸ್ಥೆಯಾಗಿದ್ದು, ರಾಜ್ಯದಾದ್ಯಂತ ಈಗಾಗಲೇ 152 ಉಪ ನೋಂದಣಾಧಿಕಾರಿಗಳ ಕಚೇರಿಗಳಲ್ಲಿ ಜಾರಿಯಾಗಿದೆ. ಇದಕ್ಕೆ ಸಾರ್ವಜನಿಕರಿಂದ ಉತ್ತಮ ಪ್ರತಿಕ್ರಿಯೆ ಬಂದಿದೆ’ ಎಂದು ಸರ್ಕಾರದ ಕ್ರಮವನ್ನು ಸಮರ್ಥಿಸಿಕೊಂಡರು.

ವಾದ ಪ್ರತಿವಾದ ಆಲಿಸಿದ ನ್ಯಾಯಪೀಠ, ಅರ್ಜಿ ಹಿಂಪಡೆಯಲು ಸೂಚಿಸಿತು. ಅಂತೆಯೇ, ‘ಸಂಬಂಧಿಸಿದ ಪ್ರಾಧಿಕಾರಕ್ಕೆ ವಿವರವಾದ ಮನವಿ ಸಲ್ಲಿಸಿ’ ಎಂದು ನಿರ್ದೇಶಿಸಿ ಅರ್ಜಿ ವಿಲೇವಾರಿ ಮಾಡಿತು.

ಮೂಲಗೇಣಿ ಮಾಲೀಕತ್ವ ಅಧಿನಿಯಮ

ಸಿಂಧುತ್ವ ಎತ್ತಿಹಿಡಿದ ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಗೇಣಿದಾರರಿಗೆ ಅನುಕೂಲ ಕಲ್ಪಿಸುವ ದಿಸೆಯಲ್ಲಿ ರಾಜ್ಯ ಸರ್ಕಾರ ಜಾರಿಗೆ ತಂದಿರುವ, ಕರ್ನಾಟಕದ ಮೂಲಗೇಣಿ ಅಥವಾ ಒಳಮೂಲಗೇಣಿ ಗೇಣಿದಾರರಿಗೆ ಮಾಲೀಕತ್ವ ಪ್ರದಾನ ಮಾಡುವ ಅಧಿನಿಯಮ-2011ರ ಸಿಂಧುತ್ವವನ್ನು ಹೈಕೋರ್ಟ್ ಎತ್ತಿ ಹಿಡಿದಿದೆ.

ಉಡುಪಿಯ ಅದಮಾರು ಮಠದ ಪೀಠಾಧಿಪತಿ ವಿಶ್ವಪ್ರಿಯ ತೀರ್ಥ ಸ್ವಾಮೀಜಿ ಹಾಗೂ ಮತ್ತಿತರರು ಸಲ್ಲಿಸಿದ್ದ ಪ್ರತ್ಯೇಕ ರಿಟ್ ಅರ್ಜಿಗಳ ವಿಚಾರಣೆ ನಡೆಸಿ ಕಾಯ್ದಿರಿಸಿದ್ದ ತೀರ್ಪನ್ನು ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಸೋಮವಾರ ಪ್ರಕಟಿಸಿತು.

ಪ್ರಕರಣವೇನು?: ಬ್ರಿಟಿಷರ ಆಡಳಿತದಲ್ಲಿ ಭೂಕಂದಾಯ ವಸೂಲಿ ಮಾಡುವ ಅಧಿಕಾರವನ್ನು ಸ್ಥಳೀಯವಾಗಿ ಶ್ರೀಮಂತರು, ಮಠ, ಮಂದಿರ, ಮಸೀದಿ ಮತ್ತು ಚರ್ಚುಗಳಿಗೆ ನೀಡಲಾಗಿತ್ತು. ಕಾಲಕ್ರಮೇಣ ಕಂದಾಯ ವಸೂಲಿ ಮಾಡಿ, ಮೇಲುಸ್ತುವಾರಿ ನೋಡಿಕೊಳ್ಳುವವರೇ ಭೂ ಮಾಲೀಕರು ಎನಿಸಿಕೊಂಡಿದ್ದರು. ಹೀಗಾಗಿ, ತಲೆತಲಾಂತರಗಳಿಂದ ಭೂಮಿಯನ್ನು ವಾಸ್ತವಿಕವಾಗಿ ಅನುಭವಿಸಿಕೊಂಡು ಬಂದವರೇ ಮೂಲಗೇಣಿದಾರರು ಎಂದು ಭೂಮಿಯ ಪ್ರಮಾಣ ಪತ್ರದಲ್ಲಿ ನಮೂದಿಸಲಾಗಿತ್ತು.

ಭೂಮಿ ಸ್ವಾಧೀನದಲ್ಲಿದ್ದರೂ ಒಡೆತನವಿಲ್ಲದ ಕಾರಣ ಅಂತಹ ಜಾಗವನ್ನು ಅಭಿವೃದ್ಧಿಪಡಿಸುವುದು ಅವರಿಗೆ ಕಷ್ಟವಾಗಿತ್ತು. ಬ್ಯಾಂಕಿನಿಂದ ಸಾಲ-ಸೌಲಭ್ಯ ದೊರೆಯುತ್ತಿರಲಿಲ್ಲ. ಇದನ್ನು ಮಾರಾಟ ಮಾಡುವ ಹಕ್ಕೂ ಮೂಲಗೇಣಿದಾರರಿಗೆ ಇಲ್ಲವಾಗಿತ್ತು. ಈ ನಿಟ್ಟಿನಲ್ಲಿ ಮೂಲಗೇಣಿದಾರರಿಗೆ ಜಮೀನಿನ ಪೂರ್ಣ ಮಾಲೀಕತ್ವ ಮತ್ತು ಮೂಲದಾರರಿಗೆ ನ್ಯಾಯಯುತ ಪರಿಹಾರ ನೀಡುವ ನಿಟ್ಟಿನಲ್ಲಿ ರಾಜ್ಯ ಸರ್ಕಾರ ಕಾಯ್ದೆ ರೂಪಿಸಿ ಜಾರಿಗೆ ತಂದಿತ್ತು. ಇದನ್ನು ಪ್ರಶ್ನಿಸಿ ಅರ್ಜಿದಾರರು ಹೈಕೋರ್ಟ್ ಮೆಟ್ಟಿಲೇರಿದ್ದರು.

ದಶಪಥ ಹೆದ್ದಾರಿಯಲ್ಲಿ ತಾತ್ಕಾಲಿಕ ತಿರುವು; ಅಪ್ಪಳಿಸುತ್ತಿದೆ ಸಾವು

• ಎಂ.ಎನ್.ಯೋಗೇಶ್

ಮಂಡ್ಯ: ಬೆಂಗಳೂರು– ಮೈಸೂರು ದಶಪಥದಲ್ಲಿ ತಾತ್ಕಾಲಿಕವಾಗಿ ನಿರ್ಮಿಸಿರುವ ಪ್ರವೇಶ– ನಿರ್ಗಮನ ಪಥ ಅವೈಜ್ಞಾನಿಕವಾಗಿದ್ದು ವಾಹನ ಸವಾರರ ಜೀವ ತೆಗೆಯುತ್ತಿದೆ. ಮುಖ್ಯ ಪಥದಿಂದ ಸರ್ವೀಸ್ ರಸ್ತೆಗೆ, ಸರ್ವೀಸ್ ರಸ್ತೆಯಿಂದ ಮುಖ್ಯ ಪಥಕ್ಕೆ ತಿರುವು ತೆಗೆದುಕೊಳ್ಳುವಾಗ ಅಪಘಾತಗಳು ಸಂಭವಿಸುತ್ತಿವೆ.

ಬೆಂಗಳೂರು–ಮೈಸೂರು ನಡುವಿನ ಸಂಪರ್ಕಕ್ಕೆ ಮಾತ್ರ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಆದ್ಯತೆ ನೀಡಿದ್ದು ನಡುವಿನ ನಗರ, ಪಟ್ಟಣಗಳ ಸಂಪರ್ಕವನ್ನು ನಿರ್ಲಕ್ಷಿಸಿದೆ. ಎಕ್ಸ್‌ಪ್ರೆಸ್‌ವೇ ಉದ್ಘಾಟನೆಯಾಗಿ 2 ತಿಂಗಳಾದರೂ ನಿಗದಿತ ಸ್ಥಳದಲ್ಲಿ ಅಧಿಕೃತವಾಗಿ ಆಗಮನ–ನಿರ್ಗಮನ ಪಥ ನಿರ್ಮಾಣವಾಗಿಲ್ಲ.

ನಗರ, ಪಟ್ಟಣ ಹಾಗೂ ಪ್ರಮುಖ ಹಳ್ಳಿಗಳ ಸಂಪರ್ಕಕ್ಕೆ ಸಣ್ಣ ಕಂಬಗಳನ್ನು ನೆಟ್ಟು ತಾತ್ಕಾಲಿಕವಾಗಿ ತಿರುವು ಪಡೆಯುವ ಪಥ ನಿರ್ಮಿಸಲಾಗಿದೆ. ಅದರಿಂದಲೇ ಅಪಘಾತಗಳು ಹೆಚ್ಚುತ್ತಿವೆ. 'ಪ್ರಾಧಿಕಾರದ ಅಧಿಕಾರಿಗಳು ಕ್ರಮ ಕೈಗೊಂಡಿಲ್ಲ' ಎಂದು ಸ್ಥಳೀಯರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಹೆದ್ದಾರಿಯಲ್ಲಿ ಅತೀ ವೇಗವಾಗಿ ಬರುವ ವಾಹನ ಚಾಲಕರಿಗೆ ಅಲ್ಲಿ ಸರ್ವೀಸ್ ರಸ್ತೆಯ ತಿರುವಿದೆ ಎಂಬುದೇ ತಿಳಿಯುವುದಿಲ್ಲ. ಸರ್ವೀಸ್ ರಸ್ತೆಯಿಂದ ಹೆದ್ದಾರಿಗೆ ವಾಹನಗಳು ಪ್ರವೇಶ ಪಡೆದ ಕೂಡಲೇ ಹೆದ್ದಾರಿಯಲ್ಲಿ ವೇಗವಾಗಿ ಬರುವ ವಾಹನಗಳು ಡಿಕ್ಕಿ ಹೊಡೆಯುತ್ತಿವೆ.

ಈಚೆಗೆ ಹಳೇಬೂದನೂರು ತಾತ್ಕಾಲಿಕ ನಿರ್ಗಮನ ಪಥದಲ್ಲಿ ಕಾರೊಂದು ತಿರುವು ಪಡೆಯುವಾಗ ಹಿಂದಿನಿಂದ ಬಂದ ಕಾರು ಡಿಕ್ಕಿ ಹೊಡೆದು ಜಖಂಗೊಂಡಿರುವುದು

ಹೆದ್ದಾರಿಯಿಂದ ಸರ್ವೀಸ್ ರಸ್ತೆಗೆ ತಿರುವು ತೆಗೆದುಕೊಳ್ಳುವಾಗಲೂ ಇದೇ ಅಪಾಯಕಾರಿ ಪರಿಸ್ಥಿತಿ ಇದೆ. ವೇಗವಾಗಿ ಬರುವಾಗ ತಕ್ಷಣ ಎಡಕ್ಕೆ ತಿರುಗಿಸಿಕೊಳ್ಳಲು ಬ್ರೇಕ್ ಹಾಕಿದಾಗ ಹಿಂದಿನಿಂದ ಬರುವ ವಾಹನಗಳು ಡಿಕ್ಕಿ ಹೊಡೆಯುತ್ತಿವೆ. ಜಿಲ್ಲಾ ವ್ಯಾಪ್ತಿಯಲ್ಲಿ ಶ್ರೀರಂಗಪಟ್ಟಣ, ತೂಬಿನಕೆರೆ, ಇಂಡುವಾಳು, ಹಳೇಬೂದನೂರು, ಅಮರಾವತಿ ಹೋಟೆಲ್, ಗೆಜ್ಜಲಗೆರೆ ಸೇರಿ 9 ಕಡೆ ಅಪಾಯಕಾರಿ ತಿರುವುಗಳಿವೆ.

ಕಳೆದೆರಡು ತಿಂಗಳಲ್ಲಿ ಮಂಡ್ಯ ಗ್ರಾಮಾಂತರ ಠಾಣೆಯ ವ್ಯಾಪ್ತಿಯಲ್ಲಿ ನಡೆದ 9 ಅಪಘಾತಗಳಲ್ಲಿ ಐವರು ಮೃತಪಟ್ಟಿದ್ದಾರೆ. ಸಾವು, ತೀವ್ರ ಗಾಯವಾದ ಪ್ರಕರಣಗಳಷ್ಟೇ ವರದಿಯಾಗುತ್ತಿವೆ.

'ಹಳೇಬೂದನೂರು, ಗೆಜ್ಜಲಗೆರೆ, ಕಾಮತ್ ಹೋಟೆಲ್ ಬಳಿಯ ತಿರುವಿನಲ್ಲಿ ಸರಣಿ ಅಪಘಾತಗಳು ಸಂಭವಿಸುತ್ತಿವೆ. ಹಲವು ಪ್ರಕರಣಗಳಲ್ಲಿ ವಾಹನಗಳು ನಜ್ಜುಗುಜ್ಜಾಗುತ್ತಿವೆ. ಹಲವು ಚಾಲಕರು ದೂರು ನೀಡದೇ ತೆರಳುತ್ತಿದ್ದಾರೆ' ಎಂದು ಹಳೇಬೂದನೂರು ಗ್ರಾಮದ ರಮೇಶ್ ಹೇಳಿದರು.

ತಾತ್ಕಾಲಿಕವಾಗಿ ಹಾಕಿರುವ ಫೈಬರ್ ಕಂಬಗಳು ಎರಡೂವರೆ ಅಡಿ ಎತ್ತರವಷ್ಟೇ ಇದ್ದು ಚಾಲಕರಿಗೆ ಸರಿಯಾಗಿ ಕಾಣಿಸುತ್ತಿಲ್ಲ. ಕೆಲವರು ಆ ಕಂಬಗಳಿಗೇ ವಾಹನ ಗುದ್ದಿಸಿಕೊಂಡು ತೆರಳುತ್ತಿದ್ದಾರೆ. ಹಲವೆಡೆ ಅವು ರಸ್ತೆಯಲ್ಲಿ ಬಿದ್ದಿವೆ. ಈ ತಾತ್ಕಾಲಿಕ ಪಥ ನಿರ್ವಹಣೆಗೆ ಸಿಬ್ಬಂದಿಯೂ ಇಲ್ಲ.

'ಗ್ರಾಮಸ್ಥರು, ಜನಪ್ರತಿನಿಧಿಗಳ ಒತ್ತಡಕ್ಕೆ ಮಣಿದು ಕೇಳಿದೆಡೆಯೆಲ್ಲಾ ತಾತ್ಕಾಲಿಕವಾಗಿ ಆಗಮನ– ನಿರ್ಗಮನ ಪಥ ನೀಡಲಾಗಿದೆ. ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಂಡು ಅಧಿಕೃತವಾಗಿ ಆಗಮನ– ನಿರ್ಗಮನ ಪಥ ನಿರ್ಮಾಣವಾಗುವವರೆಗೂ ಸಮಸ್ಯೆ ಹೀಗೇ ಇರಲಿದೆ. ಟೋಲ್ ಆರಂಭವಾದ ನಂತರ ಕೆಲವು ಪಥಗಳನ್ನು ಸ್ಥಗಿತಗೊಳಿಸಲಾಗುವುದು' ಎಂದು ಹೆದ್ದಾರಿ ಪ್ರಾಧಿಕಾರದ ಮೂಲಗಳು ತಿಳಿಸಿವೆ.

ಪ್ರತಿಕ್ರಿಯೆಗಾಗಿ ಹೆದ್ದಾರಿ ಪ್ರಾಧಿಕಾರದ ಯೋಜನಾ ನಿರ್ದೇಶಕ ಶ್ರೀಧರ್ ಅವರಿಗೆ ಕರೆ ಮಾಡಿದರೂ ಸಂಪರ್ಕ ಸಾಧ್ಯವಾಗಲಿಲ್ಲ.

12ನೇ ತರಗತಿ ಪೂರ್ಣಗೊಳಿಸಿದ ಮೊಮ್ಮಗ: ಸಿದ್ದರಾಮಯ್ಯ ಭಾಗಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಮೊಮ್ಮಗ ಧವನ್ 12ನೇ ತರಗತಿ ಪೂರ್ಣಗೊಳಿಸಿದ್ದಾರೆ. ಕಾಲೇಜಿನ ಬೀಳ್ಕೊಡುಗೆ ಸಮಾರಂಭಕ್ಕೆ ಸ್ವತಃ ತೆರಳಿದ ಸಿದ್ದರಾಮಯ್ಯ ಅವರು, ಮೊಮ್ಮಗನಿಗೆ ಶುಭ ಕೋರಿದ್ದಾರೆ.

'ನನ್ನ ಮೊಮ್ಮಗ ಕೆನಡಿಯನ್ ಇಂಟರ್‌ನ್ಯಾಷನಲ್ ಸ್ಕೂಲ್‌ನಲ್ಲಿ 12ನೇ ತರಗತಿ ಪೂರ್ಣಗೊಳಿಸಿದ್ದಾನೆ. ಪದವಿತರಗತಿಗೆತೆರಳುತ್ತಿರುವವಿದ್ಯಾರ್ಥಿಗಳಿಗಾಗಿ ಶಾಲೆ ಬೀಳ್ಕೊಡುಗೆ ಕಾರ್ಯಕ್ರಮ ಆಯೋಜಿಸಿತ್ತು. ಈ ಸಮಾರಂಭದಲ್ಲಿ ಭಾಗಿಯಾಗಿದ್ದಕ್ಕೆ ನನಗೆ ಸಂತೋಷವಾಗಿದೆ. 12ನೇ ತರಗತಿ ಪೂರ್ಣಗೊಳಿಸಿದ್ದಕ್ಕಾಗಿ ಅವನನ್ನು ಅಭಿನಂದಿಸಿದೆ' ಎಂದು ಸಿದ್ದರಾಮಯ್ಯ ಅವರು ಟ್ವೀಟ್ ಮಾಡಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮೊಮ್ಮಗ ಧವನ್ ಅವರಿಗೆ ಭಾನುವಾರ ಪ್ರಮಾಣ ಪತ್ರ ವಿತರಿಸಿದರು.

ಧವನ್ ಅವರು ದಿವಂಗತ ರಾಕೇಶ್ ಸಿದ್ದರಾಮಯ್ಯ ಅವರ ಮಗ. ಇತ್ತೀಚೆಗೆ ಅವರು ವರುಣದಲ್ಲಿ ತಮ್ಮ ತಾತನ ಪರವಾಗಿ ಪ್ರಚಾರದಲ್ಲಿ ಭಾಗವಹಿಸಿ ಗಮನಸೆಳೆದಿದ್ದರು.

ಜೂನ್ 12ರಿಂದ ಎಸ್ಸೆಸ್ಸೆಲ್ಸಿ ಪೂರಕ ಪರೀಕ್ಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಸಕ್ತ ಸಾಲಿನ ಎಸ್ಸೆಸ್ಸೆಲ್ಸಿ ಪೂರಕ ಪರೀಕ್ಷೆ ಜೂನ್ 12ರಿಂದ 19ರವರೆಗೆ ನಡೆಯಲಿದೆ.

ಜೂನ್ 12ರಂದು ಪ್ರಥಮ ಭಾಷಾ ವಿಷಯಗಳಿಗೆ (ಕನ್ನಡ, ಇಂಗ್ಲಿಷ್, ಹಿಂದಿ) ಮತ್ತು 13ರಂದು ವಿಜ್ಞಾನ, ರಾಜ್ಯಶಾಸ್ತ್ರ, 14ರಂದು ದ್ವಿತೀಯ ಭಾಷೆ (ಕನ್ನಡ, ಇಂಗ್ಲಿಷ್), 15ರಂದು ಸಮಾಜವಿಜ್ಞಾನ, 16ರಂದು ತೃತೀಯ ಭಾಷೆ (ಹಿಂದಿ, ಕನ್ನಡ, ಇಂಗ್ಲಿಷ್) ಮತ್ತು 17ರಂದು ಗಣಿತ, 19ರಂದು ಅರ್ಥಶಾಸ್ತ್ರ ಪರೀಕ್ಷೆಗಳು ನಡೆಯಲಿವೆ.

ಎಲ್ಲ ವಿಷಯಗಳ ಪರೀಕ್ಷೆಗಳು ಬೆಳಿಗ್ಗೆ 10.30 ರಿಂದ ಮಧ್ಯಾಹ್ನ 1.45ರ ವರೆಗೆ ನಡೆಯಲಿವೆ.

ಶೋಭಾಗೆ 'ಕಸಾಪ ದತ್ತಿ ಪ್ರಶಸ್ತಿ'

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ನೀಡುವ 'ಪಂಕಜಶ್ರೀ ಸಾಹಿತ್ಯ ದತ್ತಿ ಪ್ರಶಸ್ತಿ'ಗೆ ಲೇಖಕಿ ಶೋಭಾ ಎಚ್.ಜಿ. ಆಯ್ಕೆಯಾಗಿದ್ದಾರೆ.

ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ನೇತೃತ್ವದ ಸಮಿತಿ ಈ ಆಯ್ಕೆ ಮಾಡಿದೆ. ಪ್ರಶಸ್ತಿಯು ₹ 10 ಸಾವಿರ ನಗದು ಹಾಗೂ ಸ್ಮರಣಿಕೆ ಒಳಗೊಂಡಿದೆ.

ಶೋಭಾ ಅವರು ಮಾಧ್ಯಮ ಮತ್ತು ಸಾಹಿತ್ಯ ಕ್ಷೇತ್ರಕ್ಕೆ ನೀಡಿದ ಕೊಡುಗೆಯನ್ನು ಪರಿಗಣಿಸಿ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ ಎಂದು ಪರಿಷತ್ತು ತಿಳಿಸಿದೆ.

'ಮರೆತ ದಾರಿ' ಪುಸ್ತಕವನ್ನು ಅಗ್ನಿ ಶ್ರೀಧರ್ ಬಿಡುಗಡೆ ಮಾಡಿದರು. ಚಿಂತಕ ಪ್ರೊ. ಮಹದೇವ ಭರಣಿ, ಲೇಖಕ ಲಕ್ಷ್ಮೀಪತಿ ಕೋಲಾರ, ಸಾಹಿತಿ ಚಂದ್ರಶೇಖರ ನಂಗಲಿ, ಚೆ. ಬಾಲು ಇದ್ದರು –ಪ್ರಜಾವಾಣಿ ಚಿತ್ರ

ಟ್ರ್ಯಾಂಪೊಲೈನ್: ಆದರ್ಶ್‌ಗೆ ಪ್ರಶಸ್ತಿ

ಟ್ರ್ಯಾಂಪೊಲೈನ್ ಸ್ಪರ್ಧೆಯಲ್ಲಿ ಮೊದಲ ಮೂರು ಸ್ಥಾನ ಗಳಿಸಿದ ಆದರ್ಶ್ ಬಿಹೋರ್, ರಾಹಿ ಪಕ್ಕೆ ಮತ್ತು ಆಯುಷ್ ಮುಳೆ. ಭಾರತ ಜಿಮ್ನಾಸ್ಟಿಕ್ ಫೆಡರೇಷನ್‌ನ ಖಜಾಂಚಿ ಕೌಶಿಕ್ ಬಿಡಿವಾಲಾ (ಎಡದಿಂದ ಎರಡನೆಯವರು) ಬಹುಮಾನ ವಿತರಿಸಿದರು.

ಬೆಂಗಳೂರು: ಮುಂಬೈನ ಆದರ್ಶ್ ಬಿಹೋರ್ ಅವರು ಇಲ್ಲಿ ನಡೆದ ರಾಷ್ಟ್ರಮಟ್ಟದ ಟ್ರ್ಯಾಂಪೊಲೈನ್ ಸ್ಪರ್ಧೆಯಲ್ಲಿ ಅಗ್ರಸ್ಥಾನ ಗಳಿಸಿದರು.

ಸ್ಕೈಜಂಪ್‌ನ ಭಾಗವಾದ ಈ ಸ್ಪರ್ಧೆಯಲ್ಲಿ ಮುಂಬೈನವರೇ ಆದ ರಾಹಿ ಪಕ್ಕೆ ಎರಡನೇ ಸ್ಥಾನ ಗಳಿಸಿದರೆ, ಔರಂಗಾಬಾದ್‌ನ ಆಯುಷ್ ಮುಳೆ ಮೂರನೇ ಸ್ಥಾನ ಪಡೆದರು.

ಭಾರತ ಜಿಮ್ನಾಸ್ಟಿಕ್ ಫೆಡರೇಷನ್‌ನ ಖಜಾಂಚಿ ಕೌಶಿಕ್ ಬಿಡಿವಾಲಾ ಅವರು ವಿಜೇತರಿಗೆ ಬಹುಮಾನ ವಿತರಿಸಿದರು.

ಅಜಯ್ ಸಂಜಯ್ ಮುಲ್ಯ, ಅಜಯ್ ವಿಜಯ್ ಪವುಕ್ಕರ್, ತ್ರಿಶೂಲ್ ಗೌಡ, ಆದರ್ಶ್ ಅನಿಲ್, ರಾಹಿ ನಿಖಿಲ್, ಸೇಜಲ್ ಸುಹಾಸ್ ಜಾಧವ್, ಅದಿತಿ ಚವ್ಹಾನ್, ಅಭಿಜಿತ್ ಸುರೇಂದ್ರ ನಿಂಬಾಳ್ಕರ್, ಶಾಹಿ ಯಾಸಿನ್, ಸೂರಜ್, ಅನಿಲ್ ರಾಜೇಂದ್ರನ್, ಅನ್ವಿತ್ ಸಚಿನ್ ಸ್ಪರ್ಧೆಯಲ್ಲಿ ಪಾಲ್ಗೊಂಡಿದ್ದರು.

'ಕನ್ನಡ ಸಂಸ್ಕೃತದ ಮಗಳಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ದ್ರಾವಿಡ ಭಾಷೆಗಳು ಸಂಸ್ಕೃತದಿಂದ ಬಂದಿಲ್ಲ. ಕನ್ನಡ ಸಂಸ್ಕೃತದ ಮಗಳೂ ಅಲ್ಲ' ಎಂದು ಸಾಹಿತಿ ಪ್ರೊ. ಚಂದ್ರಶೇಖರ ನಂಗಲಿ ಪ್ರತಿಪಾದಿಸಿದರು.

ದ್ರಾವಿಡ ಪ್ರಕಾಶನ ಅಕ್ಷರ ವಿಭಾಗ ಪ್ರಕಟಿಸಿದ ಲಕ್ಷ್ಮೀಪತಿ ಕೋಲಾರ ಅವರ 'ಮರೆತ ದಾರಿ' ಪುಸ್ತಕ ಬಿಡುಗಡೆ ಹಾಗೂ ನಾಟಕ ಪ್ರದರ್ಶನ ಉದ್ಘಾಟಿಸಿ ಅವರು ಮಾತನಾಡಿದರು.

'ಕನ್ನಡವು ಸಂಸ್ಕೃತದಿಂದ ಬಂದಿದಲ್ಲ ಎಂಬುದನ್ನು ತಿಳಿಸಲು ಕ್ರೈಸ್ತ ಮಿಷನರಿಗಳೇ ಬರಬೇಕಾಯಿತು. ದುಡಿಯುವ ವರ್ಗ ಮತ್ತು ಆಳುವ ವರ್ಗ ಇತಿಹಾಸದ ಉದ್ದಕ್ಕೂ ಇದೆ. ಇತಿಹಾಸವನ್ನು ಮೇಲಿನಿಂದ ನೋಡುತ್ತಿದ್ದೇವೆ. ಕೆಳ ವರ್ಗದಿಂದಲೂ ನೋಡುವುದನ್ನು ರೂಢಿಸಿಕೊಳ್ಳುವ ಅಗತ್ಯವಿದೆ. ಈಗ ಬಿಡುಗಡೆಯಾಗುತ್ತಿರುವ ಮರೆತ ದಾರಿ ಕೃತಿಯು ಕನ್ನಡ ರಂಗಭೂಮಿಗೆ ಹೆಮ್ಮೆ ತರಲಿದೆ' ಎಂದರು.

ಚಿಂತಕ ಅಗ್ನಿ ಶ್ರೀಧರ್ ಮಾತನಾಡಿ, 'ಸಮೂಹ ಮಾಧ್ಯಮಗಳು ಸಮಾಜಕ್ಕೆ ವಿಷ ಉಣಿಸುತ್ತಿವೆ. ಇದನ್ನು ಕೊನೆಗಾಣಿಸಬೇಕು' ಎಂದು ಹೇಳಿದರು.

ಸುಗ್ರೀವಾಜ್ಞೆ: ಎಎಪಿಯಿಂದ 'ಮಹಾ ರ‍್ಯಾಲಿ'

ನವದೆಹಲಿ (ಪಿಟಿಐ): 'ಸುಪ್ರೀಂ ಕೋರ್ಟ್ ತೀರ್ಪನ್ನೂ ನಿರ್ಲಕ್ಷಿಸಿ ಲೆಫ್ಟಿನೆಂಟ್ ಗವರ್ನರ್‌ಗೆ ಆಡಳಿತಾತ್ಮಕ ಸೇವೆಗಳ ನಿಯಂತ್ರಣವನ್ನು ನೀಡುವ ಸಂಬಂಧ ಕೇಂದ್ರ ಸರ್ಕಾರ ಹೊರಡಿಸಿರುವ 'ಕರಾಳ ಸುಗ್ರೀವಾಜ್ಞೆ'ಯ ವಿರುದ್ಧ ಜೂನ್ 11ರಂದು ರಾಮಲೀಲಾ ಮೈದಾನದಲ್ಲಿ 'ಮಹಾ ರ‍್ಯಾಲಿ' ಆಯೋಜಿಸಲು ಎಎಪಿ ನಿರ್ಧರಿಸಿದೆ.

ತೀರ್ಮಾನ ಕೈಗೊಳ್ಳದ ಕಾಂಗ್ರೆಸ್: ಎಎಪಿ ಆಯೋಜಿಸಲು ನಿರ್ಧರಿಸಿರುವ 'ಮಹಾ ರ‍್ಯಾಲಿ'ಗೆ ಬೆಂಬಲ ಸೂಚಿಸುವ ಸಂಬಂಧ ಇನ್ನೂ ಯಾವುದೇ ತೀರ್ಮಾನ ಕೈಗೊಂಡಿಲ್ಲ ಎಂದು ಕಾಂಗ್ರೆಸ್ ಹೇಳಿದೆ.

ಪಂದ್ಯ ವೀಕ್ಷಿಸಲು ಅವಕಾಶ ಕಲ್ಪಿಸಿದ ಮಣಿಪಾಲ್ ಹಾಸ್ಪಿಟಲ್ಸ್

ಕ್ಯಾನ್ಸರ್ ಗೆದ್ದವರಿಗೆ ಚೈತನ್ಯ ತಂದ ಕ್ರಿಕೆಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕ್ಯಾನ್ಸರ್‌ನಿಂದ ಗುಣಮುಖ ಹೊಂದಿದ 20 ಮಂದಿಗೆ ನಗರದ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ಮತ್ತು ಗುಜರಾತ್ ಟೈಟನ್ಸ್ ನಡುವಣ ಪಂದ್ಯ ಚೈತನ್ಯ ಮೂಡಿಸಿತು.

ಆರ್‌ಸಿಬಿ ತಂಡಕ್ಕೆ ಅಧಿಕೃತ 'ಆರೋಗ್ಯ ಪಾಲುದಾರ'ರಾಗಿರುವ ಮಣಿಪಾಲ್ ಹಾಸ್ಪಿಟಲ್ಸ್ ಈ ಅವಕಾಶ ಒದಗಿಸಿತ್ತು.

ಕ್ರೀಡಾಂಗಣ ಪ್ರವೇಶಿಸುವ ಮುನ್ನ ಅವರ ಆರೋಗ್ಯ ಸ್ಥಿತಿಗಳನ್ನು ಪರೀಕ್ಷಿಸಲಾಗಿತ್ತು. ಅಗತ್ಯ ಇರುವ ಎಲ್ಲ ಔಷಧಗಳನ್ನು ಸಹ ಒದಗಿಸಲಾಗಿತ್ತು. ಕ್ರೀಡಾಂಗಣದ ಒಳಗೆ ವೈದ್ಯಕೀಯ ಬೂತ್‌ಗಳನ್ನು ಸ್ಥಾಪಿಸಿ, ಐವರು ಸ್ವಯಂಸೇವಕರ ತಂಡವನ್ನು ಸಹ ನಿಯೋಜಿಸಲಾಗಿತ್ತು.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಕ್ರಿಕೆಟ್ ಪಂದ್ಯ ವೀಕ್ಷಿಸಿದ ಕ್ಯಾನ್ಸರ್ ಗೆದ್ದವರು.

ಜತೆಗೆ, ಕ್ರೀಡಾಂಗಣದ ಸ್ಟ್ಯಾಂಡ್‌ನಲ್ಲಿ ಇವರ ಯೋಗಕ್ಷೇಮಕ್ಕಾಗಿ ಮೂರು ದಾದಿಯರನ್ನು ನೇಮಿಸಲಾಗಿತ್ತು. ಇವರು ಸತತವಾಗಿ ಕ್ಯಾನ್ಸರ್‌ನಿಂದ ಬದುಕುಳಿದವರ ಯೋಗ ಕ್ಷೇಮವನ್ನು ಗಮನಿಸುತ್ತಿದ್ದರು. ಹೆಚ್ಚುವರಿಯಾಗಿ ವೈದ್ಯರೊಬ್ಬರು ಲಭ್ಯವಾಗುವಂತೆ ವ್ಯವಸ್ಥೆ ಮಾಡಲಾಗಿತ್ತು. ಅವರು ಪ್ರತಿ ಗಂಟೆಗೊಮ್ಮೆ ಸಂದರ್ಶಿಸಿ ಇವರ ಸ್ಥಿತಿಯನ್ನು ಪರಿಶೀಲಿಸುತ್ತಿದ್ದರು. ಗುರುತಿನ ಉದ್ದೇಶಕ್ಕಾಗಿ ಪ್ರತಿಯೊಬ್ಬರಿಗೆ ರಿಸ್ಟ್ ಬ್ಯಾಂಡ್ ಒಂದನ್ನು ನೀಡಲಾಗಿತ್ತು.

'ನಾನು ಮೊದಲ ಬಾರಿ ಕ್ರೀಡಾಂಗಣದಲ್ಲಿ ಕ್ರಿಕೆಟ್ ಪಂದ್ಯ ವೀಕ್ಷಿಸಿದೆ. ಮಣಿಪಾಲ್ ಆಸ್ಪತ್ರೆ ಇಂತಹ ಅವಕಾಶ ಒದಗಿಸಿತ್ತು. ಬಹಳ ಸಂತಸವಾಯಿತು. ಆರ್‌ಸಿಬಿ ಸೋತರೂ ಪಂದ್ಯವು ಖುಷಿ ನೀಡಿತು. ಬದುಕಿನಲ್ಲಿ ಹೊಸತನ ಮೂಡಿತು' ಎಂದು ನಗರದ ಅನಸೂಯಾ ಅವರು ಹರ್ಷ ವ್ಯಕ್ತಪಡಿಸಿದರು.

ನೆರವು: ಮಣಿಪಾಲ್ ಹಾಸ್ಪಿಟಲ್ಸ್‌ನ 'ಮುಖ್ಯ ಕಾರ್ಯಾಚರಣೆ' ಅಧಿಕಾರಿ ಕಾರ್ತಿಕ್ ರಾಜ್‌ಗೋಪಾಲ್ ಮಾತನಾಡಿ, 'ಕ್ಯಾನ್ಸರ್‌ನಿಂದ ಬದುಕುಳಿದವರು ಭಯದಿಂದ ಹೊರಬಂದು ತಮ್ಮ ಜೀವನವನ್ನು ಆನಂದಿಸಬೇಕು ಎನ್ನುವುದು ನಮ್ಮ ಆಶಯ. ಇದಕ್ಕೆ ಪೂರಕವಾದ ವಾತಾವರಣ ಕಲ್ಪಿಸುವ ಪ್ರಯತ್ನಿಸಿದ್ದೇವೆ. ಆರೋಗ್ಯ ಸೇವೆಗಳನ್ನು ಮೀರಿ ಸಾಗುವ ಪ್ರಯತ್ನವನ್ನು ಮಣಿಪಾಲ್ ಆಸ್ಪತ್ರೆ ಯಾವಾಗಲೂ ಕೈಗೊಳ್ಳುತ್ತದೆ' ಎಂದು ತಿಳಿಸಿದ್ದಾರೆ.

ಪ್ರಮಾಣ ವಚನ ನಂತರ ಉತ್ಸಾಹದಿಂದ ಫೋಟೊಶೂಟ್‌ನಲ್ಲಿ ಭಾಗವಹಿಸಿದ ನೂತನ ಶಾಸಕರು

ವಿಪಕ್ಷ ಸದಸ್ಯರ ಜತೆ ಡಿಸಿಎಂ ಕುಶಲೋಪರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಸಭೆಯ ಒಳಗೆ ನೂತನ ಶಾಸಕರ ಪ್ರಮಾಣವಚನ ನಡೆಯುತ್ತಿದ್ದರೆ, ಹೊರಗೆ ಮೊಗಸಾಲೆಯಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸಂಭ್ರಮದಿಂದ ಓಡಾಡುತ್ತಿದ್ದರು. ವಿರೋಧ ಪಕ್ಷದ ಮೊಗಸಾಲೆಗೆ ಬಂದ ಅವರು, ಬಿಜೆಪಿ ಶಾಸಕರ ಜತೆ ಕುಶಲೋಪರಿ ನಡೆಸಿದರು.

ಪ್ರಮಾಣವಚನದ ಬಳಿಕ ವಿರೋಧ ಪಕ್ಷದ ಮೊಗಸಾಲೆಗೆ ಬಂದ ಶಿವಕುಮಾರ್, ನಿಕಟಪೂರ್ವ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮತ್ತು ಶಾಸಕ ಆರ್. ಅಶೋಕ ಅವರನ್ನು ಭೇಟಿ ಮಾಡಿದರು. ಬೊಮ್ಮಾಯಿ ಮತ್ತು ಅಶೋಕ, ಶಿವಕುಮಾರ್ ಅವರನ್ನು ಅಭಿನಂದಿಸಿದರು. ಮೂವರೂ ಒಟ್ಟಾಗಿ ಫೋಟೊ ತೆಗೆಸಿಕೊಂಡರು.

ನಂತರ ಕಲ್ಯಾಣ ರಾಜ್ಯ ಪ್ರಗತಿ ಪಕ್ಷದ ಶಾಸಕ ಗಾಲಿ ಜನಾರ್ದನ ರೆಡ್ಡಿ ಎದುರಾದರು. ಅವರೊಂದಿಗೂ ಶಿವಕುಮಾರ್ ಫೋಟೊಗೆ ಪೋಸ್ ನೀಡಿದರು.

ಶಾಸಕನಾಗಿ ಪ್ರಮಾಣ ವಚನ ಸ್ವೀಕರಿಸಿದ ಸಿದ್ದರಾಮಯ್ಯ

ರಾಜಕೀಯವಾಗಿ ಪರಸ್ಪರ ಎದುರಾಳಿಗಳಂತಾಗಿರುವ ಬಿಜೆಪಿ ಶಾಸಕ ರಮೇಶ ಜಾರಕಿಹೊಳಿ ಮತ್ತು ಶಿವಕುಮಾರ್ ಕೂಡ ವಿಧಾನ ಸಭೆಯಮೊಗಸಾಲೆಯಲ್ಲಿಮುಖಾಮುಖಿ ಯಾದರು. 'ಹೇಗಿದ್ದೀರಿ?' ಎಂದು ಉಪ ಮುಖ್ಯಮಂತ್ರಿ ಕೇಳಿದರು. 'ಚೆನ್ನಾಗಿದ್ದೇನೆ' ಎಂದು ರಮೇಶ ಉತ್ತರಿಸಿದರು.

ಫೋಟೊ ಶೂಟ್: ನೂತನ ಶಾಸಕರ ಪರಿಚಯ ಪುಸ್ತಕ ಪ್ರಕಟಿಸುವುದಕ್ಕಾಗಿ ವಿಧಾನಸಭಾ ಸಚಿವಾಲಯದಿಂದ ಫೋಟೊ ಶೂಟ್ ವ್ಯವಸ್ಥೆ ಮಾಡಲಾಗಿತ್ತು. ಪ್ರಮಾಣವಚನ ಸ್ವೀಕರಿಸಿ ಸದನದಿಂದ ಹೊರಬಂದ ಶಾಸಕರು ಸರದಿಯಲ್ಲಿ ಫೋಟೊಗೆ ಪೋಸ್ ನೀಡಿದರು.

ಹಳೆಯ ಗೆಳೆಯರೊಂದಿಗೆ ಮಾತು: ಪಕ್ಷಾಂತರ ಮಾಡಿ ಗೆದ್ದು ಬಂದ ಹಲವರು ಹಿಂದೆ ಇದ್ದ ಪಕ್ಷದ ಶಾಸಕರನ್ನು ಭೇಟಿ ಮಾಡಿ ಮಾತುಕತೆಯಲ್ಲಿ ನಿರತರಾಗಿದ್ದರು.

ಬಿಜೆಪಿಯಿಂದ ಕಾಂಗ್ರೆಸ್‌ಗೆ ಹೋಗಿ ಚಿಕ್ಕಮಗಳೂರು ಕ್ಷೇತ್ರದಲ್ಲಿ ಸಿ.ಟಿ. ಅವರನ್ನು ಸೋಲಿಸಿರುವ ಎಚ್.ಡಿ. ತಮ್ಮಯ್ಯ, ಬಿಜೆಪಿ ಶಾಸಕ ಆರ್. ಅಶೋಕ ಮತ್ತಿತರರ ಜತೆ ಉಪಾಹಾರ ಗೃಹದಲ್ಲಿ ಮಾತುಕತೆಯಲ್ಲಿ ನಿರತರಾಗಿದ್ದರು. ಬಿಜೆಪಿ ತೊರೆದು ಜೆಡಿಎಸ್‌ನಿಂದ ಶಾಸಕರಾಗಿರುವ ಎ. ಮಂಜು, ಆಡಳಿತ ಪಕ್ಷದ ಮೊಗಸಾಲೆಗೆ ಹೋಗಿ ಹಳೆಯ ಗೆಳೆಯರೊಂದಿಗೆ ಕುಶಲೋಪರಿಯಲ್ಲಿ ತೊಡಗಿದ್ದರು.

ಮತ್ತೆ ಮೆಟ್ಟಿಲುಗಳಿಗೆ ಶಿರಬಾಗಿದ ಡಿಸಿಎಂ ಶಿವಕುಮಾರ್

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಶುಕ್ರವಾರ ಪ್ರಮಾಣವಚನ ಸ್ವೀಕಾರದ ಬಳಿಕ ವಿಧಾನಸೌಧ ಪ್ರವೇಶಿಸುವ ಮುನ್ನ ಮೆಟ್ಟಿಲುಗಳಿಗೆ ಶಿರಬಾಗಿ ನಮಸ್ಕರಿಸಿದ್ದರು. ಸೋಮವಾರವೂ ಶಾಸಕರಾಗಿ ಪ್ರಮಾಣವಚನ ಸ್ವೀಕಾರಕ್ಕೆ ಬಂದಾಗ ವಿಧಾನಸೌಧದ ಮೆಟ್ಟಿಲುಗಳಿಗೆ ನಮಸ್ಕರಿಸಿಯೇ ಒಳಕ್ಕೆ ಪ್ರವೇಶಿಸಿದರು.

ಜಯನಗರ ಶಾಸಕ ಸಿ.ಕೆ. ರಾಮಮೂರ್ತಿ ಸೇರಿದಂತೆ ಹಲವರು ವಿಧಾನಸೌಧದ ಮೆಟ್ಟಿಲುಗಳಿಗೆ ನಮಸ್ಕರಿಸಿ ಒಳ ಪ್ರವೇಶಿಸಿದರು.

ಗೋಮೂತ್ರ ಸಿಂಪಡಣೆ: ಶಾಸಕರು ಪ್ರಮಾಣವಚನ ಸ್ವೀಕಾರಕ್ಕೆ ಬರುವ ಸಮಯದಲ್ಲೇ ವಿಧಾನಸೌಧಕ್ಕೆ ಬಂದ ಕಾಂಗ್ರೆಸ್ ಕಾರ್ಯಕರ್ತರು ಆಡಳಿತದ ಶಕ್ತಿ ಕೇಂದ್ರದ ಮೆಟ್ಟಿಲುಗಳಿಗೆ ಗೋಮೂತ್ರ ಸಿಂಪಡಿಸಿದರು.

ಸೋಲು–ಗೆಲುವಿನ ಲೆಕ್ಕಾಚಾರ

ವಿಧಾನಸಭೆಯ ಆಡಳಿತ ಪಕ್ಷ ಮತ್ತು ವಿರೋಧ ಪಕ್ಷಗಳ ಮೊಗಸಾಲೆಗಳಲ್ಲಿ ಸೋಮವಾರ ಇಡೀ ದಿನ ಚುನಾವಣೆಯ ಸೋಲು–ಗೆಲುವಿನ ಲೆಕ್ಕಾಚಾರ ಜೋರಾಗಿತ್ತು. ಭರ್ಜರಿ ಅಂತರದಿಂದ ಗೆಲುವು ಸಾಧಿಸಿದ್ದು, ಕೂದಲೆಳೆಯ ಅಂತರದಿಂದ ಸೋಲು ತಪ್ಪಿಸಿಕೊಂಡಿದ್ದು ಹೀಗೆ ಹಲವು ವಿಚಾರಗಳ ಕುರಿತು ಶಾಸಕರು ಚರ್ಚೆಯಲ್ಲಿ ಮಗ್ನರಾಗಿದ್ದರು.

ಪಕ್ಷಾಂತರ ಮಾಡಿದರೂ ಗೆದ್ದು ಬಂದವರು, 'ಹಿಂದೆ ಇದ್ದ ಪಕ್ಷ ನನಗೆ ಟಿಕೆಟ್ ಕೊಟ್ಟಿದ್ದರೆ ನನ್ನ ಜತೆ ಕೆಲವರನ್ನು ಗೆಲ್ಲಿಸಿ ತರುತ್ತಿದ್ದೆ' ಎಂದು ಬೀಗುತ್ತಿದ್ದರು. ಹಿಂದೆ ತಮ್ಮೊಂದಿಗೆ ಇದ್ದ ಕೆಲವರು ಈ ಚುನಾವಣೆಯಲ್ಲಿ ಸೋತಿದ್ದಕ್ಕೆ ಶಾಸಕರು ಬೇಸರ ವ್ಯಕ್ತಪಡಿಸುತ್ತಿದ್ದುದೂ ಕಂಡುಬಂತು.

'ದವಾಖಾನೆಗೆ ಅಂತ ಬೋರ್ಡ್ ಹಾಕಿ'

ಪ್ರಮಾಣ ವಚನಕ್ಕೆ ತಮ್ಮ ಹೆಸರು ಕರೆಯದಿರುವ ಬಗ್ಗೆ ಕಿರಿ ಕಿರಿಗೊಂಡ ಬಿಜೆಪಿಯ ಬಸನಗೌಡ ಪಾಟೀಲ ಯತ್ನಾಳ, 'ನೀವು ಸರಿಯಾಗಿ ಕರೆಯುತ್ತಿಲ್ಲ. ಇಂಗ್ಲಿಷ್ ವರ್ಣಮಾಲೆ ಅನ್ವಯ ಕರೆಯುವುದಾಗಿ ಹೇಳಿ, ಯಾರ್‍ಯಾರನ್ನೋ ಕರೆಯುತ್ತಿದ್ದೀ-ರಿ' ಎಂದು ಆಕ್ಷೇಪ ವ್ಯಕ್ತಪಡಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ದೇಶಪಾಂಡೆ, 'ಕೆಲವರು ಆಸ್ಪತ್ರೆಗೆ ಹೋಗಬೇಕು ಎಂದು ಕೇಳಿಕೊಂಡರು. ಆದ್ದರಿಂದ ಅಂತಹ ಕೆಲವರಿಗೆ ಮೊದಲು ಕರೆಯಬೇಕಾಯಿತು. ನಾನ್ ಏನ್ ಮಾಡ್ಲಿ' ಎಂದು ಪ್ರಶ್ನಿಸಿದರು.

'ದವಾಖಾನೆಗೆ ಅಂತ ಬೋರ್ಡ್ ಹಾಕಿಸಿಬಿಡಿ. ಅವರು ದವಾಖಾನೆಗೆ ಹೋಗ್ತಾರೊ, ಹೆಂಡ್ತಿ ನೋಡಲು ಹೋಗ್ತಾರೊ' ಎಂದು ಯತ್ನಾಳ ಹಾಸ್ಯ ಮಾಡಿದರು.

ಬರಿಗಾಲ ಶಾಸಕ

ಬೈಂದೂರು ಶಾಸಕ ಗುರುರಾಜ್ ಶೆಟ್ಟಿ ಗಂಟಿ ಹೊಳಿ ಅವರು ವಿಧಾನಸಭೆಗೆ ಬರಿಗಾಲಿನಲ್ಲಿ ಬಂದು ಭಗವಂತನ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕರಿಸಿದರು. ಇವರು ಮೊದಲಿನಿಂದಲೂ ಚಪ್ಪಲಿ ಧರಿಸುವುದಿಲ್ಲ. ಚುನಾವಣೆ ಸಂದರ್ಭದಲ್ಲೂ ಬರಿಗಾಲಿನಲ್ಲೇ ಪ್ರಚಾರ ನಡೆಸಿದ್ದರು.

ಅಜ್ಜಯ್ಯ, ಹಿಂದುತ್ವ, ಡಿಕೆಶಿ, ಎಚ್‌ಡಿಡಿ, ಅಲ್ಲಾಹ್ ಹೆಸರಲ್ಲಿ ಪ್ರಮಾಣ

ಒಂದನೇ ಪುಟದಿಂದ...

ಕಾಂಗ್ರೆಸ್‌ನ ಶಿವಾನಂದ ಪಾಟೀಲ 'ಅಣ್ಣ ಬಸವಣ್ಣ' ಹೆಸರಲ್ಲಿ, ಬಿಜೆಪಿಯ ಬಸನಗೌಡ ಪಾಟೀಲ ಯತ್ನಾಳ 'ಹಿಂದುತ್ವ ಮತ್ತು ಗೋಮಾತೆ' ಹೆಸರಲ್ಲಿ, ಚನ್ನಗಿರಿ ಶಾಸಕ ಬಸವರಾಜ್ ಶಿವಗಂಗಾ ಅವರು 'ಆರಾಧ್ಯದೈವ ಡಿ.ಕೆ.ಶಿವಕುಮಾರ್' ಹೆಸರಲ್ಲಿ ಪ್ರಮಾಣ ಸ್ವೀಕರಿಸಿದರು. ಕುಣಿಗಲ್ ಶಾಸಕ ಡಾ. ರಂಗನಾಥ್ ಸಹ ಡಿ.ಕೆ. ಶಿವಕುಮಾರ್ ಮತ್ತು ಭಗವಂತ ಹೆಸರಿನಲ್ಲಿ ಪ್ರತಿಜ್ಞಾ ವಿಧಿ ಸ್ವೀಕರಿಸಿದರು. ಮುಳಬಾಗಿಲು ಜೆಡಿಎಸ್ ಶಾಸಕ ಸಮೃದ್ಧಿ ಮಂಜುನಾಥ್ ಅವರು ಪ್ರಮಾಣವಚನ ಸ್ವೀಕರಿಸುವಾಗ ದೇವೇಗೌಡರ ಹೆಸರು ಪ್ರಸ್ತಾಪಿಸಿದರು.

ಬಿಜೆಪಿಯ ಭಾಗೀರಥಿ ಮುರುಳ್ಯ ತಮ್ಮ ಕುಲದೇವರ ಹೆಸರಿನಲ್ಲಿ ಪ್ರಮಾಣ ಸ್ವೀಕರಿಸುವಾಗ, ಬಸವರಾಜ ರಾಯರಡ್ಡಿ, 'ಹೀಗೆ ವಿವಿಧ ದೇವರುಗಳ ಹೆಸರು ಹೇಳುವುದು ಸರಿಯಲ್ಲ. ನಿಮ್ಮ ಮನಸ್ಸಿನಲ್ಲಿ ಹೇಳಿಕೊಳ್ಳಿ' ಎಂದರು. ಅದಕ್ಕೆ ಬಸನಗೌಡ ಪಾಟೀಲ ಯತ್ನಾಳ ಆಕ್ಷೇಪಿಸಿದರು. 'ಈ ರೀತಿ ಹೆಸರು ಹೇಳುವುದನ್ನು ಯಾರು ಆರಂಭಿಸಿದ್ದು' ಎಂದು ಪರೋಕ್ಷವಾಗಿ ಡಿ.ಕೆ.ಶಿವಕುಮಾರ್ ಅವರನ್ನು ಉದ್ದೇಶಿಸಿ ಕುಟುಕಿದರು.

ಗಾಲಿ ಜನಾರ್ದನ ರೆಡ್ಡಿ, 'ಗಂಗಾವತಿ ಜನತೆ, ಅಂಜನಾದ್ರಿ, ಹನುಮಂತ'ನ ಹೆಸರಲ್ಲಿ ಪ್ರಮಾಣ ಸ್ವೀಕರಿಸಿದರು. ಕಾಂಗ್ರೆಸ್‌ನ ರಹೀಂ ಖಾನ್ ಮತ್ತು ಕನೀಜ್ ಫಾತಿಮಾ ಅವರು ಅಲ್ಲಾಹುವಿನ ಹೆಸರಿನಲ್ಲಿ ಇಂಗ್ಲಿಷ್‌ನಲ್ಲಿ ಪ್ರಮಾಣ ಸ್ವೀಕರಿಸಿದರು.

ಮೂಡಿಗೆರೆ ಶಾಸಕಿ ನಯನಾ ಮೋಟಮ್ಮ ಪ್ರಮಾಣವಚನ ಸ್ವೀಕರಿಸುವಾಗ, ಅವರ ತಾಯಿ ಮೋಟಮ್ಮ ಪ್ರೇಕ್ಷಕರ ಗ್ಯಾಲರಿಯಲ್ಲಿ ಕುಳಿತು ವೀಕ್ಷಿಸಿದರು. ಮಂಗಳೂರು ಶಾಸಕ ವೇದವ್ಯಾಸ ಕಾಮತ್ ಅವರು ಹೆಗಲಿನಲ್ಲಿ 'ತುಳುನಾಡು' ಬಿಂಬಿಸುವ ಶಾಲು ಹೊದ್ದು ಪ್ರತಿಜ್ಞೆ ಸ್ವೀಕರಿಸಿದರು.

ಪ್ರಮಾಣ: ಶಾಸಕರ ಸಂಭ್ರಮ

ಒಂದನೇ ಪುಟದಿಂದ...

ವಿರೋಧ ಪಕ್ಷದ ಸದಸ್ಯರು ಪ್ರವೇಶಿಸುವ ದ್ವಾರದ ಮೂಲಕ ಒಳಗೆ ಬಂದು ವಿರೋಧ ಪಕ್ಷದ ಸಾಲಿನಲ್ಲಿ ಕುಳಿತಿದ್ದ ಬಿಜೆಪಿ– ಜೆಡಿಎಸ್ ಶಾಸಕರನ್ನು ಮಾತನಾಡಿಸಿದರು. ಕೆಲವರನ್ನು ಅಪ್ಪಿಕೊಂಡರೆ, ಇನ್ನು ಕೆಲವರ ಬೆನ್ನಿಗೆ ಗುದ್ದಿ ಆತ್ಮೀಯತೆ ಪ್ರದರ್ಶಿಸಿದರು.

ಕಾಂಗ್ರೆಸ್‌ನ ತನ್ವೀರ್ ಸೇಠ್ ಅವರು ಬಿಜೆಪಿಯ ಎಲ್ಲ ನಾಯಕರನ್ನು ಅವರು ಕೂತಿದ್ದ ಆಸನದ ಬಳಿಯೇ ಹೋಗಿ ಹಸ್ತಲಾಘವ ನೀಡಿ ಶುಭ ಕೋರಿದರು. ಪ್ರಿಯಾಂಕ್ ಖರ್ಗೆ, ಲಕ್ಷ್ಮಿ ಹೆಬ್ಬಾಳ್ಕರ್, ಜೆ.ಎನ್. ಗಣೇಶ್, ಅನಿಲ್ ಚಿಕ್ಕಮಾದು ಸೇರಿದಂತೆ ಹಲವರು ವಿರೋಧ ಪಕ್ಷದ ಸಾಲಿಗೆ ಬಂದು ಹಿರಿಯ ಶಾಸಕರನ್ನು ಮಾತನಾಡಿಸಿದರು. ಕೆಲವು ಹೊಸ ಮತ್ತು ಯುವ ಶಾಸಕರು ಹಿರಿಯ ಶಾಸಕರ ಕಾಲು ಮುಟ್ಟಿ ಆಶೀರ್ವಾದ ಕೋರಿದರು.

ಹಂಗಾಮಿ ಸಭಾಧ್ಯಕ್ಷ ಆರ್. ವಿ.ದೇಶಪಾಂಡೆ ಪೀಠಕ್ಕೆ ಬಂದು ಕೂರುವವರೆಗೂ ಇದು ನಡೆದೇ ಇತ್ತು.

ಮುಖ್ಯಮಂತ್ರಿ ಸಿದ್ದರಾಮಯ್ಯ ಆಡಳಿತ ಪಕ್ಷ ನಾಯಕರಿಗೆ ಮೀಸಲಾದ ಮತ್ತು ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ವಿರೋಧ ಪಕ್ಷದ ನಾಯಕರಿಗೆ ಮೀಸಲಾಗಿರುವ ಆಸನದಲ್ಲೇ ಕುಳಿತು ಪರಸ್ಪರ ನಮಸ್ಕಾರ ವಿನಿಮಯ ಮಾಡಿಕೊಂಡರು.

ಖಾನಾಪುರ ಶಾಸಕ ವಿಠಲರಾವ್ ಹಲಗೇಕರ ಅವರು ಕೇಸರಿ ಪೇಠ ಧರಿಸಿ ಬಂದಿದ್ದರೆ, ಕಾಂಗ್ರೆಸ್‌ನ ಅಶೋಕ ಪಟ್ಟಣ ನೀಲಿ ಬಣ್ಣದ ಶೇರ್ವಾನಿ ಧರಿಸಿ ಬಂದಿದ್ದರು. ಅಶೋಕ ಪಟ್ಟಣ ಅವರನ್ನು ಉದ್ದೇಶಿಸಿ ಬಸವರಾಜ ಬೊಮ್ಮಾಯಿ, 'ಬ್ಲೂ ಡೇ' ಎಂದು ಕಿಚಾಯಿಸಿದರು.

ಆಡಳಿತ ಪಕ್ಷದ ಸಾಲಿನಲ್ಲಿದ್ದ-ವರ ಮುಖ ಅರಳಿದ್ದರೆ, ವಿರೋಧಿ ಸಾಲಿನಲ್ಲಿದ್ದ ಬಹುತೇಕರು ಬೇಸರದ ಭಾವನೆಯಲ್ಲೇ ಇದ್ದರು. ಪರಸ್ಪರ ತಿಳಿ ಹಾಸ್ಯದ ಮೂಲಕ ಬೇಸರದ ಭಾವವೂ ಕೊಂಚ ತಿಳಿಯಾಯಿತು.

ರಜನೀಶ್ ಸಿಎಂ ಎಸಿಎಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 1986ನೇ ಬ್ಯಾಚ್‌ನ ಐಎಎಸ್ ಅಧಿಕಾರಿ ರಜನೀಶ್ ಗೋಯಲ್ ಅವರಿಗೆ ಮುಖ್ಯಮಂತ್ರಿ-ಯವರ ಹೆಚ್ಚುವರಿ ಮುಖ್ಯಕಾರ್ಯ-ದರ್ಶಿಯ ಹೊಣೆಯನ್ನು ಪ್ರಭಾರವಾಗಿ ವಹಿಸಲಾಗಿದೆ. ಗೃಹ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯಾಗಿ-ಯೂ ಅವರು ಮುಂದುವರಿಯಲಿದ್ದಾರೆ.

ಮುಖ್ಯಮಂತ್ರಿಯವರ ಸಚಿವಾಲ ಯದ ಇತರ ಕೆಲವು ಹುದ್ದೆಗಳಿಗೂ ಅಧಿಕಾರಿಗಳನ್ನು ನೇಮಕ ಮಾಡಿ ಸೋಮವಾರ ಆದೇಶ ಹೊರಡಿಸಲಾಗಿದೆ.

ಕೆಎಎಸ್ ಆಯ್ಕೆ ಶ್ರೇಣಿ ಅಧಿಕಾರಿ ಯಾಗಿರುವ ಬಿ. ಶಿವಸ್ವಾಮಿ ಅವರನ್ನು ಮುಖ್ಯಮಂತ್ರಿಯವರ ಜಂಟಿ ಕಾರ್ಯ ದರ್ಶಿ ಹುದ್ದೆಗೆ ಮತ್ತು ಕರ್ನಾಟಕ ಪೌರಾಡಳಿತ ಸೇವೆಯ ಡಾ.ಕೆ. ವೈಷ್ಣವಿ ಹಾಗೂ ಬೆಂಗಳೂರಿನ ಗಂಗಾನಗರ ಉಪ ನೋಂದಣಾಧಿಕಾರಿ ಆರ್. ಮಹದೇವ ಅವರನ್ನು ವಿಶೇಷ ಕರ್ತ-ವ್ಯಾಧಿಕಾರಿಗಳನ್ನಾಗಿ ನೇಮಿಸಲಾಗಿದೆ.

ರಜನೀಶ್

ಗ್ರಾಮೀಣಾ-ಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ನಿವೃತ್ತ ಜಂಟಿ ಕಾರ್ಯದರ್ಶಿ ಪಿ.ಎ. ಗೋಪಾಲ್ ಅವರನ್ನು ಮುಖ್ಯ-ಮಂತ್ರಿಯವರ ಪರಿಹಾರ ನಿಧಿ ಶಾಖೆಯ ಜಂಟಿ ಕಾರ್ಯದರ್ಶಿಯನ್ನಾಗಿ ಗುತ್ತಿಗೆ ಆಧಾರದಲ್ಲಿ ನೇಮಿಸಲಾಗಿದೆ. ಇವರು ಹಿಂದೆಯೂ ಇದೇ ಶಾಖೆಯಲ್ಲಿ ಗುತ್ತಿಗೆ ಆಧಾರದಲ್ಲಿ ಜಂಟಿ ಕಾರ್ಯದರ್ಶಿ ಹುದ್ದೆಯಲ್ಲಿದ್ದರು.

ದೀರ್ಘ ಕಾಲದಿಂದ ಸಿದ್ದರಾಮಯ್ಯ ಅವರ ಆಪ್ತರಾಗಿರುವ ಎಂ. ವೆಂಕಟೇಶ್ ಅವರನ್ನು ಮುಖ್ಯಮಂತ್ರಿಯವರ ವಿಶೇ-ಷಾಧಿಕಾರಿಯಾಗಿ ಗುತ್ತಿಗೆ ಆಧಾರದಲ್ಲಿ ನೇಮಿಸಲಾಗಿದೆ. ಬೆಂಗಳೂರಿನ ಚಂದ್ರಾ ಬಡಾವಣೆ ನಿವಾಸಿ ಕೆ.ಎನ್. ವಿಜಯ ಅವರನ್ನು ಮುಖ್ಯಮಂತ್ರಿಯವರ ವಿಶೇಷ ಕರ್ತವ್ಯಾಧಿಕಾರಿಯನ್ನಾಗಿ ಗುತ್ತಿಗೆ ಆಧಾರದಲ್ಲಿ ನೇಮಿಸಲಾಗಿದೆ.

ಪ್ರಭಾಕರ್ ಮಾಧ್ಯಮ ಸಲಹೆಗಾರ

ಪತ್ರಕರ್ತ ಕೆ.ವಿ. ಪ್ರಭಾಕರ್ ಅವರನ್ನು ಮುಖ್ಯಮಂತ್ರಿ-ಯವರ ಮಾಧ್ಯಮ ಸಲಹೆಗಾರರನ್ನಾಗಿ ನೇಮಿಸಿ ಆದೇಶ ಹೊರಡಿಸಲಾಗಿದೆ. ಅವರಿಗೆ ಸಂಪುಟ ದರ್ಜೆ ಸಚಿವರ ಸ್ಥಾನಮಾನ ನೀಡಲಾಗಿದೆ. ಕೋಲಾರದ ಪ್ರಭಾಕರ್, ವಿಜಯ ಕರ್ನಾಟಕ, ಕನ್ನಡಪ್ರಭ ಪತ್ರಿಕೆಗಳಲ್ಲಿ ವಿವಿಧ ಹುದ್ದೆಗಳಲ್ಲಿ ಕಾರ್ಯನಿರ್ವಹಿಸಿದ್ದರು. ಸಿದ್ದರಾಮಯ್ಯ ಅವರು ಮೊದಲ ಅವಧಿಗೆ ಮುಖ್ಯಮಂತ್ರಿಯಾಗಿದ್ದಾಗ 2014ರಿಂದ 2018ರವರೆಗೆ ಮುಖ್ಯಮಂತ್ರಿಯವರ ಮಾಧ್ಯಮ ಸಂಯೋಜಕರಾಗಿದ್ದರು.

ಕೆ. ಶಶಿಕಿರಣ್ ಶೆಟ್ಟಿ ನೂತನ ಎ.ಜಿ



ಹೈಕೋರ್ಟ್‌ನ ಹಿರಿಯ ವಕೀಲ ಕೆ. ಶಶಿಕಿರಣ್ ಶೆಟ್ಟಿ ಅವರನ್ನು ರಾಜ್ಯ ಸರ್ಕಾರದ ನೂತನ ಅಡ್ವೊಕೇಟ್ ಜನರಲ್ ಆಗಿ ನೇಮಿಸಿ ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್ ಸೋಮವಾರ ಆದೇಶ ಹೊರಡಿಸಿದ್ದಾರೆ. ಶಶಿಕಿರಣ್ ಅವರು ರಾಜ್ಯದ ಮಾಜಿ ಲೋಕಾಯುಕ್ತ, ನಿವೃತ್ತ ನ್ಯಾಯಮೂರ್ತಿ ಪಿ. ವಿಶ್ವನಾಥ ಶೆಟ್ಟಿ ಅವರ ಮಗ.

ವೆಂಕಟೇಶಯ್ಯ ಆಪ್ತ ಕಾರ್ಯದರ್ಶಿ

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಆಪ್ತ ಕಾರ್ಯದರ್ಶಿಯನ್ನಾಗಿ ಕೆಎಎಸ್ ಅಧಿಕಾರಿ ಡಾ.ಕೆ. ವೆಂಕಟೇಶಯ್ಯ ಅವರನ್ನು ನೇಮಕ ಮಾಡಲಾಗಿದೆ. ಆಯ್ಕೆ ಶ್ರೇಣಿಯ ಕೆಎಎಸ್ ಅಧಿಕಾರಿಯಾಗಿರುವ ವೆಂಕಟೇಶಯ್ಯ ಅವರು 2018–2023ರ ಅವಧಿಯಲ್ಲಿ ಸಿದ್ದರಾಮಯ್ಯ ವಿರೋಧ ಪಕ್ಷದ ನಾಯಕರಾ-ಗಿದ್ದಾಗ ಅವರ ಆಪ್ತ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸಿದ್ದರು.

(ಜಲ ಸಂಪನ್ಮೂಲ ಇಲಾಖೆ)
ಸಮಗ್ರ ಜಲಸಂಪನ್ಮೂಲ ನಿರ್ವಹಣಾ ಉನ್ನತ ಕೇಂದ್ರ
#1/1, 1ನೇ ಮಹಡಿ, ಕೆ.ಎಸ್.ಎಫ್.ಸಿ. ಭವನ, ತಿಮ್ಮಯ್ಯ ರಸ್ತೆ, ವಸಂತ ನಗರ, ಬೆಂಗಳೂರ–52.
No. ACIWRM/CE/MP/2023-24/01 - CALL-3 Date: 20/05/2023
ಅಲ್ಪಾವಧಿ ಟೆಂಡರ್ ಪ್ರಕಟಣೆ
ಟೆಂಡರ್ ಸಂಖ್ಯೆ: WRD/2023-24/SE0001 (ಇ–ಪ್ರೊರ್ಟಲ್ ಮುಖಾಂತರ ಮಾತ್ರ)
ಕರ್ನಾಟಕ ಸರ್ಕಾರ, ಜಲಸಂಪನ್ಮೂಲ ಇಲಾಖೆಯ ಸಮಗ್ರ ಜಲಸಂಪನ್ಮೂಲ ನಿರ್ವಹಣಾ ಉನ್ನತ ಕೇಂದ್ರ (ಎಸಿ.ಐ.ಡಬ್ಲ್ಯೂ.ಆರ್‌ಎಮ್) ಅರ್ಹ ಟೆಂಡರ್‌ದಾರರು / ಏಜೆನ್ಸಿಯಿಂದ ವಿವಿಧ ವರ್ಗಗಳ ಮಾನವ ಸಂಪನ್ಮೂಲ ಸಿಬ್ಬಂದಿಯನ್ನು ಹೊರಗುತ್ತಿಗೆ ಆಧಾರದ ಮೇಲೆ ಸೇವೆಗಳನ್ನು ಒದಗಿಸುವ ಕೆಲಸಕ್ಕೆ "Supply of Manpower personnel of different category to ACIWRM, Bengaluru" ಟೆಂಡರ್‌ಗಳನ್ನು ದ್ವಿ–ಲಕೋಟೆಗಳಲ್ಲಿ ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://kppp.karnataka.gov.in ನಿಂದ ಪಡೆಯಬಹುದು. ವಿವರಗಳನ್ನು https://www.waterresources.karnataka.gov.in ಮತ್ತು https://aciwrm.karnataka.gov.in ರಲ್ಲಿಯೂ ಲಭ್ಯವಿರುತ್ತದೆ. ಯಾವುದೇ ಸ್ಪಷ್ಟೀಕರಣ/ಹೆಚ್ಚಿನ ಮಾಹಿತಿಯ ಅವಶ್ಯವಿದ್ದಲ್ಲಿ registrar@aciwrm.org ಗೆ ಇ–ಮೇಲ್ ಕಳುಹಿಸಿ ಪಡೆಯಬಹುದಾಗಿದೆ.
ಸಹಿ/– ನಿಬಂಧಕರು/ಮುಖ್ಯ ಇಂಜಿನಿಯರ್, ಎಸಿ.ಐ.ಡಬ್ಲ್ಯೂ.ಆರ್‌ಎಮ್, ಬೆಂಗಳೂರು
DIPR/CP/AAPL/RO93/23-24

ಮುರುಘಾ ಮಠ ಆಡಳಿತ ಅಧಿಕಾರಿ ನೇಮಕ ರದ್ದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿತ್ರದುರ್ಗ ಮುರುಘಾ ಮಠಕ್ಕೆ ನಿವೃತ್ತ ಐಎಎಸ್ ಅಧಿಕಾರಿ ಪಿ.ಎಸ್.ವಸ್ತ್ರದ ಅವರನ್ನು ಆಡಳಿತಾ-ಧಿಕಾರಿಯನ್ನಾಗಿ ನೇಮಕ ಮಾಡಿ ರಾಜ್ಯ ಸರ್ಕಾರ ಹೊರಡಿಸಿದ್ದ ಆದೇಶವನ್ನು ಹೈಕೋರ್ಟ್ ರದ್ದುಪಡಿಸಿದೆ.

ಹಾಗೆಯೇ, ಧಾರ್ಮಿಕ ಸಂಸ್ಥೆಗಳ ದುರುಪಯೋಗ ತಡೆ ಕಾಯ್ದೆ ಅಡಿ ಮುರುಘಾ ಶರಣರ ಅಧಿಕಾರ ಚಲಾವಣೆಗೆ ನಿರ್ಬಂಧ ವಿಧಿಸಿದ್ದ ಚಿತ್ರದುರ್ಗ ಸೆಷನ್ಸ್ ಕೋರ್ಟ್ ಆದೇಶವನ್ನೂ ಇದೇ ವೇಳೆ ವಜಾಗೊ-ಳಿಸಲಾಗಿದೆ. ಈ ಕುರಿತಂತೆ ಕಾಯ್ದಿರಿಸಿದ್ದ ತೀರ್ಪನ್ನು ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಸೋಮವಾರ ಪ್ರಕಟಿಸಿದೆ.

ಸರ್ಕಾರ ಆಡಳಿತಾಧಿಕಾರಿ ನೇಮಕ ಮಾಡಿದ್ದನ್ನು ಪ್ರಶ್ನಿಸಿ ಎಸ್‌ಜೆಎಂ ವಿದ್ಯಾಪೀಠದ ಅಧ್ಯಕ್ಷ, ಮಠದ ತಾತ್ಕಾಲಿಕ ಉಸ್ತುವಾರಿ ಬಸವಪ್ರಭು ಸ್ವಾಮೀಜಿ ಮತ್ತು ಭಕ್ತರು ಸಲ್ಲಿಸಿದ್ದ ರಿಟ್ ಅರ್ಜಿಗಳ ಸುದೀರ್ಘ ವಿಚಾರಣೆ ನಡೆಸಿದ್ದ ನ್ಯಾಯಮೂರ್ತಿ ಕೃಷ್ಣ ದೀಕ್ಷಿತ್ ಅವರು, 'ಮಠ ಮಾನ್ಯಗಳಲ್ಲಿ ಸರ್ಕಾರದ ಹಸ್ತಕ್ಷೇಪ ಸಲ್ಲದು' ಎಂಬ ಖಂಡತುಂಡ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

'ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿ ಕಾಯ್ದೆ–1997ಕ್ಕೆ ರಾಜ್ಯ ಸರ್ಕಾರ 2011ರಲ್ಲೇ ತಿದ್ದುಪಡಿ ತಂದಿದೆ. ಈ ತಿದ್ದುಪಡಿಯ ಅನುಸಾರ ಯಾವುದೇ ಮಠ, ಮಠಕ್ಕೆ ಹೊಂದಿಕೊಂಡ ದೇಗುಲಗಳನ್ನು ಶಾಸನದಿಂದ ಹೊರಗಿಡಲಾಗಿದೆ. ಈ ಕುರಿತ ತಿದ್ದುಪಡಿಯನ್ನು ಸುಪ್ರೀಂ ಕೋರ್ಟ್‌ಗೂ ಸಲ್ಲಿಸಲಾಗಿದೆ' ಎಂಬ ಅಂಶವನ್ನು ತೀರ್ಪಿನಲ್ಲಿ ಕಾಣಿಸಿರುವ ನ್ಯಾಯಪೀಠ, 'ಸರ್ಕಾರವು ಮಠದ ವಿಷಯಗಳಲ್ಲಿ ಮಧ್ಯಪ್ರವೇಶಿಸಲು ಬರುವುದಿಲ್ಲ. ಶಾಸನಯುಕ್ತ ಅಧಿಕಾರ ಇದ್ದರೆ ಮಾತ್ರವೇ ಮಧ್ಯಪ್ರವೇಶ ಮಾಡಬಹುದು' ಎಂದೂ ಹೇಳಿದೆ.

ಸ್ಪೀಕರ್: ಹೆಚ್ಚಿದ ಕುತೂಹಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಸಭಾಧ್ಯಕ್ಷ ಸ್ಥಾನಕ್ಕೆ ಹಿರಿಯ ಶಾಸಕರಾದ ಆರ್. ವಿ. ದೇಶಪಾಂಡೆ, ಎಚ್.ಕೆ. ಪಾಟೀಲ, ಟಿ.ಬಿ. ಜಯಚಂದ್ರ ಅಥವಾ ಬಸವರಾಜ ರಾಯರಡ್ಡಿ ಪೈಕಿ ಒಬ್ಬರನ್ನು ಆಯ್ಕೆ ಮಾಡಲು ಕಾಂಗ್ರೆಸ್ ವರಿಷ್ಠರು ಮುಂದಾಗಿದ್ದಾರೆ. ಆದರೆ, ಈ ನಾಲ್ವರೂ ಸಚಿವ ಸ್ಥಾನದ ನಿರೀಕ್ಷೆಯಲ್ಲಿದ್ದಾರೆ.

ಸದ್ಯ ನಡೆಯುತ್ತಿರುವ ವಿಧಾನಮಂಡಲ ಅಧಿವೇಶನದ ಕೊನೆ ದಿನವಾದ ಬುಧವಾರ (ಮೇ 24) ಸಭಾ-ಧ್ಯಕ್ಷರನ್ನು ಆಯ್ಕೆ ಮಾಡಲು ಸರ್ಕಾರ ನಿರ್ಧರಿಸಿದೆ. 24ರಂದು ಆಯ್ಕೆ ನಡೆಯ-ಬೇಕಿದ್ದರೆ, ಮಂಗಳವಾರ ಮಧ್ಯಾಹ್ನ 12 ಗಂಟೆ ಒಳಗೆ ನಾಮಪತ್ರ ಸಲ್ಲಿಸಬೇಕಿದೆ. ಆದರೆ, ಈ ಬಗ್ಗೆ ಸರ್ಕಾರದಿಂದ ಹೆಚ್ಚಿನ ಮಾಹಿತಿ ಬಂದಿಲ್ಲ ಎಂದು ವಿಧಾನಸಭಾ ಸಚಿವಾಲಯದ ಮೂಲಗಳು ತಿಳಿಸಿವೆ. ಹೀಗಾಗಿ, ಸದ್ಯ ನಡೆಯುತ್ತಿರುವ ಅಧಿವೇಶನದಲ್ಲಿ ಸಭಾಧ್ಯಕ್ಷರ ಆಯ್ಕೆ ನಡೆಯುವ ಬಗ್ಗೆ ಅನುಮಾನ ಮೂಡಿದೆ.

ಈ ಮಧ್ಯೆ, ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಅವರು ಸೋಮವಾರ ಸಂಜೆಯೇ ನಗರಕ್ಕೆ ಬಂದಿದ್ದಾರೆ. ಸಭಾಧ್ಯಕ್ಷರ ಆಯ್ಕೆ ಕುರಿತಂತೆ ಅವರು ಪಕ್ಷದ ರಾಜ್ಯ ನಾಯಕರ ಜೊತೆ ಸಮಾಲೋಚನೆ ನಡೆಸಲಿದ್ದಾರೆ. ಬುಧವಾರ ಬೆಳಿಗ್ಗೆ 9 ಗಂಟೆಗೆ ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಕಾಂಗ್ರೆಸ್ ಶಾಸಕಾಂಗ ಪಕ್ಷದ (ಸಿಎಲ್‌ಪಿ) ಸಭೆ ನಡೆಯಲಿದ್ದು, ಈ ಸಭೆಯಲ್ಲಿ ಸಭಾಧ್ಯಕ್ಷರ ಆಯ್ಕೆಗೆ ಅಂತಿಮ ಮುದ್ರೆ ಬೀಳುವ ಸಾಧ್ಯತೆಯಿದೆ ಎಂದು ಕಾಂಗ್ರೆಸ್ ಮೂಲಗಳು ತಿಳಿಸಿವೆ.

ಯಾರಾಗಬಹುದು?: ಹಂಗಾಮಿ ಸಭಾಧ್ಯಕ್ಷರಾಗಿ ಕರ್ತವ್ಯ ನಿರ್ವಹಿಸುತ್ತಿರುವ ಆರ್.ವಿ. ದೇಶಪಾಂಡೆ ಅವರು ಶಾಶ್ವತವಾಗಿ ಆ ಸ್ಥಾನ ವಹಿಸಿಕೊಳ್ಳಲು ಉತ್ಸುಕತೆ ತೋರಿಸಿಲ್ಲ. ಎಚ್.ಕೆ. ಪಾಟೀಲ ಸಹ ಸಭಾಧ್ಯಕ್ಷರಾಗಲು ಒಲವು ಹೊಂದಿಲ್ಲ. ಸೋಮವಾರ ಶಾಸಕರಾಗಿ ಪ್ರಮಾಣವಚನ ಸ್ವೀಕರಿಸಿದ ಬಳಿಕ ಟಿ.ಬಿ. ಜಯಚಂದ್ರ ಅವರು ಸಂಪರ್ಕಕ್ಕೇ ಸಿಕ್ಕಿಲ್ಲ ಎನ್ನಲಾಗಿದೆ.

ಸಚಿವ ಸ್ಥಾನ ಸಿಗದೇ ಇದ್ದರೆ ಬಸವ ರಾಜ ರಾಯರಡ್ಡಿ ಅವರು ಸಭಾಧ್ಯಕ್ಷ ಸ್ಥಾನ ವಹಿಸಿಕೊಳ್ಳಬಹುದು ಎಂಬ ಚರ್ಚೆ ಕಾಂಗ್ರೆಸ್‌ನಲ್ಲಿ ನಡೆಯುತ್ತಿದೆ. ಈ ನಾಲ್ವರು ಅನುಭವಿಗಳಾಗಿರುವು-ದರಿಂದ, ಅವರಲ್ಲಿ ಒಬ್ಬರನ್ನು ಆಯ್ಕೆ ಮಾಡಲು ಪಕ್ಷದ ವರಿಷ್ಠರು ನಿರ್ಧರಿಸಿ-ದ್ದಾರೆ ಎಂದೂ ಮೂಲಗಳು ಹೇಳಿವೆ.

ನಿಗಮ, ಮಂಡಳಿ ನಾಮನಿರ್ದೇಶನ ರದ್ದು

ಬೆಂಗಳೂರು: ಬಿಜೆಪಿ ಸರ್ಕಾರ ಅವಧಿಯಲ್ಲಿ ವಿವಿಧ ನಿಗಮ, ಮಂಡಳಿಗಳಿಗೆ ನಡೆದ ನಾಮ ನಿರ್ದೇಶನಗಳನ್ನು ತಕ್ಷಣದಿಂದ ಜಾರಿಗೆ ಬರುವಂತೆ ರದ್ದುಪಡಿಸಲಾಗಿದೆ.

ನಿಗಮ, ಮಂಡಳಿ, ಸ್ವಾಯತ್ತ ಸಂಸ್ಥೆಗಳು ಮತ್ತು ಇತರ ಸರ್ಕಾರಿ, ಅರೆ ಸರ್ಕಾರಿ ಹಾಗೂ ಇತರ ಎಲ್ಲ ಅಧ್ಯಕ್ಷರು, ನಿರ್ದೇಶಕರು, ಸದಸ್ಯರುಗಳ ನಾಮ-ನಿರ್ದೇಶನಗಳನ್ನು ಇದೇ 22ರಿಂದ ಜಾರಿಗೆ ಬರುವಂತೆ ರದ್ದುಪಡಿಸಿ, ಆದೇಶ ಹೊರಡಿಸಲು ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮಾ ಅವರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚನೆ ನೀಡಿದ್ದಾರೆ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸು-ತ್ತಿರುವ ಅಕಾಡೆಮಿ, ರಂಗಾಯಣ, ಪ್ರಾಧಿಕಾರದ ಅಧ್ಯಕ್ಷರು, ನಿರ್ದೇಶಕರು, ಸದಸ್ಯರ ನಾಮ ನಿರ್ದೇಶನವನ್ನು ತಕ್ಷಣದಿಂದ ಜಾರಿಗೆ ಬರುವಂತೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸೋಮವಾರ ರದ್ದುಪಡಿಸಿದೆ.

ಕೂಡಲಿ ಶೃಂಗೇರಿ ಪೀಠದ ಉತ್ತರಾಧಿಕಾರಿ ಪಟ್ಟಾಧಿಕಾರ

ಪ್ರಜಾವಾಣಿ ವಾರ್ತೆ

ಹೊಳೆಹೊನ್ನೂರು (ಶಿವಮೊಗ್ಗ ಜಿಲ್ಲೆ): ಸಮೀಪದ ಶ್ರೀಕ್ಷೇತ್ರ ಕೂಡಲಿ ಶೃಂಗೇರಿ ಮಹಾಸಂಸ್ಥಾನ ಶಾರದಾ ಪೀಠದ ನೂತನ ಉತ್ತರಾಧಿಕಾರಿ ಪಟ್ಟಾಧಿಕಾರ ಮಹೋತ್ಸವ ಸೋಮ ವಾರ ಸಂಭ್ರಮದಿಂದ ನಡೆಯಿತು.

ದತ್ತರಾಜ ದೇಶಪಾಂಡೆ ಅವರನ್ನು 'ಅಭಿನವ ಶಂಕರಾಚಾರ್ಯ ಸ್ವಾಮೀಜಿ' ಎಂಬ ನಾಮಕರಣದೊಂದಿಗೆ ಉತ್ತ-ರಾಧಿಕಾರಿಯಾಗಿ ನೇಮಿಸಲಾಯಿತು. ಮಠದ ಪೀಠಾಧಿಪತಿ ವಿದ್ಯಾಭಿನವ ವಿದ್ಯಾರಣ್ಯ ಭಾರತೀ ಸ್ವಾಮೀಜಿ ನೇತೃತ್ವದಲ್ಲಿ ಪಟ್ಟಾಧಿಕಾರದ ಧಾರ್ಮಿಕ ಕಾರ್ಯಕ್ರಮಗಳು ನಡೆದವು.

ವಿರಜಾಹೋಮ, ಪುರುಷೋತ್ತಮ ಹೋಮ, ಅನುಷ್ಠಾನ, ಆಶ್ರಮ ಸ್ವೀಕಾರ, ಉಪದೇಶ, ಅಧಿಷ್ಠಾನ ದರ್ಶನ ಕಾರ್ಯಕ್ರಮಗಳು ನಡೆದವು.

ಹೆಬ್ಬಳ್ಳಿಯ ದತ್ತಾವಧೂತ ಶ್ರೀ, ಹರಿಹರಪುರ ಶ್ರೀಮಠದ ಸ್ವಯಂ ಪ್ರಕಾಶ ಸಚ್ಚಿದಾನಂದ ಸರಸ್ವತೀ ಸ್ವಾಮೀಜಿ, ಶಕಟಪುರ ವಿದ್ಯಾಪೀಠದ ವಿದ್ಯಾಭಿನವ ಕೃಷ್ಣಾನಂದ ತೀರ್ಥ ಸ್ವಾಮೀಜಿ, ಅಗಡಿ–ಆನಂದವನದ ಗುರು ದತ್ತಮೂರ್ತಿ ಚಕ್ರವರ್ತಿ, ಮುರ ಗೋಡದ ದಿವಾಕರ ದೀಕ್ಷಿತರು, ಕಾಶಿಯ ಗಣೇಶ ಶಾಸ್ತ್ರಿ ಕಾರ್ಯಕ್ರಮ ದಲ್ಲಿ ಇದ್ದರು.

ದತ್ತರಾಜ ದೇಶಪಾಂಡೆ ಮೂಲತಃ ಧಾರವಾಡದವರು. ತಂದೆ ಅಶೋಕ ರಾವ್ ಹಾಗೂ ತಾಯಿ ಸೀತಾಲಕ್ಷ್ಮೀ.

ಇವರು 'ಮಾಣಿಕ ರತ್ನ' ಪತ್ರಿಕೆಯ ತೆಲುಗು ಅವತರಣಿಕೆಯ ಸಂಪಾದಕರಾಗಿ ಕೆಲಸ ಮಾಡಿದ್ದಾರೆ. ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ-ದಿಂದ ಸ್ನಾತಕೋತ್ತರ ಪದವಿಯಲ್ಲಿ ಸ್ವರ್ಣ ಪದಕ ಪಡೆದಿದ್ದಾರೆ.

ಸುದರ್ಶನ್‌ಗೆ ಕಸಾಪ ದತ್ತಿ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ನೀಡುವ 2023ನೇ ಸಾಲಿನ ನಾಗಡಿಕೆರೆ- ಕಿಟ್ಟಪ್ಪಗೌಡ ರುಕ್ಮಿಣಿ ತೀರ್ಥಹಳ್ಳಿ ದತ್ತಿ ಪ್ರಶಸ್ತಿ'ಗೆ ವಿಜಯ ಕರ್ನಾಟಕ ದಿನಪತ್ರಿಕೆ ಸಂಪಾದಕ ಸುದರ್ಶನ ಚನ್ನಂಗಿಹಳ್ಳಿ ಅವರನ್ನು ಆಯ್ಕೆ ಮಾಡಲಾಗಿದೆ.

ಪ್ರಶಸ್ತಿಯು ₹10 ಸಾವಿರ ನಗದು ಮತ್ತು ಫಲಕ ಒಳಗೊಂಡಿದೆ.

ಕಸಾಪ ಅಧ್ಯಕ್ಷ ಮಹೇಶ ಜೋಶಿ ಅವರ ಅಧ್ಯಕ್ಷ-ತೆಯಲ್ಲಿ ನಡೆದ ಆಯ್ಕೆ ಸಮಿತಿಯಲ್ಲಿ ಪರಿಷತ್ತಿನ ಗೌರವ ಕಾರ್ಯದರ್ಶಿಗಳಾದ ನೇ.ಭ. ರಾಮಲಿಂಗ ಶೆಟ್ಟಿ, ಡಾ. ಪದ್ಮಿನಿ ನಾಗರಾಜು ಹಾಗೂ ಗೌರವ ಕೋಶಾಧ್ಯಕ್ಷ ಬಿ.ಎಂ.ಪಟೇಲ್ ಪಾಂಡು ಇದ್ದರು.

ಎನ್‌ಎಸಿಐ ಸದಸ್ಯರಾಗಿ ಅಕ್ಕೈ ಪದ್ಮಶಾಲಿ

ಬೆಂಗಳೂರು: ಸಮಾಜದ ಎಲ್ಲ ವರ್ಗದ ಮತದಾರರನ್ನು ಮತದಾನ ಪ್ರಕ್ರಿಯೆಯಲ್ಲಿ ಭಾಗವಹಿಸುವಂತೆ ಮಾಡುವ ಉದ್ದೇಶದಿಂದ ಕೇಂದ್ರ ಚುನಾವಣಾ ಆಯೋಗ ರಚಿಸಿರುವ ಎಲ್ಲರನ್ನೂ ಸೇರ್ಪಡೆಗೊಳಿಸುವ ರಾಷ್ಟ್ರೀಯ ಸಲಹಾ ಸಮಿತಿ ಸದಸ್ಯರಾಗಿ ಲಿಂಗತ್ವ ಅಲ್ಪಸಂಖ್ಯಾತರ ಪರ ಹೋರಾಟಗಾರ್ತಿ ಅಕ್ಕೈ ಪದ್ಮಶಾಲಿ ಅವರನ್ನು ನೇಮಿಸಲಾಗಿದೆ.

ಕರ್ನಾಟಕ ಸರಕಾರ
ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್, ಮಂಗಳೂರು
ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ, ದ.ಕ ಮಂಗಳೂರು
DK SOCIETY FOR THE PREVENTION OF CRUELTY TO ANIMALS (DKSPCA)
(ನೋಂದಣಿ ಸಂಖ್ಯೆ: 63/2001-02 ದಿನಾಂಕ 08.08.2001)
ಉಪ ನಿರ್ದೇಶಕರ ಕಛೇರಿ ಆವರಣ, ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ, ಕೊಡಿಯಾಲ್‌ಬೈಲ್, ಜೈಲ್‌ರಸ್ತೆ, ದ.ಕ ಜಿಲ್ಲೆ, ಮಂಗಳೂರು–03
ದೂರವಾಣಿ ಸಂಖ್ಯೆ: 0824-2492337 E-mail ID- dknddahvs@gmail.com, ddahmng@yahoo.com
ಸಂ:ಉನಿಮ/ಬಿ-2/ಎಸ್.ಪಿ.ಸಿ.ಎ/ಜಿಲ್ಲಾ ಗೋ ಶಾಲೆ/2021-22 ದಿನಾಂಕ: 22.05.2023
ಅಲ್ಪಾವಧಿ ಟೆಂಡರ್ ಪ್ರಕಟಣೆ
ದಕ್ಷಿಣ ಕನ್ನಡ ಜಿಲ್ಲೆ, ಕಡಬ ತಾಲ್ಲೂಕು ರಾಮಕುಂಜ ಗ್ರಾಮದ ಕುಮಾರಧಾರ ಸರ್ಕಾರಿ ಗೋಶಾಲೆಯ ಜಾನುವಾರುಗಳಿಗೆ ಅವಶ್ಯವಿರುವ ಒಣ ಮೇವು ಸರಬರಾಜು ಮಾಡಲು ಅಲ್ಪಾವಧಿ ಟೆಂಡರ್ ಕರೆಯಲಾಗಿದೆ. ಅಂದಾಜು ಟೆಂಡರ್ ಮೊತ್ತ ರೂ. 5,00,000.00 (ರೂಪಾಯಿ ಐದು ಲಕ್ಷಗಳು). ಟೆಂಡರ್ ಅವಧಿಯು 12 ತಿಂಗಳು ಅಥವಾ ಟೆಂಡರ್ ಮೊತ್ತ ಮುಗಿಯುವ ವರೆಗೂ ಅಥವಾ ದಕ್ಷಿಣ ಕನ್ನಡ ಜಿಲ್ಲಾ ಪ್ರಾಣಿ ದಯಾ ಸಂಘದ ಅನುಮೋದನೆ ಮೇರೆಗೆ ಮುಂದುವರೆಸ ಬಹುದಾದ ಮುಂದಿನ ಅವಧಿಯವರೆಗೆ ಚಾಲ್ತಿಯಲ್ಲಿರುತ್ತದೆ. ಆಸಕ್ತ ರೈತರು ಅಥವಾ ಸಂಸ್ಥೆಯವರು ಈ ಟೆಂಡರ್ ಪ್ರಕ್ರಿಯಲ್ಲಿ ಭಾಗವಹಿಸಬಹುದಾಗಿರುತ್ತದೆ. ಟೆಂಡರ್ ವಿವರಗಳು ಕೆಳಕಂಡಂತಿರುತ್ತವೆ.

ಕ್ರ.ಸಂ	ವಿಷಯ	ವಿವರಗಳು
1	ಟೆಂಡರ್ ಮೊತ್ತ	ರೂ. 5,00,000.00 (ರೂಪಾಯಿ ಐದು ಲಕ್ಷಗಳು ಮಾತ್ರ) (ಈ ಮೊತ್ತವು ಒಣ ಮೇವು ಮತ್ತು ಸಾಗಾಣಿಕೆ ವೆಚ್ಚ ಒಳಗೊಂಡಿರುತ್ತದೆ)
2	ಟೆಂಡರ್ ಪ್ರಕಟಣಾ ದಿನಾಂಕ	ದಿನಾಂಕ 22.05.2023
3	ಟೆಂಡರ್ ನಮೂನೆ ಶುಲ್ಕ	ರೂ. 500.00 (ರೂಪಾಯಿ ಐದು ನೂರು ಮಾತ್ರ)
4	ಟೆಂಡರ್ ನಮೂನೆಗಳನ್ನು ಪಡೆಯಲು ನಿಗದಿಪಡಿಸಿದ ಸಮಯ	ದಿನಾಂಕ 22.05.2023 ರಿಂದ 06.06.2023 ಅಪರಾಹ್ನ 1.00 ಗಂಟೆವರೆಗೆ
5	ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸುವ ಕಡೆಯ ದಿನಾಂಕ	ದಿನಾಂಕ 07.06.2023
6	ಟೆಂಡರ್ ತೆರೆಯುವ ದಿನಾಂಕ	ದಿನಾಂಕ 08.06.2023ರ ಬೆಳಗ್ಗೆ 11.00 ಗಂಟೆ ಅಥವಾ ಸೂಚಿಸುವ ನಂತರದ ದಿನಾಂಕ

* ಟೆಂಡರ್ ಫಾರಂ ಹಾಗೂ ಹೆಚ್ಚಿನ ಮಾಹಿತಿಗಾಗಿ ಖುದ್ದಾಗಿ ಕಛೇರಿ ಅವಧಿಯಲ್ಲಿ ಭೇಟಿ ಮಾಡಿ ಪಡೆಯಬಹುದಾಗಿದೆ. ದೂರವಾಣಿ ಸಂಖ್ಯೆ 9742315857
ಸಹಿ/- ಸದಸ್ಯ ಕಾರ್ಯದರ್ಶಿ, ದಕ್ಷಿಣ ಕನ್ನಡ ಜಿಲ್ಲಾ ಪ್ರಾಣಿ ದಯಾ ಸಂಘ, ಮಂಗಳೂರು.
DIPR/MNG/26/MPL/23-24

ಕಮರ್ಷಿಯಲ್ ಪೈಲಟ್ ತರಬೇತಿ ಪೂರ್ಣಗೊಳಿಸಿದ ಮುಸ್ಲಿಂ ಯುವತಿ

ರೆಕ್ಕೆ ಕಟ್ಟಿ ಹಾರಲು ಸಜ್ಜಾದ ಹನಿಯಾ

ಪ್ರಜಾವಾಣಿ ವಾರ್ತೆ

ಮಂಗಳೂರು: ಇಲ್ಲಿನ ಪಾಂಡೇಶ್ವರದ ಮಹಮ್ಮದ್ ಹನೀಫ್– ನಾಜಿಯಾ ದಂಪತಿಯ ಪುತ್ರಿ ಹನಿಯಾ ಹನೀಫ್ ಅವರು 21ನೇ ವರ್ಷಕ್ಕೆ ಕಮರ್ಷಿಯಲ್ ಪೈಲಟ್ ಆಗುವ ಅರ್ಹತೆ ಗಳಿಸಿದ್ದಾರೆ.

ದ್ವಿತೀಯ ಪಿ.ಯು. ಶಿಕ್ಷಣದ ಬಳಿಕ ಮೈಸೂರಿನ ಓರಿಯೆಂಟ್ ಫ್ಲೈಟ್ಸ್ ಏವಿಯೇಷನ್ ಅಕಾಡೆಮಿಯಲ್ಲಿ ಮೂರೂವರೆ ವರ್ಷ ಪೈಲಟ್ ತರಬೇತಿ ಪಡೆದಿರುವ ಹನಿಯಾ, 200 ಗಂಟೆ ವಿಮಾನ ಹಾರಾಟ ನಡೆಸಿ ಕಮರ್ಷಿಯಲ್ ಪೈಲಟ್ ಲೈಸೆನ್ಸ್ ಪಡೆ-ದುಕೊಂಡಿದ್ದಾರೆ.

'ಕರಾವಳಿಯ ಮುಸ್ಲಿಂ ಸಮುದಾಯದಲ್ಲಿ ಪೈಲಟ್ ಆಗುವ ಅರ್ಹತೆ ಗಳಿಸಿದ ಮೊದಲ ಹೆಣ್ಣುಮಗಳು ಇವರು' ಎಂದು ಹನಿಯಾ ಅವರ ತಂದೆ ಮಹಮ್ಮದ್ ಹನೀಫ್ ಹೇಳಿದರು.

ಈ ಕುರಿತು 'ಪ್ರಜಾವಾಣಿ' ಜೊತೆಗೆ ಖುಷಿ ಹಂಚಿಕೊಂಡ ಹನಿಯಾ, 'ನನ್ನ ತಂದೆ ದುಬೈನಲ್ಲಿ ಕೆಲಸದಲ್ಲಿ-ದ್ದರು. ಹಾಗಾಗಿ ನಾನು ಬಾಲ್ಯವನ್ನು ದುಬೈನಲ್ಲೇ ಕಳೆದೆ. ಬಾಲ್ಯದಲ್ಲೇ ವಿಮಾನದಲ್ಲಿ ಪ್ರಯಾಣಿಸುವ ಅವಕಾಶ ನನಗೆ ಒಲಿದಿತ್ತು. ವಿಮಾನ, ಅದರ ಎಂಜಿನ್, ಪೈಲಟ್‌ಗಳನ್ನು ಬೆರಗುಗಣ್ಣುಗಳಿಂದ ನೋಡುತ್ತಿದ್ದೆ. ಭವಿಷ್ಯದಲ್ಲಿ ನಾನೂ ಇದೇ ರೀತಿ ವಿಮಾನ ಹಾರಾಟ ನಡೆಸಬೇಕು ಎಂಬ ಹಂಬಲ ಆಗಲೇ ಮೊಳಕೆಯೊಡೆದಿತ್ತು' ಎಂದರು.

ಹನಿಯಾ ಅವರು ಎಂಟನೇ ತರಗತಿವರೆಗೆ ಕಲಿತಿದ್ದು ದುಬೈನಲ್ಲಿ. ಮಕ್ಕಳ ವಿದ್ಯಾಭ್ಯಾಸದ ಸಲುವಾಗಿಯೇ ಮಹಮ್ಮದ್ ಹನೀಫ್ ದುಬೈನ ಉದ್ಯೋಗ ತೊರೆದು ಊರಿಗೆ ಮರಳಿದ್ದರು. ಹನಿಯಾ, ನಗರದ ಬಿಜೈನ ಲೂರ್ಡ್ಸ್ ಶಾಲೆಯಲ್ಲಿ 9 ಮತ್ತು 10ನೇ ತರಗತಿ ಕಲಿತಿದ್ದರು. ನಗರದ ಮಹೇಶ್ ಪಿ.ಯು. ಕಾಲೇಜಿನಲ್ಲಿ ಪಿ.ಯು. ಶಿಕ್ಷಣ ಪಡೆದಿದ್ದರು. ನಂತರ ಮೈಸೂರಿನ ಓರಿಯೆಂಟಲ್ ಫ್ಲೈಟ್ಸ್ ಏವಿಯೇಷನ್ ಅಕಾಡೆಮಿಯಲ್ಲಿ ಮೂರೂವರೆ ವರ್ಷ ಕಮರ್ಷಿಯಲ್ ಪೈಲಟ್ ತರಬೇತಿ ಪಡೆದಿದ್ದಾರೆ.

'ನನ್ನ ಸಾಧನೆಗೆ ತಂದೆ ಮತ್ತು ತಾಯಿಯ ಪ್ರೋತ್ಸಾಹವೇ ಕಾರಣ' ಎಂದು ಹೆಮ್ಮೆಯಿಂದ ಹೇಳಿಕೊ-ಳ್ಳುತ್ತಾರೆ ಹನಿಯಾ. 'ಏನೇ ಆಸೆ ತೋಡಿಕೊಂಡರೂ ಅದಕ್ಕೆ ನನ್ನ ತಂದೆ– ತಾಯಿ ಇಲ್ಲ ಎಂದವರಲ್ಲ. ನನ್ನ ಮೇಲೆ ಭರವಸೆ ಇಟ್ಟು, ಉತ್ತೇಜನ ನೀಡಿದ್ದರಿಂದಲೇ ಪೈಲಟ್ ಆಗುವ ನನ್ನ ಕನಸು ಕೈಗೂಡುತ್ತಿದೆ. ಬದುಕಿನ ಹೆಜ್ಜೆ ಹೆಜ್ಜೆಯಲ್ಲೂ ಅವರು ಸ್ಥೈರ್ಯ ತುಂಬಿ ಬೆಂಬಲ ನೀಡಿದ್ದಾರೆ' ಎಂದರು.

ಮಗಳ ಸಾಧನೆ ಖುಷಿ ಕೊಟ್ಟಿದೆ: 'ಮಗಳಿಗೆ ಬಾಲ್ಯದಲ್ಲೇ ವಿಮಾನದಲ್ಲಿ ಹಾರಾಡುವುದೆಂದರೆ ಎಲ್ಲಿಲ್ಲದ ಖುಷಿ. ಆಗಲೇ ನಾನು ಪೈಲಟ್ ಆಗುತ್ತೇನೆ ಎಂದು ಹೇಳುತ್ತಿದ್ದಳು. ಆಗ ನಾವು ಅಷ್ಟೇನೂ ತಲೆಕೆಡಿಸಿಕೊಂಡಿರಲಿಲ್ಲ. ಆದರೆ, ಎಸ್ಎಸ್ಎಲ್‌ಸಿ ಮುಗಿಸುವಷ್ಟ ರಲ್ಲಿ ಅವಳು ಇದನ್ನು ಗಂಭೀರವಾಗಿ ಪರಿಗಣಿಸಿದ್ದಾಳೆ ಎಂಬುದು ಸ್ಪಷ್ಟ ವಾಯಿತು' ಎಂದು ನಾಜಿಯಾ ತಿಳಿಸಿದರು.

ಸ್ಪೇನ್‌ನ ಮ್ಯಾಡ್ರಿಡ್‌ನಲ್ಲಿ ಪೈಲಟ್ ಕಾರ್ಯನಿರ್ವಹಣೆ ಕುರಿತ ಎರಡು ತಿಂಗಳ ಸಿಮ್ಯುಲೇಷನ್ ತರಬೇತಿ ಪಡೆಯುವ ಇರಾದೆಯನ್ನು ಹನಿಯಾ ಹೊಂದಿದ್ದಾರೆ.

> **ನಿಮ್ಮ ಕನಸನ್ನು ನೀವು ಯಾವತ್ತೂ ಬಿಟ್ಟುಕೊಡಬೇಡಿ. ಅದನ್ನು ಸಾಧಿಸುವುದಕ್ಕೆ ಶಕ್ತಿ ಮೀರಿ ಪ್ರಯತ್ನಿಸಿ. ಒಂದಲ್ಲ ಒಂದು ದಿನ ಕನಸು ಕೈಗೂಡುತ್ತದೆ**
> **ಹನಿಯಾ ಹನೀಫ್**

> **ಮಗಳಿಗೆ ಪೈಲಟ್ ತರಬೇತಿ ಕೊಡಿಸುತ್ತಿರುವುದಕ್ಕೆ ನಮ್ಮ ಸಮುದಾಯದಲ್ಲಿ ಕೆಲವರು ವಿರೋಧ ವ್ಯಕ್ತಪಡಿಸಿದ್ದುಂಟು. ಆದರೆ, ನಮಗೆ ಮಗಳ ಕನಸು ಮುಖ್ಯವಾಗಿತ್ತು**
> **ಮಹಮ್ಮದ್ ಹನೀಫ್,** ಹನಿಯಾ ತಂದೆ

ಮುಕ್ತ ವಿ.ವಿ ಪದವಿ ಪ್ರಮಾಣ ಪತ್ರ; ಅರ್ಜಿ ಆಹ್ವಾನ

ಪ್ರಜಾವಾಣಿ ವಾರ್ತೆ

ಮೈಸೂರು: ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ 18ನೇ ವಾರ್ಷಿಕ ಘಟಿಕೋತ್ಸವವು ಜೂನ್ ತಿಂಗಳಿನಲ್ಲಿ ನಡೆಯಲಿದೆ. 2018-19, 2019-20 ಹಾಗೂ 2020-21ನೇ ಸಾಲಿನ ಸ್ನಾತಕ, ಸ್ನಾತಕೋತ್ತರ ವಿದ್ಯಾರ್ಥಿಗಳು ಪದವಿ ಪ್ರಮಾಣಪತ್ರ-ಗಳನ್ನು ಪಡೆಯಲು http://www.ksoumysuru.ac.in ವೆಬ್‌ಸೈಟ್ ಮೂಲಕ ಜೂನ್ 9ರ ಒಳಗೆ ಅರ್ಜಿ ಸಲ್ಲಿಸಬಹುದು. ₹100 ದಂಡ ಶುಲ್ಕದೊಡನೆ ಜೂನ್ 15ರವರೆಗೆ ಅರ್ಜಿ ಸಲ್ಲಿಸಬಹುದು.

ಪದಕ ಮತ್ತು ನಗದು ಬಹುಮಾನ ಪಡೆದವರು, ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾದವರು ಹಾಗೂ ಪಿಎಚ್.ಡಿ ಪದವೀಧರರು ಮಾತ್ರ ಘಟಿ ಕೋತ್ಸವದಲ್ಲಿ ಖುದ್ದಾಗಿ ಪ್ರಮಾಣಪತ್ರ ಪಡೆಯಬಹುದು ಎಂದು ಪರೀಕ್ಷಾಂಗ ಕುಲಸಚಿವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕರ್ನಾಟಕ ಸರ್ಕಾರ
ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ ಕಲಬುರಗಿ
"ಅಭಿವೃದ್ಧಿ ಭವನ" ಐವಾನ–ಎ–ಶಾಹಿ, ಕಲಬುರಗಿ–585102
ದೂರವಾಣಿ : (08472) – 256767, 239556, 255564, ಫ್ಯಾಕ್ಸ್ : (08472) 227527
E-mail : hkadbgulb@gmail.com Website : hkrdb.kar.nic.in
ಸಂಖ್ಯೆ: KKRDB/TECH/ 243/2022-23 ದಿನಾಂಕ: 20–05–2023
ಅಲ್ಪಾವಧಿ ಟೆಂಡರ ಪ್ರಕಟಣೆ
1) ಕಾಮಗಾರಿಯ ಹೆಸರು : "Supply of Medical Equipments to ESIC medical college and Hospital at Kalaburagi under MACRO fund of KKRDB", 2) ಲೆಕ್ಕ ಶೀರ್ಷಿಕೆ: KKRDB ನಿಧಿ, 3) ಗುತ್ತಿಗೆದಾರರ ಅರ್ಹತೆ : ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನ ದಸ್ತಾವೇಜಿನಲ್ಲಿ, 4) ಟೆಂಡರ್ ದಸ್ತಾವೇಜನ್ನು ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಡೌನ್‌ಲೋಡ್ ಮಾಡಿಕೋಳ್ಳುವ ಪ್ರಾರಂಭ ದಿನಾಂಕ: 23.05.2023, 5) ಕ್ಯಾರೀಸ್ ಸಲ್ಲಿಸುವ ದಿನಾಂಕ : 29-05-2023 ಮಧ್ಯಾಹ್ನ 5.30ಕ್ಕೆ, 5) ಪ್ರಿ–ಬಿಡ್ ಸಭೆ ದಿನಾಂಕ (online) : 31-05-2023 ಬೆಳಿಗ್ಗೆ 11.30ಕ್ಕೆ, 6) ಟೆಂಡರ್ ಫಾರಂ ಸಲ್ಲಿಸುವ ಅಂತಿಮ ದಿನಾಂಕ: 05-06-2023 ಮಧ್ಯಾಹ್ನ 4.00ರ ವರೆಗೆ, 7) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 06-06-2023 ಮಧ್ಯಾಹ್ನ 4.30ಕ್ಕೆ, 8) ಆರ್ಥಿಕ ಬಿಡ್ ತೆರೆಯುವ ದಿನಾಂಕ : 08-06-2023 ಬೆಳಿಗ್ಗೆ 11.30ಕ್ಕೆ, 9) ಟೆಂಡರ್ ಅರ್ಜಿ ಬೆಲೆ: ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಇದ್ದಂತೆ, 10) ಇ.ಎಂ.ಡಿ.ಮೊತ್ತ: ರೂ. 2,00,000/-, 11) ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಬೇಕಾದ ವಿಳಾಸ: https://eproc.karnataka.gov.in ಅಥವಾ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ, ಐವಾನ್–ಇ–ಶಾಹಿ, ಕಲಬರಗಿ ರಲ್ಲಿ ಸಂಪರ್ಕಿಸಬಹುದು, 12) ಅಂತರ್‌ಜಾಲ ತಾಣದ ವಿಳಾಸ: https://eproc.karnataka.gov.in, 13) ಬದಲಾವಣೆಗಾಗಿ ಸಂಪರ್ಕಿಸುವ ಬಗ್ಗೆ: ಯಾವುದೇ ಬದಲಾವಣೆ ಹಾಗು ಮಾರ್ಪಾಡುಗಳಿಗಾಗಿ https://eproc.karnataka.gov.in ಕ್ಕೆ ಸಂಪರ್ಕಿಸಬಹುದು.
ಸಹಿ/– ಉಪ ಕಾರ್ಯದರ್ಶಿಗಳು ಕ.ಕ.ಪ್ರ.ಅ. ಮಂಡಳಿ, ಕಲಬುರಗಿ
ವಾ.ಸಾ.ಸಂ.ಇ/ಕಲಬುರಗಿ/22/ಕೆ.ಎಸ್.ಎಂ.ಸಿ.&ಎ/2023–24

ಸುಭಾಷಿತ

ಸ್ವರ್ಗ ಎಂಬುದು ಬೇರೆಲ್ಲೂ ಇಲ್ಲ, ಯಾವಾಗಲೂ ಸಂತೋಷವಾಗಿ ಇರುವವರ ಮನಸ್ಸೇ ಸ್ವರ್ಗ.

–ರಾಮಕೃಷ್ಣ ಪರಮಹಂಸ

ನಗರ ಮಹಾಪೂರ: ನಿರ್ವಹಣೆಯಲ್ಲಿ ಸಂಪೂರ್ಣ ಮುಗ್ಗರಿಸಿದ ಬಿಬಿಎಂಪಿ

ಬೆಂಗಳೂರಿನಲ್ಲಿ ಮಳೆ ಅನಾಹುತಗಳಿಗೂ ಇರುವ ನಂಟಿಗೆ ಕೊನೆ ಎಂಬುದೇ ಇಲ್ಲವೇನೋ. ಭಾನುವಾರ ಧೋ ಎಂದು ಸುರಿದ ಮಳೆಯಿಂದ ಉಂಟಾದ ಪ್ರವಾಹಕ್ಕೆ ಎರಡು ಜೀವಗಳು ಬಲಿಯಾಗಿವೆ. ಅಂಡರ್‌ಪಾಸ್‌ನಲ್ಲಿ ನಿಂತ ನೀರಿನಲ್ಲಿ ಮುಳುಗಿಹೋದ ಕಾರಿನಲ್ಲಿದ್ದ ಭಾನುರೇಖಾ ಎಂಬ ಯುವತಿ ಮತ್ತು ಕೆ.ಪಿ. ಅಗ್ರಹಾರದ ರಾಜಕಾಲುವೆಯ ಪ್ರವಾಹದಲ್ಲಿ ಕೊಚ್ಚಿಹೋದ ಲೋಕೇಶ್ ಎಂಬ ಯುವಕ ಸಾವನ್ನಪ್ಪಿರುವುದು, ಈ ಅವಘಡಗಳ ಸಾಲಿಗೆ ಹೊಸ ಸೇರ್ಪಡೆಗಳಷ್ಟೆ. ಕೆ.ಆರ್. ವೃತ್ತದ ಬಳಿ ಮುಚ್ಚಿಕೊಂಡಿರುವ ಅಂಡರ್‌ಪಾಸ್‌ನಲ್ಲಿ ಎಂಟು ಅಡಿಗಳಷ್ಟು ನೀರು ಸಂಗ್ರಹವಾಗಿತ್ತು ಎಂದು ವರದಿಯಾಗಿದೆ. ಕಾರು ಮುಳುಗಿ ಯುವತಿ ಸಾವನ್ನಪ್ಪಿದ್ದು ಇಲ್ಲಿಯೇ. ಅಂಡರ್‌ಪಾಸ್‌ಗಳ ನಿರ್ವಹಣೆಯಲ್ಲಿ ಬಿಬಿಎಂಪಿ ಎಷ್ಟೊಂದು ನಿರ್ಲಕ್ಷ್ಯ ವಹಿಸಿದೆ ಎನ್ನುವುದಕ್ಕೆ ಇದಕ್ಕಿಂತ ಬೇರೆ ಸಾಕ್ಷ್ಯ ಏನೂ ಬೇಕಾಗಿಲ್ಲ. ನಗರ ಯೋಜನಾ ತಜ್ಞರು ಹೇಳುವಂತೆ, ಬೆಂಗಳೂರಿನ ಅಂಡರ್‌ಪಾಸ್‌ಗಳನ್ನು ಅವೈಜ್ಞಾನಿಕವಾಗಿ ನಿರ್ಮಿಸಲಾಗಿದೆ. ಅವುಗಳು ರಸ್ತೆಯ ಮೇಲ್ಮೈಯಿಂದ ತುಂಬಾ ಆಳದಲ್ಲಿರುವ ಕಾರಣ, ಅಲ್ಲಿ ಸಂಗ್ರಹವಾಗುವ ಮಳೆ ನೀರು ಸರಾಗವಾಗಿ ಹರಿದುಹೋಗುವುದಿಲ್ಲ. ಅಂಡರ್‌ಪಾಸ್‌ಗಳಲ್ಲಿ ಸಂಗ್ರಹವಾಗುವ ನೀರನ್ನು ಗುರುತ್ವಾಕರ್ಷಣೆ ಬದಲಿಗೆ ರಾಜಕಾಲುವೆಗೆ ಸೇರಿಸಲು ಬಹುದೂರದ ವರೆಗೆ ಕೊಳವೆ ಮಾರ್ಗಗಳನ್ನು ಅಳವಡಿಸಲಾಗಿದೆ. ಆ ಕೊಳವೆ ಮಾರ್ಗಗಳಲ್ಲಿ ಹೂಳು ತುಂಬದಂತೆ ಎಚ್ಚರ ವಹಿಸುವಲ್ಲಿ ಮಾತ್ರ ಬಿಬಿಎಂಪಿ ಸಂಪೂರ್ಣವಾಗಿ ಸೋತಿದೆ. ಮೇಲ್ಸೇತುವೆಗಳಲ್ಲಿಯೂ ಹೂಳು ತುಂಬಿದ್ದರಿಂದ ನೀರು ತುಂಬಾ ಹೊತ್ತಿನವರೆಗೆ ರಸ್ತೆಯ ಮೇಲೇ ನಿಂತು ಅಪಾಯದ ತೀವ್ರತೆಯನ್ನು ಹೆಚ್ಚಿಸಿದೆ. ಮಳೆ ಅನಾಹುತಗಳು, ನಗರ ಮಹಾಪೂರಗಳು ಇತ್ತೀಚಿನ ವರ್ಷಗಳಲ್ಲಿ ತೀವ್ರಗತಿಯಲ್ಲಿ ಹೆಚ್ಚುತ್ತಿದ್ದರೂ ಏನೂ ಕ್ರಮ ಕೈಗೊಳ್ಳದ ಸಮ್ಮುಖದಲ್ಲಿರುವ(?) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ (ಬಿಬಿಎಂಪಿ) ಈ ಪರಿ ನಿರ್ಲಕ್ಷ್ಯ ಆಶ್ಚರ್ಯ ಹುಟ್ಟಿಸುತ್ತದೆ. ನಾಗರಿಕರ ನೋವಿನ ಆರ್ತನಾದ ಕೇಳದಷ್ಟು ಅದರ ಕಿವಿ ಮಂದವಾಗಿದೆ. ಕಳೆದ ವರ್ಷದ ಸೆಪ್ಟೆಂಬರ್‌ನಲ್ಲಿ ಸತತ ಒಂದು ವಾರ ಸುರಿದ ಮಳೆಗೆ ಬೆಂಗಳೂರಿನ ಪೂರ್ವಭಾಗದ ಹಲವು ಪ್ರದೇಶಗಳು ಜಲಾವೃತವಾದ ಘಟನೆಯು ಜನರನ್ನು 'ಇನ್ನೂ' ದುಃಸ್ವಪ್ನವಾಗಿ ಕಾಡುತ್ತಿದೆ. ಆಗ ಅಲ್ಲಿನ ರಸ್ತೆಗಳು ಹೊಳೆಯಂತಾಗಿದ್ದವು, ಬಡಾವಣೆಗಳು ಕೆರೆಯ ರೂಪ ತಾಳಿದ್ದವು. ಮಳೆಯ 'ಹೊಡೆತ' ತೀವ್ರವಾಗಿ ತಾಗಿದಾಗ ಆರಂಭಶೂರರಂತೆ(?) ಒಂದಿಷ್ಟು ಕಾಮಗಾರಿ ನಡೆಸುವುದು, ಪುನಃ ಕುಂಭಕರ್ಣ ನಿದ್ರೆಗೆ ಜಾರುವುದು ಪಾಲಿಕೆಗೆ ಚಾಳಿಯಾಗಿಬಿಟ್ಟಿದೆ.

ಮಳೆ ಅನಾಹುತಗಳು, ನಗರ ಮಹಾಪೂರಗಳು ಇತ್ತೀಚಿನ ವರ್ಷಗಳಲ್ಲಿ ತೀವ್ರಗತಿಯಲ್ಲಿ ಹೆಚ್ಚುತ್ತಿದ್ದರೂ ಏನೂ ಕ್ರಮ ಕೈಗೊಳ್ಳದ ಬಿಬಿಎಂಪಿಯ ಅತೀವ ನಿರ್ಲಕ್ಷ್ಯ ಆಶ್ಚರ್ಯ ಹುಟ್ಟಿಸುತ್ತದೆ

ಬೆಂಗಳೂರನ್ನು ನಗರ ಮಹಾಪೂರದ ಅಪಾಯದಿಂದ ತಪ್ಪಿಸಲು 'ಸರಪಳಿ ರಾಜಕಾಲುವೆ'ಗಳು, ಕೆರೆ-ಕಟ್ಟೆಗಳು ಇಲ್ಲಿದ್ದವು. ಮಳೆನೀರಿನ ಒತ್ತಡವನ್ನು ತಡೆದುಕೊಳ್ಳಲು ಈ 'ಒಡ್ಡನೆ'ಗಳು(?) ಸ್ಪಂಜಿನಂತೆ ಕೆಲಸ ಮಾಡುತ್ತಿದ್ದವು. ರಾಜಕಾಲುವೆಗಳು, ಕೆರೆ-ಕಟ್ಟೆಗಳು ಒತ್ತುವರಿಯಾಗುವುದನ್ನು ಬಿಬಿಎಂಪಿ ಮಾತ್ರವಲ್ಲದೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಕೂಡ ಕಣ್ಮುಚ್ಚಿಕೊಂಡು ಕುಳಿತಿತ್ತು. ಕೆಲವು ಅಧಿಕಾರಿಗಳಂತೂ ರಿಯಲ್ ಎಸ್ಟೇಟ್ ಮಾಫಿಯಾದೊಂದಿಗೆ ಕೈಜೋಡಿಸಿದ ದೂರುಗಳೂ ಜೋರಾಗಿ ಕೇಳಿಬಂದವು. ಅದರ ಫಲವನ್ನೀಗ ನಗರದ ಅಷ್ಟೂ ನಾಗರಿಕರು ಉಣ್ಣಬೇಕಿದೆ. ಬೆಂಗಳೂರು ನಗರ ಜಿಲ್ಲೆಯಲ್ಲಿ ಒಟ್ಟು 1,848 ಎಕರೆಯಷ್ಟು ಕೆರೆ ಅಂಗಳ ಪ್ರದೇಶ ಒತ್ತುವರಿಯಾಗಿದೆ ಎಂದು ಎ.ಟಿ.ರಾಮಸ್ವಾಮಿ ಸಮಿತಿ ವರದಿ ದಾಖಲಿಸಿದೆ. ಆ ಒತ್ತುವರಿ ತೆರವು ಕುರಿತು ಆಗಾಗ ವಿಧಾನಮಂಡಲದಲ್ಲಿ ಚರ್ಚೆ ಜೋರಾಗಿಯೇ ಆಗುತ್ತದೆ. ಸಾಮಾನ್ಯವಾಗಿ ಮಳೆಗಾಲಕ್ಕೆ ಬೇಸಿಗೆಯಲ್ಲೇ ತಯಾರಿ ಮಾಡಿಕೊಳ್ಳುವುದು ವಾಡಿಕೆ. ಹೂಳನ್ನು ತೆಗೆಯುವುದು, ಮೋರಿ ದುರಸ್ತಿಗೊಳಿಸುವುದು, ಚರಂಡಿ ಗೋಡೆಯನ್ನು ಸರಿಪಡಿಸುವುದು– ಹೀಗೆ ಎಲ್ಲ ಕಾರ್ಯಗಳೂ ಆಗಲೇ ಆಗಬೇಕು. ಆದರೆ, ಪಾಲಿಕೆ ಆಡಳಿತ ತನ್ನ ಹೊಣೆಯನ್ನು ಮರೆತು ಕುಳಿತಿದೆ ಎನ್ನುವುದಕ್ಕೆ ಈಗ ನಡೆದಿರುವ ಅವಘಡಗಳೇ ಪುರಾವೆ. ಆಡಳಿತ ವ್ಯವಸ್ಥೆಯನ್ನು ತಿವಿದು ಎಚ್ಚರಿಸಬೇಕಿದ್ದ ಚುನಾಯಿತ ಕೌನ್ಸಿಲ್ ಸಹ ಸದ್ಯ ಅಸ್ತಿತ್ವದಲ್ಲಿ ಇಲ್ಲ. ಅಧಿಕಾರಿಗಳ ಆಟಕ್ಕೆ ಮಿತಿಯೆಂಬುದೇ ಇಲ್ಲದಂತಾಗಿದೆ(?).

ಕೆಲವು ವರ್ಷಗಳ ಹಿಂದೆ ಪ್ರವಾಹ ಪರಿಸ್ಥಿತಿ ಉಲ್ಬಣಿಸಿದಾಗ ಎಲ್ಲ ಒತ್ತುವರಿಗಳನ್ನು ತೆರವುಗೊಳಿಸಲಾಗುವುದು ಎಂದು ಅಬ್ಬರಿಸಿ, ಕಾರ್ಯಾಚರಣೆಯನ್ನೂ ಆರಂಭಿಸಲಾಯಿತು. ಬೆಂಗಳೂರಿನ ಪೂರ್ವಭಾಗದಲ್ಲಿ ಜೆಸಿಬಿ ಯಂತ್ರಗಳ ಸದ್ದು ಜೋರಾಗಿ ಮೊಳಗಿತು. ದಿನಗಳು ಕಳೆದಂತೆ, ಬಿಬಿಎಂಪಿಗೆ ಭೂಮಾಫಿಯಾ 'ಕೊಂಡಿ' ಎದುರಾಯಿತು(?). ಕಾರ್ಯಾಚರಣೆ ತಣ್ಣಗಾಯಿತು. ಪ್ರಭಾವಿಗಳ ಒತ್ತಡದಿಂದ ಒತ್ತುವರಿ ತೆರವು ಕೆಲಸವನ್ನು ಆಗ ಮೊಟಕುಗೊಳಿಸಿದ್ದರಿಂದ ಇಂದಿನ ಬವಣೆಯ ಪರಿಸ್ಥಿತಿ ನಿರ್ಮಾಣವಾಯಿತು(?). ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮತ್ತೆ ಒತ್ತುವರಿ ತೆರವು ಕಾರ್ಯಾಚರಣೆ ನಡೆಸುವ ಮಾತುಗಳನ್ನಾಡಿದ್ದಾರೆ. ಆದರೆ, ಅಧಿಕಾರಸ್ಥರ ಇಂತಹ ಹೇಳಿಕೆಗಳ ಕುರಿತು ಜನ ಭರವಸೆಯನ್ನೇ ಕಳೆದುಕೊಂಡಿದ್ದಾರೆ. ಪ್ರಬಲ ಇಚ್ಛಾಶಕ್ತಿ ಪ್ರದರ್ಶಿಸಿ ಕಾರ್ಯಾಚರಣೆ ನಡೆಸಿ ಗುರಿ ಮುಟ್ಟಿದಾಗಲಷ್ಟೇ ಅವರ ಮಾತಿನ ಮೇಲೆ ವಿಶ್ವಾಸ ಮೂಡಲು ಸಾಧ್ಯ. ಇನ್ನು ಅಂಡರ್‌ಪಾಸ್‌ಗಳ ವಿಷಯ. ರಸ್ತೆಯ ಮೇಲ್ಮೈನಿಂದ ಅಷ್ಟೊಂದು ಆಳದಲ್ಲಿ ಅವುಗಳನ್ನು ನಿರ್ಮಿಸುವ ಅವಶ್ಯಕತೆ ಇತ್ತೇ ಎನ್ನುವ ಪ್ರಶ್ನೆ ಮೊದಲು ಎದುರಾಗುತ್ತದೆ. ಈಗಾಗಲೇ ನಿರ್ಮಾಣಗೊಂಡ ಅವೈಜ್ಞಾನಿಕ ಅಂಡರ್‌ಪಾಸ್‌ಗಳ ವಿನ್ಯಾಸ ಸರಿಪಡಿಸುವುದು ಹೇಗೆ ಎಂಬ ಸಲಹೆಯನ್ನು ತಜ್ಞರಿಂದ ಪಡೆದು, ಸರಿಪಡಿಸುವ ಕೆಲಸ ಆಗಬೇಕು. ಕೆಟ್ಟಮೇಲೆ ಬುದ್ಧಿ ಬಂತು ಎನ್ನುವಂತೆ, ಬಿಬಿಎಂಪಿ ಈಗ ನಗರದ 18 ಪ್ರಮುಖ ಅಂಡರ್‌ಪಾಸ್‌ಗಳನ್ನು ಬಂದ್ ಮಾಡಿಸಿದೆ. ಎಲ್ಲ ಅಂಡರ್‌ಪಾಸ್‌ಗಳ ಸಮಗ್ರ ಸಮೀಕ್ಷೆ ನಡೆಸಿ, ನೀರು ಸರಾಗವಾಗಿ ಹರಿದುಹೋಗುವಂತೆ ವ್ಯವಸ್ಥೆ ಮಾಡಿದ ಮೇಲೆ ಸಂಚಾರಕ್ಕೆ ಮುಕ್ತಗೊಳಿಸಲಾಗುವುದು ಎಂದು ತಿಳಿಸಿದೆ. ಈ ಕೆಲಸವನ್ನು ಮೊದಲೇ ಮಾಡಿದ್ದರೆ ಅಮೂಲ್ಯ ಜೀವ ಪ್ರವಾಹಕ್ಕೆ ಬಲಿಯಾಗುವ ದಾರುಣ ಸ್ಥಿತಿ ಬರುತ್ತಿರಲಿಲ್ಲ.

ದಿನದ ಟ್ವೀಟ್

ಈಡೇರದ ಉದ್ದೇಶ

ಕೆಲವು ರಾಜಕಾರಣಿಗಳು ಮತ್ತು ಸರ್ಕಾರಿ ಅಧಿಕಾರಿಗಳಿಗೆ ಹಣ ಮಾಡಿಕೊಟ್ಟಿದ್ದನ್ನು ಹೊರತುಪಡಿಸಿದರೆ ಬೇರೆ ಯಾವ ಉದ್ದೇಶವನ್ನೂ ಈಡೇರಿಸದ ಹಲವು ಅಂಡರ್‌ಪಾಸ್‌ಗಳು ಮತ್ತು ಫ್ಲೈಓವರ್‌ಗಳು ಬೆಂಗಳೂರಿನಲ್ಲಿ ಇವೆ. ಭಾನುವಾರ ದುರಂತವೊಂದು ನಡೆದ ಕೆ.ಆರ್.ಸರ್ಕಲ್ ಅಂಡರ್‌ಪಾಸ್ ಅಂಥವುಗಳ ಪೈಕಿ ಒಂದು.

ತೇಜಸ್ವಿ ಉಡುಪ, ಸಿಪಿಒ, ಫೌಂಡಿಟ್ ಇಂಡಿಯಾ

ಕಿಡಿನುಡಿ

ಭ್ರಷ್ಟಾಚಾರಕ್ಕೆ ದಾಖಲೆ ಕೊಡುವಂತೆ ಹಿಂದಿನ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಕೇಳುತ್ತಾರೆ. ಮಾಜಿ ಶಾಸಕ ಮಾಡಾಳ್ ವಿರೂಪಾಕ್ಷಪ್ಪ ಅವರ ಮನೆಯಲ್ಲಿ ಕೋಟಿಕೋಟಿ ಹಣ ಸಿಕ್ಕಿದೆ. ಸಬ್‌ಇನ್‌ಸ್ಪೆಕ್ಟರ್ ನೇಮಕಾತಿ ಅಕ್ರಮದಲ್ಲಿ ಅಂದಿನ ಎಡಿಜಿಪಿ ಅಮ್ರಿತ್ ಪೌಲ್ ಜೈಲು ಸೇರಿದ್ದಾರೆ. ರಾಜ್ಯದೆಲ್ಲೆಡೆ ಗುತ್ತಿಗೆದಾರರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಇದಕ್ಕಿಂತ ದೊಡ್ಡ ಸಾಕ್ಷ್ಯ ಬೇಕೆ?

ಎಂ.ಬಿ.ಪಾಟೀಲ, ಸಚಿವ

25 ವರ್ಷಗಳ ಹಿಂದೆ

ಶನಿವಾರ, 23-5-1998

• ಅಭ್ಯರ್ಥಿ ವಯಸ್ಸು ಇಳಿಕೆ– ಸರ್ವಪಕ್ಷಗಳ ಸಮ್ಮತಿ

ನವದೆಹಲಿ, ಮೇ 22 (ಯುಎನ್‌ಐ)– ಲೋಕಸಭೆ ಮತ್ತು ರಾಜ್ಯಗಳ ವಿಧಾನ ಸಭೆಗಳಿಗೆ ಸ್ಪರ್ಧಿಸುವ ಅಭ್ಯರ್ಥಿಗಳ ವಯೋಮಿತಿಯನ್ನು 25ರಿಂದ 21ಕ್ಕೆ ಇಳಿಸುವ ಪ್ರಸ್ತಾವಕ್ಕೆ ಸರ್ವಪಕ್ಷಗಳೂ ಸಮ್ಮತಿ ನೀಡಿವೆ.

ಇದೇ ರೀತಿ ರಾಜ್ಯಸಭೆ ಹಾಗೂ ರಾಜ್ಯಗಳ ವಿಧಾನಪರಿಷತ್ತುಗಳಿಗೆ ಸ್ಪರ್ಧಿಸಬಯಸುವವರ ವಯೋಮಿತಿಯನ್ನು 30ರಿಂದ 25ಕ್ಕೆ ಇಳಿಸಬೇಕು ಎಂದೂ ಅಭಿಪ್ರಾಯ ವ್ಯಕ್ತವಾಗಿದೆ ಎಂದು ತಿಳಿಸಿದ ಗೃಹ ಸಚಿವ ಎಲ್.ಕೆ.ಅಡ್ವಾಣಿ ಅವರು, ಸದ್ಯ ಭವಿಷ್ಯದಲ್ಲಿ ಈ ಸಂಬಂಧ ಮಸೂದೆಯೊಂದನ್ನು ಸಿದ್ಧಗೊಳಿಸಲಾಗುವುದು ಎಂದು ಪತ್ರಕರ್ತರಿಗೆ ತಿಳಿಸಿದ್ದಾರೆ. ಮತದಾನದ ವಯಸ್ಸನ್ನು 21ರಿಂದ 18ಕ್ಕೆ ಇಳಿಸಿದ ಹಿನ್ನೆಲೆಯಲ್ಲಿ ಈ ಅಭಿಪ್ರಾಯ ವ್ಯಕ್ತವಾಗಿದೆ.

50 ವರ್ಷಗಳ ಹಿಂದೆ

ಬುಧವಾರ, 23-5-1973

• ಪಕ್ಷದ, ಸ್ವಂತ ಪ್ರವಾಸಕ್ಕೆ ಸಚಿವರಿಗೆ ಹಣ ನಿಷೇಧ

ಬೆಂಗಳೂರು, ಮೇ 22– ಸಚಿವರುಗಳು ಪಕ್ಷದ ಹಾಗೂ ಸ್ವಂತ ಕಾರ್ಯಕ್ಕಾಗಿ ಪ್ರವಾಸ ಮಾಡಿ, ಹಣ ಪಡೆಯುವುದನ್ನು ನಿಷೇಧಿಸಲಾಗಿದೆ ಎಂದು ಲೋಕೋಪಯೋಗಿ ಸಚಿವ ಶ್ರೀ ಎಚ್.ಎಂ.ಚೆನ್ನಬಸಪ್ಪ ಅವರು ಇಂದು ವಿಧಾನಸಭೆಯಲ್ಲಿ ತಿಳಿಸಿದರು.

ಸಾರ್ವಜನಿಕ, ಅಗತ್ಯದ ದೃಷ್ಟಿ ಮತ್ತು ಕಾಲಾವಕಾಶ ನೋಡಿಕೊಂಡು ಸಚಿವರುಗಳು ಪ್ರವಾಸ ಮಾಡುವರೆಂದು ಸಚಿವರು ಹೇಳಿ, ತಿಂಗಳಿಗೆ ಇಷ್ಟೇ ದಿವಸ ಹೋಗಬೇಕೆಂದು ನಿಯಮ ಮಾಡಿದರೆ ಕಷ್ಟ ಎಂದರು.

• ಅಶಿಸ್ತಿಗಾಗಿ ಸೇನೆಯಿಂದ ಪೊಲೀಸರ ಶಸ್ತ್ರಾಸ್ತ್ರ ಹರಣ ಕಾಳಗ

ಲಖನೌ, ಮೇ 22– ಸೇನೆಯ ತುಕಡಿಗಳು ಇಂದು ಮುಂಜಾನೆ ಉತ್ತರಪ್ರದೇಶದ ವಿವಿಧ ಭಾಗಗಳಲ್ಲಿ ಪ್ರಾಂತೀಯ ಸಶಸ್ತ್ರ ಪೊಲೀಸ್ ಪಡೆಗಳ ಮೇಲೆ ಮತ್ತು ಅವುಗಳ ಶಸ್ತ್ರಾಗಾರಗಳ ಮೇಲೆ ಎರಗಿ ಬಿದ್ದು, ಸೋಮವಾರ ಲಖನೌ ವಿಶ್ವವಿದ್ಯಾನಿಲಯದ ಆವರಣದಲ್ಲಿ ನಡೆದ ಲೂಟಿ ಪ್ರಕರಣದಲ್ಲಿ ಕೈವಾಡವಿದೆಯೆಂದು ಶಂಕಿಸಲಾದ ಸಿಬ್ಬಂದಿಯಿಂದ ಶಸ್ತ್ರಾಸ್ತ್ರ ಕಸಿದುಕೊಂಡವು.

ಕಾಂಗ್ರೆಸ್– ಬಿಜೆಪಿ ನೇರ ಹಣಾಹಣಿ, ತಳಕಚ್ಚಿದ ಮೂರನೇ ಶಕ್ತಿಗಳು

ಮೀಸಲು ಕ್ಷೇತ್ರ: ಒಳರಾಜಕಾರಣ

ವಿಶ್ಲೇಷಣೆ

ವಾದಿರಾಜ್

ಕರ್ನಾಟಕದ ವಿಧಾನಸಭಾ ಚುನಾವಣೆಯು ಕಾಂಗ್ರೆಸ್ಸಿಗೆ ಸ್ಪಷ್ಟ ಬಹುಮತ ತಂದುಕೊಟ್ಟಿರುವುದು ಹಲವು ಸಂದೇಶಗಳನ್ನು ಹೊರಹಾಕಿದೆ. ಪರಿಶಿಷ್ಟ ಜಾತಿಗಳ 36 ಮೀಸಲು ಕ್ಷೇತ್ರಗಳ ಫಲಿತಾಂಶ ಈ ಸಂದೇಶಗಳ ಜೊತೆಗೆ ಮತ್ತಷ್ಟು ಒಳವಿವರಗಳನ್ನು ಒದಗಿಸುತ್ತದೆ.

ಮೀಸಲಾತಿಯ ಪ್ರಮಾಣ ಹೆಚ್ಚಳ, ಒಳಮೀಸಲಾತಿ ಶಿಫಾರಸು, ಬಂಜಾರ ಸಮುದಾಯದ ಪ್ರತಿಭಟನೆ, ಮಲ್ಲಿಕಾರ್ಜುನ ಖರ್ಗೆ ಅವರು ಕಾಂಗ್ರೆಸ್ಸಿನ ರಾಷ್ಟ್ರೀಯ ಅಧ್ಯಕ್ಷರಾಗಿರುವುದು, ಸಾಹಿತಿ ದೇವನೂರ ಮಹಾದೇವ ಸೇರಿದಂತೆ ಕೆಲ ದಲಿತ ಸಂಘಟನೆಗಳ ಪ್ರಮುಖರು ಕಾಂಗ್ರೆಸ್ಸಿಗೆ ಬಹಿರಂಗವಾಗಿ ಬೆಂಬಲ ನೀಡಿದ್ದು... ಹೀಗೆ ಅನೇಕ ಸಂಗತಿಗಳು ಎಸ್‌ಸಿ ಮೀಸಲು ಕ್ಷೇತ್ರಗಳ ಚುನಾವಣೆಯನ್ನು ಪ್ರಭಾವಿಸಿವೆ.

ಕಾಂಗ್ರೆಸ್ ಹಿಂದಿನ ಸಲ 13 ಮೀಸಲು ಕ್ಷೇತ್ರಗಳಲ್ಲಿ ಗೆದ್ದಿತ್ತು. ಈ ಸಲ 21ಕ್ಕೆ ಏರಿದೆ. ಬಿಜೆಪಿ 17ರಿಂದ 12ಕ್ಕೆ, ಜೆಡಿಎಸ್ 6ರಿಂದ 3ಕ್ಕೆ ಕುಸಿದಿವೆ. ಕಾಂಗ್ರೆಸ್ ಗೆದ್ದ 21 ಕ್ಷೇತ್ರಗಳಲ್ಲಿ ಬಲಗೈ ಪಂಗಡದ 11, ಎಡಗೈ ಪಂಗಡದ 6, ಬೋವಿ ಸಮುದಾಯದ ಮೂವರು ಹಾಗೂ ಬಂಜಾರ ಸಮುದಾಯದ ಒಬ್ಬರು ಗೆದ್ದಿದ್ದಾರೆ. ಅದೇ ಬಿಜೆಪಿಯಲ್ಲಿ ಬಲಗೈನಿಂದ ಒಬ್ಬರು, ಎಡಗೈನ ಇಬ್ಬರು, ಬೋವಿ ಹಾಗೂ ಬಂಜಾರ ಸಮುದಾಯಗಳ ತಲಾ ನಾಲ್ವರು, ಇತರರಲ್ಲಿ ಒಬ್ಬರು ಆಯ್ಕೆಯಾಗಿದ್ದಾರೆ. ಜೆಡಿಎಸ್‌ನಿಂದ ಬಲಗೈನ ಒಬ್ಬರು, ಬಂಜಾರ ಸಮುದಾಯದ ಇಬ್ಬರು ಗೆದ್ದಿದ್ದಾರೆ. ಅಸ್ಪೃಶ್ಯ ಜಾತಿಗಳ ನಡುವೆ ಕಾಂಗ್ರೆಸ್‌ಗೆ ಹೆಚ್ಚು ಲಾಭವಾಗಿರುವುದನ್ನು ಗಮನಿಸಬಹುದು.

ಕೇಂದ್ರ ಸರ್ಕಾರಕ್ಕೆ ಒಳಮೀಸಲಾತಿಯ ಶಿಫಾರಸು ಮಾಡಿದ್ದು ಬಂಜಾರ ಸಮುದಾಯ ಬೀದಿಗೆ ಬರಲು ಕಾರಣವಾಯಿತು. ಆದರೆ ಬಂಜಾರ ಸಮುದಾಯದಿಂದ ಗೆದ್ದ ಏಳು ಶಾಸಕರಲ್ಲಿ ನಾಲ್ವರು ಬಿಜೆಪಿಯವರೇ ಆಗಿದ್ದಾರೆ. ಕಾಂಗ್ರೆಸ್ಸಿನಿಂದ ಐವರು ಸ್ಪರ್ಧಿಸಿದ್ದರೂ ಗೆದ್ದದ್ದು ಹಾವೇರಿಯ ರುದ್ರಪ್ಪ ಲಮಾಣಿ ಮಾತ್ರ. ಬೋವಿ ಸಮುದಾಯಕ್ಕೆ ಕಾಂಗ್ರೆಸ್ ಐದು ಹಾಗೂ ಬಿಜೆಪಿ ಆರು ಮಂದಿಗೆ ಟಿಕೆಟ್ ನೀಡಿದ್ದವು. ಕಾಂಗ್ರೆಸ್‌ನಿಂದ ಮೂವರು, ಬಿಜೆಪಿಯಿಂದ ನಾಲ್ವರು ಗೆದ್ದಿರುವುದು ಆ ಸಮುದಾಯದ ಸಂಘಟಿತ ಶಕ್ತಿ ಹಾಗೂ ಆರ್ಥಿಕ ಗಟ್ಟಿತನವನ್ನು ತೋರಿಸುತ್ತದೆ. ಈ ಸಲವೂ ಇಳಕಲ್ಲಿನ ಗ್ರಾನೈಟ್ ದೊರೆಗಳೇ ಲಿಂಗಸುಗೂರು, ಕನಕಗಿರಿಯಲ್ಲಿ ಹಿಡಿತ ಸಾಧಿಸಿದ್ದಾರೆ.

ಕಲ್ಯಾಣ ಕರ್ನಾಟಕವು ತಳವರ್ಗಗಳ ಜನಬಾಹುಳ್ಯ ಇರುವ ಪ್ರದೇಶ. ಇಲ್ಲಿನ ಎಂಟು ಎಸ್‌ಸಿ ಮೀಸಲು ಕ್ಷೇತ್ರಗಳಲ್ಲಿ ಕಾಂಗ್ರೆಸ್ ಪಕ್ಷವು ಒಂದು ಕ್ಷೇತ್ರದ ಟಿಕೆಟ್ಟನ್ನೂ ಮಾದಿಗರಿಗೆ ಕೊಡದೇ ಇದ್ದದ್ದು ಚರ್ಚೆಗೆ ಕಾರಣವಾಗಿತ್ತು. ಈ ಎಂಟರಲ್ಲಿ ಬಿಜೆಪಿ ಐದು ಸ್ಥಾನಗಳಲ್ಲಿ ಗೆದ್ದಿತು. ಕಾಂಗ್ರೆಸ್ ಗೆದ್ದದ್ದು ಎರಡರಲ್ಲಷ್ಟೆ. ಇಡೀ ಕಲ್ಯಾಣ ಕರ್ನಾಟಕದಲ್ಲಿ ಬಿಜೆಪಿ ಗೆದ್ದದ್ದೇ 10 ಕ್ಷೇತ್ರಗಳನ್ನು. ಆದರೆ ಆ 10ರಲ್ಲಿ ಐವರು ಎಸ್‌ಸಿ ಮೀಸಲು ಕ್ಷೇತ್ರದಿಂದ ಆಯ್ಕೆಯಾಗಿದ್ದಾರೆ.

ದಲಿತ ಮೀಸಲು ಕ್ಷೇತ್ರಗಳಲ್ಲಿ ಮಹಿಳಾ ಪ್ರಾತಿನಿಧ್ಯ ಸಾಂಕೇತಿಕ ಎನಿಸಿಬಿಟ್ಟಿದೆ. ಈವರೆಗೂ ಒಬ್ಬರೋ ಇಬ್ಬರೋ ಗೆದ್ದರೆ ಹೆಚ್ಚು ಎನ್ನುವಂತೆ ಇತ್ತು. ಆದರೆ ಈ ಸಲ ರೂಪಾ ಶಶಿಧರ್, ನಯನಾ ಮೋಟಮ್ಮ, ಶಾರದಾ ಪೂರ್ಯಾನಾಯ್ಕ, ಭಾಗೀರಥಿ ಮುರುಳ್ಯ, ಮಂಜುಳಾ ಲಿಂಬಾವಳಿ ಸೇರಿ ಐವರು ಶಾಸನಸಭೆ ಪ್ರವೇಶಿಸಿದ್ದಾರೆ. ಸುಳ್ಯದ ಭಾಗೀರಥಿ ಮುರುಳ್ಯ ಅವರು ಆಶ್ರಯ ಮನೆಯಲ್ಲಿ ನೆಲೆಸಿರುವ ಸಾಮಾನ್ಯ ಕುಟುಂಬದ ಹೆಣ್ಣುಮಗಳು. ಅವರದು 'ಮನ್ಸ' ಎಂದು ಗುರುತಿಸಲಾಗುವ ಅತ್ಯಂತ ಸಣ್ಣ ಪ್ರಮಾಣದ ಅಸ್ಪೃಶ್ಯ ಜಾತಿ. ಈ 'ಮನ್ಸ' ಎಂಬ ಜಾತಿ 101 ಜಾತಿಗಳ ಎಸ್‌ಸಿ ಪಟ್ಟಿಯಲ್ಲಿ ಇಲ್ಲವೇ ಇಲ್ಲ. ಆರು ತಿಂಗಳ ಹಿಂದಷ್ಟೇ ರಾಜ್ಯ ಸರ್ಕಾರವು ಮನ್ಸ ಜಾತಿಯ ಕುಲಶಾಸ್ತ್ರೀಯ ಅಧ್ಯಯನಕ್ಕೆ ಆದೇಶಿಸಿದೆ ಎನ್ನುತ್ತಾರೆ ಸಮಾಜದ ಸಂಘಟನೆಯಲ್ಲಿ ತೊಡಗಿಸಿಕೊಂಡಿರುವ ಅಚ್ಚುತ ಮನ್ಸ.

ಜೆಡಿಎಸ್‌ನ ಬಲ ಕ್ಷೀಣಿಸಿದ್ದರಿಂದಾಗಿ ಬಹುತೇಕ ಕಡೆ ಕಾಂಗ್ರೆಸ್- ಬಿಜೆಪಿಯ ನಡುವೆಯೇ ಹಣಾಹಣಿ. ಹಾಗೆ ನೋಡಿದರೆ, ಈ ಸಲ ಚುನಾವಣಾ ಹೋರಾಟದಲ್ಲಿ ಕಣ್ಮರೆಯಾಗಿರುವುದು ಬಹುಜನ ಸಮಾಜ ಪಕ್ಷ. ದಲಿತರ ಅಸ್ಮಿತೆಯಾಗಿ ರೂಪುಗೊಂಡಿದ್ದ ಬಿಎಸ್‌ಪಿಗೆ ಈ ಸಲ ಮರ್ಯಾದೆ ಉಳಿಸಿದ್ದು- ಕಾಂಗ್ರೆಸ್ ಟಿಕೆಟ್ ಸಿಗದೆ ಬಿಎಸ್‌ಪಿ ಚಿಹ್ನೆಯಡಿ ಸ್ಪರ್ಧಿಸಿ 25 ಸಾವಿರ ವೋಟು ಪಡೆದ ಪುಲಕೇಶಿನಗರದ ಅಖಂಡ ಶ್ರೀನಿವಾಸಮೂರ್ತಿ ಮಾತ್ರ. ಉಳಿದೆಡೆ ಬಿಎಸ್‌ಪಿ ಹುರಿಯಾಳುಗಳು ಮೂರು ಸಾವಿರದೊಳಗೆ ಮತ ಪಡೆದಿದ್ದಾರೆ. ದಲಿತ ಸಂಘಟನೆಗಳ ಕಾಂಗ್ರೆಸ್ ಬೆಂಬಲಿಸುವ ನಿರ್ಣಯದ ಹೊಡೆತ ಬಿಎಸ್‌ಪಿಗೂ ಬಿದ್ದಂತಿದೆ. ದಲಿತ ಸಂಘಟನೆಗಳ ಜೊತೆಗಿನ ಮಾತುಕತೆಯಲ್ಲಿ ಕಾಂಗ್ರೆಸ್ ಪಕ್ಷವು ಮಾದಿಗ ಸಮುದಾಯಕ್ಕೆ 14 ಟಿಕೆಟ್‌ಗಳನ್ನು ನೀಡುವುದಾಗಿ ಹೇಳಿತ್ತು. ಹಾಗೆಯೇ ದಲಿತ ಚಳವಳಿಯ, ಎಡ- ಬಲ ಗುಂಪಿನ ನಾಲ್ವರು ಹೋರಾಟಗಾರರಿಗೆ ಟಿಕೆಟ್ ಕೊಡುವುದಾಗಿ ಒಪ್ಪಿತ್ತು. ಇದ್ಯಾವುದನ್ನೂ ಈಡೇರಿಸದಿದ್ದರೂ ದಲಿತ ಸಂಘಟನೆಗಳು ಕಾಂಗ್ರೆಸ್ಸಿಗೆ ಬೆಂಬಲ ನೀಡುವ ಔದಾರ್ಯ ತೋರಿವೆ.

36 ಎಸ್‌ಸಿ ಮೀಸಲು ಕ್ಷೇತ್ರಗಳಲ್ಲಿ ನಾಲ್ಕು ಕಡೆ 'ನೋಟಾ'ಕ್ಕೆ ಮೂರನೇ ಸ್ಥಾನ ದಕ್ಕಿದೆ. ಇಲ್ಲೆಲ್ಲ ನೋಟಾಕ್ಕೆ ದಕ್ಕಿರುವುದು ಸಾವಿರ ಚಿಲ್ಲರೆ ಮತ. ಜೆಡಿಎಸ್, ಬಿಎಸ್‌ಪಿ ಅಷ್ಟೂ ವೋಟು ಪಡೆಯದಿರುವುದು ನೋಟಾವನ್ನು 3ನೇ ಸ್ಥಾನಕ್ಕೆ ಏರಿಸಿದೆ. ಎಸ್‌ಸಿ ಮೀಸಲು ಕ್ಷೇತ್ರಗಳಲ್ಲಿ ಕಾಂಗ್ರೆಸ್ ದೊಡ್ಡ ಫಲಾನುಭವಿಯೇ ಆದರೂ, ನಿವೃತ್ತ ಐಎಎಸ್ ಅಧಿಕಾರಿಯೊಬ್ಬರು ಪಕ್ಷೇತರರಾಗಿ ಸ್ಪರ್ಧಿಸಿದ್ದು ರಾಯಭಾಗದಲ್ಲಿ ಕಾಂಗ್ರೆಸ್ ಪಕ್ಷವನ್ನು ನಾಲ್ಕನೇ ಸ್ಥಾನಕ್ಕೆ ಇಳಿಸಿದೆ.

ದಾವಣಗೆರೆ ಪಕ್ಕದ ಮಾಯಕೊಂಡ ಮೀಸಲು ಕ್ಷೇತ್ರದಲ್ಲಿ ಬೇಡಜಂಗಮ ನಕಲಿ ಜಾತಿ ಪ್ರಮಾಣಪತ್ರ ಪಡೆದಿರುವ ಆರೋಪ ಎದುರಿಸುತ್ತಿರುವ ಪುಷ್ಪಾ ವಾಗೀಶಸ್ವಾಮಿ ಪಕ್ಷೇತರರಾಗಿ ಸ್ಪರ್ಧಿಸಿ 37,614 ಮತ ಗಳಿಸಿ ಎರಡನೇ ಸ್ಥಾನ ಪಡೆದಿರುವುದು ದಲಿತ ವಲಯಕ್ಕೆ ಆತಂಕದ ಬೆಳವಣಿಗೆ. ಪ್ರಬಲ ಜಾತಿಗಳ ಮತಗಳು ಈ ಪಕ್ಷೇತರ ಅಭ್ಯರ್ಥಿಯ ಪಾಲಾಗಿ ಬಿಜೆಪಿಯ ಅಭ್ಯರ್ಥಿ ಬಸವರಾಜ್ ನಾಯಕ ಅವರನ್ನು ಮೂರನೇ ಸ್ಥಾನಕ್ಕೆ ತಳ್ಳಿವೆ.

ದಲಿತ- ಮುಸ್ಲಿಂ ಏಕತೆಯ ಹೆಸರಿನಲ್ಲಿ ಎಸ್‌ಡಿಪಿಐ, ಎಐಎಂಐಎಂ ಪಕ್ಷಗಳು ಮೀಸಲು ಕ್ಷೇತ್ರಗಳಲ್ಲಿ ಸ್ಪರ್ಧಿಸುತ್ತವೆ. ಹುಬ್ಬಳ್ಳಿ ಪೂರ್ವ ಮೀಸಲು ಕ್ಷೇತ್ರದಲ್ಲಿ ಜೆಡಿಎಸ್‌ನಿಂದ ಸ್ಪರ್ಧಿಸಿದ್ದ ಮಾಜಿ ಶಾಸಕರನ್ನು ಹಿಂದಿಕ್ಕಿ ಎಐಎಂಐಎಂ ಮೂರನೇ ಸ್ಥಾನಕ್ಕೆ ಬಂದಿದೆ.

ಒಂದು ಸಾವಿರಕ್ಕೂ ಕಡಿಮೆ ಅಂತರದಲ್ಲಿ ಗೆಲುವು ನಿಶ್ಚಯವಾಗಿರುವುದು ಚಿಂಚೋಳಿ, ಮೂಡಿಗೆರೆಯಲ್ಲಿ. ಐದು ಸಾವಿರದೊಳಗಿನ ಅಂತರದಲ್ಲಿ ಹಡಗಲಿ, ರಾಯಭಾಗ, ಸಕಲೇಶಪುರ, ದೇವನಹಳ್ಳಿಯಲ್ಲಿ ಜಯ ಸಿಕ್ಕಿದೆ. ಇಲ್ಲೆಲ್ಲ ಸ್ವಲ್ಪ ಗಮನಹರಿಸಿ ಚುನಾವಣೆ ನಿಭಾಯಿಸಿದ್ದರೆ, ಸೋತವರು ಫಲಿತಾಂಶ ತಮ್ಮ ಕಡೆ ತಿರುಗುವಂತೆ ಮಾಡಿಕೊಳ್ಳಬಹುದಿತ್ತು.

2008ರಲ್ಲಿ ಪರಿಶಿಷ್ಟ ಜಾತಿಗಳ ಮೀಸಲು ಕ್ಷೇತ್ರಗಳ ಮರುವಿಂಗಡಣೆ ಆಯಿತು. ಆನಂತರ ಇದು ನಾಲ್ಕನೇ ಚುನಾವಣೆ. ಈ ನಾಲ್ಕೂ ಚುನಾವಣೆಗಳಲ್ಲಿ ಬಿಜೆಪಿಯು ಔರಾದ್, ರಾಯಭಾಗ, ಮಹದೇವಪುರ, ಸಿ.ವಿ. ರಾಮನ್ ನಗರ, ಸುಳ್ಯ ಕ್ಷೇತ್ರಗಳಲ್ಲಿ ಗೆಲುವು ದಾಖಲಿಸಿದೆ. ಚಿತ್ತಾಪುರದಲ್ಲಿ ಕಾಂಗ್ರೆಸ್ ಇದೇ ಸಾಧನೆ ಮಾಡಿದೆಯಾದರೂ ಮಧ್ಯದಲ್ಲೊಮ್ಮೆ ಉಪಚುನಾವಣೆಯಲ್ಲಿ ಸೋತಿತ್ತು. ದಲಿತ ಮುಖ್ಯಮಂತ್ರಿಯ ಸಾಧ್ಯತೆ ಚುನಾವಣಾ ವಿಷಯವೂ ಆಗದಿರುವುದು ಕರ್ನಾಟಕದ ಮಟ್ಟಿಗೆ ಈ ಹೊತ್ತಿನ ದುರಂತ.

ಚುರುಮುರಿ

ಆರ್‌ಸಿಬಿ ಆತ್ಮಕಥೆ

• ಲಿಂಗರಾಜು ಡಿ.ಎಸ್.

'ವೈಡ್, ನೋಬಾಲು ಹಾಕ್ಕಂದು ಆರ್‌ಸಿಬಿ ಬಕ್ಕಬಾರಲು ಬಿದ್ದೋಯ್ತಲ್ಲ ಸಾ' ವ್ಯಥೆಪಟ್ಟೆ.

'ಒಂದನೇ ಮನೇಲಿರೋ ಆರ್ ಅಂದ್ರ ರಾಹು ಎರಡನೇ ಮನೇಲಿರೋ ಚಂದ್ರನಿಗೆ ಅಡ್ಡ ಬಂದು ಚಂದ್ರಗ್ರಹಣ ಆಗಿರವೊತ್ಗೇ ಟೀಮು ಸೋಲ್ತಾ ಅದೆ ಕನೋ. ಮೂರನೇ ಮನೇಲಿರೋ ಬಿ ಬುಧ ಏನೂ ಮಾಡಕ್ಕಾಯ್ತಿಲ್ಲ' ತುರೇಮಣೆ ವಿವರಿಸಿದರು.

'ಯಾಕಿಂಗೆ?' ವಿಚಾರಿಸಿದೆ.

'ಹೆಸರುಬಲ ಇಲ್ಲ ಕಜಾ! ಆರ್‌ಸಿಬಿ ಹೆಸರು ಬದ್ಲಾಸಿ ಮ್ಯಾಕ್‌ಡೊವಲ್ ನಂಬರ್ ಒನ್ ಚಾಲೆಂಜರ್ಸ್ ಬೆಂಗಳೂರು- ಎಂಸಿಬಿ ಅಂತ ಹೆಸರಿಟ್ರೆ ಒಂದನೇ ಮನೇಗೇ ಎಂ- ಮಂಗಳ ಬತ್ತನೆ. ಆಗ ಕಪ್ ನಮ್ದೇ' ತುರೇಮಣೆ ಪರಿಹಾರ ಕೊಟ್ಟರು.

'ಕಿಂಗ್‌ಫಿಷರ್ ಚಾಲೆಂಜರ್ಸ್ ಬೆಂಗಳೂರು ಕೆಸಿಬಿ ಅಂತ ಹೆಸರು ಮಡಗಿದ್ರೆ ಒಂದನೇ ಮನೇಗೇ ಕೆ ಅಂದ್ರೆ ಕೇತು ಬಂದು ಅಮಿಕ್ಕತನೇನೋ' ಚಂದ್ರು ಬೇಜಾರಾದ.

'ಅದಿರ್ಲಿ ಈಗ ಸರ್ಕಾರದ ಕುಂಡಲಿ ನೋಡಿ ಸಾ?' ಅಂತಂದೆ.

'ಟಗರು ಹೋಗಿ ಬಂಡೆಗೆ ಗುದ್ದಿದರೆ, ಬಂಡೆ ಟಗರು ಮ್ಯಾಲೆ ಬಿದ್ದರೆ ಬಾಜಿ ಕಟ್ಟೋರಿಗೆ ಮಜ ಕಯ್ಯಾ. ಸರ್ಕಾರವ ಇಬ್ಬರೇ ತಳ್ಳಕಾದದೇ? ಅಧಿಕಾರಿಲ್ದೆ ಬರಗೆಟ್ಟರೋ ಮುದುಕರು ಯಾಕೆ? ಕೆಲಸ ಮಾಡೋ ಯೋಗ್ಯರು ಬಲಕ್ಕಿದ್ರೆ ವಾಸ್ತು ದೋಷ ಪರಿಹಾರ' ತುರೇಮಣೆ ವಿವರಿಸಿದರು.

'ಕಾಂಗ್ರೆಸ್ ಕೈಲಿ ಆಗಕುಲ್ಲ ಅಂತ, ಆಗದೋರು ಮುಳ್ಳು ಮುರೀತಾವ್ರೆ. ಮೋದಿ ಇನ್ನು ಮೂರು ಕಾಸು ಕೊಡಕ್ಕುಲ್ಲ. ಸರ್ಕಾರವೇ ಅರ್ಥ ಮಾಡಿಕ್ಯಂಡು ಸಾಲ ಮಾಡದಂಗೆ ಗ್ಯಾರಂಟಿಗಳ ಖರ್ಚು ನಿಭಾಯಿಸಬೇಕಾತದೆ' ಅಂತು ಯಂಟಪ್ಪಣ್ಣ.

'ಈ ಸರ್ತಿನಾದ್ರೂ ಕುಡುಕರಿಗೆ ದಿನಕ್ಕೊಂದು ಮಿಳ್ಳೆ ಫ್ರೀ ಎಣ್ಣೆ ಭಾಗ್ಯ ಕೊಡಬೌದಾಗಿತ್ತು' ಚಂದ್ರು ನೊಂದುಕೊಂಡ.

'ಕೈ ಪಕ್ಷದ ಮುದುಕರು ಮೋಟರು ಅಧಿಕಾರ ಸಿಕ್ಕು ಅಂತ ಫುಲ್ ಬಾಟಲು ಶೇಕುತ್ಕೆಲ ಹಾಕಿದಂಗೆ ವಾಲಾಡ್ತಾವೆ. ಇನ್ನು ನಿನಗೆಲ್ಲಿ ಎಣ್ಣೆ ಉಳಿದದ್ದಾ?' ಅಂದ್ರು ತುರೇಮಣೆ.

ಸರ್ಕಾರದ ಅಮಲು ನೋಡಿದ್ರೆ ನಿಮಗೂ ಹಂಗೇ ಅನ್ನಿಸಿರಬಕು ಅಲ್ಲುವ್ರಾ!

ಸಂಗತ

ಇದೋ ಬಂದಿದೆ ಆಮೆಗಳ ಹಬ್ಬ

ಜೀವವೈವಿಧ್ಯದ ಪ್ರಮುಖ ಕೊಂಡಿಯೆನಿಸಿರುವ ಆಮೆಗಳ ಆವಾಸಗಳನ್ನು ಸದೃಢಗೊಳಿಸಬೇಕಾದ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ

• ಗುರುರಾಜ್ ಎಸ್. ದಾವಣಗೆರೆ

ತಮಿಳುನಾಡಿನ ರಾಮನಾಥಪುರಂನ ಕರಾವಳಿ ತೀರದಲ್ಲಿ ಈ ವರ್ಷದ ಮಾರ್ಚ್ ಮೂರರಂದು ಸೇರಿದ್ದ ಸರ್ಕಾರಿ ಶಾಲೆಯ ಮಕ್ಕಳಿಗೆ ಸಂಭ್ರಮವೋ ಸಂಭ್ರಮ. ಪರೀಕ್ಷೆಯ ಒತ್ತಡದ ನಡುವೆಯೂ ಕಡಲತೀರಕ್ಕೆ ಬಂದಿದ್ದ ವಿದ್ಯಾರ್ಥಿಗಳು, ಆಗತಾನೇ ಮರಳುಗೂಡಿನಿಂದ ಹೊರಬಂದಿದ್ದ ಕಡಲಾಮೆ ಮರಿಗಳನ್ನು ಕೈಯಲ್ಲಿ ಹಿಡಿದು ಕಡಲಿಗೆ ಬಿಟ್ಟು, ಅವು ಅವಸರದಲ್ಲಿ ಪುಟುಪುಟು ಹೆಜ್ಜೆ ಇರಿಸಿ ತೇಲಿ ಹೋಗುವುದನ್ನು ನೋಡಿ, ಆಕಾಶಕ್ಕೆ ರಾಕೆಟ್ ಹಾರಿಸಿದಷ್ಟೇ ಖುಷಿಯಾಗಿದ್ದರು. ಅರಣ್ಯ ಇಲಾಖೆಯವರು ರಕ್ಷಿಸಿ ಮರಿ ಮಾಡಿಸಿದ್ದ ಇತರ 12,000 ಕಡಲಾಮೆಯ ಮರಿಗಳನ್ನು ಅಂದು 'ಸಾಗರಜೀವಿಗಳ ಜೀವಿಗೋಳ' ಎಂದೇ ಖ್ಯಾತವಾಗಿರುವ ಮನ್ನಾರ್‌ಕೊಲ್ಲಿಯಲ್ಲಿ ತೇಲಿಬಿಡಲಾಗಿತ್ತು. ಆಮೆಗಳ ಹಬ್ಬವೇ ನಡೆದಿತ್ತು. ಇತ್ತ ನಮ್ಮ ಕರ್ನಾಟಕದ ಹೊನ್ನಾವರದ ಕಡಲ ತೀರದಲ್ಲೂ ಕಡಲಾಮೆಗಳ ಹಬ್ಬ ಮೇಳೈಸಿತ್ತು.

ಬೇಸಿಗೆ ಬಂತೆಂದರೆ, ಸಾಗರಗಳಲ್ಲೇ ಗರ್ಭ ಧರಿಸಿದ ಸಾವಿರಾರು ಕಡಲಾಮೆಗಳು ತೀರಕ್ಕೆ ಬಂದು, ಮರಳಿನ ಗೂಡು ರಚಿಸಿ, ಎಂಬತ್ತರಿಂದ ನೂರು ಮೊಟ್ಟೆಗಳನ್ನಿಟ್ಟು ಸದ್ದಿಲ್ಲದೆ ಸಮುದ್ರ ಸೇರಿಕೊಳ್ಳುತ್ತವೆ. ಒಂದರಿಂದ ಎರಡು ಅಡಿ ಆಳದ ಗುಂಡಿ ತೆರೆದು ಮೊಟ್ಟೆ ಇಡುವುದಷ್ಟೇ ಕೆಲಸ. ಮೊಟ್ಟೆಗಳಿಗೆ ಕಾವು ಕೊಡುವ ಕೆಲಸ ಮರಳಿನದ್ದು. ಮೊಟ್ಟೆಯಿಂದ ಮರಿಗಳು ಹೊರಬರಲು 45ರಿಂದ 60 ದಿನಗಳು ಬೇಕು. ಮರಳಿನ ಉಷ್ಣಾಂಶ ಕಡಿಮೆ ಇದ್ದರೆ ಗಂಡು, ಜಾಸ್ತಿಯಾದರೆ ಹೆಣ್ಣು ಆಮೆಗಳು ಜನಿಸುತ್ತವೆ. ಜನಿಸಿದ ಕೆಲವೇ ನಿಮಿಷಗಳಲ್ಲಿ ಗೂಡಿನಿಂದ ಮೇಲಕ್ಕೆ ಒಂದು ಅಲೆಯ ರೂಪದಲ್ಲಿ ಸಾವಿರಾರು ಆಮೆಗಳು ಕಡಲು ಸೇರಿಕೊಳ್ಳುತ್ತವೆ. ಮೊಟ್ಟೆಗಳು ಹಾಗೂ ಮರಿಗಳು ಕೆಲವೊಮ್ಮೆ ಬೇಟೆ ಹಕ್ಕಿ, ಹದ್ದು, ನಾಯಿ, ಜನರ ಪಾಲಾಗುವುದೂ ಉಂಟು. ಪ್ರವಾಸಿಗರ ತುಳಿತಕ್ಕೆ ಸಿಲುಕಿ ನಾಶವಾಗುವುದೂ ಇದೆ.

ದಕ್ಷಿಣ ಏಷ್ಯಾದ ಸಾಗರಜೀವಿಗಳ ಸ್ವರ್ಗ ಎಂದೇ ಪ್ರಸಿದ್ಧವಾದ ಮನ್ನಾರ್‌ಕೊಲ್ಲಿ (ಗಲ್ಫ್ ಆಫ್ ಮನ್ನಾರ್) ಸಾವಿರಕ್ಕೂ ಹೆಚ್ಚು ಸಾಗರ ಜೀವ ಪ್ರಭೇದಗಳಿಗೆ ನೆಲೆ ಕಲ್ಪಿಸಿದೆ. ನಾಲ್ಕೂವರೆ ಸಾವಿರಕ್ಕೂ ಹೆಚ್ಚು ಆಮೆ ಪ್ರಭೇದಗಳು ಇಲ್ಲಿವೆ. ಮೊಟ್ಟೆಗಳು ನೈಸರ್ಗಿಕವಾಗಿ ಮರಿಗಳಾಗಿ ಕಡಲು ಸೇರುವುದನ್ನು ನೋಡಲು ಬರುವ ದೇಶ ವಿದೇಶಗಳ ಆಸಕ್ತರು, ಚಿತ್ರಗ್ರಾಹಕರು, ಸಂರಕ್ಷಣಾ ತಜ್ಞರು, ವಿಜ್ಞಾನಿಗಳು ಕ್ಯಾಮೆರಾ ಕಣ್ಣುಗಳಿಂದ ಅವುಗಳ ಚೈತನ್ಯಪೂರ್ಣ ಬದುಕಿನ ಕ್ಷಣಗಳನ್ನು ಸೆರೆಹಿಡಿದು ತಾವೂ ಆನಂದಿಸಿ ಇತರರಿಗೂ ಆನಂದ ಹಂಚುತ್ತಾರೆ. ರಕ್ಷಣೆಯ ಜವಾಬ್ದಾರಿಯನ್ನೂ ನೆನಪಿಸುತ್ತಾರೆ.

ಕಡಲಾಮೆಗೂ ಕಾಡು, ಹುಲ್ಲುಗಾವಲು, ಕಲ್ಲುಪೊಟರೆ ಆಮೆಗಳಿಗೂ ವ್ಯತ್ಯಾಸವಿದೆ. ಕಡಲಾಮೆಗಳ ಆಯುಷ್ಯ ಬರೀ 25ರಿಂದ 30 ವರ್ಷಗಳಾದರೆ, ಸಾಧಾರಣ ಆಮೆ ಹತ್ತತ್ತಿರ ಇನ್ನೂರು ವರ್ಷ ಜೀವಿಸಬಲ್ಲದು. ಆಮೆಗಳ ರಕ್ಷಣೆಯ ದಿಸೆಯಲ್ಲಿ ಜಾಗೃತಿ ಮೂಡಿಸಲು ಪ್ರತಿವರ್ಷ ಮೇ 23ರಂದು 'ಆಮೆ ದಿನಾಚರಣೆ' ನಡೆಯುತ್ತದೆ. ಮಾಂಸ, ಚಿಪ್ಪು ಮತ್ತು ಚರ್ಮಗಳಿಗಾಗಿ ಇವುಗಳ ಮಾರಾಟ ಎಗ್ಗಿಲ್ಲದೆ ನಡೆಯುತ್ತಿದೆ. ಶೇ 30ರಷ್ಟು ಪ್ರಭೇದಗಳು ಅಳಿವಿನಂಚಿಗೆ ಸರಿದಿವೆ. ದೋಣಿಗಳಿಗೆ ಬಲೆ ಕಟ್ಟಿಕೊಂಡು ಮೀನು ಶಿಕಾರಿ ಮಾಡುವಾಗ ಮೀನುಗಳ ಜೊತೆ ಲಕ್ಷಾಂತರ ಆಮೆಗಳು ಬಲೆಗೆ ಸಿಲುಕುತ್ತವೆ. ಒಂದು ಲೆಕ್ಕದ ಪ್ರಕಾರ, ಶೇ 52ರಷ್ಟು ಆಮೆಗಳು ಪ್ಲಾಸ್ಟಿಕ್ ಸೇವನೆಯಿಂದ ಸಾಯುತ್ತವೆ ಮತ್ತು ಮೀನುಗಾರರ ಬಲೆಗೆ ಸಿಲುಕುವ ಶೇ 92ರಷ್ಟು ಆಮೆಗಳು ಉಸಿರುಗಟ್ಟಿ ಸಾಯುತ್ತವೆ. ವರ್ಷವೊಂದಕ್ಕೆ ಹತ್ತು ಲಕ್ಷ ಆಮೆಗಳು, ಸೀಲ್, ಡಾಲ್ಫಿನ್‌ಗಳು ಜೀವ ಕಳೆದುಕೊಳ್ಳುತ್ತಿರುವುದು ಜೀವವಿಜ್ಞಾನಿಗಳ ನಿದ್ದೆಗೆಡಿಸಿದೆ.

ಇದನ್ನು ತಡೆಯಲು, ಮುಂದುವರಿದ ದೇಶಗಳಲ್ಲಿ ಟರ್ಟಲ್ ಎಕ್ಸ್‌ಕ್ಲೂಡರ್ ಡಿವೈಸರ್‌ಗಳನ್ನು ಬಳಸುತ್ತಾರೆ. ಇದರಿಂದ ತಮಗೆ ಸಿಗುವ ಮೀನಿನ ಪ್ರಮಾಣ ಕಡಿಮೆಯಾಗುತ್ತದೆ ಎನ್ನುವ ಮೀನುಗಾರರು, ಆಧುನಿಕ ತಂತ್ರಜ್ಞಾನ ಬಳಕೆಗೆ ಆಸಕ್ತಿ ತೋರಿಸುತ್ತಿಲ್ಲ. ಜಪಾನ್‌ನ ತಜ್ಞರು ಸ್ಥಳೀಯ ಮೀನುಗಾರರೊಂದಿಗೆ ಮಾತನಾಡಿ, 'ಬಲೆಯ ವಿನ್ಯಾಸವನ್ನು ಸ್ವಲ್ಪ ಅಗಲ ಮಾಡಿದರೆ ಆಮೆಗಳು ಸುಲಭವಾಗಿ ಬಲೆಯಿಂದ ತಪ್ಪಿಸಿಕೊಳ್ಳುತ್ತವೆ. ನಿಮಗೆ ಬಹಳಷ್ಟು ಮೀನುಗಳು ಸಿಗುತ್ತವೆ' ಎಂದು ಭರವಸೆ ತುಂಬಿ ಮೀನುಗಾರರ ಮನವೊಲಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಮೀನಿನ ಬಲೆಗಳಿಗೆ ಮಿನುಗುವ ಎಲ್‌ಇಡಿ ಬಲ್ಬ್ ಅಳವಡಿಸಿದರೆ, ಮಿಣುಕು ಬೆಳಕು ಗಮನಿಸಿ ಬಲೆಯಿಂದ ದೂರವುಳಿಯುವ ಆಮೆಗಳು ಸುರಕ್ಷಿತ ಜಾಗ ತಲುಪುತ್ತವೆ ಎಂಬುದು ಗೊತ್ತಾಗಿದೆ. ಮಹಾರಾಷ್ಟ್ರದ ಕಾಂಡ್ಲಾ ಕಾಡುಗಳ ಉಸ್ತುವಾರಿ ಸಮಿತಿಯು ಅರಣ್ಯ ಹಾಗೂ ಮೀನುಗಾರಿಕೆ ಇಲಾಖೆಗಳೊಂದಿಗೆ ಚರ್ಚಿಸಿ, ಬಲೆಗೆ ಬೀಳುವ ಆಮೆಗಳನ್ನು ರಕ್ಷಿಸಲು ಬಲೆಯನ್ನು ತುಂಡರಿಸಿ, ಅವು ನೀರಿಗೆ ವಾಪಸಾಗುವಂತೆ ಮಾಡುವ ಮೀನುಗಾರರಿಗೆ ನಗದು ಬಹುಮಾನ ನೀಡುವ ಯೋಜನೆ ಪ್ರಾರಂಭಿಸಿದೆ.

ಜೀವವೈವಿಧ್ಯದ ಪ್ರಮುಖ ಕೊಂಡಿಯೆನಿಸಿರುವ ಆಮೆಗಳು, ಸಾಗರಗಳಲ್ಲಿ ಜೆಲ್ಲಿ ಮೀನುಗಳ ಸಂಖ್ಯೆ ಹತೋಟಿ ಮೀರಿ ವೃದ್ಧಿಯಾಗುವುದನ್ನು ತಡೆಯುತ್ತವೆ. ಹಾಕ್‌ಬಿಲ್ ಪ್ರಭೇದದ ಆಮೆಗಳು ಹವಳದಿಬ್ಬದ ಬೆಳವಣಿಗೆ ಕುಂಠಿತಗೊಳಿಸುವ ಸ್ಪಾಂಜ್‌ಗಳನ್ನು ನಿಯಂತ್ರಿಸುತ್ತವೆ. ಗೂಡಿನ ಸಾವಿರಾರು ಮೊಟ್ಟೆಗಳು ಮರಿಗಳಾಗದೆ ನಾಶವಾದರೂ ಅವುಗಳ ಪೋಷಕಾಂಶ ತೀರಪ್ರದೇಶದ ಸಸ್ಯಸಂಪತ್ತಿನ ವೃದ್ಧಿಗೆ ನೆರವಾಗುತ್ತದೆ. ಅಂಟಾರ್ಕ್ಟಿಕ ಹೊರತುಪಡಿಸಿ ಗೋಳದ ಎಲ್ಲ ಭಾಗಗಳಲ್ಲೂ ಆಮೆಗಳ ಆವಾಸವಿದೆ. ಅವನ್ನು ಸದೃಢಗೊಳಿಸಬೇಕಾದ ಜವಾಬ್ದಾರಿ ನಮ್ಮ ಮೇಲಿದೆ.

ವಾಚಕರ ವಾಣಿ

ಎಲ್ಲಿದೆ ಅಂತಹ ಉದಾರ ನಾಯಕತ್ವ?

ಕಾಂಗ್ರೆಸ್ ನೇತೃತ್ವದ ನೂತನ ಸರ್ಕಾರದ ಪ್ರಮಾಣವಚನ ಸ್ವೀಕಾರ ಸಮಾರಂಭದ ವೇದಿಕೆಯು ವೀಕ್ಷಕರಲ್ಲಿ ಸಂತೋಷ, ಅಸಂತೋಷ ಎರಡಕ್ಕೂ ಕಾರಣವಾಯಿತು. ರಾಹುಲ್ ಗಾಂಧಿ ಇಂಗ್ಲಿಷ್ ಬಲ್ಲವರಾದರೂ ತಮ್ಮ ಮಾತೃಭಾಷೆ ಹಿಂದಿಯಲ್ಲಿ ಮಾತನಾಡಿ ಭಾಷಾ ಪ್ರೇಮ ಮೆರೆದುದು ಸಂತೋಷದ ಸಂಗತಿ. ಅಸಂತೋಷದ ಸಂಗತಿಯೆಂದರೆ, ಜಮೀರ್ ಅಹಮದ್ ಖಾನ್ ಸಂಪುಟ ದರ್ಜೆ ಸಚಿವರಾಗಿ ಇಂಗ್ಲಿಷ್‌ನಲ್ಲಿ ಪ್ರಮಾಣವಚನ ಸ್ವೀಕರಿಸಿದರು. ಇದು ಸರ್ವಥಾ ಸರಿಯಲ್ಲ. ಕನ್ನಡವನ್ನು ಅವರು ಮಾತನಾಡುತ್ತಾರೆ ಎಂದಮೇಲೆ, ಕನ್ನಡವನ್ನು ಇಂಗ್ಲಿಷ್‌ನಲ್ಲಿ ಬರೆದುಕೊಂಡಾದರೂ ಕನ್ನಡದಲ್ಲಿಯೇ ಪ್ರಮಾಣವಚನ ಸ್ವೀಕರಿಸಬೇಕಿತ್ತು.

ಇನ್ನು ರಾಜ್ಯದ ನಿಕಟಪೂರ್ವ ಮುಖ್ಯಮಂತ್ರಿ ಸೇರಿದಂತೆ, ಇತರ ಪಕ್ಷಗಳ ಮಾಜಿ ಮುಖ್ಯಮಂತ್ರಿಗಳು ಸಮಾರಂಭದಲ್ಲಿ ಭಾಗವಹಿಸದೇ ಇದ್ದುದು ಬೇಸರ ಮೂಡಿಸಿತು. ಜೆ.ಎಚ್.ಪಟೇಲ್ ನೇತೃತ್ವದ ಸರ್ಕಾರ ಪತನವಾಗಿ ಎಸ್.ಎಂ.ಕೃಷ್ಣ ಅವರು ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸುವಾಗ, ಸ್ವಯಂ ಪಟೇಲರು ಭಾಗವಹಿಸಿ ಶುಭ ಕೋರಿದರು. ಈಗ ಅಂತಹ ನಾಯಕತ್ವ ಎಲ್ಲಿ?

ಆರ್.ವೆಂಕಟರಾಜು, ಬೆಂಗಳೂರು

ನಕಲಿ ದಾಖಲೆ: ಪರಿಣಾಮದ ಅರಿವಿರಲಿ

ಸರ್ಕಾರಿ ಸೌಲಭ್ಯಗಳನ್ನು ಪಡೆಯಲು ನಕಲಿ ದಾಖಲೆ ಸೃಷ್ಟಿಸುವವರನ್ನು ಕುರಿತ ಮಲ್ಲಿಕಾರ್ಜುನ ಹೆಗ್ಗಳಗಿ ಅವರ ಲೇಖನ (ಸಂಗತ, ಮೇ 22) ಓದಿದ ಮೇಲೆ ಇಂತಹ ಕೆಲವು ಮೋಸದ ಪ್ರಕರಣಗಳು ನನ್ನ ನೆನಪಿಗೆ ಬಂದವು. ಒಂದು ಪ್ರಕರಣದಲ್ಲಿ, ಗಂಡ– ಹೆಂಡತಿ ಇಬ್ಬರೂ ಸರ್ಕಾರಿ ಪ್ರೌಢಶಾಲಾ ಶಿಕ್ಷಕರು. ಒಳ್ಳೆಯ ಸಂಬಳ ಪಡೆಯುತ್ತಿದ್ದಾರೆ. ಆದರೆ ತಮ್ಮ ಮಗಳಿಗೆ ಪಿಯುಸಿ ನಂತರ ಆಯುರ್ವೇದ ವೈದ್ಯ ಪದವಿ ಸೀಟು ಪಡೆಯಲು ಸುಳ್ಳುಮಾಹಿತಿ ನೀಡಿ ಆದಾಯ ಪ್ರಮಾಣಪತ್ರ ಪಡೆದರು. ಆದರೆ ವಿಷಯ ಜಗಜ್ಜಾಹೀರಾಯಿತು. ಒತ್ತಡ ಜಾಸ್ತಿ ಆದಾಗ ವಿದ್ಯಾರ್ಥಿನಿಯ ತಂದೆಯನ್ನು ಅಮಾನತು ಮಾಡಲಾಯಿತು. ಇದರಿಂದ ವಿದ್ಯಾರ್ಥಿನಿಯ ಮನಸ್ಸಿಗೆ ಆಗಿರಬಹುದಾದ ಆಘಾತವನ್ನು ಯಾರೂ ಗಣನೆಗೆ ತೆಗೆದುಕೊಳ್ಳುವುದಿಲ್ಲ.

ಮತ್ತೊಂದು ಪ್ರಕರಣದಲ್ಲಿ, ಮನೆಯಲ್ಲಿ ಅಚ್ಚ ಕನ್ನಡ ಮಾತನಾಡುವ, ಸರ್ಕಾರದ ಉನ್ನತ ಹುದ್ದೆಯಲ್ಲಿ ಇರುವವರೊಬ್ಬರು ಸುಳ್ಳು ಮಾಹಿತಿ ನೀಡಿ, ತಮ್ಮ ಮಗಳ ಹೆಸರಿನಲ್ಲಿ ತಮಿಳು ಮಾತೃಭಾಷಾ ಪ್ರಮಾಣಪತ್ರವನ್ನು ಪಡೆದುಕೊಂಡಿದ್ದಾರೆ. ಅದೇ ಆಧಾರದ ಮೇಲೆ ಮಗಳಿಗೆ ಭಾಷಾ ಅಲ್ಪಸಂಖ್ಯಾತ ಮೀಸಲಾತಿಯಡಿ ಎಂಬಿಬಿಎಸ್ ಸೀಟು ಸಿಕ್ಕಿದೆ. ಆದರೆ ಮಗಳಿಗೆ ಒಂದು ಪದವನ್ನೂ ತಮಿಳಿನಲ್ಲಿ ಮಾತನಾಡುವುದಕ್ಕೆ ಬರುವುದಿಲ್ಲ. ಈಗ ಈ ಬಗ್ಗೆ ದೂರು ದಾಖಲಾಗಿದೆ. ಈ ವಂಚನೆಯ ರೂವಾರಿಯಾಗಿರುವ ತಂದೆ ಏನೂ ಆಗಿಲ್ಲದಂತೆ ಇದ್ದಾರೆ. ಆದರೆ ಮಗಳ ಮನಸ್ಸಿಗೆ ಆಗುವ ಆಘಾತಕ್ಕೆ ಯಾರು ಹೊಣೆ? ನಕಲಿ ಪ್ರಮಾಣಪತ್ರಗಳನ್ನು ಪಡೆಯುವವರು ಸಿಕ್ಕಿಬಿದ್ದಾಗ, ಅದರಿಂದ ತಮ್ಮ ಕುಟುಂಬದ ಮೇಲಾಗುವ ದುಷ್ಪರಿಣಾಮಗಳ ಬಗ್ಗೆ ಮೊದಲು ಯೋಚಿಸಬೇಕು. ಮಾನ ಮರ್ಯಾದೆಗೆ ಅಂಜುವ ಯಾರೂ ಈ ರೀತಿ ನಕಲಿ ದಾಖಲೆಗಳ ಮೂಲಕ ಸರ್ಕಾರಿ ಸವಲತ್ತುಗಳನ್ನು ಪಡೆಯುವ ಧೈರ್ಯವನ್ನು ಮಾಡುವುದಿಲ್ಲ.

ನಿರ್ಮಲ ಕುಮಾರ, ಶಿವಮೊಗ್ಗ

ಮಳೆ ದುರಂತ: ಹೊಣೆ ಮರೆತ ಬಿಬಿಎಂಪಿ

'ಮಳೆ ಬಂದರೆ ಜನ ಸಾಯಬೇಕಾ?' ಎಂದು ಜೆಡಿಎಸ್ ಮುಖಂಡ ಎಚ್.ಡಿ.ಕುಮಾರಸ್ವಾಮಿ ಕೇಳಿದ್ದಾರೆ (ಪ್ರ.ವಾ., ಮೇ 22). ಇದು ನಿಜವಾಗಿಯೂ ಯೋಚಿಸಬೇಕಾದ ಸಂಗತಿಯೇ ಆಗಿದೆ. ಪ್ರಕೃತಿದತ್ತವಾಗಿ ಬರುವ ಮಳೆಗೆ ನಾವು ಸ್ಪಂದಿಸಿ, ನೀರು ನಿಲ್ಲದಂತೆ ನಮ್ಮ ಪರಿಸರವನ್ನು ಚೆನ್ನಾಗಿ ಇಟ್ಟುಕೊಳ್ಳಬೇಕು. ಸರ್ಕಾರ ಮುನ್ನೆಚ್ಚರಿಕೆ ಕ್ರಮವಾಗಿ ರಾಜಕಾಲುವೆಗಳ ಹೂಳು ತೆಗೆಸಿ, ಅಂಡರ್‌ಪಾಸ್ ಹಾಗೂ ಚರಂಡಿಗಳನ್ನು ಸ್ವಚ್ಛ ಮಾಡಿಸಿದ್ದರೆ, ಬೆಂಗಳೂರಿನಲ್ಲಿ ಭಾನುವಾರ ಅಂಡರ್‌ಪಾಸ್‌ನಲ್ಲಿ ಕಾರು ಮುಳುಗಿ ಯುವತಿಯೊಬ್ಬಳು ಸಾವಿಗೀಡಾಗುವ ಪ್ರಮೇಯವೇ ಬರುತ್ತಿರಲಿಲ್ಲ. ಈಗ ಆಕೆಯ ಕುಟುಂಬಕ್ಕೆ ಸರ್ಕಾರ ₹ 5 ಲಕ್ಷ ಪರಿಹಾರ ಘೋಷಿಸಿದೆ. ಆಕೆ ಜೀವಿಸಿದ್ದಿದ್ದರೆ ಕೋಟ್ಯಂತರ ರೂಪಾಯಿ ಸಂಪಾದನೆ ಮಾಡುತ್ತಿದ್ದಳೇನೊ. ಮುಂದಾದರೂ ಇಂತಹ ಅಹಿತಕರ ಬೆಳವಣಿಗೆಗಳು ನಡೆಯದಂತೆ ಜಾಗ್ರತೆಯಿಂದ ಇರಬೇಕಾದದ್ದು ಬೃಹತ್ ಬೆಂಗಳೂರು ಮಹಾನಗರಪಾಲಿಕೆಯ ಕರ್ತವ್ಯ.

ಬಾಲಕೃಷ್ಣ ಎಂ.ಆರ್., ಬೆಂಗಳೂರು

ನೇಮಕಾತಿ ಆದೇಶ ಬರುವುದೆಂತು?

2019ರಲ್ಲಿ ಅಧಿಸೂಚನೆ ಹೊರಡಿಸಿದ ಎಸ್‌ಡಿಎ ಹುದ್ದೆಗಳಿಗೆ ಸಂಬಂಧಿಸಿದಂತೆ ಈಗಾಗಲೇ ಸಿಂಧುತ್ವ ಪ್ರಕ್ರಿಯೆ ಮತ್ತು ಪೊಲೀಸ್ ಪರಿಶೀಲನಾ ಪ್ರಕ್ರಿಯೆ ಸಂಪೂರ್ಣವಾಗಿ ಮುಗಿದಿದೆ. ಹೀಗಿದ್ದರೂ ಅನೇಕ ಇಲಾಖೆಗಳು ನೇಮಕಾತಿ ಆದೇಶ ನೀಡಲು ವಿಳಂಬ ಮಾಡುತ್ತಿವೆ. ಈ ಹುದ್ದೆಗಳಿಗೆ ನೇಮಕಗೊಳ್ಳಲು ಐದು ವರ್ಷಗಳಿಂದಲೂ ಪರಿಶ್ರಮಪಟ್ಟು ಕಾದು ಕುಳಿತಿರುವ ಅಭ್ಯರ್ಥಿಗಳ ನೋವು ಸಂಬಂಧಪಟ್ಟ ನೇಮಕಾತಿ ಪ್ರಾಧಿಕಾರಗಳಿಗೆ ತಿಳಿಯುತ್ತಿಲ್ಲವೇಕೆ?

'ನಿಗದಿತ ಅರ್ಹತೆಯನ್ನು ಪೂರ್ಣಗೊಳಿಸಿರುವ ನಾವು, ಅಧಿಕಾರಿಗಳಾಗಿ ದುಡಿಯುವ ಬದಲು ಸೆಕ್ಯುರಿಟಿ ಏಜೆನ್ಸಿಗಳು, ಫುಡ್ ಡೆಲಿವರಿ ಕಂಪನಿಗಳಲ್ಲಿ ದಿನಗೂಲಿಗಳಾಗಿ ದುಡಿಯಬೇಕಾಗಿದೆ' ಎಂಬುದು ಅನೇಕ ಅಭ್ಯರ್ಥಿಗಳ ಅಳಲು. ಈ ಅವಧಿಯಲ್ಲಿಯೇ ಆಯ್ಕೆಗೊಂಡ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಅಭ್ಯರ್ಥಿಗಳಿಗೆ ಮೂರು ತಿಂಗಳ ಹಿಂದೆಯೇ ನೇಮಕಾತಿ ಆದೇಶ ನೀಡಲಾಗಿದೆ. ಆದರೆ ಇತರ ಇಲಾಖೆಗಳಿಗೆ ಇದು ಸಾಧ್ಯವಾಗದಿರುವುದೇಕೆ? ಇದಕ್ಕೆಲ್ಲಾ ಯಾರು ಹೊಣೆ?

ಸುಜ್ಜಲೂರು ವಿಜಿ, ಟಿ.ನರಸೀಪುರ

ಸರಳ ನಿಯಮ, ಮಾದರಿ ನಡೆ

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಜೀರೊ ಟ್ರಾಫಿಕ್ ಸೌಲಭ್ಯವನ್ನು ತ್ಯಜಿಸಿರುವುದು, ಹಾಗೆಯೇ ಸಾರ್ವಜನಿಕರಿಂದ ಗೌರವ, ಸನ್ಮಾನದ ರೂಪದಲ್ಲಿ ಹಾರ ತುರಾಯಿ, ಶಾಲು ಶಲ್ಯ ಬೇಡ, ಪುಸ್ತಕಗಳನ್ನು ನೀಡಬಹುದೆಂದು ಹೇಳಿರುವುದು ಸ್ವಾಗತಾರ್ಹ. ಹಿಂದೆ ರಾಮಕೃಷ್ಣ ಹೆಗಡೆ ಅವರು ಮುಖ್ಯಮಂತ್ರಿಯಾಗಿದ್ದಾಗ ಇದೇ ರೀತಿಯ ಸರಳ, ಸಾಮಾನ್ಯ ನಿಯಮಗಳನ್ನು ಅನುಸರಿಸಿದ್ದರು. ಮುಖ್ಯಮಂತ್ರಿಯವರ ಬೆಂಗಾವಲು ಪಡೆಗೂ ಹೆಚ್ಚಿನ ವಾಹನಗಳನ್ನು ನಿರಾಕರಿಸಿದ್ದರು. ಪುಸ್ತಕ ಸಂಸ್ಕೃತಿ ಬೆಳೆಸುವ ದಿಸೆಯಲ್ಲಿ ಸಿದ್ದರಾಮಯ್ಯನವರ ಈ ನಡೆ ಮಾದರಿ ಎನ್ನಬಹುದು.

ಗಣಪತಿ ಶಿರಳಗಿ, ಸಾಗರ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

₹2000 ನೋಟಿನ ಚಲಾವಣೆ ವಾಪಸ್ ಏನು, ಎತ್ತ?

ಭಾರತೀಯ ರಿಸರ್ವ್ ಬ್ಯಾಂಕ್ ₹2000 ಮುಖಬೆಲೆಯ ಕರೆನ್ಸಿ ನೋಟುಗಳನ್ನು ಚಲಾವಣೆಯಿಂದ ವಾಪಸ್ ಪಡೆಯಲು ಕ್ರಮ ತೆಗೆದುಕೊಂಡಿದೆ. ಈಗ ಚಲಾವಣೆಯಲ್ಲಿರುವ ₹2000 ಮುಖಬೆಲೆಯ ನೋಟುಗಳನ್ನು ಬೇರೆ ಮುಖಬೆಲೆಯ ನೋಟುಗಳಿಗೆ ಬದಲಿಸಿಕೊಳ್ಳಲು ಕಾಲಾವಕಾಶ ನೀಡಿದೆ. 2016ರ ನವೆಂಬರ್‌ನಲ್ಲಿ ಈ ಹಿಂದೆ ಚಲಾವಣೆಯಲ್ಲಿದ್ದ ₹500 ಮತ್ತು ₹1000 ಮುಖಬೆಲೆಯ ನೋಟುಗಳ ಮಾನ್ಯತೆಯನ್ನು ಕೇಂದ್ರ ಸರ್ಕಾರ ರದ್ದು ಮಾಡಿತ್ತು. ಅವುಗಳ ಬದಲಿಗೆ ₹2000 ಮತ್ತು ₹500 ಮುಖಬೆಲೆಯ ಹೊಸ ನೋಟುಗಳನ್ನು ಚಲಾವಣೆಗೆ ತರಲಾಗಿತ್ತು. ಆದರೆ, ಹೊಸದಾಗಿ ಚಲಾವಣೆಗೆ ತಂದು ಏಳು ವರ್ಷ ಕಳೆಯುವಷ್ಟರಲ್ಲೇ ₹2000 ಮುಖಬೆಲೆಯ ನೋಟುಗಳನ್ನು ಚಲಾವಣೆಯಿಂದ ತೆಗೆದುಹಾಕಲು ನಿರ್ಧರಿಸಲಾಗಿದೆ. ಈ ನಿರ್ಧಾರಗಳಿಗೆ ವಿರೋಧ ಪಕ್ಷಗಳಿಂದ ಮತ್ತು ಸಾಮಾಜಿಕ ಜಾಲತಾಣಗಳಲ್ಲಿ ಬಳಕೆದಾರರಿಂದ ಆಕ್ಷೇಪ ಹಾಗೂ ಟೀಕೆಗಳು ವ್ಯಕ್ತವಾಗುತ್ತಿವೆ

ಮುದ್ರಿಸಿದ ನೋಟುಗಳೆಷ್ಟು...

₹500 ಮತ್ತು ₹1000 ಮುಖಬೆಲೆಯ ನೋಟುಗಳ ಚಲಾವಣೆಯನ್ನು ರದ್ದುಮಾಡಿದ ಬೆನ್ನಲ್ಲೇ ₹2000 ಮುಖಬೆಲೆಯ ನೋಟುಗಳನ್ನು ಚಲಾವಣೆಗೆ ತರಲಾಗಿತ್ತು. 2016–17ನೇ ಆರ್ಥಿಕ ವರ್ಷದಿಂದ 2018–19ನೇ ಆರ್ಥಿಕ ವರ್ಷದವರೆಗೆ ಇಂತಹ ಒಟ್ಟು 510 ಕೋಟಿ ನೋಟುಗಳನ್ನು ಮುದ್ರಿಸಲಾಗಿತ್ತು ಎಂದು ಆರ್‌ಬಿಐ ದಾಖಲೆಗಳು ಹೇಳುತ್ತವೆ.

510 ಕೋಟಿ ನೋಟುಗಳನ್ನೂ ಆರ್‌ಬಿಐ ಒಂದೇ ಬಾರಿಗೆ ಮುದ್ರಿಸಿಲ್ಲ. 2016–17ನೇ ಸಾಲಿನಲ್ಲಿ 354 ಕೋಟಿ ನೋಟುಗಳನ್ನು ಮುದ್ರಿಸಿತ್ತು. ನಂತರದ ಎರಡು ವರ್ಷಗಳಲ್ಲಿ ಮುದ್ರಿಸಲಾದ ₹2000 ಮುಖಬೆಲೆಯ ನೋಟುಗಳ ಸಂಖ್ಯೆ ಗಣನೀಯ ಪ್ರಮಾಣದಲ್ಲಿ ಇಳಿಕೆಯಾಗಿತ್ತು. 2019–20ನೇ ಸಾಲಿನಿಂದಲೇ ಈ ನೋಟುಗಳ ಮುದ್ರಣವನ್ನು ನಿಲ್ಲಿಸಲಾಗಿತ್ತು.



ಮುದ್ರಣದ ವೆಚ್ಚವೆಷ್ಟು...

₹1,922.7 ಕೋಟಿ ₹2000 ಮುಖಬೆಲೆಯ ಎಲ್ಲಾ ನೋಟುಗಳ ಮುದ್ರಣಕ್ಕೆ ಆದ ಅಂದಾಜು ವೆಚ್ಚ

ಈ ನೋಟುಗಳ ಮುದ್ರಣಕ್ಕೆ ಎಷ್ಟು ವೆಚ್ಚವಾಗಿದೆ ಎಂಬುದರ ನಿಖರ ಮಾಹಿತಿ ಲಭ್ಯವಿಲ್ಲ. ಆದರೆ, ಒಂದು ನೋಟಿನ ಮುದ್ರಣಕ್ಕೆ ಎಷ್ಟು ವೆಚ್ಚವಾಗುತ್ತದೆ ಎಂಬ ಮಾಹಿತಿಯನ್ನು ರಾಜ್ಯಸಭೆಗೆ ಹಣಕಾಸು ಸಚಿವಾಲಯವು ನೀಡಿತ್ತು. 2018ರಲ್ಲಿ ರಾಜ್ಯಸಭೆಗೆ ಮಾಹಿತಿ ನೀಡಿದ್ದ ಹಣಕಾಸು ಸಚಿವಾಲಯವು, ‘₹2000 ಮುಖಬೆಲೆಯ ಪ್ರತಿ ನೋಟಿನ ಮುದ್ರಣಕ್ಕೆ ₹3.55ರಿಂದ ₹3.77ರಷ್ಟು ವೆಚ್ಚವಾಗುತ್ತದೆ’ ಎಂದಷ್ಟೇ ಹೇಳಿತ್ತು. ಆರ್‌ಬಿಐ ಈವರೆಗೆ ₹2000 ಮುಖಬೆಲೆಯ 510 ಕೋಟಿ ನೋಟುಗಳನ್ನು ಮುದ್ರಿಸಿದೆ. ಪ್ರತಿ ನೋಟಿಗೆ ₹3.77ರಷ್ಟು ವೆಚ್ಚದಂತೆ 510 ಕೋಟಿ ನೋಟುಗಳಿಗೆ ತಗಲುವ ವೆಚ್ಚ ₹1,922.7 ಕೋಟಿಯಷ್ಟಾಗುತ್ತದೆ. ಈ ಹಿಂದೆ ಬಳಕೆಯಲ್ಲಿದ್ದ ₹500 ಮತ್ತು ₹1000 ಮುಖಬೆಲೆಯ ನೋಟುಗಳ ಗಾತ್ರಕ್ಕಿಂತ, ₹2000 ಮುಖಬೆಲೆಯ ನೋಟುಗಳ ಗಾತ್ರ ಭಿನ್ನವಾಗಿತ್ತು. ಹೀಗಾಗಿ ₹2000 ಮುಖಬೆಲೆಯ ನೋಟುಗಳನ್ನು ಎಟಿಎಂನಲ್ಲಿ ದೊರೆಯುವಂತೆ ಮಾಡಲು, ಎಟಿಎಂ ಯಂತ್ರಗಳನ್ನು ಮಾರ್ಪಡಿಸಬೇಕಿತ್ತು. 2016-17ನೇ ಸಾಲಿನಲ್ಲಿ ದೇಶದಾದ್ಯಂತ 2.2 ಲಕ್ಷ ಎಟಿಎಂ ಯಂತ್ರಗಳಿದ್ದವು. ಅವುಗಳನ್ನು ಹಂತಹಂತವಾಗಿ ಮಾರ್ಪಡಿಸಲಾಗಿತ್ತು. ಈ ಯಂತ್ರಗಳನ್ನು ಹೀಗೆ ಮಾರ್ಪಡಿಸಲು ತಗುಲಿದ ವೆಚ್ಚ ಎಷ್ಟು ಎಂಬುದರ ಮಾಹಿತಿ ಲಭ್ಯವಿಲ್ಲ.

ಚಲಾವಣೆಯಲ್ಲಿ ಗಣನೀಯ ಇಳಿಕೆ

2016–17ನೇ ಆರ್ಥಿಕ ವರ್ಷದಲ್ಲಿ ಎರಡು ಸಾವಿರ ರೂಪಾಯಿ ಮುಖಬೆಲೆಯ 328 ಕೋಟಿ ನೋಟುಗಳು ಚಲಾವಣೆಗೆ ಬಂದಿದ್ದವು. 2017–18ರ ಆರ್ಥಿಕ ವರ್ಷದಲ್ಲಿ ಗರಿಷ್ಠ 336 ಕೋಟಿ ನೋಟುಗಳು ಚಲಾವಣೆಯಲ್ಲಿ ಇದ್ದವು. ಆದರೆ ನಾಲ್ಕು ವರ್ಷಗಳಿಂದ ಇವುಗಳ ಮುದ್ರಣವನ್ನು ನಿಲ್ಲಿಸಿದ್ದರಿಂದ, ಚಲಾವಣೆಯಲ್ಲಿ ಇವುಗಳ ಸಂಖ್ಯೆ ಕ್ರಮೇಣ ಕುಸಿಯತೊಡಗಿತು. 2022–23ನೇ ಆರ್ಥಿಕ ವರ್ಷದ ಕೊನೆಯ ವೇಳೆಗೆ ಇಂತಹ 181 ಕೋಟಿ ನೋಟುಗಳು ಮಾತ್ರ ಚಲಾವಣೆಯಲ್ಲಿದ್ದವು.

ಎಲ್ಲ ನೋಟುಗಳನ್ನು ಚಲಾವಣೆಯಿಂದ ವಾಪಸ್ ಪಡೆಯಲು ಆರ್‌ಬಿಐ ಈಗ ಮುಂದಾಗಿದೆ. 2016-17ನೇ ಆರ್ಥಿಕ ವರ್ಷದಲ್ಲಿ ಮೊದಲಿಗೆ ಪರಿಚಯಿಸಲಾದ ₹2,000 ಮುಖಬೆಲೆಯ ₹6.57 ಲಕ್ಷ ಕೋಟಿ ಮೌಲ್ಯದ ನೋಟುಗಳನ್ನು ಚಲಾವಣೆಗೆ ಬಿಡಲಾಗಿತ್ತು. ನಂತರದ ಆರ್ಥಿಕ ವರ್ಷದಲ್ಲಿ ಬೇಡಿಕೆಯೂ ಹೆಚ್ಚಿದ್ದರಿಂದ, ಇವುಗಳ ಮೌಲ್ಯ ₹6.72 ಲಕ್ಷ ಕೋಟಿಯ ಗರಿಷ್ಠ ಮೊತ್ತಕ್ಕೆ ಏರಿಕೆಯಾಗಿತ್ತು.

2022–23ನೇ ಆರ್ಥಿಕ ವರ್ಷದ ಹೊತ್ತಿಗೆ ಎರಡು ಸಾವಿರ ಮುಖಬೆಲೆಯ ₹3.62 ಲಕ್ಷ ಕೋಟಿ ಮೌಲ್ಯದ ನೋಟುಗಳು ಮಾತ್ರ ಚಲಾವಣೆಯಲ್ಲಿವೆ. ಆರು ವರ್ಷಗಳ ಬಳಿಕ ಶೇ 46ರಷ್ಟು ನೋಟುಗಳು ಮಾತ್ರ ಚಲಾವಣೆಯಲ್ಲಿವೆ ಎಂದು ದತ್ತಾಂಶಗಳು ಹೇಳುತ್ತವೆ.





ಆಧಾರ: ಆರ್‌ಬಿಐ ವಾರ್ಷಿಕ ವರದಿಗಳು, ಆರ್‌ಬಿಐ ಪ್ರಕಟಣೆಗಳು, ಪಿಟಿಐ

ಖೋಟಾ ನೋಟಿನ ಆಟ

₹2000 ಮುಖಬೆಲೆಯ ಹೊಸ ನೋಟುಗಳನ್ನು ಪರಿಚಯಿಸುತ್ತಿದ್ದಂತೆಯೇ ನಕಲಿ ನೋಟುಗಳೂ ಹುಟ್ಟಿಕೊಂಡವು. ಅಸಲಿ ನೋಟುಗಳನ್ನೇ ಹೋಲುತ್ತಿದ್ದ ಇವುಗಳ ಅಸಲಿಯತ್ತನ್ನು ಬ್ಯಾಂಕ್ ವ್ಯವಸ್ಥೆ ಪತ್ತೆಹಚ್ಚಿತು. 2016-17ನೇ ಆರ್ಥಿಕ ವರ್ಷದಲ್ಲಿ ಇಂತಹ 638 ಖೋಟಾನೋಟುಗಳನ್ನು ಪತ್ತೆಹಚ್ಚಲಾಗಿತ್ತು. 2018-19ರಲ್ಲಿ ಗರಿಷ್ಠ 21,847 ಖೋಟಾನೋಟುಗಳನ್ನು ಪತ್ತೆಹಚ್ಚಲಾಗಿತ್ತು.



‘ಜನರ ತೆರಿಗೆ ಹಣ ಪೋಲು’

ಆರ್‌ಬಿಐನ ಈ ಕ್ರಮಕ್ಕೆ ವಿರೋಧ ಪಕ್ಷಗಳಿಂದ ತೀವ್ರ ಆಕ್ಷೇಪಗಳು ವ್ಯಕ್ತವಾಗಿವೆ. ಸಾರ್ವಜನಿಕರೂ ಸಾಮಾಜಿಕ ಜಾಲತಾಣಗಳಲ್ಲಿ ಈ ಬಗ್ಗೆ ಆಕ್ಷೇಪಗಳನ್ನು ವ್ಯಕ್ತಪಡಿಸಿದ್ದಾರೆ.

- ₹2000 ಮುಖಬೆಲೆಯ ನೋಟುಗಳನ್ನು ಮುದ್ರಿಸಲು ಸಾವಿರಾರು ಕೋಟಿಯನ್ನು ವೆಚ್ಚ ಮಾಡಲಾಗಿದೆ. ಈಗ ಅಷ್ಟೂ ನೋಟುಗಳನ್ನು ವಾಪಸ್ ಪಡೆಯಲಾಗುತ್ತಿದೆ. ಈ ನೋಟುಗಳನ್ನು ದೊರೆಯುವಂತೆ ಮಾಡಲು ಎಟಿಎಂ ಯಂತ್ರಗಳನ್ನು ಮಾರ್ಪಡಿಸಲೂ ನೂರಾರು ಕೋಟಿ ವೆಚ್ಚ ಮಾಡಲಾಗಿತ್ತು. ಈಗ ಆ ಎಲ್ಲಾ ವೆಚ್ಚಗಳು ವ್ಯರ್ಥವಾದಂತಾಗುತ್ತದೆ. ಕೇಂದ್ರ ಸರ್ಕಾರವು ಸಾರ್ವಜನಿಕರ ತೆರಿಗೆ ಹಣವನ್ನು ಈ ರೀತಿ ಪೋಲು ಮಾಡುತ್ತಿದೆ ಎಂದು ಹಲವರು ಟೀಕಿಸುತ್ತಿದ್ದಾರೆ
- ಭ್ರಷ್ಟಾಚಾರ ನಿಯಂತ್ರಿಸಲು ನೋಟು ರದ್ದತಿ ಜಾರಿಗೆ ತರಲಾಗುತ್ತಿದೆ ಮತ್ತು ಹೊಸ ನೋಟುಗಳನ್ನು ಚಲಾವಣೆಗೆ ತರಲಾಗುತ್ತಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಅವರು 2016ರಲ್ಲಿ ಹೇಳಿದ್ದರು. ನೋಟು ರದ್ದತಿಯಿಂದ ಭ್ರಷ್ಟಾಚಾರವನ್ನು ನಿಯಂತ್ರಿಸಲು ಸಾಧ್ಯವಾಗಿದೆಯೇ ಎಂದು ಹಲವರು ಪ್ರಶ್ನಿಸಿದ್ದಾರೆ
- ಭಯೋತ್ಪಾದನಾ ಕೃತ್ಯಗಳಿಗೆ ಹಣಕಾಸು ನೆರವು ನೀಡುವುದನ್ನು ತಪ್ಪಿಸಲು ನೋಟು ರದ್ದತಿ ಜಾರಿಗೆ ತರಲಾಗುತ್ತಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಅವರು 2016ರಲ್ಲಿ ಹೇಳಿದ್ದರು. ಆದರೆ, ನೋಟು ರದ್ದತಿಯ ನಂತರ ಭಯೋತ್ಪಾದನಾ ಕೃತ್ಯಗಳಲ್ಲಿ ಆದ ಇಳಿಕೆಯೆಷ್ಟು? ಸರ್ಕಾರದ ಈ ಕ್ರಮದಿಂದ ಭಯೋತ್ಪಾದನೆಯನ್ನು ನಿಯಂತ್ರಿಸಲು ನಿಜಕ್ಕೂ ಸಾಧ್ಯವಾಗಿದೆಯೇ ಎಂದು ಹಲವರು ಸಾಮಾಜಿಕ ಜಾಲತಾಣಗಳಲ್ಲಿ ಪ್ರಶ್ನಿಸಿದ್ದಾರೆ

ಮೇ 26ಕ್ಕೆ ಮೊಳಗಲಿದೆ ‘ಸೈರನ್’

ಈಗಾಗಲೇ ಟೀಸರ್ ಹಾಗೂ ಹಾಡುಗಳಿಂದ ಗಾಂಧಿನಗರದಲ್ಲಿ ಸದ್ದು ಮಾಡುತ್ತಿರುವ ‘ಸೈರನ್’ ಚಿತ್ರದ ಟ್ರೈಲರ್ ಬಿಡುಗಡೆಯಾಗಿದೆ. ಈ ಚಿತ್ರದ ಮೂಲಕ ಪ್ರವೀರ್ ಶೆಟ್ಟಿ ನಾಯಕನಾಗಿ ಚಂದನವನಕ್ಕೆ ಕಾಲಿಡುತ್ತಿದ್ದಾರೆ.

ಡಾಲಿ ಧನಂಜಯ, ರಾಕ್‌ಲೈನ್ ವೆಂಕಟೇಶ್, ಅಶ್ವಿನಿ ಪುನೀತ್ ರಾಜಕುಮಾರ್ ಮತ್ತಿತರರು ಟ್ರೈಲರ್ ಬಿಡುಗಡೆ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ಚಿತ್ರವು ಮೇ 26ರಂದು ಕೆ.ಆರ್.ಜಿ ಸ್ಟುಡಿಯೋಸ್ ಮೂಲಕ ರಾಜ್ಯದಾದ್ಯಂತ ಬಿಡುಗಡೆಯಾಗುತ್ತಿದೆ. ಡೆಕ್ಕನ್ ಕಿಂಗ್ ಬ್ಯಾನರ್‌ನಲ್ಲಿ ಬಿಜು ಶಿವಾನಂದ್ ಈ ಚಿತ್ರವನ್ನು ನಿರ್ಮಾಣ ಮಾಡಿದ್ದಾರೆ.

ರಾಜಾ ವೆಂಕಯ್ಯ ಈ ಚಿತ್ರಕ್ಕೆ ಆ್ಯಕ್ಷನ್ ಕಟ್ ಹೇಳುತ್ತಿದ್ದು, ಇದು ಅವರ ನಿರ್ದೇಶನದ ಚೊಚ್ಚಲ ಸಿನಿಮಾ. ಕಳೆದ 30 ವರ್ಷಗಳಿಂದ ನಿರ್ದೇಶಕ ಮುರುಗ ದಾಸ್ ಸೇರಿದಂತೆ ಹಲವರ ಬಳಿ, ಚಿತ್ರರಂಗದ ವಿವಿಧ ವಿಭಾಗಗಳಲ್ಲಿ ರಾಜಾ ವೆಂಕಯ್ಯ ಕಾರ್ಯನಿರ್ವಹಿಸಿದ ಅನುಭವ ಹೊಂದಿದ್ದಾರೆ. ‘ಟ್ರೈಲರ್‌ಗೆ ಶ್ರೀಮುರಳಿ ಅವರು ಧ್ವನಿ ನೀಡಿದ್ದು, ಚಿತ್ರಕ್ಕೆ ಮತ್ತಷ್ಟು ಶಕ್ತಿ ತುಂಬಿದೆ. ನಿರ್ದೇಶಕರು ಶ್ರಮವಹಿಸಿ ಸಿನಿಮಾ ಮಾಡಿದ್ದಾರೆ. ಇದು ನನ್ನ ಮೊದಲ ಹೆಜ್ಜೆ, ಪ್ರೇಕ್ಷಕರ ಸಹಕಾರ ಬೇಕು’ ಎಂದರು ಪ್ರವೀರ್.

ತಮಿಳು ನಟ ದೀನಾ ಅವರು ಈ ಚಿತ್ರದ ಮೂಲಕ ಸ್ಯಾಂಡಲ್‌ವುಡ್‌ಗೆ ಹೆಜ್ಜೆ ಇಡುತ್ತಿದ್ದಾರೆ. ಚಿತ್ರದ ನಾಯಕಿ ಲಾಸ್ಯ. ನಟಿ ಸ್ಪರ್ಶ ರೇಖಾ ಅವರೂ ಈ ಚಿತ್ರದಲ್ಲಿ ಬಣ್ಣಹಚ್ಚಿದ್ದಾರೆ. ಚಿತ್ರಕ್ಕೆ ಭಾರದ್ವಾಜ್ ಸಂಗೀತ ನಿರ್ದೇಶನ, ನಾಗೇಶ್ ಆಚಾರ್ಯ ಛಾಯಾಚಿತ್ರಗ್ರಹಣವಿದೆ.

ಲಾಸ್ಯ ಹಾಗೂ ಪ್ರವೀರ್

‘ದೇವರ’ ಜಗತ್ತು ಹೀಗಿದೆ

‘ಆರ್‌ಆರ್‌ಆರ್’ ಚಿತ್ರ ಹಾಗೂ ‘ನಾಟು ನಾಟು’ ಹಾಡಿನ ಮೂಲಕ ವಿಶ್ವದ ಗಮನಸೆಳೆದ ನಟ ಜ್ಯೂನಿಯರ್ ಎನ್‌ಟಿಆರ್ ಅವರ ಮುಂದಿನ ಸಿನಿಮಾ ಯಾವುದು ಎನ್ನುವುದಕ್ಕೆ ಉತ್ತರ ದೊರಕಿದೆ.

ಕೊರಟಾಲ ಶಿವ ಆ್ಯಕ್ಷನ್ ಕಟ್ ಹೇಳುತ್ತಿರುವ ಹೊಸ ಚಿತ್ರದಲ್ಲಿ ಜ್ಯೂ. ಎನ್‌ಟಿಆರ್ ವಿಭಿನ್ನವಾದ ಲುಕ್‌ನಲ್ಲಿ ಕಾಣಿಸಿಕೊಳ್ಳಲಿದ್ದಾರೆ. ಚಿತ್ರದ ಚಿತ್ರೀಕರಣ ಆರಂಭವಾಗಿದ್ದರೂ, ಚಿತ್ರತಂಡ ಇದುವರೆಗೂ ಶೀರ್ಷಿಕೆಯನ್ನು ಘೋಷಿಸಿರಲಿಲ್ಲ. ಜ್ಯೂ. ಎನ್‌ಟಿಆರ್ ಜನ್ಮದಿನದ ಸಂದರ್ಭದಂದು ಚಿತ್ರದ ಶೀರ್ಷಿಕೆ ಘೋಷಿಸಲಾಗಿದೆ. ಚಿತ್ರಕ್ಕೆ ‘ದೇವರ’ ಎಂಬ ಟೈಟಲ್ ಇಡಲಾಗಿದ್ದು, ಸಿನಿಮಾದ ಫಸ್ಟ್‌ಲುಕ್ ಪೋಸ್ಟರ್ ಅನ್ನು ಚಿತ್ರತಂಡ ಬಿಡುಗಡೆ ಮಾಡಿದೆ.

ಪೋಸ್ಟರ್‌ನಲ್ಲಿ ಜ್ಯೂ. ಎನ್‌ಟಿಆರ್ ಕಪ್ಪು ಬಣ್ಣದ ಲುಂಗಿ ಮತ್ತು ಅಂಗಿ ತೊಟ್ಟು, ಸಮುದ್ರದ ಬದಿ ಬಂಡೆಗಳ ಮೇಲೆ ಕೊಡಲಿ ಹಿಡಿದು ನಿಂತು ತೀಕ್ಷ್ಣವಾಗಿ ನೋಡುವ ದೃಶ್ಯವಿದೆ. ಸಮುದ್ರದ ತೀರದಲ್ಲಿ ತೇಲುವ ಹೆಣಗಳ ರಾಶಿ ಚಿತ್ರದ ಜಾನರ್ ಬಗ್ಗೆ ಸುಳಿವು ನೀಡುತ್ತಿದೆ.

‘ದೇವರ’ ಚಿತ್ರದ ಮೂಲಕ ಖ್ಯಾತ ನಟಿ ದಿವಂಗತ ಶ್ರೀದೇವಿ ಅವರ ಪುತ್ರಿ ಜಾಹ್ನವಿ ಕಪೂರ್ ಇದೇ ಮೊದಲ ಬಾರಿಗೆ ತೆಲುಗು ಚಿತ್ರರಂಗಕ್ಕೆ ಹೆಜ್ಜೆ ಇಡುತ್ತಿದ್ದಾರೆ. ಜೊತೆಗೆ ಬಾಲಿವುಡ್‌ನ ಖ್ಯಾತ ನಟ ಸೈಫ್ ಅಲಿ ಖಾನ್ ಖಳನಟನಾಗಿ ಈ ಚಿತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ದೊಡ್ಡ ತಾರಾಬಳಗವೇ ಚಿತ್ರದಲ್ಲಿದೆ ಎಂದಿದೆ ಚಿತ್ರತಂಡ. ಯುವಸುಧಾ ಆರ್ಟ್ಸ್ ಮತ್ತು ಎನ್‌ಟಿಆರ್ ಆರ್ಟ್ಸ್‌ನಡಿ ಸುಧಾಕರ ಮಿಕ್ಕಿಲಿನೇನಿ ಮತ್ತು ಹರಿಕೃಷ್ಣ ಈ ಚಿತ್ರವನ್ನು ನಿರ್ಮಿಸುತ್ತಿದ್ದಾರೆ.

2024ರ ಏಪ್ರಿಲ್ 5ರಂದು ಐದು ಭಾಷೆಗಳಲ್ಲಿ ಪ್ಯಾನ್ ಇಂಡಿಯಾ ಚಿತ್ರವಾಗಿ ‘ದೇವರ’ ಬಿಡುಗಡೆಯಾಗಲಿದ್ದು, ಈ ಚಿತ್ರಕ್ಕೆ ಅನಿರುದ್ಧ್ ಸಂಗೀತ, ರತ್ನವೇಲು ಛಾಯಾಚಿತ್ರಗ್ರಹಣ ಮತ್ತು ಶ್ರೀಕರ್ ಪ್ರಸಾದ್ ಅವರ ಸಂಕಲನವಿದೆ.



ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

‘ನಿಜವಾದ ಕೇರಳ ಸ್ಟೋರಿ. ಹೆಣ್ಣು ಮಕ್ಕಳನ್ನು ಐಎಸ್‌ಐಎಸ್ ಭಯೋತ್ಪಾದಕರು ತಮ್ಮ ಟೆಂಟಿನಲ್ಲಿ ಕಾಲಿಗೆ ಸರಪಳಿ ಬಿಗಿದು ಕಟ್ಟಿದ್ದಾರೆ. ಈ ಹೆಣ್ಣು ಮಕ್ಕಳು ಜೀವಂತ ಹೆಣವಾಗಿದ್ದಾರೆ. ಪೋಷಕರೇ ಹೆಣ್ಣು ಮಕ್ಕಳನ್ನು ಜೋಪಾನವಾಗಿ ಕಾಪಾಡಿ. ಇಂತಹ ಸತ್ಯವನ್ನು ನಮ್ಮ ಹಿಂದೂಗಳೇ ಅರ್ಥ ಮಾಡುಕೊಳ್ಳುತ್ತಿಲ್ಲ ಏಕೆ? ಏನಾಗಿದೆ ನಮ್ಮ ಹಿಂದೂಗಳಿಗೆ? ಇದೇನು ಹೊಸದಲ್ಲ. ಇದೇನು ಮೊದಲಲ್ಲ ಇದೇನು ಮುಗಿಯುವುದಿಲ್ಲ. ನಮ್ಮ ಹಿಂದೂ ಹೆಣ್ಮಕ್ಕಳ ರೋದನೆ ಕೇಳುವವರೇ ಇಲ್ಲ’ ಎಂಬ ವಿವರ ಇರುವ ಸಂದೇಶ ವಾಟ್ಸ್‌ಆ್ಯಪ್‌ನಲ್ಲಿ ಹರಿದಾಡುತ್ತಿದೆ. ಈ ಸಂದೇಶದ ಜತೆಗೆ ಒಂದು ವಿಡಿಯೊವನ್ನೂ ಹಂಚಿಕೊಳ್ಳಲಾಗಿದೆ. ಬಾಂಗ್ಲಾದೇಶದಲ್ಲಿದ್ದ ಐಎಸ್ ಉಗ್ರ ಸಂಘಟನೆಯ ಟೆಂಟ್‌ನಿಂದ ಭಾರತದ 38 ಹಿಂದೂ ಹುಡುಗಿಯರನ್ನು ಸೇನೆಯು ರಕ್ಷಿಸಿದೆ ಎಂಬ ಮಾಹಿತಿಯನ್ನು ವಿಡಿಯೊ ಜತೆಗೆ ಹಂಚಿಕೊಳ್ಳಲಾಗಿದೆ. ಆದರೆ, ಇದು ಸುಳ್ಳು ಸುದ್ದಿ.

ವಾಟ್ಸ್‌ಆ್ಯಪ್‌ನಲ್ಲಿ ಹಂಚಿಕೊಳ್ಳಲಾಗಿರುವ ವಿಡಿಯೊವನ್ನು ‘ವೈಪಿಜೆ ನೆವಾಂಡಾ’ ಎಂಬ ಯುಟ್ಯೂಬ್ ಚಾನೆಲ್ ಮತ್ತು ನೆವಾಂಡಾ ಮೀಡಿಯಾ ಸೆಂಟರ್ ಎಂಬ ಟ್ವಿಟರ್ ಖಾತೆಯಲ್ಲಿ ಹಂಚಿಕೊಳ್ಳಲಾಗಿದೆ. ಈ ವಿಡಿಯೊಗೂ ಭಾರತೀಯರಿಗೂ ಯಾವುದೇ ಸಂಬಂಧವಿಲ್ಲ. ವೈಪಿಜೆ ನೆವಾಂಡಾ ಎಂಬುದು ಸಿರಿಯಾದ ಖುರ್ದ್ ಜನಾಂಗದ ಮಹಿಳಾ ಸೇನೆಯ ಹೆಸರು. ಐಎಸ್ ಉಗ್ರರ ವಿರುದ್ಧ ಹೋರಾಡಲು ಖುರ್ದ್ ಮಹಿಳೆಯರೇ ಕಟ್ಟಿದ ಸೇನೆ ಇದು. 2020ರ ಕೋವಿಡ್ ಸಂದರ್ಭದಲ್ಲಿ ಟರ್ಕಿ ಗಡಿಯಲ್ಲಿದ್ದ ಐಎಸ್ ಉಗ್ರರ ಶಿಬಿರದ ಮೇಲೆ ವೈಪಿಜೆ ಮಹಿಳಾ ಸೇನೆಯ ತುಕಡಿಯು ದಾಳಿ ನಡೆಸಿತ್ತು. ಆ ಶಿಬಿರದಲ್ಲಿ ಬಂಧನದಲ್ಲಿದ್ದ ಬಾಲಕಿಯರನ್ನು ಮಹಿಳಾ ಸೈನಿಕರು ರಕ್ಷಿಸಿದ್ದರು. ಅದರ ವಿಡಿಯೊ ಇದು. ಭಾರತಕ್ಕೂ, ಭಾರತದ ಹಿಂದೂ ಯುವತಿಯರಿಗೂ ಸಂಬಂಧವೇ ಇಲ್ಲದ ವಿಡಿಯೊವನ್ನು ಭಾರತದ್ದೆಂದು ತಿರುಚಿ ಹಂಚಿಕೊಳ್ಳಾಗಿದೆ. ಜತೆಗೆ ಸಿರಿಯಾ–ಟರ್ಕಿಯಲ್ಲಿ ನಡೆದ ಕಾರ್ಯಾಚರಣೆಯ ವಿಡಿಯೊವನ್ನು ಬಾಂಗ್ಲಾದೇಶದಲ್ಲಿ ನಡೆದ ಕಾರ್ಯಾಚರಣೆ ಎಂದು ತಪ್ಪು ಮಾಹಿತಿ ಹಂಚಿಕೊಳ್ಳಲಾಗಿದೆ.

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ

ಪರಿಪೂರ್ಣ ಆನಂದ

ಭ್ರಾಂತಿಯೋ ಸಂಪೂರ್ಣಸುಖದಾಶೆ ಬಾಹ್ಯದಲಿ |
ಸಾಂತ, ಲೋಕದ ಸೌಖ್ಯ; ಖಂಡಖಂಡವದು ||
ಸ್ವಾಂತಕೃಷಿಯಿಂ ಬ್ರಹ್ಮವೀಕ್ಷೆ ಲಭಿಸರ್ದೊಡೇ-
ಕಾಂತ ಪೂರ್ಣಾನಂದ – ಮಂಕುತಿಮ್ಮ || **889** ||

ಪದ-ಅರ್ಥ: ಸಾಂತ = ಕೊನೆಯುಳ್ಳದ್ದು, ಸ್ವಾಂತಕೃಷಿಯಿಂ = ಸ್ವಂತ + ಕೃಷಿಯಿಂ(ಪ್ರಯತ್ನದಿಂದ), ಬ್ರಹ್ಮವೀಕ್ಷೆ = ಬ್ರಹ್ಮದರ್ಶನ, ಲಭಿಸಿರ್ದೊಡೇಕಾಂತ = ಲಭಿಸಿ + ಇರ್ದೊಡೆ + ಏಕಾಂತ.

ವಾಚ್ಯಾರ್ಥ: ಬಾಹ್ಯಪ್ರಪಂಚದಿಂದ ಸಂಪೂರ್ಣ ಸುಖವನ್ನು ಪಡೆಯುವ ಆಸೆ ಒಂದು ಭ್ರಾಂತಿ. ಯಾಕೆಂದರೆ ಈ ಲೋಕದಲ್ಲಿ ದೊರೆಯುವ ಸೌಖ್ಯಕ್ಕೆ ಕೊನೆ ಇದೆ, ಮಿತಿ ಇದೆ. ಅದು ಏಕಪ್ರಕಾರವಾದದ್ದಲ್ಲ. ಸ್ವಂತ ಪ್ರಯತ್ನದಿಂದ ಬ್ರಹ್ಮದರ್ಶನ ಲಭಿಸಿದರೆ ಅದು ಪೂರ್ಣಾನಂದವನ್ನು ನೀಡುತ್ತದೆ.

ವಿವರಣೆ: ನಮ್ಮ ಒಂದೊಂದು ಇಂದ್ರಿಯ ಒಂದೊಂದು ಬಂಧಿಸುವ ಹಗ್ಗ. ಅವು ನಮ್ಮನ್ನು ಚೆನ್ನಾಗಿ ಬಿಗಿದು ಕಟ್ಟುತ್ತವೆ. ಆದರೆ ನಮಗೆ ಆ ಬಂಧನದಲ್ಲಿಯೇ ಸುಖ ಕಾಣುವ ಪ್ರಯತ್ನ. ಸುಖ ದೊರಕುವುದಿಲ್ಲವೆಂದು ತಿಳಿದೂ ಅದನ್ನು ಪಡೆಯುವುದಕ್ಕೆ ಒದ್ದಾಡುತ್ತೇವೆ. ಶಕುಂತಲೆಯನ್ನು ಕಂಡೊಡನೆ ದುಷ್ಯಂತನನ್ನು ಮನಸ್ಸು ಅವಳೆಡೆಗೆ ಸೆಳೆದುಕೊಂಡು ಹೋಯಿತು. ಮೇನಕೆಯನ್ನು ನೋಡಿದಾಕ್ಷಣ ವಿಶ್ವಾಮಿತ್ರರ ತಪಸ್ಸು ಕರಗಿತು. ಇದೇ ರೀತಿ, ನಾಲಿಗೆ, ಕಿವಿ, ಮೂಗು, ಚರ್ಮಗಳ ಸುಖಗಳಿಗಾಗಿ ಮನುಷ್ಯ ದಿಕ್ಕು ದಿಕ್ಕು ಅಲೆಯುತ್ತಾನೆ. ಅದು ಕುದುರೆಯ ಮುಖದ ಮುಂದೆ ಕಟ್ಟಿದ ಗಜ್ಜರಿ ಎಂಬುದು ಹೊಳೆಯುವುದಿಲ್ಲ. ಪಕ್ಕದ ಮನೆಯವರೊಡನೆ ಜಗಳಾಡುವುದರಿಂದ ಹಿಡಿದು ಮಹಾಯುದ್ಧಗಳು ಸುಖವನ್ನು ಪಡೆಯುವುದಕ್ಕಾಗಿ ನಡೆದಿವೆ. ಕುರುಕ್ಷೇತ್ರ ಯುದ್ಧ ನಡೆದದ್ದೇಕೆ? ರಾಜ್ಯ ಪಡೆದರೆ ಸುಖ ಸಿಕ್ಕೀತು ಎಂಬ ಆಸೆಯಿಂದಲ್ಲವೆ? ಶತಶತಮಾನಗಳಿಂದ ಮನುಷ್ಯ ಕಂಡಿದ್ದಾನೆ, ಬಾಹ್ಯ ಪ್ರಪಂಚದಲ್ಲಿ ಯಾವ ಪ್ರಯತ್ನವೂ ಸಂಪೂರ್ಣ ಸುಖವನ್ನು ಕೊಟ್ಟಿಲ್ಲ. ಸುಖ ಬಂದರೂ ಕ್ಷಣಕಾಲದ್ದು. ಅದರ ಹಿಂದೆಯೇ ದುಃಖದ ತೆರೆ ಅಪ್ಪಳಿಸುತ್ತದೆ. ಆದ್ದರಿಂದ ದೊರಕಿದ ಸುಖ ಏಕಪ್ರಕಾರವಾದದ್ದಲ್ಲ, ಶಾಶ್ವತವಾದದ್ದಲ್ಲ. ಹಾಗಾದರೆ ಪೂರ್ಣವಾದ ಸುಖ ದೊರಕುವುದು ಸಾಧ್ಯವೇ ಇಲ್ಲವೆ? ಇದೆ ಎನ್ನುತ್ತದೆ ಈ ಕಗ್ಗ. ಅದಕ್ಕೆ ಸ್ವಂತಕೃಷಿಯಿಂದ ಬ್ರಹ್ಮದರ್ಶನವಾಗಬೇಕು. ಬ್ರಹ್ಮದರ್ಶನವಾಗುವುದು ಸ್ವಂತ ಪ್ರಯತ್ನದಿಂದ. ಕಗ್ಗ, ಕೃಷಿಮಾಡಬೇಕು ಎಂದು ಹೇಳುತ್ತದೆ. ಕೃಷಿ ಅವಸರದ ಕಾರ್ಯವಲ್ಲ. ಅದಕ್ಕೆ ಏಕಮನಸ್ಸಿನ ಪ್ರಯತ್ನ ಬೇಕು, ತಾಳ್ಮೆ ಬೇಕು. ಇಂದು ಬೀಜ ನೆಟ್ಟು ಮರುದಿನ ಫಸಲು ಅಪೇಕ್ಷಿಸುವುದು ಸಾಧ್ಯವಿಲ್ಲ. ಅದರಂತೆಯೇ ಬ್ರಹ್ಮದರ್ಶನಕ್ಕೂ ಮನಸ್ಸಿನ ಕೃಷಿಯಾಗಬೇಕು. ಇಂದ್ರಿಯಗಳ ಸೆಳೆತದಿಂದ ನಿಧಾನಕ್ಕೆ ಬಿಡಿಸಿಕೊಳ್ಳಬೇಕು, ಅಹಂಕಾರದ ಭಾರವನ್ನು ಇಳಿಸಬೇಕು. ಮನಸ್ಸನ್ನು ಹೊರಜಗತ್ತಿನ ಮೆರುಗಿನಿಂದ ಎಳೆದು ಒಳಗಡೆ, ಅಂತರ್ಯಕ್ಕೆ ತಿರುಗಿಸಬೇಕು. ಹಾಗೆ ಆದಾಗ ಪರಸತ್ವದ ದರ್ಶನವಾಗುತ್ತದೆ. ಅದು ವರ್ಣನಾತೀತವಾದ ಆನಂದ. ಸಂಪೂರ್ಣವಾದ ಆನಂದ. ಬರೀ ಸಂಪೂರ್ಣಮಾತ್ರವಲ್ಲ, ಶಾಶ್ವತವಾದದ್ದೂ ಹೌದು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಮಂಗಳವಾರ ಮೇ 23, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯನ ಗ್ರೀಷ್ಮ ಋತು ತಿಥಿ: ಜ್ಯೇಷ್ಠ ಚತುರ್ಥಿ ಗಂ. 24-58 ನಕ್ಷತ್ರ: ಆರ್ದ್ರಾ ಗಂ. 12-39 ಯೋಗ: ಶೂಲ ಗಂ. 16-46, ಕರಣ: ವಣಿಜ ಗಂ. 12-06, ವೃಷಭ ಮಾಸದ 08 ನೇದಿನ, ಮಳೆನಕ್ಷತ್ರ: ಕೃತ್ತಿಕಾ 4 ರಾಹುಕಾಲ : ಬೆಳಿಗ್ಗೆ 10-30 – 12-00 ಸೂರ್ಯೋದಯ : 06-07 ಸೂರ್ಯಾಸ್ತ : 06-48 ಮುಸ್ಲಿಂ ದಿನಾಂಕ : 03 ಜುಲ್ಕಾಯಿದ್, ದಿನ ವಿಶೇಷ : ಶ್ರೀ ಗುರು ಅರ್ಜುನ ದೇವರ ಮೃತ ದಿನ (ಸಿಖ್), ಝುರ್ತೋಸ್ಟ್-ನೊ-ಡಿಸೊ (ಪಾರ್ಸಿ)

ಅದೃಷ್ಟ ಸಂಖ್ಯೆ : 3, 9

ಮೇಷ: ಒಂದಾದ ಮೇಲೆ ಒಂದರಂತೆ ತೊಂದರೆಗಳೇ ಬರುವ ಕಾರಣ ಕಚೇರಿಯಲ್ಲಿ ಆಯಾಸಗೊಳ್ಳುವಿರಿ. ಮಾನಸಿಕವಾಗಿ ನಿಮ್ಮನ್ನು ಕಾಡುತ್ತಿರುವ ಚಿಂತೆಗೆ ಉತ್ತಮ ಪರಿಹಾರ ಮಗನಿಂದ ಪಡೆಯುವಂತಾಗಲಿದೆ.

ವೃಷಭ: ನೀವು ಒಂದು ಮಾತನಾಡಿದರೆ ಕಡಿಮೆ ಎರಡು ಮಾತನಾಡಿದರೆ ಹೆಚ್ಚು ಎಂಬ ಪರಿಸ್ಥಿತಿ ಉಂಟಾಗುವುದು. ರಾತ್ರಿಯ ವೇಳೆಗೆ ಶುಭ ಸುದ್ದಿಯನ್ನು ಕೇಳುವಿರಿ. ಗಾರ್ಮೆಂಟ್ ಉದ್ಯಮದವರು ಲಾಭ ಹೊಂದಲಿದ್ದೀರಿ.

ಮಿಥುನ: ಪ್ರವಾಸದ ಕನಸು ಹೆಚ್ಚು ಕಡಿಮೆ ನನಸಾಗುವಂತಹ ಲಕ್ಷಣಗಳು ಇವೆ. ನಂಬಿಕಸ್ಥ ಸ್ನೇಹಿತರೊಂದಿಗಷ್ಟೇ ಪ್ರಯಾಣದ ಯೋಜನೆಯನ್ನು ನಿರೂಪಿಸಿ. ಚರ ಆಸ್ತಿಯನ್ನು ಮಾರಾಟ ಮಾಡುವಲ್ಲಿ ನಷ್ಟ ಸಂಭವಿಸುವುದು.

ಕರ್ಕಾಟಕ: ಮಗಳ ಮದುವೆಯ ಜವಾಬ್ದಾರಿಯು ಹೆಂಡತಿಯ ತವರು ಮನೆಯವರ ಸಹಕಾರದಿಂದಾಗಿ ನೀವಂದುಕೊಂಡಷ್ಟು ಕಷ್ಟವಾಗಿ ಪರಿಣಮಿಸದು. ಯಾರ ಮೇಲೂ ಅಗತ್ಯಕ್ಕಿಂತ ಜಾಸ್ತಿ ಕೋಪಿಸಿಕೊಳ್ಳದಿರಿ.

ಸಿಂಹ: ನೂತನ ವಸ್ತ್ರವನ್ನು ಇತರರಿಗೆ ಕೊಡುವಂಥ ದೃಷ್ಟಿಯಿಂದ ಕೊಂಡುಕೊಳ್ಳುವಿರಿ. ಸಣ್ಣ ಕಾರಣಗಳಿಗೆ ಶುರುವಾದ ವಾದ ವಿವಾದ ದೊಡ್ಡ ಮಟ್ಟಕ್ಕೆ ತಲುಪಿ ಸಂಸಾರವನ್ನು ಒಡೆಯುವ ಹಂತಕ್ಕೆ ತಲುಪಲು ಬಿಡದಿರಿ.

ಕನ್ಯಾ: ಕ್ರೀಡಾ ಕ್ಷೇತ್ರದಲ್ಲಿ ಈಗಾಗಲೇ ರಾಷ್ಟ್ರ ಮಟ್ಟದಲ್ಲಿ ಸಾಧನೆ ಮಾಡಿರುವವರು ವಿದೇಶದಲ್ಲಿ ಹೆಸರುಗಳಿಸುವಿರಿ. ಉತ್ತಮ ಕಾರ್ಯಕ್ಷೇತ್ರಕ್ಕೆ ಪ್ರವೇಶಿಸಿದ ನಿಮ್ಮನ್ನು ಸ್ವಸ್ಥಾನದ ಜನರು ಅತ್ಯಂತವಾಗಿ ಶ್ಲಾಘಿಸುತ್ತಾರೆ.

ತುಲಾ: ನಿಮ್ಮ ಮನೆಯಲ್ಲಿನ ಅತ್ಯಂತ ಮುಖ್ಯವಾದ ಕಾರ್ಯಕ್ರಮ ಅನಿವಾರ್ಯ ಕಾರಣಗಳಿಂದಾಗಿ ತಪ್ಪಿಸಿಕೊಳ್ಳಬೇಕಾದ ಪರಿಸ್ಥಿತಿಯು ದುಃಖಕರವಾಗಿರುತ್ತದೆ. ಸಹೋದ್ಯೋಗಿಗಳೊಂದಿಗೆ ಉತ್ತಮ ಸಂಬಂಧ ಕಾಪಾಡಿಕೊಳ್ಳಿ.

ವೃಶ್ಚಿಕ: ಸ್ನೇಹಿತನಿಂದಾಗಿ ನಡೆದ ಒಂದು ಘಟನೆಯು ನಿಮ್ಮ ಮನಸ್ಸಿನಲ್ಲಿ ಮಹತ್ತರ ಬದಲಾವಣೆ ಉಂಟುಮಾಡುತ್ತದೆ. ತಾರುಣ್ಯದಲ್ಲಿದ್ದಾಗ ಮಾಡಿದ ಬುದ್ಧಿವಂತಿಕೆಯ ಕೆಲಸವು ವೃದ್ಧಾಪ್ಯದಲ್ಲಿ ಅನುಕೂಲವಾಗಲಿದೆ.

ಧನು: ವಿದ್ಯಾರ್ಥಿಗಳು ಈ ದಿನದ ತನಕ ನಿತ್ಯದ ಕೆಲಸದಲ್ಲಿ ತೋರಿದ ನಿರ್ಲಕ್ಷ್ಯದಿಂದಾಗಿ ಹೆಚ್ಚು ಹೊತ್ತು ಮನರಂಜನೆಗಳನ್ನೆಲ್ಲವನ್ನು ಬಿಟ್ಟು ಅಧ್ಯಯನದಲ್ಲಿ ತೊಡಗಬೇಕಾಗುತ್ತದೆ. ಸಂತಸದ ವಿಚಾರವನ್ನು ಎಲ್ಲರಿಗೂ ತಿಳಿಸುವಿರಿ.

ಮಕರ: ವೃತ್ತಿ ಜೀವನದಲ್ಲಿ ನಿಮಗೆ ಅನುಭವವೇ ಇರದಂತಹ ಸವಾಲನ್ನು ಬುದ್ಧಿವಂತಿಕೆಯಿಂದ ಪರಿಹರಿಸುವಿರಿ. ಹೆಚ್ಚಿನ ಶ್ರಮವಹಿಸಿ ಕೆಲಸ ನಿರ್ವಹಿಸಿದ ಕಾರಣದಿಂದಾಗಿ ದೇಹಾಯಾಸವು ಅಧಿಕವಾಗಿ ಕಾಡುವುದು.

ಕುಂಭ: ಆಹಾರದಲ್ಲಿನ ವ್ಯತ್ಯಾಸದಿಂದಾಗಿ ಹಲವು ಕಾಯಿಲೆಗಳನ್ನು ಏಕಕಾಲದಲ್ಲಿ ಅನುಭವಿಸುವಂತೆ ಆಗುವುದು. ವೃತ್ತಿಯಲ್ಲಿ ಜವಾಬ್ದಾರಿಯು ಇರುವುದರಿಂದ ವೈಯಕ್ತಿಕ ಜೀವನದಲ್ಲಿನ ಗಮನ ಕಡಿಮೆ ಅಗುವುದು.

ಮೀನ: ಆರೋಪದ ಮಾತುಗಳು ಒಬ್ಬರ ಮೇಲೆ ಯಾವ ರೀತಿಯ ಪರಿಣಾಮ ಬೀರಬಹುದು ಎಂಬುದಕ್ಕೆ ನಿಮ್ಮ ಸಂಬಧಿಗಳ ಜೀವನ ಸಾಕ್ಷಿಯಾಗಲಿದೆ. ಪ್ರಾರ್ಥನೆಯ ಪರಿಣಾಮವಾಗಿ ನಿಮ್ಮಿಚ್ಛೆಯ ವಧು ದೊರೆಯುವಳು.

ಪದಬಂಧ 5327

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಒಂಬತ್ತು ತಿರುಗಿದರೆ ಕಾಡು! (2)
3.ಪ್ರಯಾಸದಿಂದ ಕೈಗೊಂಡ ಪಯಣ (3)
5.ವಿಷಯಾಸಕ್ತನಿವನು (3)
7.ಕೊನೆಗೆ ಹಾರವನ್ನಿಟ್ಟು ಹೋಗಲಾಡಿಸುವಿಕೆ (4)
9.ಗುಡಿಸಲು ಇಲ್ಲಿದೆ (3)
10.ಕಣದಲ್ಲಿ ಆದ ಮದುವೆ (3)
11.ಭಾನುವಾರವನ್ನು ಹೀಗೂ ಹೇಳುವರು (4)
13.ಮರದ ಹತ್ತಿರ ಕಾಣಿಸಿದ ಮೊಸಳೆ (3)
15.ತವರಿನವರು ಕೊಟ್ಟ ಲೋಹ (3)
16.ನೆನಪಲ್ಲೇ ಇರುವ ಕಾರಣ (2)

ಮೇಲಿಂದ ಕೆಳಕ್ಕೆ

2.ಅನೇಕ ಚಿಕ್ಕ ಚಿಕ್ಕ ಮನೆಗಳುಳ್ಳ ಆವಾರ (3)
3.ಪ್ರತಿಬಿಂಬವನ್ನು ಇಲ್ಲಿದೆ (3)
4.ಸರಸದ ಮಾತುಕತೆ (3)
6.ತಾರ ನುಡಿಸಿದ ತಂತಿ ವಾದ್ಯ (3)
8.ಮಣ ಭಾರ ಹೊತ್ತಿರುವ ನಲ್ಲ (3)
9.ಅಷ್ಟದಿಕ್ಪಾಲಕರಲ್ಲಿ ಶ್ರೀಮಂತನೀತ (3)
10.ತಿರುಗಿಸಿ ನೋಡಿದರೂ ಇದು ಚಿನ್ನ (3)
12.ರಜದಲ್ಲಿ ಖರೀದಿಸಿದ ಬೆಳ್ಳಿ (3)
13.ಸವಿಯಾದುದು ಇದು (3)
14.ಸಾಗಿಸುವಿಕೆಗೊಂದು ಪರ್ಯಾಯ ಪದ (3)



5326ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ

1.ವಿನಿಯೋಗ 2.ಸನ್ಮತಿ
4.ಮರುಕ 6.ಉಪಾಯ
7.ಕಾಲಹರಣ 10.ಸಾರಣೆ
11.ಮಲ್ಲಿಗೆ 13.ನಗರ
14.ಸಮುದಾಯ

ಮೇಲಿಂದ ಕೆಳಕ್ಕೆ:

1.ವಿರಾಮ 2.ಸಮಯ
3.ತಿರುಬೋಕಿ 5.ಕಯಕಾ
6.ಉದಾಹರಣೆ
8.ಣರಮ 9.ಉಪಮಾನ
10.ಸಾವಿರ 12.ಗೆಳೆಯ

ಸುಡೊಕು 5713

		6		4		3		5
			5		7			
	9	2		3		7		1
2	1		9		3	6		
				1				3
3	8			5			7	
9		8						7
	6			9			3	
4		3			1	2		6

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5712 ಸುಡೊಕು

2	4	8	1	6	3	5	9	7
7	5	6	4	9	8	2	3	1
1	3	9	2	5	7	4	8	6
6	1	5	9	7	4	8	2	3
3	9	7	8	1	2	6	5	4
8	2	4	6	3	5	7	1	9
5	6	3	7	2	1	9	4	8
9	8	2	3	4	6	1	7	5
4	7	1	5	8	9	3	6	2

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	18,203
ಇಂದಿನ ಅಂತ್ಯ	18,314
▲	111
ದಿನದ ಗರಿಷ್ಠ	18,335

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹525
12 ಮೊಟ್ಟೆಗೆ	₹72
ಮೈಸೂರು	
100 ಮೊಟ್ಟೆಗೆ	₹530

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1617 (1620)
ಸೋಯಾ (ರಿಫೈನ್ಡ್)	₹912 (917
ಸೂರ್ಯಕಾಂತಿ (ರಿಫೈನ್ಡ್)	₹945 (945)
ಪಾಮೋಲಿನ್	₹885 (894)

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹157
ಆರ್‌ಎಸ್‌ಎಸ್-5	₹151
ಗುಡ್ ಲಾಟ್	₹133

ಈರುಳ್ಳಿ ಧಾರಣೆ

(ಕ್ವಿಂಟಲ್‌ಗೆ)

ದಪ್ಪ	₹800-1000
ಮಧ್ಯಮ	₹500-800
ಸಣ್ಣ	₹300-500

ಮುದ್ರೆಮನೆ ಕಾಫಿ

(50 ಕೆಜಿಗೆ)

ಎಪಿ	₹15350
ಎಸಿ	₹7980
ಆರ್‌ಪಿ	₹10500
ಆರ್‌ಸಿ	₹5975

‘ಅನಿಶ್ಚಿತ ಹವಾಮಾನದಿಂದ ಆರ್ಥಿಕತೆಗೆ ತೊಂದರೆ’

ನವದೆಹಲಿ (ಪಿಟಿಐ): ಅನಿಶ್ಚಿತ ಹವಾಮಾನ ಪರಿಸ್ಥಿತಿಯು ದೇಶದ ಆರ್ಥಿಕ ಬೆಳವಣಿಗೆ ಹಾಗೂ ಹಣದುಬ್ಬರ ನಿಯಂತ್ರಣದ ಮೇಲೆ ಕೆಟ್ಟ ಪರಿಣಾಮ ಉಂಟುಮಾಡಬಹುದು ಎಂಬ ಆತಂಕವನ್ನು ಕೇಂದ್ರ ಹಣಕಾಸು ಸಚಿವಾಲಯದ ವರದಿಯೊಂದು ವ್ಯಕ್ತಪಡಿಸಿದೆ.

ಬೇಡಿಕೆಯಲ್ಲಿ ಸ್ಥಿರವಾದ ಮತ್ತು ವಿಸ್ತೃತ ನೆಲೆಯ ಬೆಳವಣಿಗೆ ಕಂಡುಬಂದಿದೆ. ಸಾಮರ್ಥ್ಯ ವೃದ್ಧಿಯಲ್ಲಿ ಹೂಡಿಕೆ, ರಿಯಲ್ ವಲಯದಲ್ಲಿ ಹೂಡಿಕೆ ಉತ್ತಮವಾಗುತ್ತಿದೆ ಎಂದು ಏಪ್ರಿಲ್ ತಿಂಗಳ ಮಾಸಿಕ ಆರ್ಥಿಕ ಪರಿಶೀಲನಾ ವರದಿ ಹೇಳಿದೆ.

‘ಇಡೀ ವರ್ಷದಲ್ಲಿ ಆರ್ಥಿಕತೆಯಲ್ಲಿ ಏನಾಗುತ್ತದೆ ಎಂಬುದನ್ನು ಏಪ್ರಿಲ್‌ನಲ್ಲಿಯೇ ಹೇಳುವುದು ಕಷ್ಟ. ಆದರೆ ಆರ್ಥಿಕ ವರ್ಷದ ಆರಂಭವು ಚೆನ್ನಾಗಿದ್ದರೆ, ಮುಂದೆ ಒಳ್ಳೆಯದಾಗುತ್ತದೆ ಎಂಬ ಸೂಚನೆ ಸಿಕ್ಕಂತಾಗುತ್ತದೆ’ ಎಂದು ಅದು ಹೇಳಿದೆ.

ಸೇವಾ ವಲಯ ಹಾಗೂ ತಯಾರಿಕಾ ವಲಯಗಳ ರೀತಿಯಲ್ಲಿಯೇ ಕೃಷಿ ವಲಯದ ಮುನ್ನೋಟ ಕೂಡ ಉತ್ತಮವಾಗಿದೆ ಎಂದು ವರದಿಯು ತಿಳಿಸಿದೆ.

‘ಪೆಟ್ರೋಲ್ ಬಂಕ್‌ಗಳಲ್ಲಿ ಹೆಚ್ಚಿದ ನಗದು ವಹಿವಾಟು’

ನವದೆಹಲಿ (ಪಿಟಿಐ): ಪೆಟ್ರೋಲ್ ಬಂಕ್‌ಗಳಲ್ಲಿ ಇಂಧನ ಖರೀದಿಸುವವರು ₹2,000 ಮುಖಬೆಲೆಯ ನೋಟುಗಳನ್ನು ಬಳಸಿ ಹಣ ಪಾವತಿ ಮಾಡುವುದು ಶೇಕಡ 90ರಷ್ಟು ಹೆಚ್ಚಾಗಿದೆ ಎಂದು ಅಖಿಲ ಭಾರತ ಪೆಟ್ರೋಲಿಯಂ ಡೀಲರ್‌ಗಳ ಸಂಘದ ಅಧ್ಯಕ್ಷ ಅಜಯ್ ಬನ್ಸಲ್ ಹೇಳಿದ್ದಾರೆ.

₹2,000 ಮುಖಬೆಲೆಯ ನೋಟುಗಳನ್ನು ಆರ್‌ಬಿಐ ಚಲಾವಣೆಯಿಂದ ಹಿಂಪಡೆಯಲಿದೆ. ಆರ್‌ಬಿಐ ಈ ವಿಚಾರ ತಿಳಿಸಿದ್ದು ಶುಕ್ರವಾರ. ಅದಕ್ಕೂ ಮೊದಲು ₹2,000 ಮುಖಬೆಲೆಯ ನೋಟು ಬಳಸಿ ಇಂಧನ ಖರೀದಿಸುವ ಪ್ರಮಾಣವು ಒಟ್ಟು ನಗದು ವಹಿವಾಟಿನ ಶೇ 10ರಷ್ಟು ಮಾತ್ರ ಇತ್ತು. ಆದರೆ ಈಗ, ಒಟ್ಟು ನಗದು ವಹಿವಾಟಿನಲ್ಲಿ ₹2,000 ಮುಖಬೆಲೆಯ ನೋಟುಗಳ ಪ್ರಮಾಣವು ಶೇ 90ರಷ್ಟು ಆಗಿದೆ.

ಗ್ರಾಹಕರು ₹100 ಅಥವಾ ₹200 ಮೌಲ್ಯದ ಇಂಧನ ಖರೀದಿಸಿದರೂ, ₹2,000 ಮುಖಬೆಲೆಯ ನೋಟು ನೀಡುತ್ತಿದ್ದಾರೆ ಎಂದು ಬನ್ಸಲ್ ತಿಳಿಸಿದ್ದಾರೆ.

ಸಣ್ಣ ಮುಖಬೆಲೆಯ ನೋಟುಗಳನ್ನು ಅಗತ್ಯ ಪ್ರಮಾಣದಲ್ಲಿ ಬ್ಯಾಂಕ್‌ಗಳಿಗೆ ಪೂರೈಸುವಂತೆ ಆರ್‌ಬಿಐಗೆ ಮನವಿ ಮಾಡಲಾಗಿದೆ ಎಂದು ಅವರು ಹೇಳಿದ್ದಾರೆ. ದೇಶದಾದ್ಯಂತ ಬಂಕ್‌ಗಳಲ್ಲಿ ಸಣ್ಣ ಮುಖಬೆಲೆಯ ನೋಟುಗಳ ಕೊರತೆ ತೀವ್ರವಾಗಿದೆ ಎಂದಿದ್ದಾರೆ.

ಆರ್‌ಬಿಐ ಘೋಷಣೆಯ ಮೊದಲು ಡಿಜಿಟಲ್ ಪಾವತಿಗಳು ಒಟ್ಟು ಮಾರಾಟದ ಶೇ 40ರಷ್ಟು ಇರುತ್ತಿದ್ದವು. ಈಗ ಅದರ ಪ್ರಮಾಣವು ಶೇ 10ಕ್ಕೆ ಇಳಿಕೆಯಾಗಿದೆ.

ಮುಖ್ಯಾಂಶಗಳು

- ಇಂಧನ ಭರ್ತಿಗೆ ₹2 ಸಾವಿರ ನೋಟು ಬಳಕೆ ಶೇ 90ರಷ್ಟು ಹೆಚ್ಚಳ
- ಬಂಕ್‌ಗಳಲ್ಲಿ ಡಿಜಿಟಲ್ ಪಾವತಿಗಳು ಒಟ್ಟು ಮಾರಾಟದ ಶೇ 10ಕ್ಕೆ ಇಳಿಕೆ
- ಕಡಿಮೆ ಮುಖಬೆಲೆಯ ನೋಟುಗಳ ಕೊರತೆ: ಬನ್ಸಲ್

ನದಿಗೆ ಮಾಲಿನ್ಯ: ಎನ್‌ಜಿಟಿ ತಾಕೀತು

ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳುವಂತೆ ರಾಜ್ಯ ಸರ್ಕಾರಗಳಿಗೆ ನಿರ್ದೇಶನ

ನವದೆಹಲಿ: ಚರಂಡಿಗಳು, ನದಿಗಳು ಮತ್ತು ಜಲಮೂಲಗಳಿಗೆ ಕೊಳಚೆ ನೀರು ಸೇರುವುದನ್ನು ತಡೆಯಲು ಯುದ್ಧೋಪಾದಿಯಲ್ಲಿ ಕ್ರಮಕೈಗೊಳ್ಳುವಂತೆ ರಾಷ್ಟ್ರೀಯ ಹಸಿರು ನ್ಯಾಯಮಂಡಳಿಯ (ಎನ್‌ಜಿಟಿ) ಪ್ರಧಾನ ಪೀಠವು ಎಲ್ಲ ರಾಜ್ಯಗಳಿಗೆ ನಿರ್ದೇಶನ ನೀಡಿದೆ.

ಎಲ್ಲ ರಾಜ್ಯಗಳ ಘನ ಮತ್ತು ದ್ರವ ತ್ಯಾಜ್ಯ ನಿರ್ವಹಣೆ ವಿಷಯ ಕುರಿತು ನ್ಯಾಯಮಂಡಳಿ ತನ್ನ ವಿಚಾರಣೆಯನ್ನು ಪೂರ್ಣಗೊಳಿಸಿದೆ. ಹೆಚ್ಚಿನ ಸಂಖ್ಯೆಯ ನದಿಗಳ ನೀರಿನ ಗುಣಮಟ್ಟವು ಕೊಳಚೆ ನೀರನ್ನು ಬಿಡುವುದರಿಂದ ಕಳಪೆಯಾಗಿದೆ ಎಂದು ಹೇಳಿರುವ ಮುಖ್ಯ ನ್ಯಾಯಮೂರ್ತಿ ಆದರ್ಶ ಕುಮಾರ್ ಗೋಯೆಲ್ ನೇತೃತ್ವದ ಪೀಠವು, ಈ ಸಂಬಂಧ ರಾಜ್ಯ ಸರ್ಕಾರಗಳು ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳಬೇಕು ಎಂದು ತಾಕೀತು ಮಾಡಿದೆ.

‘ನದಿಗಳ ಮಾಲಿನ್ಯದಿಂದ ದೊಡ್ಡ ಪ್ರಮಾಣದ ಜನರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತಿದೆ. ಗಂಗಾ, ಯಮುನಾ ಸೇರಿದಂತೆ ದೊಡ್ಡ ನದಿಗಳ ನೀರು ಮಲಿನಗೊಂಡಿವೆ. ಜಲಕಾಯಗಳ ಮಾಲಿನ್ಯ ತಡೆಗಟ್ಟಲು ಸ್ವದೇಶಿ ನಿರ್ಮಿತ ತಂತ್ರಜ್ಞಾನ ಅಭಿವೃದ್ಧಿಪಡಿಸಬೇಕಾದ ತುರ್ತು ಅಗತ್ಯವಿದೆ. ಕುಡಿಯುವ ನೀರಿಗೆ ಕೊಳಚೆ ನೀರು ಯಾವುದೇ ಕಾರಣಕ್ಕೂ ಸೇರಬಾರದು. ಈ ದಿಸೆಯಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಜತೆಗೂಡಿ ಕೆಲಸ ಮಾಡಿ ಮೂರು ತಿಂಗಳಲ್ಲಿ ಪ್ರಗತಿಯ ವರದಿ ಸಲ್ಲಿಸಬೇಕು’ ಎಂದು ಪೀಠ ಸೂಚಿಸಿದೆ.

ರಾಜ್ಯದಲ್ಲಿ ತ್ಯಾಜ್ಯ ನೀರು–ಕಸ ಸಂಸ್ಕರಣೆ ಚಿತ್ರಣ

- **3,356** ದಶಲಕ್ಷ ಲೀಟರ್ — ಕರ್ನಾಟಕದಲ್ಲಿ ತ್ಯಾಜ್ಯ ನೀರು ಉತ್ಪಾದನೆ
- **9,153** ಟನ್ — ನಿತ್ಯ ಸಂಸ್ಕರಣೆಯಾಗುವ ಕಸ
- **1,929** ದಶಲಕ್ಷ ಲೀಟರ್ — ರಾಜ್ಯದ ಎಸ್‌ಟಿಪಿಗಳ ಸಾಮರ್ಥ್ಯ
- **6,181** ಟನ್ — ಸಂಸ್ಕರಣೆಯಾಗದ ಕಸ
- **1,427** ದಶಲಕ್ಷ ಲೀಟರ್ — ಸಂಸ್ಕರಣೆಯಾಗದೆ ಜಲಕಾಯಗಳಿಗೆ ಸೇರುತ್ತಿರುವ ತ್ಯಾಜ್ಯ ನೀರು
- **179** ಲಕ್ಷ ಟನ್ — ರಾಜ್ಯದ ಭೂಭರ್ತಿ ಘಟಕಗಳಲ್ಲಿ ಇರುವ ಹಳೆಯ ಕಸದ ಪ್ರಮಾಣ
- **15,334** ಟನ್ — ರಾಜ್ಯದಲ್ಲಿ ನಿತ್ಯ ಉತ್ಪಾದನೆಯಾಗುವ ಕಸ

ವಾಟ್ಸ್‌ಆ್ಯಪ್‌ನಲ್ಲಿ ಇನ್ನು ಎಡಿಟ್ ಅವಕಾಶ

ಬೆಂಗಳೂರು (ರಾಯಿಟರ್ಸ್): ಒಮ್ಮೆ ಕಳುಹಿಸಿದ ಸಂದೇಶದಲ್ಲಿ ಮಾರ್ಪಾಡುಗಳನ್ನು ಮಾಡಲು ವಾಟ್ಸ್ ಆ್ಯಪ್ ಅವಕಾಶ ಕಲ್ಪಿಸಿದೆ.

ಈ ವಿಚಾರವನ್ನು ಕಂಪನಿಯು ಬ್ಲಾಗ್ ಮೂಲಕ ತಿಳಿಸಿದೆ. ಇದು ಮುಂದಿನ ದಿನಗಳಲ್ಲಿ ವಿಶ್ವದಾದ್ಯಂತ ಬಳಕೆಗೆ ಲಭ್ಯವಾಗಲಿದೆ. ಸಂದೇಶವನ್ನು ಕಳುಹಿಸಿದ 15 ನಿಮಿಷಗಳವರೆಗೆ ಅದನ್ನು ಮಾರ್ಪಾಡು (ಎಡಿಟ್) ಮಾಡುವ ಅವಕಾಶ ಇರುತ್ತದೆ.

ಕಳುಹಿಸಿದ ಸಂದೇಶದ ಮೇಲೆ ಬೆರಳಿಟ್ಟರೆ, ‘ಎಡಿಟ್’ ಆಯ್ಕೆಯಿರುವ ಮೆನು ಸಿಗುತ್ತದೆ. ಅದನ್ನು ಆಯ್ಕೆ ಮಾಡಿ ಸಂದೇಶದಲ್ಲಿ ಅಗತ್ಯ ಬದಲಾವಣೆಗಳನ್ನು ಮಾಡಬಹುದು.

ಮುಂಬೈ ಧಾರಣೆ

ಶೇಂಗಾ

22–5–2023

ಜಾವಾ 70/80(ಹೊಸ)	11950-12000
ಜಾವಾ 80/90(ಹೊಸ)	11450-11500
ದಪ್ಪ ಮಧ್ಯಪ್ರದೇಶ(ಹೊಸ)	11200-11300
ದಪ್ಪ ಗುಜರಾತ್(ಹೊಸ)	12300-12400

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1627 (1630)
ಒಂದು ವಾರದ ಡೆಲಿವರಿ	1622 (1625)
ಸೋಯಾ ಕಚ್ಚಾ	860 (865)
ಪಾಮ್ ವಾರದ ಡೆಲಿವರಿ	883 (892)
ಸೂರ್ಯಕಾಂತಿ ಎಣ್ಣೆ ಕಚ್ಚಾ	855 (860)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ

60,500 (60,700)

ಬೆಳ್ಳಿ ಕೆ.ಜಿ 72,500 (72,500)

ಆವರಣದಲ್ಲಿ ಶನಿವಾರದ ಧಾರಣೆ

ಚಿನ್ನ ಆಮದು: ಮಲಬಾರ್ ಗೋಲ್ಡ್‌ಗೆ ಟಿಆರ್‌ಕ್ಯು ಪರವಾನಗಿ

ಬೆಂಗಳೂರು: ಚಿನ್ನವನ್ನು ಆಮದು ಮಾಡಿಕೊಳ್ಳಲು ವಿದೇಶಿ ವ್ಯಾಪಾರದ ಮಹಾನಿರ್ದೇಶನಾಲಯದಿಂದ (ಡಿಜಿಎಫ್‌ಟಿ) ಟಿಆರ್‌ಕ್ಯು ಪರವಾನಗಿ ಪಡೆದುಕೊಂಡಿರುವುದಾಗಿ ಮಲಬಾರ್ ಗೋಲ್ಡ್ ಆ್ಯಂಡ್ ಡೈಮಂಡ್ಸ್ ಕಂಪನಿ ತಿಳಿಸಿದೆ.

ಭಾರತ-ಯುಎಇ ಸಮಗ್ರ ಆರ್ಥಿಕ ಪಾಲುದಾರಿಕೆ ಒಪ್ಪಂದದ ಅಡಿಯಲ್ಲಿ ಇಂಡಿಯಾ ಇಂಟರ್‌ನ್ಯಾಷನಲ್ ಬುಲಿಯನ್ ಎಕ್ಸ್‌ಚೇಂಜ್ (ಐಐಬಿಎಕ್ಸ್) ಮೂಲಕ ಚಿನ್ನವನ್ನು ಆಮದು ಮಾಡಿಕೊಳ್ಳಲು ಟಿಆರ್‌ಕ್ಯು ನೆರವಾಗಲಿದೆ. ಸುಂಕ ಪ್ರಮಾಣ ಕಡಿಮೆ ಆಗುವುದಲ್ಲದೆ ಪಾರದರ್ಶಕ ಆಮದು ಸಹ ಸಾಧ್ಯವಾಗಲಿದೆ ಎಂದು ಕಂಪನಿಯ ಪ್ರಕಟಣೆ ತಿಳಿಸಿದೆ.

‘ಈ ಪರವಾನಗಿ ಪಡೆದಿರುವ ಭಾರತದ ಮೊದಲ ಆಭರಣ ಸಮೂಹ ಎಂಬ ಹೆಗ್ಗಳಿಕೆಗೆ ಮಲಬಾರ್ ಗೋಲ್ಡ್ ಆ್ಯಂಡ್ ಡೈಮಂಡ್ಸ್ ಪಾತ್ರವಾಗಿರುವುದು ಹೆಮ್ಮೆಯ ವಿಷಯ. ಇದಕ್ಕೆ ಕಾರಣರಾದ ಪ್ರತಿಯೊಬ್ಬರಿಗೂ ಧನ್ಯವಾದ. ಇದರಿಂದಾಗಿ ಮೇಕ್ ಇನ್ ಇಂಡಿಯಾ; ಮಾರ್ಕೆಟ್ ಟು ದಿ ವರ್ಲ್ಡ್ ಗುರಿ ಸಾಧಿಸಲು ನೆರವಾಗಲಿದೆ’ ಎಂದು ಮಲಬಾರ್ ಸಮೂಹದ ಅಧ್ಯಕ್ಷ ಎಂ.ಪಿ. ಅಹ್ಮದ್ ತಿಳಿಸಿದ್ದಾರೆ.

‘ನೋಟು ವಿನಿಮಯ: ಗಾಬರಿ ಬೇಡ’

ಒಂದನೇ ಪುಟದಿಂದ...

‘ಬ್ಯಾಂಕ್‌ಗೆ ಎಷ್ಟು ನೋಟುಗಳು ಹಿಂದುರುಗಲಿವೆ ಎನ್ನುವುದನ್ನು ನಾವು ಕಾದು ನೋಡುತ್ತೇವೆ. ಸೆಪ್ಟೆಂಬರ್ 30ರ ನಂತರ ಏನಾಗಲಿದೆ ಎನ್ನುವ ಕುರಿತು ಊಹೆ ಆಧರಿಸಿದ ಉತ್ತರವನ್ನು ನಾನು ನೀಡುವುದಿಲ್ಲ’ ಎಂದು ಹೇಳಿದ್ದಾರೆ.

₹1 ಸಾವಿರ ಮುಖಬೆಲೆಯ ನೋಟನ್ನು ಮತ್ತೆ ಪರಿಚಯಿಸುವ ಕುರಿತಾದ ಪ್ರಶ್ನೆಗೆ, ಸದ್ಯದ ಮಟ್ಟಿಗೆ ಅಂತಹ ಯಾವುದೇ ಆಲೋಚನೆ ಇಲ್ಲ ಎಂದು ದಾಸ್ ಸ್ಪಷ್ಟಪಡಿಸಿದ್ದಾರೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-40000
ಹಳತು	48000-53000
ಕಾರ್ಕಳ	
ಹೊಸತು	30000-40500
ಹಳತು	40000-53000
ಕುಮಟಾ	
ಚಿಪ್ಪು	29999-33199
ಕೋಕ	20189-31089
ಹಳೆಚಾಲಿ	36509-39329
ಹೊಸಚಾಲಿ	35599-37729
ಸಾಗರ	
ಬಿಳಿಗೋಟು	16811-32299
ಚಾಲಿ	31699-36889
ಕೋಕ	19799-33899
ಕೆಂಪುಗೋಟು	26599-35500
ರಾಶಿ	34699-48629
ಸಿಪ್ಪೆಗೋಟು	6701-21609
ಶಿವಮೊಗ್ಗ	
ಬೆಟ್ಟೆ	43599-53672
ಗೊರಬಲು	17001-35009
ರಾಶಿ	36500-48709
ಸರಕು	42009-76240
ಸಿದ್ದಾಪುರ	
ಬಿಳಿಗೋಟು	27899-32399
ಚಾಲಿ	35399-37600
ಕೋಕ	26799-32299
ಕೆಂಪುಗೋಟು	28699-36979
ರಾಶಿ	42269-46599
ತಟ್ಟಿಬೆಟ್ಟೆ	37519-42939
ಶಿರಸಿ	
ಬೆಟ್ಟೆ	38209-44399
ಬಿಳಿಗೋಟು	23001-33899
ಚಾಲಿ	34181-38308
ಕೆಂಪುಗೋಟು	22199-37299
ರಾಶಿ	42699-46298
ಯಲ್ಲಾಪುರ	
ಬಿಳಿಗೋಟು	24899-33469
ಚಾಲಿ	34699-38229
ಕೋಕ	18899-32912
ಕೆಂಪುಗೋಟು	25019-34342
ರಾಶಿ	42182-50899
ತಟ್ಟಿಬೆಟ್ಟೆ	36969-45419

ಬೆಂಗಳೂರಿನ ರಾಜಕಾಲುವೆ: ಕೊಚ್ಚಿ ಹೋದ ಯುವಕನ ಮೃತದೇಹ ಪತ್ತೆ

ಮಳೆ: ಮೂವರು ಸಾವು, ಬೆಳೆ ಹಾನಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಲಬುರಗಿ, ಚಿಕ್ಕಮಗಳೂರು, ಬೆಂಗಳೂರು, ರಾಯಚೂರು, ಮೈಸೂರು, ಮಂಡ್ಯ ದಾವಣಗೆರೆ ಜಿಲ್ಲೆ ಸೇರಿದಂತೆ ವಿವಿಧೆಡೆ ಭಾನುವಾರ ತಡ ರಾತ್ರಿ ಹಾಗೂ ಸೋಮವಾರ ಮಳೆಯಾಗಿದ್ದು, ಬಾಲಕ ಸೇರಿದಂತೆ ಮೂವರು ಸಾವಿಗೀಡಾಗಿದ್ದಾರೆ.

ವಿವಿಧೆಡೆ ಅಪಾರ ಪ್ರಮಾಣದ ಬೆಳೆ ಹಾನಿಗೀಡಾಗಿದೆ. ಕೆಲವೆಡೆ ವಿದ್ಯುತ್ ಕಂಬಗಳು ಮತ್ತು ಮರಗಳು ಧರೆಗೆ ಉರುಳಿವೆ. ಕೆಲ ಜಿಲ್ಲೆಗಳಲ್ಲಿ ಮನೆಗಳಿಗೆ ಹಾನಿಯುಂಟಾಗಿದೆ. ಹಲವು ಜಾನುವಾರುಗಳು ಸಾವಿಗೀಡಾಗಿವೆ.

ಬೆಂಗಳೂರಿನಲ್ಲಿ ದಿನವಿಡೀ ಬಿಡುವು ನೀಡಿದ್ದ ಮಳೆ ಸಂಜೆ ರಭಸವಾಗಿ ಸುರಿಯಿತು. ಇಲ್ಲಿನ ಕೆ.ಪಿ. ಅಗ್ರಹಾರದ ರಾಜಕಾಲುವೆಯಲ್ಲಿ ಭಾನುವಾರ ಕೊಚ್ಚಿಹೋಗಿದ್ದ ಲೋಕೇಶ್ (31) ಅವರ ಮೃತದೇಹ ಸೋಮವಾರ 5 ಕಿ.ಮೀ ದೂರದ ಬ್ಯಾಟರಾಯನಪುರ ಬಳಿ ಸಿಕ್ಕಿದೆ. ಅನಾರೋಗ್ಯದಿಂದ ಬಳಲುತ್ತಿದ್ದ ಲೋಕೇಶ್ ಅವರು ಮಾತ್ರೆಗಳನ್ನು ತರಲು ಔಷಧದ ಅಂಗಡಿಗೆ ತೆರಳಿದ್ದರು. ವಾಪಸ್ ಬರುವಾಗ ತುಂಬಿ ಹರಿಯುತ್ತಿದ್ದ ರಾಜಕಾಲುವೆಯಲ್ಲಿ ಕೊಚ್ಚಿ ಹೋಗಿದ್ದರು.

ಮಳೆ–ಗಾಳಿಯಿಂದಾಗಿ ಕಬ್ಬನ್ ಉದ್ಯಾನದ 40ಕ್ಕೂ ಹೆಚ್ಚು ಮರಗಳು ಬುಡಸಹಿತ ಧರೆಗುರುಳಿವೆ. ಮಲ್ಲೇಶ್ವರದ ನಿಹಾನ್ ಚಿನ್ನಾಭರಣ ಮಳಿಗೆಗೆ ಕಾಲುವೆಯ ನೀರು ನುಗ್ಗಿ ಲಕ್ಷಾಂತರ ಮೌಲ್ಯದ ಚಿನ್ನಾಭರಣಗಳು ನೀರಿನಲ್ಲಿ ಕೊಚ್ಚಿ ಹೋಗಿವೆ.

ಕಲಬುರಗಿ ವರದಿ: ಕಲ್ಯಾಣ ಕರ್ನಾಟಕದ ರಾಯಚೂರು, ಕೊಪ್ಪಳ ಹಾಗೂ ಕಲಬುರಗಿ ಜಿಲ್ಲೆಗಳಲ್ಲಿ ಭಾನುವಾರ ರಾತ್ರಿ ಹಾಗೂ ಸೋಮವಾರ ಮಳೆಯಾಗಿದೆ. ರಾಯಚೂರು ಜಿಲ್ಲೆ ಸಿರವಾರ ತಾಲ್ಲೂಕಿನ ಬಲ್ಲಟಗಿ ಗ್ರಾಮದ ಬೀರಪ್ಪ ಸಾಬಣ್ಣ (55) ಸಿಡಿಲು ಬಡಿದು ಮೃತಪಟ್ಟಿದ್ದಾರೆ. ಕೊಪ್ಪಳ ಜಿಲ್ಲೆ ಯಲಬುರ್ಗಾ ತಾಲ್ಲೂಕಿನ ಕೊನಸಾಗರ ಗ್ರಾಮದಲ್ಲಿ ಒಂದು ಎತ್ತು ಹಾಗೂ ಆಕಳು ಮೃತಪಟ್ಟಿವೆ.

ಬಳ್ಳಾರಿ ಜಿಲ್ಲೆ ಕಂಪ್ಲಿ ತಾಲ್ಲೂಕಿನಲ್ಲಿ ಭಾನುವಾರ ರಾತ್ರಿ ಮಳೆ, ಬಿರುಗಾಳಿಗೆ ಬಾಳೆ ಬೆಳೆ ನೆಲಕಚ್ಚಿದೆ

ಕೊಪ್ಪಳ ಜಿಲ್ಲೆಯ ಗುಳದಳ್ಳಿ ಗ್ರಾಮದ ಎಸ್ಸೆಸ್ಸೆಲ್ಸಿ ವಿದ್ಯಾರ್ಥಿ ಶ್ರೀಕಾಂತ ದೊಡ್ಡನಗೌಡ ಮೇಟಿ (16) ಭಾನುವಾರ ಸಂಜೆ ಸಿಡಿಲು ಬಡಿದು ಮೃತಪಟ್ಟಿದ್ದಾನೆ. ಶಿವಪುರದಿಂದ ದ್ವಿಚಕ್ರ ವಾಹನದಲ್ಲಿ ಗ್ರಾಮಕ್ಕೆ ಮರಳುತ್ತಿದ್ದ ಶ್ರೀಕಾಂತ, ಗಾಳಿಗೆ ಟೋಪಿ ಹಾರಿದ್ದರಿಂದ ಅದನ್ನು ತರಲು ವಾಹನದಿಂದ ಕೆಳಗೆ ಇಳಿದು ಹೋಗುತ್ತಿದ್ದಂತೆ ಸಿಡಿಲು ಬಡಿದಿದೆ.

ಚಿಕ್ಕಮಗಳೂರು ವರದಿ: ಜಿಲ್ಲೆಯ ಮಲೆನಾಡು ಭಾಗದಲ್ಲಿ ಕೆಲವೆಡೆ, ಮೂಡಿಗೆರೆ, ಶೃಂಗೇರಿ ಸುತ್ತಲಿನ ಭಾಗದಲ್ಲಿ ಮಳೆಯಾಗಿದೆ.

ಹೊಸಪೇಟೆ ವರದಿ: ಭಾನುವಾರ ರಾತ್ರಿ ಸುರಿದ ಭಾರಿ ಮಳೆಗೆ ಅವಳಿ ಜಿಲ್ಲೆಗಳಾದ ವಿಜಯನಗರ–ಬಳ್ಳಾರಿ ಜಿಲ್ಲೆಯ ಹಲವೆಡೆ ಬೆಳೆಗಳಿಗೆ ಅಪಾರ ಹಾನಿಯಾಗಿದೆ. ವಿಜಯನಗರ ಜಿಲ್ಲೆಯ ಹರಪನಹಳ್ಳಿ ತಾಲ್ಲೂಕಿನಲ್ಲಿ 58 ವಿದ್ಯುತ್ ಕಂಬಗಳು ಧರೆಗುರುಳಿವೆ. ಎರಡು ಮನೆಗಳಿಗೆ ಭಾಗಶಃ ಹಾನಿಯಾಗಿದೆ. ಕೂಡ್ಲಿಗಿ ತಾಲ್ಲೂಕಿನಲ್ಲಿ ಸಿಡಿಲಿಗೆ ಎರಡು ಕರುಗಳು ಸತ್ತಿವೆ. ಹೂವಿನಹಡಗಲಿ ತಾಲ್ಲೂಕಿನಲ್ಲಿಕಟಾವಿಗೆ ಬಂದಿದ್ದ ಭತ್ತದ ಫಸಲು ನೆಲಕ್ಕೆ ಒರಗಿದೆ. ಬಳ್ಳಾರಿ ಜಿಲ್ಲೆಯ ಸಿರುಗುಪ್ಪದಲ್ಲಿ ಎರಡು ಮನೆಗಳು ಬಿದ್ದಿವೆ. ಬಾಳೆ, ಸಪೋಟ, ಕಬ್ಬು, ನುಗ್ಗೆ, ಹೆಬ್ಬೇವು ಹಾಳಾಗಿದೆ. ಕುರುಗೋಡು, ಕಂಪ್ಲಿಯ ಕೆಲವೆಡೆ ವಿದ್ಯುತ್ ಕಂಬಗಳು ಬಾಗಿವೆ. ಕಂಪ್ಲಿಯಲ್ಲಿ ಬಾಳೆ ನೆಲಕಚ್ಚಿದೆ.

ಹುಬ್ಬಳ್ಳಿ ವರದಿ: ಹುಬ್ಬಳ್ಳಿ- ಧಾರವಾಡ, ದಾಂಡೇಲಿ, ಬೆಳಗಾವಿ ನಗರ ಹಾಗೂ ಜಿಲ್ಲೆಯಾದ್ಯಂತ ವಿವಿಧೆಡೆ ಮಳೆಯಾಗಿದೆ. ಬಾಗಲಕೋಟೆ ಜಿಲ್ಲೆ ಕೆರೂರ ಪಟ್ಟಣ ಸಮೀಪದ ಬೆಳಗಂಟಿ ಬಡಾವಣೆಯಲ್ಲಿ ಸಿಡಿಲು ಬಡಿದು 9 ಕುರಿಗಳು ಮೃತಪಟ್ಟಿವೆ

69ಕ್ಕೂ ಹೆಚ್ಚು ಮನೆಗಳಿಗೆ ಹಾನಿ, ಹೋರಿ ಸಾವು (ಮೈಸೂರು ವರದಿ): ಮೈಸೂರು, ಹಾಸನ, ಚಾಮರಾಜನಗರ, ಕೊಡಗಿನಲ್ಲಿ ಭಾನುವಾರ ತಡರಾತ್ರಿ ಮತ್ತು ಸೋಮವಾರ ಸುರಿದ ಭಾರಿ ಮಳೆಯಿಂದ 69ಕ್ಕೂ ಹೆಚ್ಚು ಮನೆಗಳಿಗೆ ಹಾನಿಯಾಗಿದೆ. ಆಲೂರು ತಾಲ್ಲೂಕಿನ ಕುಂಬಾರಹಳ್ಳಿಯಲ್ಲಿ ಸಿಡಿಲು ಬಡಿದು ಹೋರಿ ಮೃತಪಟ್ಟಿತು. ಚಾಮರಾಜನಗರ ಜಿಲ್ಲೆಯಲ್ಲಿ ವಿವಿಧ ಬೆಳೆ ಹಾನಿಗೀಡಾಗಿವೆ.

(ದಾವಣಗೆರೆ ವರದಿ): ಜಿಲ್ಲೆಯಲ್ಲಿ ಭಾನುವಾರ ರಾತ್ರಿ ಸುರಿದ ಭಾರಿ ಮಳೆಗೆ ಅಂದಾಜು 445 ಎಕರೆ ಭತ್ತ, 38 ಎಕರೆ ಬಾಳೆ, 20 ಎಕರೆ ಪಪ್ಪಾಯಿ ಬೆಳೆಗೆ ಹಾನಿಯಾಗಿದ್ದು, ಜಗಳೂರು ತಾಲ್ಲೂಕಿನ ಚಿಕ್ಕಉಜ್ಜನಿ ಗ್ರಾಮದ ಚಂದ್ರಶೇಖರ್ ಅವರಿಗೆ ಸೇರಿದ ಒಂದು ಎತ್ತು ಸಿಡಿಲು ಬಡಿದು ಮೃತಪಟ್ಟಿದೆ.

ಹರಿಹರ ತಾಲ್ಲೂಕಿನಲ್ಲಿ ಕೊಯ್ಲಿಗೆ ಬಂದಿದ್ದ 295 ಎಕರೆ ಭತ್ತದ ಬೆಳೆ ನಷ್ಟವಾಗಿದ್ದು, ₹ 18.63 ಲಕ್ಷ ಹಾನಿಯಾಗಿದೆ. ದಾವಣಗೆರೆ ತಾಲ್ಲೂಕಿನಲ್ಲಿ 150 ಎಕರೆ ಭತ್ತದ ಬೆಳೆ ಹಾಳಾಗಿದ್ದು, ₹ 30 ಲಕ್ಷದಷ್ಟು ನಷ್ಟವಾಗಿದೆ. ಜಿಲ್ಲೆಯಲ್ಲಿ 14 ಮನೆಗಳಿಗೆ ಭಾಗಶಃ ಹಾನಿಯಾಗಿದೆ. ಸಂತೇಬೆನ್ನೂರು ಸಮೀಪದ ಕೊಂಡದಹಳ್ಳಿಯಲ್ಲಿ ತೆಂಗು ಹಾಗೂ ಅಡಿಕೆ ಮರಗಳಿಗೆ ಸಿಡಿಲು ಬಡಿದು ಸುಟ್ಟು ಹೋಗಿವೆ. ಮಳೆಯಿಂದಾಗಿ ಜಿಲ್ಲೆಯಲ್ಲಿ ₹ 79.40 ಲಕ್ಷ ನಷ್ಟ ಸಂಭವಿಸಿದೆ.

35 ಮನೆಗಳಿಗೆ ಭಾಗಶಃ ಹಾನಿ (ಚಿತ್ರದುರ್ಗ ವರದಿ): ಜಿಲ್ಲೆಯ ವಿವಿಧೆಡೆ 35 ಮನೆಗಳು ಭಾಗಶಃ ಹಾನಿಗೀಡಾಗಿವೆ. ಚಿತ್ರದುರ್ಗ, ಧರ್ಮಪುರದ ಹಲಗಲದ್ದಿಯಲ್ಲಿ ಸಿಡಿಲು ಬಡಿದು ಎಮ್ಮೆ ಮೃತಪಟ್ಟಿದೆ. ಬಹುತೇಕ ಕಡೆ ಫಸಲಿಗೆ ಬಂದಿದ್ದ ಬೆಳೆ ಮಳೆಗೆ ತುತ್ತಾಗಿದೆ.

ಕೋಲಾರ ಜಿಲ್ಲೆಯ ಶ್ರೀನಿವಾಸಪುರ ತಾಲ್ಲೂಕಿನಲ್ಲಿ ಭಾನುವಾರ ರಾತ್ರಿ ಸುರಿದ ಆಲಿಕಲ್ಲು ಮಳೆಯಿಂದ ತಾಲ್ಲೂಕಿನಲ್ಲಿ 756 ಹೆಕ್ಟೇರ್ ಮಾವು ಬೆಳೆ ನಷ್ಟವಾಗಿದೆ.

‘ಮುಸ್ಲಿಮರ ಮೀಸಲಾತಿ ಮರುಸ್ಥಾಪಿಸಿ’

ಮುಂಬೈ (ಪಿಟಿಐ): ಕರ್ನಾಟಕದಲ್ಲಿ ಹೊಸದಾಗಿ ರಚನೆಯಾಗಿರುವ ಕಾಂಗ್ರೆಸ್ ಸರ್ಕಾರವು ಮುಸ್ಲಿಮರ ಶೇ 4ರಷ್ಟು ಮೀಸಲಾತಿ ಪ್ರಮಾಣವನ್ನು ಮರು ಸ್ಥಾಪಿಸಬೇಕು ಎಂದು ಜಮಿಯಾತ್ ಉಲೇಮಾ–ಇ–ಹಿಂದ್ ಅಧ್ಯಕ್ಷ ಮೌಲಾನಾ ಅರ್ಷದ್ ಮದಾನಿ ಸೋಮವಾರ ಆಗ್ರಹಿಸಿದರು.

ಆರ್ಥಿಕವಾಗಿ ಹಿಂದುಳಿದಿರುವ ಮುಸ್ಲಿಂ ಸಮುದಾಯದವರಿಗೆ ನೀಡಲಾಗುತ್ತಿದ್ದ ಶೇ 4ರಷ್ಟು ಮೀಸಲಾತಿ ಕೋಟಾವನ್ನು ಈ ಹಿಂದಿನ ಬಿಜೆಪಿ ಸರ್ಕಾರ ಮಾರ್ಚ್‌ನಲ್ಲಿ ರದ್ದುಪಡಿಸಿತ್ತು. ಸರ್ಕಾರದ ಈ ನಿರ್ಧಾರವನ್ನು ಸುಪ್ರೀಂ ಕೋರ್ಟ್‌ನಲ್ಲಿ ಪ್ರಶ್ನಿಸಲಾಗಿದೆ.

ಮೌಲಾನಾ ಅರ್ಷದ್ ಮದಾನಿ

ಇಲ್ಲಿನ ಆಜಾದ್ ಮೈದಾನದಲ್ಲಿ ನಡೆದ ಜಮಿಯಾತ್ ಉಲೇಮಾ–ಇ–ಹಿಂದ್‌ನ ಮೂರು ದಿನಗಳ ಸಭೆಯ ಕೊನೆಯ ದಿನ ಮಾತನಾಡಿದ ಮದಾನಿ ಅವರು, ‘ಕರ್ನಾಟಕದ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವು ಭಜರಂಗದಳ ಮತ್ತು ಇತರ ಸಂಘಟನೆಗಳ ನಿಷೇಧಿಸುವ ಕುರಿತು ನೀಡಿದ್ದ ಭರವಸೆ ಶ್ಲಾಘನೀಯ. ಈಗ ಕಾಂಗ್ರೆಸ್‌ಗೆ, ತಾನು ನೀಡಿದ್ದ ಚುನಾವಣಾ ಭರವಸೆಗಳನ್ನು ಈಡೇರಿಸಲು ಮತ್ತು ಮುಸ್ಲಿಮರ ಮೀಸಲಾತಿಯನ್ನು ಮರು ಸ್ಥಾಪಿಸಲು ಸಮಯ ಬಂದಿದೆ’ ಎಂದು ಹೇಳಿದರು.

‘ದ್ವೇಷದ ಕಾರ್ಯಸೂಚಿಯನ್ನು ಕರ್ನಾಟಕದ ಜನರು ತಿರಸ್ಕರಿಸಿರುವುದನ್ನು ಈ ಚುನಾವಣಾ ಫಲಿತಾಂಶ ತೋರಿಸುತ್ತದೆ. ಕೋಮುವಾದದ ವಿರುದ್ಧ 75 ವರ್ಷಗಳ ಹಿಂದೆಯೇ ಕಾಂಗ್ರೆಸ್ ಇಂಥ ದೃಢ ನಿಲುವು ತಳೆದಿದ್ದರೆ ಅದು ಕೇಂದ್ರದಲ್ಲಿ ಅಧಿಕಾರದಿಂದ ಕೆಳಗಿಳಿಯುತ್ತಲೇ ಇರಲಿಲ್ಲ’ ಎಂದು ವಿಶ್ಲೇಷಿಸಿದರು.

ಜ್ಞಾನವಾಪಿ ಮಸೀದಿ ಸರ್ವೆ: ಆಕ್ಷೇಪಣಾ ಅರ್ಜಿ ಸಲ್ಲಿಕೆ

ವಾರಾಣಸಿ (ಉತ್ತರ ಪ್ರದೇಶ) (ಪಿಟಿಐ): ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯಿಂದ ಇಲ್ಲಿನ ಕಾಶಿ ದೇಗುಲದ ಸಂಕೀರ್ಣದಲ್ಲಿ ಇರುವ ಜ್ಞಾನವಾಪಿ ಮಸೀದಿಯ ಸಂಪೂರ್ಣ ಸರ್ವೆ ನಡೆಸುವುದಕ್ಕೆ ಸಂಬಂಧಿಸಿದಂತೆ ಇಲ್ಲಿನ ಜಿಲ್ಲಾ ನ್ಯಾಯಾಲಯದಲ್ಲಿ ಸಲ್ಲಿಸಿರುವ ಅರ್ಜಿಯ ವಿಚಾರಣೆಗೂ ಮುನ್ನವೇ ಸೋಮವಾರ ಮಸೀದಿ ಆಡಳಿತ ಮಂಡಳಿಯು ಆಕ್ಷೇಪಣಾ ಅರ್ಜಿ ಸಲ್ಲಿಸಿದೆ.

ಹೈಕೋರ್ಟ್‌ನ ಆದೇಶದ ಹಿನ್ನೆಲೆಯಲ್ಲಿ ಮಸೀದಿಯ ಭೂ ವಿಸ್ತೀರ್ಣವನ್ನು ಸರ್ವೆಗೆ ಒಳಪಡಿಸಬೇಕು ಎಂದು ಮೇ 16ರಂದು ಸಲ್ಲಿಸಿರುವ ಅರ್ಜಿಯನ್ನು ಜಿಲ್ಲಾ ನ್ಯಾಯಾಲಯ ವಿಚಾರಣೆಗೆ ಅಂಗೀಕರಿಸಿದೆ.

‘ಮಸೀದಿ ಕಮಿಟಿಯು ಆಕ್ಷೇಪಣಾ ಅರ್ಜಿ ಸಲ್ಲಿಸಿದ್ದು, ನ್ಯಾಯಾಲಯವು ವಿಚಾರಣೆಯನ್ನು ಜುಲೈ 7ಕ್ಕೆ ಮುಂದೂಡಿದೆ’ ಎಂದು ಜ್ಞಾನವ್ಯಾಪಿ ಮತ್ತು ಆದಿವಿಶ್ವೇಶ್ವರ ಪ್ರಕರಣಗಳ ಪರ ವಿಶೇಷ ವಕೀಲ ರಾಜೇಶ್ ಮಿಶ್ರಾ ತಿಳಿಸಿದ್ದಾರೆ.

ಶಿವಲಿಂಗ ರೂಪದ ರಚನೆಯ ಕಾರ್ಬನ್ ಡೇಟಿಂಗ್ ಪರೀಕ್ಷೆಗೆ ಅಲಹಾಬಾದ್ ಹೈಕೋರ್ಟ್ ನೀಡಿದ್ದ ಆದೇಶದ ಅನುಷ್ಠಾನವನ್ನು ಸುಪ್ರೀಂ ಕೋರ್ಟ್ ಮುಂದೂಡಿದೆ.

ನಟ ಶರತ್ ಬಾಬು ಇನ್ನಿಲ್ಲ

ಒಂದನೇ ಪುಟದಿಂದ...

1973ರಲ್ಲಿ ತೆರೆಕಂಡ ತೆಲುಗಿನ ‘ರಾಮ ರಾಜ್ಯಂ’ ಚಿತ್ರದ ಮೂಲಕ ಅವರ ಸಿನಿ ಪಯಣ ಆರಂಭಗೊಂಡಿತು. 1978ರಲ್ಲಿ ತೆರೆಕಂಡ ಕೆ. ಬಾಲಚಂದರ್ ನಿರ್ದೇಶನದ ‘ನಿಳಲ್ ನಿಜಮಾಗಿರದು’ ಸಿನಿಮಾ ಅವರಿಗ ಒಳ್ಳೆಯ ಹೆಸರು ತಂದುಕೊಟ್ಟಿತು. ‘ಸಾಗರ ಸಂಗಮಂ’ನಲ್ಲಿ ನಟ ಕಮಲ್ ಹಾಸನ್ ಜೊತೆ ನಟಿಸಿದ ಸ್ನೇಹಿತನ ಪಾತ್ರ ಸಿನಿಪ್ರಿಯರ ಮನ ಸೆಳೆಯಿತು. 2021ರಲ್ಲಿ ತೆರೆಕಂಡ ತೆಲುಗಿನ ‘ವಕೀಲ್ ಸಾಬ್’ ಅವರ ನಟನೆಯ ಕೊನೆಯ ಚಿತ್ರ.

ಕನ್ನಡದಲ್ಲಿ ಅವರು ನಟಿಸಿದ ಮೊದಲ ಚಿತ್ರ ‘ತುಳಸಿ ದಳ’. ‘ಅಮೃತ ವರ್ಷಿಣಿ’, ‘ಬೃಂದಾವನ’ ಸೇರಿದಂತೆ ಹತ್ತಕ್ಕೂ ಹೆಚ್ಚು ಸಿನಿಮಾಗಳಲ್ಲಿ ಅವರು ಅಭಿನಯಿಸಿದ್ದಾರೆ. ಅಮೃತ ವರ್ಷಿಣಿ ಚಿತ್ರದಲ್ಲಿನ ಅವರ ಅಭಿನಯಕ್ಕೆ ಅಪಾರ ಮೆಚ್ಚುಗೆ ವ್ಯಕ್ತವಾಗಿತ್ತು.

ಕೆ. ವಿಶ್ವನಾಥ್ ನಿರ್ದೇಶನದ ‘ಸಾಗರ ಸಂಗಮಂ’, ‘ಆಪದ್ಬಾಂಧವುಡು’, ‘ಕ್ರಿಮಿನಲ್’ ಅವರು ನಟಿಸಿರುವ ತೆಲುಗಿನ ಪ್ರಮುಖ ಸಿನಿಮಾಗಳು. ‘ಸೂಪರ್ ಸ್ಟಾರ್’ ರಜನಿಕಾಂತ್ ಜೊತೆಗೆ ತಮಿಳಿನ ‘ಮಲ್ಲುಮ್ ಮಲರುಮ್’, ‘ವೇಲೈಕಾರನ್’, ‘ಅಣ್ಣಾಮಲೈ’ ಮತ್ತು ‘ಮುತ್ತು’ ಚಿತ್ರಗಳಲ್ಲಿಯೂ ಅವರು ನಟಿಸಿದ್ದಾರೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Drivers

DRIVERS WANTED Electric Cabs. Rs. 35000/- month. Employment Office, Kolar Busstand, 24- May- 9 AM, 08069459645

General

ಕರ್ನಾಟಕದಾದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟ 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80,000. 7760014526, 7795199673

Wanted

ಬೆಂಗಳೂರಿನ ನಾಗಸಂದ್ರ, ಮೆಟ್ರೋ ಸ್ಟೇಷನ್ ಹತ್ತಿರವಿರುವ ತೋಟ ಮತ್ತು ಮನೆ ಕೆಲಸ ಮಾಡಲು ಗಂಡ- ಹೆಂಡತಿ ಬೇಕಾಗಿದ್ದಾರೆ. ವಸತಿ ಉಚಿತ. ಸಂಪರ್ಕಿಸಿ: 9845026475, 9845510722

ಆಂಧ್ರಪ್ರದೇಶ ಪ್ರೊಡಕ್ಟಿವಿಟಿ ಕೌನ್ಸಿಲ್, ಹೈದರಾಬಾದ್ ಇವರು, ಐಟಿಐ ವಿದ್ಯಾರ್ಹತೆಯುಳ್ಳ (ಇಲೆಕ್ಟ್ರಾನಿಕ್ಸ್, ಫಿಟ್ಟರ್ಸ್, ವೆಲ್ಡರ್ಸ್) ಕನಿಷ್ಠ ಒಂದರಿಂದ ನಾಲ್ಕು ವರ್ಷ ಅನುಭವ ಹೊಂದಿರುವ ಅಭ್ಯರ್ಥಿಗಳಿಗೆ, ಹೈದರಾಬಾದ್ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿರುವ ಪ್ರತಿಷ್ಠಿತ ಉತ್ಪಾದನಾ ಕೈಗಾರಿಕೆಗಳಲ್ಲಿ ಉದ್ಯೋಗ ಅವಕಾಶಗಳನ್ನು ಒದಗಿಸುತ್ತಿದ್ದಾರೆ. ಆಸಕ್ತಿಯುಳ್ಳ ಅಭ್ಯರ್ಥಿಗಳು ತಮ್ಮ ಅನುಭವದ ವಿವರಗಳನ್ನು ಹೊಂದಿರುವ ರೆಸ್ಯೂಮ್‌ನ್ನು appchyd@gmail.com ವಿಳಾಸಕ್ಕೆ ಇಮೇಲ್ ಮಾಡಬಹುದು ಅಥವಾ ವಿವರಗಳಿಗಾಗಿ 9000212019 ಸಂಖ್ಯೆಗೆ ಕರೆ ಮಾಡಬಹುದು.

ಇಸ್ತ್ರಿ ಮಾಡುವ ಅನುಭವವುಳ್ಳ ಕೆಲಸಗಾರರು ಬೇಕಾಗಿದ್ದಾರೆ ಸಂಬಳ ದಿನಕ್ಕೆ 900/ರೂ.ವಾರಕ್ಕೆ ತಿಂಗಳಿಗೆ ಬೋನಸ್‌ರೂಂ ಸೌಲಭ್ಯವಿರುತ್ತದೆ. ಕೆಲಸ ಬೆಳಿಗ್ಗೆ 10.00.ರಾತ್ರಿ 8.00. (ಸೋಮವಾರದಿಂದ ಶನಿವಾರದವರೆಗೆ) ಸಂಪರ್ಕಿಸಿ: ಜಯನಗರ, ಬನಶಂಕರಿ, ಬೆಂಗಳೂರು.9880266007, 9663668007

Part-Time Jobs

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000- 20,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. ಸಂಪರ್ಕಿಸಿ: 9611227266/ 9611221244

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ,15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ.8884777502, 8884777503.

ಮನೆಯಿಂದಲೇ ಪುಸ್ತಕ ಬರೆಯುವ ಫಾರಂ ತುಂಬುವ ಕೆಲಸದ ಮೂಲಕ ತಿಂಗಳಿಗೆ 18,000-22,000/- ಸಂಪಾದಿಸಿ.ಕೊರಿಯರ್ ಇದೆ. 8050064329, 8050064330.

ಭವಿಷ್ಯ

Astrology

ನಂ.1 ವಶೀಕರಣ ಸ್ಪೆಷಲಿಸ್ಟ್, ಪ್ರೀತಿಯಲ್ಲಿ ನಂಬಿಮೋಸ, ಇಷ್ಟಪಟ್ಟವರು ನಿಮ್ಮಂತಾಗಲು ಸ್ತ್ರೀಪುರುಷ ವಶೀಕರಣ, ಶತ್ರುಕಾಟ, ದಾಂಪತ್ಯ ಕಲಹ 2ದಿನಗಳಲ್ಲಿ ಪರಿಹಾರ. 9844174018

ಪ್ರವಾಸ

Holiday Package Tours

25.5.2023, 4 ದಿನ. ಕದ್ರಿಮಂಜುನಾಥ, ಕಟೀಲು, ಮಲ್ಪೆಬೀಚ್, ಸ್ವಾಮಿಕೊರಗಜ್ಜ ಆದಿಸ್ಥಳ, ಪೊಳಲಿರಾಜರಾಜೇಶ್ವರಿ, ಧರ್ಮಸ್ಥಳ,ಸೌದಡ್ಕ, ಪಜಕಕ್ಷೇತ್ರ, ಮಂಗಳದೇವಿ ಇತ್ಯಾದಿ. 9481433157

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

DH ಪ್ರಜಾವಾಣಿ JOB CORNER
BOOK JOB ADS ON WEEKDAY + SUNDAY
@803/-* Per Sqcm Single Column
@825/-* Per Sqcm Multi Column
conditions apply*
For more information Contact:
9845114560 : 9731810277
9901641752 : 9886213331
080 - 45557163 / 164

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ

ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.

ದಯವಿಟ್ಟು ಸಂಪರ್ಕಿಸಿ:
Vishal : 9845114560
Jerry : 9731810277 | Tanveer : 9886213331
Ravichandra : 9901641752 | Anitha R: 9900428036

ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ನೂತನ ಸಂಸತ್ ಭವನ 28ಕ್ಕೆ ಲೋಕಾರ್ಪಣೆ • ಪ್ರಧಾನಿ ನಡೆಗೆ ಆಕ್ರೋಶ • ಮತ ಬ್ಯಾಂಕ್‌ಗಷ್ಟೇ ದಲಿತರ ಬಳಕೆ: ಖರ್ಗೆ

ರಾಷ್ಟ್ರಪತಿಗಿಲ್ಲ ಆಹ್ವಾನ: ಪ್ರತಿಪಕ್ಷಗಳ ಟೀಕೆ

ಪ್ರಜಾವಾಣಿ ವಾರ್ತೆ

ನವದೆಹಲಿ: ರಾಷ್ಟ್ರಪತಿ ದ್ರೌಪದಿ ಮುರ್ಮು ಅವರನ್ನು ಕಡೆಗಣಿಸಿ ಮೇ 28ರಂದು ತಾವೇ ನೂತನ ಸಂಸತ್ ಭವನದ ಲೋಕಾರ್ಪಣೆಗೆ ಮುಂದಾಗಿರುವ ಪ್ರಧಾನಿ ನರೇಂದ್ರ ಮೋದಿ ಅವರ ನಡೆಯು ವಿರೋಧ ಪಕ್ಷಗಳ ಟೀಕೆಗೆ ಗುರಿಯಾಗಿದೆ.

ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ, ಪ್ರಧಾನಿ ಅವರ ಈ ನಿಲುವನ್ನು ಕಟುವಾಗಿ ಟೀಕಿಸಿದ ಬೆನ್ನಲ್ಲೇ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಕೂಡ ಚಾಟಿ ಬೀಸಿದ್ದಾರೆ.

‘ಮೋದಿ ನೇತೃತ್ವದ ಕೇಂದ್ರ ಸರ್ಕಾರವು ಕೇವಲ ಮತಬ್ಯಾಂಕ್ ಭದ್ರಪಡಿಸಿಕೊಳ್ಳಲಷ್ಟೇ ರಾಷ್ಟ್ರಪತಿ ಹುದ್ದೆಗೆ ದಲಿತರು ಮತ್ತು ಬುಡಕಟ್ಟು ಸಮುದಾಯದವರನ್ನು ನೇಮಿಸುತ್ತಿದೆ’ ಎಂದು ಖರ್ಗೆ ಟ್ವೀಟ್ ಮೂಲಕ ಟೀಕಿಸಿದ್ದಾರೆ.

ದ್ರೌಪದಿ ಮುರ್ಮು ದೇಶದ ಮೊದಲ ಪ್ರಜೆ. ಸರ್ಕಾರ, ವಿರೋಧ ಪಕ್ಷ ಸೇರಿದಂತೆ ನಾಗರಿಕರ ಪ್ರತಿನಿಧಿಯಾಗಿದ್ದಾರೆ. ಅವರಿಂದ ಭವನ ಉದ್ಘಾಟಿಸುವ ಮೂಲಕ ಸಾಂವಿಧಾನಿಕ ಋಜುತ್ವ ಹಾಗೂ ಪ್ರಜಾಪ್ರಭುತ್ವದ ಮೌಲ್ಯಗಳನ್ನು ಸರ್ಕಾರ ಉಳಿಸಬೇಕಿದೆ. ಆದರೆ, ಅವರಿಗೆ ಉದ್ಘಾಟನಾ ಸಮಾರಂಭಕ್ಕೆ ಆಹ್ವಾನವನ್ನೇ ನೀಡಿಲ್ಲ. ಅವರನ್ನು ನಿರ್ಲಕ್ಷಿಸಲಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

2020ರ ಡಿಸೆಂಬರ್ 10ರಂದು ಭವನಕ್ಕೆ ಶಿಲಾನ್ಯಾಸ ನೆರವೇರಿಸಲಾಯಿತು. ಆಗ ರಾಷ್ಟ್ರಪತಿಯಾಗಿದ್ದ ದಲಿತ ಸಮುದಾಯದ ರಾಮನಾಥ್ ಕೋವಿಂದ್‌ಗೂ ಕಾರ್ಯಕ್ರಮಕ್ಕೆ ಆಹ್ವಾನವನ್ನೇ ನೀಡಿರಲಿಲ್ಲ. ಬಿಜೆಪಿಯ ಧೋರಣೆ ಚುನಾವಣಾ ರಾಜಕೀಯ ಲಾಭ ಪಡೆಯಲಷ್ಟೇ ಸೀಮಿತಗೊಂಡಿದೆ. ಭಾರತದ ಒಕ್ಕೂಟ ವ್ಯವಸ್ಥೆಯಲ್ಲಿ ಸಂಸತ್‌ಗೆ ಪರಮೋಚ್ಚ ಅಧಿಕಾರವಿದೆ. ಇದರ ಮೇಲೆ ರಾಷ್ಟ್ರಪತಿಗೆ ಸಂವಿಧಾನ ಬದ್ಧವಾದ ಹೆಚ್ಚಿನ ಹಕ್ಕಿದೆ ಎಂದು ಹೇಳಿದ್ದಾರೆ.

ಕೇಂದ್ರ ಸರ್ಕಾರ ಪದೇ ಪದೇ ತನ್ನ ಕರ್ತವ್ಯಗಳನ್ನು ಉಲ್ಲಂಘಿಸುತ್ತಿದೆ. ಆರೆಸ್ಸೆಸ್ ಮತ್ತು ಬಿಜೆಪಿ ಸರ್ಕಾರದ ಟೋಕನ್ ವ್ಯವಸ್ಥೆಯಿಂದ ರಾಷ್ಟ್ರಪತಿ ಭವನವನ್ನು ರಕ್ಷಿಸಬೇಕಿದೆ ಎಂದಿದ್ದಾರೆ.

> **ನೂತನ ಸಂಸತ್ ಭವನದ ಉದ್ಘಾಟನಾ ವಿಷಯದಲ್ಲಿ ಕಾಂಗ್ರೆಸ್ ಅನಗತ್ಯವಾಗಿ ಗೊಂದಲ ಸೃಷ್ಟಿಸುವ ಮೂಲಕ ಕೀಳುಮಟ್ಟದ ರಾಜಕಾರಣಕ್ಕೆ ಇಳಿದಿದೆ**
> **ಅನಿಲ್ ಬಲುನಿ**
> ಬಿಜೆಪಿಯ ಮುಖ್ಯ ವಕ್ತಾರ

ಒಕ್ಕೂಟ ವ್ಯವಸ್ಥೆಯಡಿ ಸಂಸತ್ ಇರಬೇಕು. ಅದು ರಾಷ್ಟ್ರಪತಿಯನ್ನು ಒಳಗೊಂಡ ರಾಜ್ಯಸಭೆ ಮತ್ತು ಲೋಕಸಭೆ ಇರಬೇಕೆಂದು ಸಂವಿಧಾನದ 79ನೇ ವಿಧಿ ಹೇಳುತ್ತದೆ. ಶಾಸಕಾಂಗದ ಪ್ರತಿನಿಧಿಯಾದ ರಾಷ್ಟ್ರಪತಿ ಅವರಿಂದಲೇ ಭವನ ಉದ್ಘಾಟಿಸಬೇಕು ಎಂಬುದು ಪ್ರತಿಪಕ್ಷಗಳ ಆಗ್ರಹವಾಗಿದೆ.

ಆರ್‌ಜೆಡಿ ಹಿರಿಯ ಮುಖಂಡ ಹಾಗೂ ಸಂಸದ ಮನೋಜ್ ಕೆ. ಜಹಾ, ‘ನೂತನ ಸಂಸತ್ ಭವನವನ್ನು ರಾಷ್ಟ್ರಪತಿ ಉದ್ಘಾಟಿಸುವಂತಿಲ್ಲವೇ? ಎಂದು ಪ್ರಶ್ನಿಸಿದ್ದಾರೆ.

‘ಗಾಂಧೀಜಿ ಮತ್ತು ಸಾವರ್ಕರ್, ಅಂಬೇಡ್ಕರ್–ಗೋಳ್ವಾಲ್ಕರ್ ಅವರನ್ನು ಒಂದೇ ಚೌಕಟ್ಟಿನಲ್ಲಿ ಕೂರಿಸಲು ಆಗುವುದಿಲ್ಲ. ಇದು ಕೃತಕವಾಗುತ್ತದೆ. ಆದರೆ, ಗಾಂಧೀಜಿ ಮತ್ತು ಅಂಬೇಡ್ಕರ್ ಅವರ ವ್ಯಕ್ತಿತ್ವ ಈ ಚೌಕಟ್ಟನ್ನು ಮೀರಿದ್ದಾಗಿದೆ ಎಂದು ಟ್ವೀಟ್ ಮಾಡಿದ್ದಾರೆ.

ಸಿಪಿಐ ಪ್ರಧಾನ ಕಾರ್ಯದರ್ಶಿ ಡಿ. ರಾಜಾ ಕೂಡ ಕೇಂದ್ರದ ನಡೆಗೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದಾರೆ. ‘ಪ್ರಧಾನಿ ಕಾರ್ಯಾಂಗದ ಮುಖ್ಯಸ್ಥರಾಗಿದ್ದಾರೆ. ಶಾಸಕಾಂಗದ ಮುಖ್ಯಸ್ಥರಾಗಿರುವ ದ್ರೌಪದಿ ಮುರ್ಮು ಅವರೇ ಭವನ ಉದ್ಘಾಟಿಸಬೇಕಿದೆ. ಸ್ವಪ್ರತಿಷ್ಠೆ ಮತ್ತು ಕ್ಯಾಮೆರಾಗಳ ಮುಂದೆ ಕಾಣಿಸಿಕೊಳ್ಳಬೇಕೆಂಬ ನಿಮ್ಮ ಗೀಳು ಸರಿಯೇ’ ಎಂದು ಮೋದಿ ಅವರನ್ನು ಪ್ರಶ್ನಿಸಿದ್ದಾರೆ.

‘ಮೋದಿಗೆ ಅಧಿಕಾರದ ವ್ಯಾಮೋಹ ಹೆಚ್ಚಿದೆ. ಹಾಗಾಗಿಯೇ, ಸಾಂವಿಧಾನಿಕ ಮೌಲ್ಯಗಳನ್ನು ಬದಿಗೊತ್ತಿ ರಾಷ್ಟ್ರಪತಿ ಅವರಿಗೆ ಅಗೌರವ ತೋರುತ್ತಿದ್ದಾರೆ. ಅಧಿಕಾರದ ದರ್ಪದಿಂದ ಅವರನ್ನು ದೂರ ಸರಿಸುತ್ತಿದ್ದಾರೆ’ ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಟೀಕಿಸಿದ್ದಾರೆ.

‘ನೂತನ ಭವನದ ನಿರ್ಮಾಣಕ್ಕೆ ವಾಸ್ತುಶಿಲ್ಪಿಗಳು, ವಿನ್ಯಾಸಗಾರರು ಮತ್ತು ಕಾರ್ಮಿಕರು ದುಡಿದಿದ್ದಾರೆ. ಆದರೆ, ಇದರ ಉದ್ಘಾಟನೆಯು ಒಬ್ಬ ವ್ಯಕ್ತಿಯ ಆಡಂಬರದ ಪ್ರದರ್ಶನದಂತಿದೆ’ ಎಂದು ಕಾಂಗ್ರೆಸ್ ಮುಖಂಡ ಜೈರಾಮ್ ರಮೇಶ್ ವ್ಯಂಗ್ಯವಾಡಿದ್ದಾರೆ.

ಒಂದೇ ವೇದಿಕೆಯಡಿ ಶೀಘ್ರವೇ ಚರ್ಚೆ – ಕಾಂಗ್ರೆಸ್ ಹೇಳಿಕೆ

ನವದೆಹಲಿ(ಪಿಟಿಐ): 2024ರ ಲೋಕಸಭಾ ಚುನಾವಣೆಗೆ ಬಿಜೆಪಿ ವಿರುದ್ಧ ಒಗ್ಗೂಡುವ ಸಂಬಂಧ ಶೀಘ್ರವೇ ಪ್ರತಿಪಕ್ಷಗಳು ಒಂದೇ ವೇದಿಕೆಯಡಿ ಚರ್ಚಿಸಲಿವೆ ಎಂದು ಕಾಂಗ್ರೆಸ್ ಹೇಳಿದೆ.

ಬಿಹಾರದ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರು, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮತ್ತು ರಾಹುಲ್ ಗಾಂಧಿ ಅವರನ್ನು ಸೋಮವಾರ ಭೇಟಿ ಮಾಡಿ ಚರ್ಚಿಸಿದ ಬೆನ್ನಲ್ಲೇ ಈ ವಿಷಯ ಮಹತ್ವ ಪಡೆದಿದೆ.

ಸುದ್ದಿಗಾರರೊಂದಿಗೆ ಮಾತನಾಡಿದ ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್, ‘ಪ್ರತಿಪಕ್ಷಗಳು ಒಂದೇ ಸೂರಿನಡಿ ಕುಳಿತು ಚರ್ಚಿಸಲು ಸ್ಥಳ ಮತ್ತು ಸಮಯವನ್ನು ಒಂದೆರಡು ದಿನಗಳಲ್ಲಿ ಪ್ರಕಟಿಸಲಾಗುವುದು’ ಎಂದು ಖಚಿತಪಡಿಸಿದ್ದಾರೆ.

ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮತ್ತು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಸೋಮವಾರ ದೆಹಲಿಯಲ್ಲಿ ಮಾತುಕತೆ ನಡೆಸಿದರು ಪಿಟಿಐ ಚಿತ್ರ

ಇದಕ್ಕೆ ಪುಷ್ಟಿ ನೀಡುವಂತೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ‘ಈಗ ದೇಶ ಒಗ್ಗೂಡುತ್ತಿದೆ. ಪ್ರಜಾಪ್ರಭುತ್ವದ ಶಕ್ತಿಯ ಸಂದೇಶ ಸಾರುವುದೇ ನಮ್ಮ ಆಶಯ. ಇಂದು ನಿತೀಶ್ ಕುಮಾರ್ ಜೊತೆಗೆ ನಾನು ಮತ್ತು ರಾಹುಲ್ ಗಾಂಧಿ ಅವರು ದೇಶವನ್ನು ಹೊಸ ದಿಕ್ಕಿನೆಡೆಗೆ ಕೊಂಡೊಯ್ಯುವ ಬಗ್ಗೆ ಚರ್ಚಿಸಿದ್ದೇವೆ’ ಎಂದು ಟ್ವೀಟ್ ಮಾಡಿದ್ದಾರೆ. ಈ ಚರ್ಚೆಯಲ್ಲಿ ಜೆಡಿಯು ರಾಷ್ಟ್ರೀಯ ಅಧ್ಯಕ್ಷ ಲಲನ್ ಸಿಂಗ್ ಕೂಡ ಪಾಲ್ಗೊಂಡಿದ್ದರು.

ಕಳೆದ ತಿಂಗಳು ನಿತೀಶ್ ಕುಮಾರ್ ಅವರು ಖರ್ಗೆ ಜೊತೆಗೆ ಚರ್ಚಿಸಿದ್ದರು. ಬಳಿಕ ಪ್ರಾದೇಶಿಕ ಪಕ್ಷಗಳ ಮುಖಂಡರೊಂದಿಗೆ ಚರ್ಚಿಸಿ ಎಲ್ಲರನ್ನೂ ಒಂದೇ ವೇದಿಕೆಗೆ ತರುವ ನಿಟ್ಟಿನಲ್ಲಿ ಪ್ರಯತ್ನಿಸಿದ್ದರು. ನಿತೀಶ್‌ಕುಮಾರ್ ಸೇರಿದಂತೆ ಬಿಜೆಪಿಯೇತರ ಪಕ್ಷಗಳ ಮುಖ್ಯಮಂತ್ರಿಗಳು ಮತ್ತು ನಾಯಕರು ಕರ್ನಾಟಕದಲ್ಲಿ ನಡೆದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪ್ರಮಾಣ ವಚನ ಸಮಾರಂಭದಲ್ಲಿ ಪಾಲ್ಗೊಂಡು ಒಗ್ಗಟ್ಟು ಪ್ರದರ್ಶಿಸಿದ್ದರು. .

ಪ್ರಜಾವಾಣಿ ಶೈಕ್ಷಣಿಕ ನೆರವು ನಿಧಿ

ಬಡ ವಿದ್ಯಾರ್ಥಿಗಳಿಗೆ ಉದಾರ ಕೊಡುಗೆ ನೀಡಿ

ಪ್ರಜಾವಾಣಿ–ಡೆಕ್ಕನ್ ಹೆರಾಲ್ಡ್ ಪತ್ರಿಕೆಗಳು ಎಸ್‌ಎಸ್‌ಎಲ್‌ಸಿಯಲ್ಲಿ ಪಾಸಾಗಿರುವ ಬಡ ವಿದ್ಯಾರ್ಥಿಗಳಿಗೆ ಆರ್ಥಿಕ ನೆರವು ನೀಡಲಿವೆ. ಇದಕ್ಕಾಗಿ ದಾನಿಗಳು ಚೆಕ್ ಅಥವಾ ಡಿ.ಡಿ.ರೂಪದಲ್ಲಿ ಹಣವನ್ನು 'Deccan Herald-Prajavani relief Trust'ಗೆ ಕಳುಹಿಸಬಹುದು. ದಾನಿಗಳು ಹೆಸರು, ವಿಳಾಸ, ಮೊಬೈಲ್ ಸಂಖ್ಯೆ, ಆಧಾರ್/ಪ್ಯಾನ್ ಕಾರ್ಡ್ ಪ್ರತಿಯನ್ನು dept.finc@printersmysore.co.inಗೆ ಮೇಲ್ ಕಳುಹಿಸಿ.

ಆನ್‌ಲೈನ್/ಚೆಕ್ ಮೂಲಕವೂ ಹಣ ವರ್ಗಾಯಿಸಬಹುದು. ₹1,000ಕ್ಕಿಂತ ಹೆಚ್ಚು ಹಣ ನೀಡುವವರ ಹೆಸರನ್ನು ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದು. ಸೆಕ್ಷನ್ 80 ಜಿ ಅನ್ವಯ ಆದಾಯ ತೆರಿಗೆ ವಿನಾಯಿತಿ ಇದೆ.

ಆನ್‌ಲೈನ್‌ನಲ್ಲಿ ಹಣ ಸಂದಾಯ ಮಾಡುವವರು ಕೆಳಗಿನ ಕೋಡ್ ಸ್ಕ್ಯಾನ್ ಮಾಡಿ ಅಥವಾ ಲಿಂಕ್ ಬಳಸಿ
https://bit.ly/3xFpoz4

ಬ್ಯಾಂಕ್‌ಗೆ ನೇರವಾಗಿ ಹಣ ಸಂದಾಯ ಮಾಡುವವರು ಕೆಳಗಿನ ವಿವರ ಬಳಸಿ
‘Deccan Herald-Prajavani Relief Trust’
Canara Bank, Cantonment Branch
A/c no. - 0404101200385
IFSC code - CNRB0000404
MICR Code - 560015009

ಸೂಚನೆ
ದಾನಿಗಳು ಲಕೋಟೆ ಮೇಲೆ ಶೈಕ್ಷಣಿಕ ನೆರವಿಗೆ ಕೊಡುಗೆ ಎಂದು ನಮೂದಿಸಬೇಕು

ವಿಳಾಸ
ಮ್ಯಾನೇಜರ್, ಡೆಕ್ಕನ್ ಹೆರಾಲ್ಡ್–ಪ್ರಜಾವಾಣಿ ಪರಿಹಾರ ಟ್ರಸ್ಟ್, ನಂ. 75, ಮಹಾತ್ಮ ಗಾಂಧಿ ರಸ್ತೆ ಬೆಂಗಳೂರು – 560001

ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನ

2023 ರ ಸಾಲಿನ ಎಸ್‌ಎಸ್‌ಎಲ್‌ಸಿಯಲ್ಲಿ ಹೆಚ್ಚು ಅಂಕ ಗಳಿಸಿದ ಸಾಮಾಜಿಕ, ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು. ಜತೆಗೆ ವಿಳಾಸ, ಮೊಬೈಲ್ ಸಂಖ್ಯೆ, ಐಎಫ್‌ಎಸ್‌ಸಿ ನಂಬರ್ ಉಳ್ಳ ಬ್ಯಾಂಕ್ ಪಾಸ್‌ಬುಕ್ ಪುಟದ ಪ್ರತಿಯನ್ನು ಸಲ್ಲಿಸಬೇಕು. ಲಕೋಟೆಯ ಮೇಲೆ **‘ಶೈಕ್ಷಣಿಕ ನೆರವಿಗೆ ಅರ್ಜಿ’** ಎಂದು ಬರೆಯಬೇಕು.

ವಿದ್ಯಾರ್ಥಿಗಳ ಅನಿಸಿಕೆ

ನೀಟ್ ಕೋಚಿಂಗ್‌ಗೆ ಬಳಕೆ

ಪ್ರಸಕ್ತ ದ್ವಿತೀಯ ಪಿಯುಸಿ ತರಗತಿಗಳು ಆರಂಭವಾಗಿದ್ದು, ನೀಟ್ ಪರೀಕ್ಷೆಗೆ ತಯಾರಿ ನಡೆಸುತ್ತಿರುವ ನನಗೆ ಕೋಚಿಂಗ್ ಅಗತ್ಯವಾಗಿತ್ತು. ಅದಕ್ಕಾಗಿ ‘ಪ್ರಜಾವಾಣಿ’ ನೀಡಿರುವ ವಿದ್ಯಾರ್ಥಿ ವೇತನ ಹಣವನ್ನು ಕೋಚಿಂಗ್‌ಗೆ ಬಳಸಿಕೊಂಡಿದ್ದೇನೆ. ಶಿಕ್ಷಣಕ್ಕೆ ನೆರವಾದ ‘ಪ್ರಜಾವಾಣಿ’ಗೆ ಧನ್ಯವಾದಗಳು.

ಶ್ರೀಹರ್ಷ, ಉಡುಪಿ

ಕಂಪ್ಯೂಟರ್ ಕೋರ್ಸ್ ಕಲಿತೆ

ವಿದ್ಯಾರ್ಥಿವೇತನವನ್ನು ನೋಟ್ ಬುಕ್ ಖರೀದಿಗೆ ಹಾಗೂ ಕಂಪ್ಯೂಟರ್ ಕೋರ್ಸ್‌ಗೆ ಸೇರಲು ಬಳಸಿಕೊಂಡೆ. ಕೆಲ ಪಠ್ಯಪುಸ್ತಕ ಖರೀದಿಗೂ ಅನುಕೂಲವಾಯಿತು. ಎಲ್ಲ ವಸ್ತುಗಳ ಬೆಲೆ ಏರಿಕೆಯ ಈ ಸಂದರ್ಭದಲ್ಲಿ ಕಷ್ಟದಲ್ಲಿರುವ ವಿದ್ಯಾರ್ಥಿಗಳ ಕುಟುಂಬಕ್ಕೆ ಈ ಸಹಾಯ ನೆರವಾಗುತ್ತದೆ. ಪ್ರತಿಕೆಯ ಕಾಳಜಿಗೆ ಧನ್ಯವಾದಗಳು. ‘ಪ್ರಜಾವಾಣಿ’ಯ ಈ ಸಾಮಾಜಿಕ ಬದ್ಧತೆ ನಾನೂ ದೊಡ್ಡವನಾಗಿ ಉತ್ತಮ ಉದ್ಯೋಗ ಪಡೆದ ನಂತರ ಅಗತ್ಯ ಇರುವವರಿಗೆ ನೆರವಾಗಲು ಪ್ರೇರಣೆಯಾಗಿದೆ. ‘ಪ್ರಜಾವಾಣಿ’ ಬಳಗಕ್ಕೆ ಧನ್ಯವಾದಗಳು.

–**ಶ್ರೀಧರ ಎಂ.ಎಂ.**, ಸಾಗರ, ಶಿವಮೊಗ್ಗ

ಸಂಕ್ಷಿಪ್ತ ಸುದ್ದಿ

ಕೇಂದ್ರಕ್ಕೆ ತರಾಟೆ

ನವದೆಹಲಿ (ಪಿಟಿಐ): ‘ಪೂರ್ವ ಲಡಾಖ್‌ನ ಡೆಪ್ಸಾಂಗ್ ವಲಯದಲ್ಲಿ ಯಥಾಸ್ಥಿತಿ ಕಾಯ್ದುಕೊಳ್ಳುವಲ್ಲಿ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ವಿಫಲವಾಗಿದೆ. ಅಲ್ಲಿ ಪರಿಸ್ಥಿತಿ ಹದಗೆಡಲು ಬಿಟ್ಟಿರುವುದು ಅಕ್ಷಮ್ಯ’ ಎಂದು ಕಾಂಗ್ರೆಸ್ ಪಕ್ಷ ಸೋಮವಾರ ಟೀಕಿಸಿದೆ.

ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಅವರು, ‘ಪ್ರಧಾನಿ ಮೋದಿ ಅವರು ಜೂನ್ 19, 2020ರಲ್ಲಿ ಚೀನಾಗೆ ಕ್ಲೀನ್ ಚಿಟ್ ನೀಡಿದ್ದ ಹೇಳಿಕೆಯು ರಾಜಿ ಪ್ರಕ್ರಿಯೆಯಲ್ಲಿ ಭಾರತದ ನಿಲುವನ್ನು ದುರ್ಬಲಗೊಳಿಸಿತು. ಇದಕ್ಕಾಗಿ ಬೆಲೆ ತೆರಬೇಕಾಯಿತು’ ಎಂದು ಹೇಳಿದರು.

‘ಗಡಿ ಭಾಗದಲ್ಲಿನ ಪರಿಸ್ಥಿತಿ ಈಗ ಆತಂಕಕಾರಿಯಾಗಿದೆ ಎಂಬ ಮಾಧ್ಯಮ ವರದಿ ಉಲ್ಲೇಖಿಸಿದ ಅವರು, ಸೂಕ್ಷ್ಮ ವಲಯವಾದ ಡೆಪ್ಸಾಂಗ್‌ಗೆ ತೆರಳಲು ಭಾರತದ ಗಸ್ತುಪಡೆಗೆ ಮೂರು ವರ್ಷಗಳಿಂದ ಅವಕಾಶ ದೊರೆತಿಲ್ಲ. ಯಥಾಸ್ಥಿತಿ ಮರಳುವ ಸೂಚನೆಯೂ ಕಾಣುತ್ತಿಲ್ಲ’ ಎಂದಿದ್ದಾರೆ.

ಕೇಜ್ರಿವಾಲ್‌ಗೆ ತಲುಪದ ಸಮನ್ಸ್

ಅಹಮದಾಬಾದ್ (ಪಿಟಿಐ): ಕ್ರಿಮಿನಲ್ ಮಾನನಷ್ಟ ಪ್ರಕರಣವೊಂದರ ವಿಚಾರಣೆಗೆ ಸಂಬಂಧಿಸಿದಂತೆ ಮಂಗಳವಾರ (ಮೇ 23) ಹಾಜರಾಗುವಂತೆ ಗುಜರಾತ್ ನ್ಯಾಯಾಲಯ ಜಾರಿಗೊಳಿಸಿರುವ ಸಮನ್ಸ್ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಮತ್ತು ಎಎಪಿಯ ರಾಜ್ಯಸಭಾ ಸದಸ್ಯ ಸಂಜಯ್ ಸಿಂಗ್ ಅವರನ್ನು ತಲುಪಿಲ್ಲ ಎಂದು ಎಎಪಿ ರಾಜ್ಯ ಘಟಕದ ಕಾನೂನು ವಿಭಾಗ ಸೋಮವಾರ ತಿಳಿಸಿದೆ.

ಕೊಲೆ ಬೆದರಿಕೆ ಕರೆಗಳು ಬರುತ್ತಿವೆ: ಸಮೀರ್ ವಾಂಖೆಡೆ

ಮುಂಬೈ (ಪಿಟಿಐ): ಮಾದಕವಸ್ತು ನಿಯಂತ್ರಣ ದಳದ (ಎನ್‌ಸಿಬಿ) ಮುಂಬೈ ವಲಯದ ಮಾಜಿ ಮುಖ್ಯಸ್ಥ ಸಮೀರ್ ವಾಂಖೆಡೆ ಅವರು ತಮಗೆ ಮತ್ತು ತಮ್ಮ ಪತ್ನಿಗೆ ಕೆಲ ದಿನಗಳಿಂದ ಕೊಲೆ ಬೆದರಿಕೆ ಕರೆಗಳು ಬರುತ್ತಿವೆ ಎಂದು ಸೋಮವಾರ ಆರೋಪಿಸಿದ್ದಾರೆ. ಈ ಕುರಿತು ಮುಂಬೈ ಪೊಲೀಸ್ ಆಯುಕ್ತರಿಗೆ ಪತ್ರ ಬರೆದು, ಭದ್ರತೆ ಒದಗಿಸುವಂತೆ ಮನವಿ ಮಾಡುವುದಾಗಿ ಹೇಳಿದ್ದಾರೆ.

ಬಾಲಿವುಡ್ ಸೂಪರ್‌ಸ್ಟಾರ್ ಶಾರುಖ್ ಖಾನ್ ಅವರ ಮಗ ಆರ್ಯನ್ ಖಾನ್ ಅವರನ್ನು ಐಷಾರಾಮಿ ಹಡಗಿನಲ್ಲಿ ಮಾದಕವಸ್ತು ಸೇವನೆ ಪ್ರಕರಣದಲ್ಲಿ ಸಮೀರ್ ಬಂಧಿಸಿದ್ದರು. ಆರ್ಯನ್ ವಿರುದ್ಧ ದೋಷಾರೋಪಣೆ ಹೊರಿಸದೇ ಇರಲು ₹25 ಕೋಟಿ ಲಂಚ ನೀಡುವಂತೆ ಶಾರುಖ್ ಖಾನ್ ಎದುರು ಸಮೀರ್ ಬೇಡಿಕೆ ಇರಿಸಿದ್ದರು ಎಂದು ಸಿಬಿಐ ಎಫ್‌ಐಆರ್‌ನಲ್ಲಿ ಉಲ್ಲೇಖಿಸಿತ್ತು. ಈ ಪ್ರಕರಣಕ್ಕೆ ಸಂಬಂಧಿಸಿ ಸಮೀರ್ ಅವರನ್ನು ಸಿಬಿಐ ಶನಿವಾರ ಮತ್ತು ಭಾನುವಾರ ವಿಚಾರಣೆಗೆ ಒಳಪಡಿಸಿತ್ತು.

ಸಮೀರ್ ಜೊತೆ ಇನ್ನೂ ನಾಲ್ವರ ವಿರುದ್ಧ ಸಿಬಿಐ, ಕ್ರಿಮಿನಲ್ ಸಂಚು ಮತ್ತು ಸುಲಿಗೆ ಬೆದರಿಕೆ ಹಾಗೂ ಭ್ರಷ್ಟಾಚಾರ ನಿಯಂತ್ರಣದ ಅಡಿ ಪ್ರಕರಣಗಳನ್ನು ಮೇ 11ರಂದು ದಾಖಲಿಸಿತ್ತು.

ಬಿಬಿಸಿಗೆ ದೆಹಲಿ ಹೈಕೋರ್ಟ್ ನೋಟಿಸ್

ನವದೆಹಲಿ (ಪಿಟಿಐ/ರಾಯಿಟರ್ಸ್): ಪ್ರಧಾನಿ ನರೇಂದ್ರ ಮೋದಿ ಕುರಿತಾಗಿ ‘ಇಂಡಿಯಾ: ದಿ ಮೋದಿ ಕ್ವೆಶ್ಚನ್’ ಎಂಬ ಸಾಕ್ಷ್ಯಚಿತ್ರ ನಿರ್ಮಿಸಿದ್ದ ಬ್ರಿಟಿಷ್ ಬ್ರಾಡ್‌ಕಾಸ್ಟಿಂಗ್ ಕಾರ್ಪೊರೇಷನ್‌ಗೆ (ಬಿಬಿಸಿ) ದೆಹಲಿ ಹೈಕೋರ್ಟ್ ಸೋಮವಾರ ನೋಟಿಸ್ ಜಾರಿಗೊಳಿಸಿದೆ.

ಸಾಕ್ಷ್ಯಚಿತ್ರದಿಂದಾಗಿ ದೇಶದ ಘನತೆಗೆ ಧಕ್ಕೆಯುಂಟಾಗಿದೆ. ಈ ಮೂಲಕ ಪ್ರಧಾನಿ ಮೋದಿ ಹಾಗೂ ದೇಶದ ನ್ಯಾಯಾಂಗದ ವಿರುದ್ಧ ಮಾನಹಾನಿಕರ ಆರೋಪಗಳನ್ನು ಮಾಡಲಾಗಿದೆ ಎಂದು ಆರೋಪಿಸಿ ಗುಜರಾತ್ ಮೂಲದ ‘ಜಸ್ಟಿಸ್ ಆನ್ ಟ್ರಯಲ್’ ಎಂಬ ಸ್ವಯಂ ಸೇವಾ ಸಂಸ್ಥೆಯು (ಎನ್‌ಜಿಒ) ಮಾನನಷ್ಟ ಮೊಕದ್ದಮೆ ದಾಖಲಿಸಿತ್ತು.

ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸಚಿನ್ ದತ್ತ ಅವರಿದ್ದ ಏಕಸದಸ್ಯ ಪೀಠವು ಬಿಬಿಸಿ (ಬ್ರಿಟನ್) ಹಾಗೂ ಬಿಬಿಸಿ ಇಂಡಿಯಾಗೆ ನೋಟಿಸ್ ನೀಡಿದೆ. ಎನ್‌ಜಿಒ ಪರವಾಗಿ ಹಾಜರಾಗಿದ್ದ ಹಿರಿಯ ವಕೀಲ ಹರೀಶ್ ಸಾಳ್ವೆ, ‘ಸಾಕ್ಷ್ಯಚಿತ್ರದ ಮುಖೇನ ಭಾರತದ ಘನತೆಗೆ ಚ್ಯುತಿ ತಂದಿದ್ದು, ನ್ಯಾಯಾಂಗ ಸೇರಿದಂತೆ ಇಡೀ ವ್ಯವಸ್ಥೆಯನ್ನೇ ಅವಹೇಳನ ಮಾಡಲಾಗಿದೆ’ ಎಂದು ದೂರಿದರು.

ನೋಟಿಸ್ ಜಾರಿಗೆ ಸೂಚಿಸಿದ ನ್ಯಾಯಪೀಠವು, ಅರ್ಜಿಯ ವಿಚಾರಣೆಯನ್ನು ಸೆ.25ಕ್ಕೆ ಮುಂದೂಡಿತು.

‘ಬಿಬಿಸಿ ಎರಡು ಕಂತುಗಳ ಈ ಸಾಕ್ಷ್ಯಚಿತ್ರವನ್ನು ನಿರ್ಮಿಸಿದೆ. ಎರಡೂ ಕಂತುಗಳನ್ನೂ ಈ ವರ್ಷದ ಜನವರಿಯಲ್ಲಿ ಪ್ರಸಾರ ಮಾಡಲಾಗಿದೆ. ಇದರಿಂದ ದೇಶದ ವರ್ಚಸ್ಸಿಗೆ ಧಕ್ಕೆಯಾಗಿದ್ದು, ಇದಕ್ಕಾಗಿ ಬಿಬಿಸಿಯನ್ನು ಹೊಣೆಯಾಗಿಸಬೇಕು. ₹10,000 ಕೋಟಿ ಪರಿಹಾರವನ್ನೂ ನೀಡಬೇಕು’ ಎಂದು ಅರ್ಜಿದಾರರು ಕೋರಿದ್ದರು.

‘ನ್ಯಾಯಾಲಯದ ಆದೇಶದ ಕುರಿತು ಮಾಹಿತಿ ಲಭಿಸಿದೆ. ಈ ಹಂತದಲ್ಲಿ ಪ್ರತಿಕ್ರಿಯಿಸುವುದು ಸೂಕ್ತ ವಲ್ಲ’ ಎಂದು ಬಿಬಿಸಿ ವಕ್ತಾರರೊಬ್ಬರು ಹೇಳಿದ್ದಾರೆ. ಸಾಕ್ಷ್ಯಚಿತ್ರ 2002ರ ಗುಜರಾತ್ ಗಲಭೆಗೆ ಸಂಬಂಧಿಸಿದ್ದಾಗಿದೆ. ಆಗ ಮೋದಿ ಗುಜರಾತ್‌ನ ಮುಖ್ಯಮಂತ್ರಿಯಾಗಿದ್ದರು.

ಎಸ್‌ಸಿ/ಎಸ್‌ಟಿ (ದೌರ್ಜನ್ಯ ತಡೆ) ಕಾಯ್ದೆ: ಆರೋಪ ವಿವರಿಸಿ: ‘ಸುಪ್ರೀಂ’

ನವದೆಹಲಿ: ‘ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗ (ದೌರ್ಜನ್ಯ ತಡೆ) ಕಾಯ್ದೆ ಅಡಿಯಲ್ಲಿ ಪ್ರಕರಣ ದಾಖಲು ಮಾಡುವಾಗ ಎಫ್‌ಐಆರ್ ನಲ್ಲಿ ಅಲ್ಲದಿದ್ದರೂ ಆರೋಪ ಪಟ್ಟಿಯಲ್ಲಾದರೂ ವ್ಯಕ್ತಿಯ ವಿರುದ್ಧದ ಎಲ್ಲ ಆರೋಪಗಳನ್ನು ವಿವರಿಸಬೇಕು’ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

‘ಹೀಗೆ ವ್ಯಕ್ತಿಯ ವಿರುದ್ಧ ಆರೋಪ ಗಳನ್ನು ವಿವರಿಸಿದರೆ, ಪ್ರಕರಣದ ವಿಚಾರಣೆ ನಡೆಸಬೇಕೊ ಬೇಡವೊ ಎನ್ನುವುದನ್ನು ನಿರ್ಧರಿಸಲು ಅನುಕೂಲವಾಗಲಿದೆ. ಜೊತೆಗೆ, ಈ ಪ್ರಕರಣವು ಈ ಕಾಯ್ದೆಯಡಿ ಬರುತ್ತದೊ ಇಲ್ಲವೊ ಎನ್ನುವುದನ್ನೂ ತಿಳಿಯಬಹುದು’ ಎಂದು ನ್ಯಾಯಮೂರ್ತಿ ಗಳಾದ ಎಸ್. ರವೀಂದ್ರ ಭಟ್ ಮತ್ತು ದೀಪಂಕರ್ ದತ್ತಾ ಅವರಿದ್ದ ಪೀಠವು ಹೇಳಿದೆ.

‘ಪರಿಶಿಷ್ಟ ಜಾತಿ ಅಥವಾ ವರ್ಗಕ್ಕೆ ಸೇರಿದ ವ್ಯಕ್ತಿಯೊಬ್ಬನನ್ನು ಸಾರ್ವಜನಿಕವಾಗಿ ಮೂರ್ಖ, ಕಳ್ಳ ಅಥವಾ ಮುಟ್ಠಾಳ ಎಂದಾಕ್ಷಣ ಅದು ದೌರ್ಜನ್ಯ ತಡೆ ಕಾಯ್ದೆ ಅಡಿಯಲ್ಲಿ ಬರುವುದಿಲ್ಲ. ಜಾತಿ ಸೂಚಕ ನಿಂದನೆಗಳು ಮಾತ್ರವೇ ಈ ಕಾಯ್ದೆ ಅಡಿ ಬರುತ್ತವೆ’ ಎಂದು ಪೀಠ ಹೇಳಿದೆ.

‘ಪರಿಶಿಷ್ಟ ಸಮುದಾಯಗಳಿಗೆ ಸೇರದ ಇತರೆ ಸಮುದಾಯದ ವ್ಯಕ್ತಿಗಳನ್ನು ಮೂರ್ಖ, ಮುಟ್ಠಾಳ ಅಥವಾ ಕಳ್ಳ ಎಂದು ಸಾರ್ವಜನಿಕವಾಗಿ ಕರೆದರೆ, ಅದು ಮಾನಹಾನಿ ಪ್ರಕರಣದ ಅಡಿ ಬರುತ್ತದೆ’ ಎಂದು ನ್ಯಾಯಾಲಯ ಹೇಳಿತು.

ವೈದ್ಯ ಕೋರ್ಸ್‌ಗೆ ಪ್ರವೇಶ: ಸಮಿತಿ ರಚನೆಗೆ ನಿರ್ದೇಶನ

ನವದೆಹಲಿ (ಪಿಟಿಐ): ಆಟಿಸಂ ಒಳಗೊಂಡಂತೆ ಮಾನಸಿಕ ಅನಾರೋಗ್ಯ ಸಮಸ್ಯೆಗಳಿಂದ ಬಳಲುತ್ತಿರುವ ಅಭ್ಯರ್ಥಿಗಳಿಗೆ ವೈದ್ಯ ಪದವಿ ಕೋರ್ಸ್‌ಗಳ ಪ್ರವೇಶಕ್ಕಾಗಿ ಕೋಟಾ ನಿಗದಿಪಡಿಸಲು ಮತ್ತು ಅವರ ಮಾನಸಿಕ ಆರೋಗ್ಯ ಸ್ಥಿತಿಯ ಪ್ರಮಾಣ ಅಂದಾಜಿಸಲು ತಜ್ಞರ ಸಮಿತಿ ರಚಿಸಬೇಕು ಎಂದು ಸುಪ್ರೀಂ ಕೋರ್ಟ್ ಸೋಮವಾರ ರಾಷ್ಟ್ರೀಯ ವೈದ್ಯಕೀಯ ಮಂಡಳಿಗೆ (ಎನ್‌ಎಂಸಿ) ನಿರ್ದೇಶಿಸಿತು.

ತಮಗೆ ಎಂಬಿಬಿಎಸ್ ಕೋರ್ಸ್‌ಗೆ ಪ್ರವೇಶ ನಿರಾಕರಿಸಿದ್ದನ್ನು ಪ್ರಶ್ನಿಸಿ ವಿಶಾಲ್ ಗುಪ್ತಾ ಎಂಬವರು ಅರ್ಜಿ ಸಲ್ಲಿಸಿದ್ದರು. ‘ಮಾನಸಿಕ ಅನಾರೋಗ್ಯದ ಪ್ರಮಾಣವು ಶೇ 55ರಷ್ಟಿದ್ದು, ಪ್ರವೇಶ ಪಡೆಯಲು ನೀವು ಅನರ್ಹರಾಗಿದ್ದೀರಿ’ ಎಂದು ಪ್ರವೇಶ ನಿರಾಕರಣೆಗೆ ಕಾರಣ ನೀಡಲಾಗಿದೆ’ ಎಂದು ಗುಪ್ತಾ ಅರ್ಜಿಯಲ್ಲಿ ತಿಳಿಸಿದ್ದರು.

ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್, ನ್ಯಾಯಮೂರ್ತಿಗಳಾದ ಪಿ.ಎಸ್.ನರಸಿಂಹ, ಜೆ.ಬಿ.ಪಾರ್ದಿವಾಲಾ ಅವರಿದ್ದ ಪೀಠವು ಅರ್ಜಿಯ ವಿಚಾರಣೆ ನಡೆಸಿತು. ಅರ್ಜಿದಾರರ ಪರವಾಗಿ ಹಾಜರಿದ್ದ ವಕೀಲ ಗೌರವ್ ಕುಮಾರ್ ಬನ್ಸಾಲ್ ಅವರು ಕಲಿಕೆಯಲ್ಲಿ ನಿರ್ದಿಷ್ಟ ಅಸಾಮರ್ಥ್ಯ (ಎಸ್‌ಎಲ್‌ಡಿ) ಮತ್ತು ಆಟಿಸಂನಿಂದ ಬಳಲುತ್ತಿರುವ ವ್ಯಕ್ತಿಗಳಿಗೆ ಮೀಸಲಾತಿ ಕೋಟಾದ ಅನುಕೂಲತೆ ನಿರಾಕರಿಸಲಾಗಿದೆ ಎಂದು ಪೀಠದ ಗಮನಕ್ಕೆ ತಂದರು.

ಕಾಯ್ದೆಯ ಪ್ರಕಾರ, ಪ್ರಮಾಣೀಕೃತ ಪ್ರಾಧಿಕಾರವು ವ್ಯಕ್ತಿಯ ಮಾನಸಿಕ ಅನಾರೋಗ್ಯದ ಪ್ರಮಾಣ ಶೇ 40ಕ್ಕಿಂತಲೂ ಹೆಚ್ಚಿದೆ ಎಂದು ಪ್ರಮಾಣೀಕರಿಸಿದರೆ, ಅಂತಹ ಅಭ್ಯರ್ಥಿಗೆ ಕೋರ್ಸ್‌ಗೆ ಪ್ರವೇಶ ಪಡೆಯಲು ಅಂಗವಿಕಲರ ಮೀಸಲಾತಿ ಕೋಟಾದ ಲಾಭ ಸಿಗುವುದಿಲ್ಲ.

ಈ ಸಂಬಂಧ ತೆಗೆದುಕೊಂಡಿರುವ ತೀರ್ಮಾನ ಸೇರಿದಂತೆ ವಸ್ತುಸ್ಥಿತಿ ವರದಿಯನ್ನು ಸಲ್ಲಿಸುವಂತೆ ಎನ್‌ಎಂಸಿಗೆ ಸೂಚಿಸಿದ ಪೀಠವು ಮುಂದಿನ ವಿಚಾರಣೆಯನ್ನು ಜುಲೈ 17ಕ್ಕೆ ಮುಂದೂಡಿತು.

ಅದಾನಿ ಪ್ರಕರಣ: ಜೆಪಿಸಿ ತನಿಖೆಗೆ ಕಾಂಗ್ರೆಸ್ ಆಗ್ರಹ

ನವದೆಹಲಿ (ಪಿಟಿಐ): ಅದಾನಿ ಸಮೂಹದ ವಹಿವಾಟು ಸ್ವರೂಪ ಕುರಿತಂತೆ ‘ಸತ್ಯ ಶೋಧನೆ’ಗಾಗಿ ಜಂಟಿ ಸಂಸದೀಯ ಸಮಿತಿ (ಜೆಪಿಸಿ) ರಚಿಸುವುದು ಅಗತ್ಯ ಎಂದು ಕಾಂಗ್ರೆಸ್ ಪಕ್ಷ ಸೋಮವಾರ ಪ್ರತಿಪಾದಿಸಿದೆ.

ಅಲ್ಲದೆ, ಪ್ರಕರಣದ ತನಿಖೆಗಾಗಿ ಸುಪ್ರೀಂ ಕೋರ್ಟ್ ರಚಿಸಿದ್ದ ಸಮಿತಿ ಹಾಗೂ ಸೆಬಿ ಹೆಚ್ಚಿನ ಮುತುವರ್ಜಿ ವಹಿಸುತ್ತಿಲ್ಲ ಎಂದೂ ಆರೋಪಿಸಿದೆ. ಮಾಧ್ಯಮ ವರದಿಗಳನ್ನು ಉಲ್ಲೇಖಿಸಿ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಈ ಬಗ್ಗೆ ಟ್ವೀಟ್ ಮಾಡಿದ್ದಾರೆ. ಅದಾನಿ ಸಮೂಹವು ಷೇರುಗಳ ಮೌಲ್ಯವನ್ನು ಏರಿಳಿತ ಮಾಡಿರುವ ಕುರಿತು ತಮಗೆ ಯಾವುದೇ ಸಾಕ್ಷ್ಯ ಲಭ್ಯವಾಗಿಲ್ಲ ಎಂದು ಸುಪ್ರೀಂ ಕೋರ್ಟ್ ರಚಿಸಿದ್ದ ಸಮಿತಿಯು ಹೇಳಿದೆ ಎಂಬ ವರದಿಗಳ ಹಿಂದೆಯೇ ಕಾಂಗ್ರೆಸ್ ಈ ಪ್ರತಿಕ್ರಿಯೆ ನೀಡಿದೆ.

ಲೈಂಗಿಕ ದೌರ್ಜನ್ಯ: ಶ್ರೀನಿವಾಸ್ ವಿಚಾರಣೆ

ಗುವಾಹಟಿ (ಪಿಟಿಐ): ಲೈಂಗಿಕ ಮತ್ತು ಮಾನಸಿಕ ದೌರ್ಜನ್ಯ ಪ್ರಕರಣಕ್ಕೆ ಸಂಬಂಧಿಸಿದಂತೆ ಯುವ ಕಾಂಗ್ರೆಸ್‌ನ ರಾಷ್ಟ್ರೀಯ ಅಧ್ಯಕ್ಷ ಬಿ.ವಿ. ಶ್ರೀನಿವಾಸ್ ಅವರು ಇಲ್ಲಿನ ಪೊಲೀಸ್ ಠಾಣೆಗೆ ಸೋಮವಾರ ವಿಚಾರಣೆಗೆ ಹಾಜರಾದರು.

ಪಾನ್‌ಬಜಾರ್ ಮಹಿಳಾ ಠಾಣೆಗೆ ತಮ್ಮ ವಕೀಲರು ಮತ್ತು ಶಾಸಕರಾದ ರಾಕಿಬುಲ್ ಹುಸೇನ್, ರೇಕಿಬುದ್ದೀನ್ ಅಹ್ಮದ್ ಸೇರಿದಂತೆ ಕಾಂಗ್ರೆಸ್ ಮುಖಂಡರೊಂದಿಗೆ ಹಾಜರಾದರು. ಒಂದು ಗಂಟೆ ಇದ್ದು, ಬಳಿಕ ಅಲ್ಲಿಂದ ಸಿಐಡಿ ಕಚೇರಿಗೆ ತೆರಳಿದರು. ಈ ವೇಳೆ ಅವರು ‘ಪ್ರಕರಣ ಸದ್ಯ ಕೋರ್ಟ್‌ನಲ್ಲಿದೆ’ ಎಂದು ಪ್ರತಿಕ್ರಿಯಿಸಿದರು.

ಕಾಂಗ್ರೆಸ್‌ನ ಸ್ಥಳೀಯ ಘಟಕದ ಪದಾಧಿಕಾರಿಯಾಗಿದ್ದ, ಈಗ ಉಚ್ಚಾಟನೆಗೊಂಡಿರುವ ಅಂಗ್‌ಕಿತಾ ದತ್ತ ಪ್ರಕರಣ ದಾಖಲಿಸಿದ್ದರು. ಈ ಸಂಬಂಧ ಸಿಐಡಿ ಕೂಡಾ ಪ್ರತ್ಯೇಕವಾಗಿ ನೋಟಿಸ್ ಜಾರಿ ಮಾಡಿತ್ತು.

ದತ್ತ ಅವರು ಏಪ್ರಿಲ್ 20ರಂದು ಇಲ್ಲಿನ ದಿಸ್ಪುರ್ ಠಾಣೆಗೆ ದೂರು ನೀಡಿದ್ದು, ‘ಶ್ರೀನಿವಾಸ್ ಲೈಂಗಿಕ ಮತ್ತು ಮಾನಸಿಕವಾಗಿ ಕಿರುಕುಳ ನೀಡುತ್ತಿದ್ದಾರೆ. ಕೆಟ್ಟದಾಗಿ ಮಾತನಾಡಿದ್ದಾರೆ. ಪಕ್ಷಕ್ಕೆ ದೂರು ನೀಡಿದರೆ ಪರಿಣಾಮ ಎದುರಿಸಬೇಕಾದಿತು ಎಂದು ಬೆದರಿಸಿದ್ದಾರೆ‘ ಎಂದಿದ್ದರು.

ಏ.20ರಂದು ಎಫ್‌ಐಆರ್ ದಾಖಲಾದ ನಂತರ ಗುವಾಹಟಿಯ ಪೊಲೀಸರ ತಂಡವು ಶ್ರೀನಿವಾಸ್ ಅವರನ್ನು ಹುಡುಕಿಕೊಂಡು ಬೆಂಗಳೂರಿಗೆ ಬಂದಿತ್ತು. ಅವರ ಮನೆ ಮುಂದೆ ನೋಟಿಸ್ ಅಂಟಿಸಿದ್ದು, ಮೇ 2ರಂದು ವಿಚಾರಣೆಗೆ ಹಾಜರಾಗಲು ಸೂಚಿಸಲಾಗಿತ್ತು.

ಜಿ–20: ಹಿಂದೆ ಸರಿದ ಚೀನಾ, ಟರ್ಕಿ

ಪ್ರಜಾವಾಣಿ ವಾರ್ತೆ

ಶ್ರೀನಗರ: ಚೀನಾ, ಟರ್ಕಿ ಹಾಗೂ ಸೌದಿ ಅರೇಬಿಯಾ ರಾಷ್ಟ್ರಗಳು ಜಮ್ಮು ಮತ್ತು ಕಾಶ್ಮೀರದಲ್ಲಿ ಸೋಮವಾರ ಆರಂಭವಾಗಿರುವ ಜಿ–20 ಪ್ರವಾಸೋದ್ಯಮದ ಕಾರ್ಯಕಾರಿ ಗುಂಪಿನ ಸಭೆಯಿಂದ ಅಧಿಕೃತವಾಗಿ ಹಿಂದೆ ಸರಿದಿವೆ. ಈಜಿಪ್ಟ್ ಕೂಡ ಈ ರಾಷ್ಟ್ರಗಳ ಹಾದಿಯನ್ನೇ ತುಳಿದಿದೆ.

17 ರಾಷ್ಟ್ರಗಳ ಒಟ್ಟು 120 ವಿದೇಶಿ ಗಣ್ಯರು ಸೋಮವಾರ ಶ್ರೀನಗರಕ್ಕೆ ಬಂದಿಳಿದಿದ್ದಾರೆ. ಆದರೆ ಚೀನಾ ತನ್ನ ಪ್ರತಿನಿಧಿಗಳನ್ನು ಕಳುಹಿಸಿಲ್ಲ. ಈಜಿಪ್ಟ್ ಹಾಗೂ ಸೌದಿಯಿಂದ ಖಾಸಗಿ ವಲಯದ ಪ್ರತಿನಿಧಿಗಳು ಪಾಲ್ಗೊಂಡಿದ್ದಾರೆ.

‘ವಿವಾದಿತ ಪ್ರದೇಶಗಳಲ್ಲಿ ಜಿ–20 ಸಭೆ ನಡೆಸುವುದನ್ನು ಚೀನಾ ವಿರೋಧಿಸಲಿದೆ. ಹೀಗಾಗಿ ನಾವು ಈ ಸಭೆಯಲ್ಲಿ ಭಾಗವಹಿಸದಿರಲು ತೀರ್ಮಾನಿಸಿದ್ದೇವೆ’ ಎಂದು ಚೀನಾದ ವಿದೇಶಾಂಗ ಸಚಿವಾಲಯದ ವಕ್ತಾರ ವಾಂಗ್ ವೆನ್‌ಬಿನ್ ಹೇಳಿದ್ದಾರೆ.

ಜಿ–20 ಪ್ರವಾಸೋದ್ಯಮದ ಕಾರ್ಯಕಾರಿ ಗುಂಪಿನ ಸಭೆಯಲ್ಲಿ ಪಾಲ್ಗೊಳ್ಳಲು ಶ್ರೀನಗರಕ್ಕೆ ಬಂದಿರುವ ವಿವಿಧ ದೇಶಗಳ ಪ್ರತಿನಿಧಿಗಳು ದಾಲ್ ಸರೋವರದಲ್ಲಿ ಸೋಮವಾರ ದೋಣಿ ವಿಹಾರ ನಡೆಸಿದರು –ಪಿಟಿಐ ಚಿತ್ರ

ತನ್ನ ಭೂಪ್ರದೇಶದ ಯಾವುದೇ ಭಾಗದಲ್ಲಾದರೂ ಸಭೆ ನಡೆಸಲು ತಾನು ಸ್ವತಂತ್ರವಾಗಿರುವುದಾಗಿ ಹೇಳಿರುವ ಭಾರತ, ಆ ಮೂಲಕ ಚೀನಾಕ್ಕೆ ತಿರುಗೇಟು ನೀಡಿದೆ.

ಕಾಶ್ಮೀರದಲ್ಲಿ ಸಭೆ ಆಯೋಜಿಸಿರುವ ತನ್ನ ನಡೆಗೆ ಆಕ್ಷೇಪ ವ್ಯಕ್ತಪಡಿಸಿರುವ ಪಾಕಿಸ್ತಾನಕ್ಕೂ ಭಾರತವು ದಿಟ್ಟ ಪ್ರತ್ಯುತ್ತರ ನೀಡಿದೆ.

‘ಜಮ್ಮು ಮತ್ತು ಕಾಶ್ಮೀರವು ಭಾರತದ ಅವಿಭಾಜ್ಯ ಅಂಗ. ನಮ್ಮ ಇಚ್ಛೆಯ ಅನುಸಾರವಾಗಿಯೇ ಶ್ರೀನಗರದಲ್ಲಿ ಸಭೆ ಹಮ್ಮಿಕೊಂಡಿದ್ದೇವೆ. ಇದು ನಮ್ಮ ಹಕ್ಕಿನ ಪರಿಧಿಯೊಳಗೆ ಕೈಗೊಂಡಿರುವ ತೀರ್ಮಾನ’ ಎಂದು ಹೇಳಿದೆ.

ಆತಿಥೇಯ ಭಾರತ ಹೊರತುಪಡಿಸಿದಂತೆ ಅರ್ಜೆಂಟೀನಾ, ಆಸ್ಟ್ರೇಲಿಯಾ, ಬ್ರೆಜಿಲ್, ಕೆನಡಾ, ಚೀನಾ, ಜರ್ಮನಿ, ಫ್ರಾನ್ಸ್, ಇಂಡೊನೇಷ್ಯಾ, ಇಟಲಿ, ಜಪಾನ್, ದಕ್ಷಿಣ ಕೊರಿಯಾ, ಮೆಕ್ಸಿಕೊ, ರಷ್ಯಾ, ದಕ್ಷಿಣ ಆಫ್ರಿಕಾ, ಬ್ರಿಟನ್, ಅಮೆರಿಕ ಹಾಗೂ ಯುರೋಪಿಯನ್ ಒಕ್ಕೂಟದ ಪ್ರತಿನಿಧಿಗಳು ಈ ಸಮ್ಮೇಳನದಲ್ಲಿ ಭಾಗವಹಿಸಿದ್ದಾರೆ.

ಬಂದೂಕುಧಾರಿಯಿಂದ ಅಂಗಡಿಗಳನ್ನು ಮುಚ್ಚಲು ಬೆದರಿಕೆ

ಇಂಫಾಲ್ ಮತ್ತೆ ಉದ್ವಿಗ್ನ: ಕರ್ಫ್ಯೂ ವಿಸ್ತರಣೆ

ಪ್ರಜಾವಾಣಿ ವಾರ್ತೆ

ಗುವಾಹಟಿ: ಮಣಿಪುರ ರಾಜಧಾನಿ ಇಂಫಾಲ್‌ದಲ್ಲಿ ಸೋಮವಾರ ಮತ್ತೆ ಉದ್ವಿಗ್ನ ವಾತಾವರಣ ನಿರ್ಮಾಣವಾಗಿದ್ದು, ಕರ್ಫ್ಯೂ ಅವಧಿಯನ್ನು ವಿಸ್ತರಣೆ ಮಾಡಲಾಗಿದೆ.

ಮುಂಜಾನೆ 5ರಿಂದ ಸಂಜೆ 4ರ ವರೆಗೆ ಕರ್ಫ್ಯೂ ಸಡಿಲಿಸಿದ ಕಾರಣ ಅಂಗಡಿಗಳನ್ನು ತೆರೆಯಲಾಗಿತ್ತು. ಭಾನುವಾರ ರಾತ್ರಿ ಚೆಕಾನ್ ಪ್ರದೇಶದಲ್ಲಿ ಬಂದೂಕುಧಾರಿ ವ್ಯಕ್ತಿ ಅಂಗಡಿಗಳನ್ನು ಮುಚ್ಚುವಂತೆ ಬೆದರಿಸಿದ ಬಳಿಕ ಆತಂಕಗೊಂಡ ನಿವಾಸಿಗಳು ಓಡಿ ಸುರಕ್ಷಿತ ಸ್ಥಳ ಸೇರಿದರು.

ಘಟನೆ ಬೆನ್ನಲ್ಲೇ ಪೂರ್ವ ಇಂಫಾಲ್ ಜಿಲ್ಲಾಧಿಕಾರಿ ಶಮಿಮ್ ಅಹ್ಮದ್ ಶಾ ಅವರು ಕರ್ಫ್ಯೂ ಅವಧಿಯನ್ನು ಮತ್ತೆ ಬೆಳಿಗ್ಗೆ 5ರಿಂದ ಮಧ್ಯಾಹ್ನ 1ಗಂಟೆ ವರೆಗೆ ವಿಸ್ತರಿಸಿ ಆದೇಶ ಹೊರಡಿಸಿದರು.

ಘಟನೆಗೆ ಸಂಬಂಧಿಸಿದಂತೆ ಈವರೆಗೆ ಮೂರನ್ನು ಬಂಧಿಸಲಾಗಿದೆ ಮೂಲಗಳು ತಿಳಿಸಿವೆ.

ಪ್ರದೇಶದಲ್ಲಿ ಕೆಲವು ಮನೆಗಳಿಗೆ ಬೆಂಕಿ ಇಡಲಾಗಿದೆ ಎಂದು ವರದಿಯಾಗಿದ್ದು, ಸದ್ಯ ಸೇನೆಯು ಪ್ರದೇಶವನ್ನು ಸುತ್ತುವರಿದಿದೆ.

‘ಬಂದೂಕುಧಾರಿ ವ್ಯಕ್ತಿ ನಡೆಸಿದ ಗುಂಡಿನ ದಾಳಿಯಲ್ಲಿ ಮೂವರು ಗಾಯಗೊಂಡಿದ್ದಾರೆ. ಮಾಜಿ ಶಾಸಕ ಸೇರಿ ದುಷ್ಕರ್ಮಿಗಳನ್ನು ಬಂಧಿಸಿ ಅವರ ಬಳಿ ಇದ್ದ ಡಬಲ್ ಬ್ಯಾರಲ್ ಬಂದೂಕನ್ನು ವಶಕ್ಕೆ ಪಡೆಯಲಾಗಿದೆ’ ಎಂದು ಮುಖ್ಯಮಂತ್ರಿ ಎನ್.ಬಿರೆನ್ ಸಿಂಗ್ ತಿಳಿಸಿದರು.

‘ಕಳೆದ 10 ದಿನಗಳಿಂದ ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಸುಧಾರಣೆಯಾಗಿದೆ. ರಾಜ್ಯವು ಸಾಮಾನ್ಯ ಸ್ಥಿತಿಗೆ ಮರಳುತ್ತಿದೆ’ ಎಂದೂ ಹೇಳಿದರು.

ಬಹುಸಂಖ್ಯಾತ ಮೈತೇಯಿ ಸಮುದಾಯ ಮತ್ತು ಕೂಕಿ ಬುಡಕಟ್ಟು ಸಮುದಾಯದ ನಡುವೆ ಮೇ 3ರಿಂದ ಸಂಘರ್ಷ ಏರ್ಪಟ್ಟ ನಂತರ ರಾಜಧಾನಿಯಲ್ಲಿ ಸೇನೆಯನ್ನು ನಿಯೋಜಿಸಲಾಗಿದೆ. ಹಿಂಸಾಚಾರ ದಿಂದಾಗಿ ರಾಜ್ಯದಲ್ಲಿ ಈವರೆಗೆ 73 ಮಂದಿ ಸಾವನ್ನಪ್ಪಿದ್ದು, 35,000 ಮಂದಿ ಸ್ಥಳಾಂತರ ಗೊಂಡಿದ್ದಾರೆ. ಸುಮಾರು 2000 ಮನೆಗಳು ಸುಟ್ಟು ಬೂದಿಯಾಗಿವೆ.

ಸರಕು ಸಾಗಣೆಗೆ ಅಡಚಣೆ: ಇಂಫಾಲವನ್ನು ದೇಶದ ಇತರೆಡೆಗೆ ಸಂಪರ್ಕಿಸುವ ರಾಷ್ಟ್ರೀಯ ಹೆದ್ದಾರಿ–2 ಅನ್ನು ಕೂಕಿ ಪ್ರತಿಭಟನಕಾರರು ಮೇ 4ರಿಂದ ಬಂದ್ ಮಾಡಿದ್ದಾರೆ. ಇದರಿಂದ ಅಗತ್ಯ ಸರಕುಗಳ ಸಾಗಣೆಗೆ ತೀವ್ರ ತೊಡಕುಂಟಾಗಿದೆ. ಇಂಫಾಲ ಮತ್ತು ಜಿರಿಬಮ್ ಮಾರ್ಗದ ಮೂಲಕ ಟ್ರಕ್‌ಗಳ ಸಂಚಾರಕ್ಕೆ ಅನುವು ಮಾಡಿಕೊಡಲಾಗಿದೆ. ಆದರೆ ಈ ಮಾರ್ಗದಲ್ಲಿ ಸಾಗಣೆ ವೆಚ್ಚ ಹೆಚ್ಚಾಗುತ್ತಿದೆ ಎಂದು ವರ್ತಕರು ಅಸಮಾಧಾನ ಹೊರಹಾಕುತ್ತಿದ್ದಾರೆ.

ಈ ಮಧ್ಯೆ ಕೂಕಿ ಸಮುದಾಯವು ಸರ್ಕಾರದೊಂದಿಗೆ ಮಾತುಕತೆಗೆ ನಿರಾಕರಿಸಿದ್ದು, ಹಿಂಸಾಚಾರ ಪೀಡಿತ ರಾಜ್ಯದಲ್ಲಿ ಪರಿಸ್ಥಿತಿ ಬೂದಿ ಮುಚ್ಚಿದ ಕೆಂಡದಂತಾಗಿದೆ. ತತ್‌ಕ್ಷಣಕ್ಕೆ ಶಾಂತಿ ಸ್ಥಾಪನೆಯಾಗುವ ಸಾಧ್ಯತೆ ಕ್ಷೀಣಿಸಿದೆ.

ಇಂಟರ್ನೆಟ್ ಸ್ಥಗಿತ ಮುಂದುವರಿಕೆ

ಮೊಬೈಲ್ ಮತ್ತು ಇಂಟರ್‌ನೆಟ್ ಬಳಕೆಗೆ ಹೇರಿದ್ದ ನಿರ್ಬಂಧವನ್ನು ಮತ್ತೆ ಮೇ 26ರ ವರೆಗೆ ವಿಸ್ತರಿಸಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ. ಸಾಮಾಜಿಕ ಜಾಲತಾಣದಲ್ಲಿ ದ್ವೇಷಪೂರಿತ ಹಾಗೂ ಪ್ರಚೋದನಕಾರಿ ಸಂದೇಶ ಹರಡುವ ಸಾಧ್ಯತೆ ಇದೆ. ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವ ದೃಷ್ಟಿಯಿಂದ ಸರ್ಕಾರ ಈ ತೀರ್ಮಾನ ಕೈಗೊಂಡಿದೆ ಎಂದು ಮಣಿಪುರದ ಗೃಹ ಇಲಾಖೆಯ ಆಯುಕ್ತ ಎಚ್. ಗಯಾನ್ ಪ್ರಕಾಶ್ ಸ್ಪಷ್ಟಪಡಿಸಿದ್ದಾರೆ.

ಇ–ಸಿಗರೇಟ್ ನಿಷೇಧ: ಕಟ್ಟುನಿಟ್ಟಿನ ಜಾರಿಗೆ ಕೇಂದ್ರದ ಸೂಚನೆ

ನವದೆಹಲಿ (ಪಿಟಿಐ): ನಿಷೇಧದ ಆದೇಶವಿದ್ದರೂ ಕೂಡ ಇ-ಸಿಗರೇಟ್‌ಗಳು ಆನ್‌ಲೈನ್‌ನಲ್ಲಿ ಮುಕ್ತವಾಗಿ ಲಭ್ಯವಾಗುತ್ತಿದ್ದು, ತಂಬಾಕು ಉತ್ಪನ್ನಗಳ ಮಳಿಗೆಗಳಲ್ಲೂ ಇವುಗಳನ್ನು ನಿರಾತಂಕವಾಗಿ ಮಾರಾಟ ಮಾಡಲಾಗುತ್ತಿದೆ. ಇದನ್ನು ಗಂಭೀರವಾಗಿ ಪರಿಗಣಿಸಿರುವ ಕೇಂದ್ರ ಆರೋಗ್ಯ ಸಚಿವಾಲಯವು ಈ ಕುರಿತಾಗಿ ಹಿಂದೆ ಹೊರಡಿಸಿದ್ದ ಕಾಯ್ದೆಯನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸುವಂತೆ ಸೋಮವಾರ ಸಾರ್ವಜನಿಕ ಪ್ರಕಟಣೆ ಹೊರಡಿಸಿದೆ.

2019ರಲ್ಲಿ ಕೇಂದ್ರವು ಎಲೆಕ್ಟ್ರಾನಿಕ್ ಸಿಗರೇಟ್ ನಿಷೇಧ (ಉತ್ಪಾದನೆ, ಆಮದು, ರಫ್ತು, ಮಾರಾಟ, ವಿತರಣೆ, ಸಂಗ್ರಹ ಹಾಗೂ ಜಾಹೀರಾತಿನ ಮೂಲಕ ಪ್ರಚಾರ) ಕಾಯ್ದೆಯನ್ನು ಅನುಷ್ಠಾನಗೊಳಿಸಿತ್ತು.

‘ಉತ್ಪಾದಕರು, ಆಮದು ಅಥವಾ ರಫ್ತು ಮಾಡುವವರು, ಮಾರಾಟಗಾರರು, ವಿತರಕರು, ದಾಸ್ತಾನು ಇಡುವವರು, ಜಾಹೀರಾತುದಾರರು, ಕೊರಿಯರ್ ಸೇರಿದಂತೆ ಇತರೆ ಮಾರ್ಗಗಳ ಮೂಲಕ ಒಂದೆಡೆಯಿಂದ ಮತ್ತೊಂದೆಡೆಗೆ ಸಾಗಣೆ ಮಾಡುವವರು, ಸಾಮಾಜಿಕ ಜಾಲತಾಣಗಳು ಹಾಗೂ ವೆಬ್‌ಸೈಟ್‌ಗಳ ಮೂಲಕ ಮಾರಾಟ ಮಾಡುವವರು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಇ–ಸಿಗರೇಟ್‌ಗಳನ್ನು ಉತ್ಪಾದಿಸುವುದು ಇಲ್ಲವೇ ಮಾರಾಟ ಮಾಡುವುದು ನಿಷಿದ್ಧ. ಇವುಗಳ ಸೇವನೆಯನ್ನು ಉತ್ತೇಜಿಸುವ ಧಾಟಿಯಲ್ಲಿ ಜಾಹೀರಾತು ಪ್ರಕಟಿಸುವುದಕ್ಕೂ ಅವಕಾಶವಿಲ್ಲ’ ಎಂದು ಸಾರ್ವಜನಿಕ ಪ್ರಕಟಣೆಯಲ್ಲಿ ನಿರ್ದೇಶಿಸಲಾಗಿದೆ.

‘ಇ–ಸಿಗರೇಟ್ ಮಾರಾಟ ಇಲ್ಲವೇ ದಾಸ್ತಾನು ಶಿಕ್ಷಾರ್ಹ ಅಪರಾಧವಾಗಿದೆ’ ಎಂದೂ ಹೇಳಲಾಗಿದೆ.

ಕ್ವಾಲಿಫೈಯರ್–1 ಪಂದ್ಯ ಇಂದು: ಚೆನ್ನೈಗೆ ಗುಜರಾತ್ ಟೈಟನ್ಸ್ ಸವಾಲು

ಧೋನಿ ಬಳಗಕ್ಕೆ 'ಗಿಲ್ ಪರೀಕ್ಷೆ'



ಶುಭಮನ್ ಗಿಲ್

ಚೆನ್ನೈ (ಪಿಟಿಐ): ನಾಲ್ಕು ಬಾರಿಯ ಚಾಂಪಿಯನ್ ಚೆನ್ನೈ ಸೂಪರ್ ಕಿಂಗ್ಸ್ ತಂಡ ಐಪಿಎಲ್ ಟೂರ್ನಿಯ 'ಕ್ವಾಲಿಫೈಯರ್-1' ಪಂದ್ಯದಲ್ಲಿ ಹಾಲಿ ಚಾಂಪಿಯನ್ ಗುಜರಾತ್ ಟೈಟನ್ಸ್ ತಂಡವನ್ನು ಮಂಗಳವಾರ ಎದುರಿಸಲಿದ್ದು, ತುರುಸಿನ ಪೈಪೋಟಿ ನಿರೀಕ್ಷಿಸಲಾಗಿದೆ.

ಎಂ.ಎ.ಚಿದಂಬರಂ ಕ್ರೀಡಾಂಗಣದಲ್ಲಿ ನಡೆಯಲಿರುವ ಪಂದ್ಯದಲ್ಲಿ ಮಹೇಂದ್ರ ಸಿಂಗ್ ಧೋನಿ ಬಳಗಕ್ಕೆ ಭಾರತದ ಕ್ರಿಕೆಟ್‌ನ ಹೊಸ 'ರಾಜಕುಮಾರ' ಶುಭಮನ್ ಗಿಲ್ ಅವರು 'ಅಗ್ನಿಪರೀಕ್ಷೆ' ಒಡ್ಡಲಿದ್ದಾರೆ.

ನಾಯಕನಾಗಿ ಅಪಾರ ಯಶಸ್ಸು ಕಂಡಿರುವ ಧೋನಿ ಅವರು ಗಿಲ್ ಅಬ್ಬರ ತಡೆಯಲು ಯಾವ ರೀತಿಯ ತಂತ್ರ ರೂಪಿಸುವರು ಎಂಬುದು ಕುತೂಹಲಕ್ಕೆ ಕಾರಣವಾಗಿದೆ. ಆರ್‌ಸಿಬಿ ವಿರುದ್ಧ ಭಾನುವಾರ ಬೆಂಗಳೂರಿನಲ್ಲಿ ನಡೆದಿದ್ದ ಪಂದ್ಯದಲ್ಲಿ ಗಿಲ್, ಭರ್ಜರಿ ಶತಕ ಗಳಿಸಿ ತಮ್ಮ ತಂಡವನ್ನು ವಿಜಯದತ್ತ ಮುನ್ನಡೆಸಿದ್ದರು.

ಈ ಋತುವಿನಲ್ಲಿ ಗುಜರಾತ್ ತಂಡ ಇದೇ ಮೊದಲ ಬಾರಿ ಚಿದಂಬರಂ ಕ್ರೀಡಾಂಗಣದಲ್ಲಿ ಆಡಲಿಳಿಯಲಿದೆ. ಸ್ಪಿನ್ ಬೌಲಿಂಗ್‌ಗೆ ನೆರವು ನೀಡುವ ಇಲ್ಲಿನ ಪಿಚ್, ಹಾರ್ದಿಕ್ ಪಾಂಡ್ಯ ಬಳಗಕ್ಕೆ ಸವಾಲಾಗಬಹುದು. ದೀಪಕ್ ಚಾಹರ್ ಮತ್ತು ಮತೀಶ ಪಥಿರಾಣ ಅವರ 'ಪವರ್ ಪ್ಲೇ' ಓವರ್‌ಗಳನ್ನು ಎದುರಿಸುವಲ್ಲಿ ತೋರುವ ಛಲ ಕೂಡಾ ಪಂದ್ಯದ ಫಲಿತಾಂಶ ನಿರ್ಧರಿಸುವಲ್ಲಿ ಪ್ರಮುಖ ಪಾತ್ರ ವಹಿಸುವ ಸಾಧ್ಯತೆಯಿದೆ.

ಗುಜರಾತ್ ತಂಡವು ದಸುನ್ ಶನಕ ಮತ್ತು ಸಾಯಿ ಕಿಶೋರ್ ಬದಲು ಜೋಶುವಾ ಲಿಟ್ಲ್ ಹಾಗೂ ಯಶ್ ದಯಾಳ್ ಅವರನ್ನು ಅಂತಿಮ ಇಲೆವೆನ್‌ನಲ್ಲಿ ಆಡಿಸುವ ಚಿಂತನೆ ನಡೆಸಿದೆ.

ಚೆನ್ನೈ ಸೂಪರ್ ಕಿಂಗ್ಸ್ ತಂಡದ ಇನಿಂಗ್ಸ್‌ಗೆ ಆರಂಭಿಕ ಬ್ಯಾಟರ್‌ಗಳಾದ ಡೆವೊನ್ ಕಾನ್ವೆ ಮತ್ತು ಋತುರಾಜ್ ಗಾಯಕವಾಡ್ ಅವರು ಭದ್ರ ಬುನಾದಿ ಹಾಕುವುದು ಮುಖ್ಯವಾಗಿದೆ. ಅಜಿಂಕ್ಯ ರಹಾನೆ ಮತ್ತು ಶಿವಂ ದುಬೆ ಕೂಡಾ ಇಲ್ಲಿನ ಪಿಚ್‌ನಲ್ಲಿ ಮಿಂಚಿದ್ದಾರೆ.

ಈ ಋತುವಿನಲ್ಲಿ 13 ಇನಿಂಗ್ಸ್‌ಗಳನ್ನು ಆಡಿರುವ ದುಬೆ ಅವರು 33 ಸಿಕ್ಸರ್‌ಗಳನ್ನು ಹೊಡೆದಿದ್ದು, ಆ ಸಂಖ್ಯೆಯನ್ನು ಇನ್ನಷ್ಟು ಹೆಚ್ಚಿಸುವ ಉತ್ಸಾಹದಲ್ಲಿದ್ದಾರೆ. ಆರ್‌ಸಿಬಿಯ ಫಫ್ ಡುಪ್ಲೆಸಿ (36) ಬಳಿಕ ಅತಿಹೆಚ್ಚು ಸಿಕ್ಸರ್ ಹೊಡೆದಿರುವ ಬ್ಯಾಟರ್ ದುಬೆ.

ಚೆನ್ನೈ ತಂಡದ ಮಧ್ಯಮ ಕ್ರಮಾಂಕದ ಬ್ಯಾಟರ್‌ಗಳು ಅಷ್ಟೊಂದು ಗಮನ ಸೆಳೆದಿಲ್ಲ. ಮೊಹಮ್ಮದ್ ಶಮಿ ಮತ್ತು ರಶೀದ್ ಖಾನ್ (ತಲಾ 24 ವಿಕೆಟ್) ಅವರನ್ನೊಳಗೊಂಡ ಗುಜರಾತ್ ಬೌಲಿಂಗ್ ದಾಳಿಯನ್ನು ಎದುರಿಸುವುದು ಸುಲಭವಲ್ಲ ಎಂಬ ಅರಿವು ಧೋನಿ ಬಳಗಕ್ಕೆ ಇದೆ. ಚೆನ್ನೈ ತಂಡದ ಆರಂಭಿಕ ಬ್ಯಾಟರ್‌ಗಳು ಶಮಿ ಅವರ ದಾಳಿಯನ್ನು ಸಮರ್ಥವಾಗಿ ಎದುರಿಸುವುದು ಮುಖ್ಯ. ಆರಂಭದಲ್ಲೇ ವಿಕೆಟ್‌ಗಳು ಬಿದ್ದರೆ, ಮಧ್ಯಮ ಕ್ರಮಾಂಕದ ಬ್ಯಾಟರ್‌ಗಳ ಮೇಲಿನ ಒತ್ತಡ ಹೆಚ್ಚಲಿದೆ.

ಸಿಎಸ್‌ಕೆ ಸ್ಪಿನ್ನರ್‌ಗಳಾದ ರವೀಂದ್ರ ಜಡೇಜ, ಮೊಯೀನ್ ಅಲಿ, ಮಹೀಶ ತೀಕ್ಷಣ ಹಾಗೂ ಟೈಟನ್ಸ್ ತಂಡದ ರಶೀದ್ ಖಾನ್ ಮತ್ತು ನೂರ್ ಅಹಮದ್ ಅವರ ಪ್ರದರ್ಶನವೂ ಪಂದ್ಯದ ಫಲಿತಾಂಶ ನಿರ್ಣಯಿಸುವಲ್ಲಿ ಪ್ರಮುಖ ಪಾತ್ರ ಎನಿಸಲಿದೆ.

ಗೆಲ್ಲುವ ತಂಡ ಫೈನಲ್‌ಗೆ: ಮಂಗಳವಾರದ ಪಂದ್ಯವನ್ನು ಗೆಲ್ಲುವ ತಂಡ ಮೇ 28 ರಂದು ನಡೆಯಲಿರುವ ಫೈನಲ್‌ಗೆ ಪ್ರವೇಶಿಸಲಿದೆ. ಸೋತ ತಂಡಕ್ಕೆ ಇನ್ನೊಂದು ಅವಕಾಶವಿದ್ದು, ಮೇ 26 ರಂದು ನಡೆಯಲಿರುವ 'ಕ್ವಾಲಿಫೈಯರ್-2' ರಲ್ಲಿ ಆಡಲಿದೆ.

ಬಲಾಬಲ: ಉಭಯ ತಂಡಗಳು ಐಪಿಎಲ್‌ನಲ್ಲಿ ಮೂರು ಸಲ ಎದುರಾಗಿದ್ದು, ಮೂರೂ ಬಾರಿ ಗುಜರಾತ್ ಗೆದ್ದಿದೆ. ಈ ಸಲ ಲೀಗ್ ಹಂತದಲ್ಲಿ ಪೈಪೋಟಿ ನಡೆಸಿದ್ದಾಗ ಪಾಂಡ್ಯ ಬಳಗ ಐದು ವಿಕೆಟ್‌ಗಳಿಂದ ಜಯ ಸಾಧಿಸಿತ್ತು.

ಪಂದ್ಯ ಆರಂಭ: ರಾತ್ರಿ 7.30

ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್ ಮತ್ತು ಜಿಯೊ ಸಿನಿಮಾ ಆ್ಯಪ್

ಪ್ರಮುಖ ಆಟಗಾರರು	
ಚೆನ್ನೈ ಸೂಪರ್ ಕಿಂಗ್ಸ್	
ಡೆವೊನ್ ಕಾನ್ವೆ	585 ರನ್
ಋತುರಾಜ್ ಗಾಯಕವಾಡ್	504 ರನ್
ಶಿವಂ ದುಬೆ	385 ರನ್
ತುಷಾರ್ ದೇಶಪಾಂಡೆ	20 ವಿಕೆಟ್
ರವೀಂದ್ರ ಜಡೇಜ	17 ವಿಕೆಟ್
ಗುಜರಾತ್ ಟೈಟನ್ಸ್	
ಶುಭಮನ್ ಗಿಲ್	680 ರನ್
ಹಾರ್ದಿಕ್ ಪಾಂಡ್ಯ	289 ರನ್
ಮೊಹಮ್ಮದ್ ಶಮಿ	24 ವಿಕೆಟ್
ರಶೀದ್ ಖಾನ್	24 ವಿಕೆಟ್
ಮೋಹಿತ್ ಶರ್ಮಾ	17 ವಿಕೆಟ್

ಚೆನ್ನೈ ತಂಡದ ನಾಯಕ ಮಹೇಂದ್ರ ಸಿಂಗ್ ಧೋನಿ ಹಾಗೂ ಗುಜರಾತ್ ತಂಡದ ಹಾರ್ದಿಕ್ ಪಾಂಡ್ಯ

'ಪ್ಲೇ ಆಫ್ ಸ್ಥಾನ: ಅರ್ಹರಾಗಿರಲಿಲ್ಲ'

ನಮ್ಮದು ಅತ್ಯುತ್ತಮ ತಂಡ ಆಗಿರಲಿಲ್ಲ: ಫಫ್ ಡುಪ್ಲೆಸಿ

ಬೆಂಗಳೂರು (ಪಿಟಿಐ): 'ನಮ್ಮದು ಈ ಬಾರಿ ಕಣದಲ್ಲಿದ್ದ ಅತ್ಯುತ್ತಮ ತಂಡಗಳಲ್ಲಿ ಒಂದಾಗಿರಲಿಲ್ಲ. ಪ್ಲೇ ಆಫ್‌ನಲ್ಲಿ ಸ್ಥಾನ ಪಡೆಯುವ ಅರ್ಹತೆ ಇರಲಿಲ್ಲ' ಎಂದು ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ನಾಯಕ ಫಫ್ ಡುಪ್ಲೆಸಿ ಹೇಳಿದ್ದಾರೆ.

'ನಮ್ಮ ಹೋರಾಟ ಲೀಗ್ ಹಂತದಲ್ಲೇ ಕೊನೆಗೊಂಡಿರುವುದು ನಿರಾಸೆ ಉಂಟುಮಾಡಿದೆ. ನಮ್ಮ ಪ್ರದರ್ಶನವನ್ನು ಅವಲೋಕಿಸಿದರೆ, ಕಣದಲ್ಲಿದ್ದ ಅತ್ಯುತ್ತಮ ತಂಡಗಳಲ್ಲಿ ಒಂದಾಗಿರಲಿಲ್ಲ ಎಂದು ಪ್ರಾಮಾಣಿಕವಾಗಿ ಹೇಳಬೇಕಾಗುತ್ತದೆ' ಎಂದು ಆರ್‌ಸಿಬಿ ಫ್ರಾಂಚೈಸ್ ಟ್ವಿಟರ್ ಖಾತೆಯಲ್ಲಿ ಪೋಸ್ಟ್ ಮಾಡಿದ ವಿಡಿಯೊದಲ್ಲಿ ತಿಳಿಸಿದ್ದಾರೆ.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಭಾನುವಾರ ನಡೆದಿದ್ದ 'ಮಾಡು–ಮಡಿ' ಪಂದ್ಯದಲ್ಲಿ ಆರ್‌ಸಿಬಿ ತಂಡ ಆರು ವಿಕೆಟ್‌ಗಳಿಂದ ಗುಜರಾತ್ ಟೈಟನ್ಸ್ ಎದುರು ಮಣಿದಿತ್ತು. ಬೆಂಗಳೂರಿನ ತಂಡ ನೀಡಿದ್ದ 198 ರನ್‌ಗಳ ಗುರಿಯನ್ನು ಹಾರ್ದಿಕ್ ಪಾಂಡ್ಯ ಬಳಗ 19.1 ಓವರ್‌ಗಳಲ್ಲಿ ನಾಲ್ಕು ವಿಕೆಟ್ ಕಳೆದುಕೊಂಡು ತಲುಪಿತ್ತು. ಅಜೇಯ ಶತಕ ಗಳಿಸಿದ್ದ ಶುಭಮನ್ ಗಿಲ್ (104) ಅವರು ಆರ್‌ಸಿಬಿಯ ಪ್ಲೇಆಫ್ ಕನಸನ್ನು ನುಚ್ಚುನೂರು ಮಾಡಿದ್ದರು.

'ಈ ಋತುವಿನಲ್ಲಿ ಕೆಲವು ಪಂದ್ಯಗಳಲ್ಲಿ ಅತ್ಯುತ್ತಮ ಪ್ರದರ್ಶನ ನೀಡಲು ಸಾಧ್ಯವಾಗಿದ್ದು ಅದೃಷ್ಟ ಎನ್ನಬೇಕು. ಆದರೆ ಒಟ್ಟಾರೆಯಾಗಿ ಮತ್ತು ಒಂದು ತಂಡವಾಗಿ ನಮ್ಮ ಪ್ರದರ್ಶನವನ್ನು ಗಮನಿಸಿದಾಗ, ಪ್ಲೇ ಆಫ್ ಪ್ರವೇಶಿಸುವ ಅರ್ಹತೆ ಇರಲಿಲ್ಲ' ಎಂದು ವಿಶ್ಲೇಷಿಸಿದ್ದಾರೆ.

'ಕೊನೆಯ ಪಂದ್ಯದಲ್ಲಿ ಎದುರಾದ ಸೋಲು ಮತ್ತೆ ಮತ್ತೆ ಕಾಡುತ್ತಿದೆ. ಗೆಲುವಿಗಾಗಿ ಕಷ್ಟಪಟ್ಟು ಪ್ರಯತ್ನಿಸಿದರೂ, ದುರದೃಷ್ಟವಶಾತ್ ಅಲ್ಪದರಲ್ಲೇ ಎಡವಿದೆವು. ಮ್ಯಾಕ್ಸಿ (ಗ್ಲೆನ್ ಮ್ಯಾಕ್ಸ್‌ವೆಲ್) ಅವರ ಫಾರ್ಮ್ ಮತ್ತು ನನ್ನ ಹಾಗೂ ವಿರಾಟ್ ಕೊಹ್ಲಿ ನಡುವಿನ ಜತೆಯಾಟಗಳು ಈ ಋತುವಿನಲ್ಲಿ ನಮಗೆ ದೊರೆತ ಸಕಾರಾತ್ಮಕ ಅಂಶಗಳು' ಎಂದು ಅಭಿಪ್ರಾಯಪಟ್ಟರು.

'ವೇಗದ ಬೌಲರ್ ಮೊಹಮ್ಮದ್ ಸಿರಾಜ್ ಅವರೂ ಸೊಗಸಾದ ಪ್ರದರ್ಶನ ನೀಡಿದ್ದಾರೆ. ಆದರೆ ಕೆಲವೊಂದು ವಿಭಾಗಗಳಲ್ಲಿ ನಮಗೆ ಪ್ರದರ್ಶನದಲ್ಲಿ ಸ್ಥಿರತೆ ಕಾಪಾಡಿಕೊಳ್ಳಲು ಆಗಲಿಲ್ಲ' ಎಂದು ನಿರಾಸೆ ವ್ಯಕ್ತಪಡಿಸಿದರು.

ನಿರಾಸೆಯಾಗಿದೆ: 'ವೈಯಕ್ತಿಕವಾಗಿ ಕೆಲವರಿಂದ ಅದ್ಭುತ ಆಟ ಮೂಡಿಬಂದರೂ, ನಮಗೆ ಪ್ಲೇ ಆಫ್ ಪ್ರವೇಶಿಸಲು ಆಗದ್ದಕ್ಕೆ ನಿರಾಸೆ ಉಂಟಾಗಿದೆ. ಒಂದೆರಡು ಪಂದ್ಯಗಳಲ್ಲಿ ಗೆಲುವಿನ ದಡದಲ್ಲಿ ಎಡವಿದೆವು. ಕೊನೆಯ ಕೆಲವು ಪಂದ್ಯಗಳನ್ನು ಒತ್ತಡದಲ್ಲೇ ಆಡಬೇಕಾಯಿತು' ಎಂದು ತಂಡದ ಮುಖ್ಯ ಕೋಚ್ ಸಂಜಯ್ ಬಾಂಗರ್ ಪ್ರತಿಕ್ರಿಯಿಸಿದ್ದಾರೆ.

ಮಧ್ಯಮ ಕ್ರಮಾಂಕದ ವೈಫಲ್ಯ: ಈ ಬಾರಿಯ ಟೂರ್ನಿಯಲ್ಲಿ ಮಧ್ಯಮ ಕ್ರಮಾಂಕದ ಬ್ಯಾಟರ್‌ಗಳ ವೈಫಲ್ಯವು ತಂಡದ ಮೇಲೆ ಪ್ರತಿಕೂಲ ಪರಿಣಾಮ ಬೀರಿತು ಎಂದು ವಿಶ್ಲೇಷಿಸಲಾಗುತ್ತಿದೆ. ಕೊಹ್ಲಿ, ಡುಪ್ಲೆಸಿ ಮತ್ತು ಗ್ಲೆನ್ ಮ್ಯಾಕ್ಸ್‌ವೆಲ್ ಅವರ ಮೇಲಿನ ಅತಿಯಾದ ಅವಲಂಬನೆಯು ಮುಳುವಾಗಿ ಪರಿಣಮಿಸಿತು.

ಡುಪ್ಲೆಸಿ ಅವರು ಎಂಟು ಅರ್ಧಶತಕಗಳ ನೆರವಿನಿಂದ 730 ರನ್ ಪೇರಿಸಿದರೆ, ಕೊಹ್ಲಿ ಅವರು ಎರಡು ಶತಕ ಮತ್ತು ಆರು ಅರ್ಧಶತಕಗಳ ನೆರವಿನಿಂದ 639 ರನ್‌ಗಳನ್ನು ಕಲೆಹಾಕಿದ್ದಾರೆ.



ಫಫ್ ಡುಪ್ಲೆಸಿ

ಕೊಹ್ಲಿಗೆ ಮಂಡಿ ನೋವು

'ವಿರಾಟ್ ಕೊಹ್ಲಿ ಅವರ ಮಂಡಿಯಲ್ಲಿ ಸಣ್ಣಮಟ್ಟದ ನೋವು ಕಾಣಿಸಿಕೊಂಡಿದೆ. ಆದರೆ ಆತಂಕಪಡಬೇಕಿಲ್ಲ' ಎಂದು ಆರ್‌ಸಿಬಿ ಕೋಚ್ ಸಂಜಯ್ ಬಾಂಗರ್ ಹೇಳಿದರು.

ಭಾನುವಾರ ನಡೆದ ಪಂದ್ಯದಲ್ಲಿ ವಿಜಯ್‌ಶಂಕರ್ ಅವರ ಕ್ಯಾಚ್ ಪಡೆಯುವ ವೇಳೆ ಕೊಹ್ಲಿ ಅವರ ಮಂಡಿಯಲ್ಲಿ ನೋವು ಕಾಣಿಸಿಕೊಂಡಿತ್ತು. ಕೊನೆಯ ಐದು ಓವರ್‌ಗಳಲ್ಲಿ ಅವರು ಫೀಲ್ಡಿಂಗ್ ಮಾಡಿರಲಿಲ್ಲ.

ಆರೆಂಜ್ ಕ್ಯಾಪ್ (ಹೆಚ್ಚು ರನ್)		
ಆಟಗಾರ	ತಂಡ	ರನ್
ಡುಪ್ಲೆಸಿ	ಆರ್‌ಸಿಬಿ	730

ಪರ್ಪಲ್ ಕ್ಯಾಪ್ (ಹೆಚ್ಚು ವಿಕೆಟ್)		
ಆಟಗಾರ	ತಂಡ	ವಿಕೆಟ್
ಶಮಿ	ಗುಜರಾತ್	24

ಮಲೇಷ್ಯಾ ಮಾಸ್ಟರ್ಸ್ ಬ್ಯಾಡ್ಮಿಂಟನ್: ಕಣದಲ್ಲಿ ಸಿಂಧು, ಪ್ರಣಯ್, ಲಕ್ಷ್ಯ

ಕ್ವಾಲಾಲಂಪುರ (ಪಿಟಿಐ): ಸುದೀರ್‌ಮನ್ ಕಪ್ ಟೂರ್ನಿಯಲ್ಲಿ ಅನುಭವಿಸಿರುವ ನಿರಾಸೆಯನ್ನು ಮರೆಯುವ ಸನ್ನಾಹದಲ್ಲಿರುವ ಪಿ.ವಿ. ಸಿಂಧು, ಎಚ್.ಎಸ್. ಪ್ರಣಯ್ ಸೇರಿದಂತೆ ಭಾರತದ ಬ್ಯಾಡ್ಮಿಂಟನ್ ಪಟುಗಳು ಮಂಗಳವಾರ ಇಲ್ಲಿ ಆರಂಭವಾಗಲಿರುವ ಮಲೇಷ್ಯಾ ಮಾಸ್ಟರ್ಸ್ ಟೂರ್ನಿಯಲ್ಲಿ ಕಣಕ್ಕಿಳಿಯಲಿದ್ದಾರೆ.

ಚೀನಾದಲ್ಲಿ ಇತ್ತೀಚೆಗೆ ನಡೆದ ಸುದೀರ್‌ಮನ್ ಕಪ್ ಟೂರ್ನಿಯಲ್ಲಿ ಚೀನಾ ತೈಪೆ ಹಾಗೂ ಮಲೇಷ್ಯಾ ಎದುರು ಭಾರತ ಎಡವಿತ್ತು. ಆರಂಭಿಕ ಹಂತದಲ್ಲೇ ಸ್ಪರ್ಧೆಯಿಂದ ಹೊರಬಿದ್ದಿತ್ತು.

ಪ್ಯಾರಿಸ್ ಒಲಿಂಪಿಕ್ಸ್ ಅರ್ಹತೆಗಮನದಲ್ಲಿಟ್ಟುಕೊಂಡಿರುವ ಸಿಂಧು ಅವರು ಮಲೇಷ್ಯಾ ಮಾಸ್ಟರ್ಸ್ ಟೂರ್ನಿಯ ಮಹಿಳಾ ಸಿಂಗಲ್ಸ್ ವಿಭಾಗದ ಮೊದಲ ಸುತ್ತಿನಲ್ಲಿ ಡೆನ್ಮಾರ್ಕ್‌ನ ಲಿನ್ ಕ್ರಿಸ್ಟೊಫರ್ಸನ್ ಎದುರು ಆಡುವರು. ಪುರುಷರ ಸಿಂಗಲ್ಸ್ ವಿಭಾಗದಲ್ಲಿ ಪ್ರಣಯ್ ಅವರು ತೈವಾನ್‌ನ ಚೊ ಟಿಯೆನ್ ಚೆನ್ ಅವರಿಗೆ ಮುಖಾಮುಖಿಯಾಗುವರು.

ಕಿದಂಬಿ ಶ್ರೀಕಾಂತ್, ಜಪಾನ್‌ನ ಕಂತಾ ಸುನೆಯಮಾ ವಿರುದ್ಧ, ಲಕ್ಷ್ಯ ಸೇನ್, ಸಿಂಗಪುರದ ಲೊಹ್ ಕೀನ್ ಯಿವ್ ಎದುರು ತಮ್ಮ ಅಭಿಯಾನ ಆರಂಭಿಸಲಿದ್ದಾರೆ.

ಪುರುಷರ ಡಬಲ್ಸ್‌ನಲ್ಲಿ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ– ಚಿರಾಗ್ ಶೆಟ್ಟಿ ಅವರಿಗೆ ಇಂಗ್ಲೆಂಡ್‌ನ ಬೆನ್ ಲೇನ್ ಮತ್ತು ಸೀನ್ ವೆಂಡಿ ಸ್ಪರ್ಧೆ ಎದುರಾಗಿದೆ.

ಪಿ.ವಿ. ಸಿಂಧು

ಸಮೀರ್ ವರ್ಮಾ

ಬ್ಯಾಡ್ಮಿಂಟನ್: ಸಮೀರ್‌ಗೆ ಚಿನ್ನ

ನವದೆಹಲಿ (ಪಿಟಿಐ): ಭಾರತದ ಸಮೀರ್ ವರ್ಮಾ ಅವರು ಸ್ಲೊವೇನಿಯಾ ಓಪನ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಚಿನ್ನದ ಪದಕ ಜಯಿಸಿದರು. ರೋಹನ್ ಕಪೂರ್ ಹಾಗೂ ಸಿಕ್ಕಿ ರೆಡ್ಡಿ ಜೋಡಿಯು ಬೆಳ್ಳಿ ಗೆದ್ದುಕೊಂಡಿತು.

ಸ್ಲೊವೇನಿಯಾದ ಮೇರಿಬೊರ್‌ನಲ್ಲಿ ಸೋಮವಾರ ನಡೆದ ಪುರುಷರ ಸಿಂಗಲ್ಸ್ ವಿಭಾಗದ ಫೈನಲ್ ಪಂದ್ಯದಲ್ಲಿ ಸಮೀರ್ 21–18, 21–14ರಿಂದ ತೈವಾನ್‌ನ ಸು ಲೀ ಯಾಂಗ್ ಅವರನ್ನು ಪರಾಭವಗೊಳಿಸಿದರು.

ಮಿಶ್ರ ಡಬಲ್ಸ್ ಫೈನಲ್ ಸೆಣಸಾಟದಲ್ಲಿ ರೋಹನ್ ಮತ್ತು ಸಿಕ್ಕಿ 12-21, 13-21ರಿಂದ ಡೆನ್ಮಾರ್ಕ್‌ನ ಜೆಸ್ಪರ್ ಟಾಫ್ಟ್– ಕ್ಲಾರಾ ಗ್ರೇವಸನ್ ವಿರುದ್ಧ ಸೋತರು.

ವಿಟಿಯು ಅಥ್ಲೆಟಿಕ್ಸ್: 'ಓಟದ ಡಬಲ್' ಪಡೆದ ಶ್ರೀನಿಧಿ

20 ಕಿ.ಮೀ ನಡಿಗೆ; ರಕ್ಷಿತಾ ದಾಖಲೆ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಪುತ್ತೂರಿನ ವಿವೇಕಾನಂದ ಕಾಲೇಜ್ ಆಫ್ ಎಂಜಿನಿಯರಿಂಗ್ ಅಂಡ್ ಟೆಕ್ನಾಲಜಿ (ವಿಸಿಇಟಿ) ವಿದ್ಯಾರ್ಥಿನಿ ಐ.ರಕ್ಷಿತಾ ಅವರು ಇಲ್ಲಿನ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಮೈದಾನದಲ್ಲಿ ಸೋಮವಾರ ನಡೆದ, ವಿಟಿಯು 24ನೇ ಅಂತರ ಕಾಲೇಜು ಅಥ್ಲೆಟಿಕ್ ಕೂಟದ 20 ಕಿ.ಮೀ ನಡಿಗೆ ಸ್ಪರ್ಧೆಯನ್ನು 2 ಗಂಟೆ, 17 ನಿಮಿಷ 13 ಸೆಕೆಂಡುಗಳಲ್ಲಿ ಕ್ರಮಿಸಿ ಹೊಸ ದಾಖಲೆ ಬರೆದರು.

ದಿನದ ಎರಡನೇ ಸ್ಪರ್ಧೆಯಲ್ಲಿ ರಕ್ಷಿತಾ ತಮ್ಮದೇ ಹೆಸರಿನಲ್ಲಿದ್ದ ದಾಖಲೆ (2 ಗಂಟೆ 19 ನಿ. 53 ಸೆ.) ಉತ್ತಮಪಡಿಸಿಕೊಂಡರು. ಇದೇ ಕಾಲೇಜಿನ ಸಿ.ಎಸ್.ವಿದ್ಯಾ 2 ಗಂಟೆ 38 ನಿಮಿಷ 13 ಸೆಕೆಂಡ್‌ನಲ್ಲಿ ಕ್ರಮಿಸಿ ಎರಡನೇ ಸ್ಥಾನ ಪಡೆದರು. ದ.ಕ. ಜಿಲ್ಲೆ ಬೆಂಜನಪದವಿನ ಕೆನರಾ ಎಂಜಿನಿಯರಿಂಗ್ ಕಾಲೇಜು ವಿದ್ಯಾರ್ಥಿನಿ ರಶ್ಮಿತಾ (3 ಗಂ. 8 ನಿ. 8 ಸೆ.) ಮೂರನೇ ಸ್ಥಾನ ಪಡೆದರು.

ಪುರುಷರ ವಿಭಾಗದ 20 ಕಿ.ಮೀ ನಡಿಗೆಯಲ್ಲಿ ನಿಟ್ಟೆಯ ಎನ್‌ಎಂಎಎಂಐಟಿಯ ಜಿತಿನ್ ಕುಮಾರ್ ಮೊದಲ, ಯುವರಾಜ್ ಎರಡನೇ ಮತ್ತು ಪುತ್ತೂರಿನ ವಿಸಿಟಿಯ ಬಿ.ಎನ್.ಅನ್ವಿತ್ ಮೂರನೇ ಸ್ಥಾನ ಪಡೆದರು.

ಜಾವೆಲಿನ್ ಎಸೆತದಲ್ಲಿ ವಿಟಿಯು ಪಿ.ಜಿ. ಸೆಂಟರ್‌ನ ಎಂಬಿಎ ವಿಭಾಗದ ಎನ್.ರವಿ ನಾಯಿಕ್ ಅವರು 44.93 ಮೀ. ದೂರ ಎಸೆದು ಪ್ರಥಮ ಸ್ಥಾನ ಪಡೆದರು. ವಿಇಟಿಯ ಪಿ.ವಿ.ರಂಜಿತ್ 44.02 ಮೀ. ಹಾಗೂ ಬೆಂಗಳೂರಿನ ಎಸ್.ಜೆ.ಬಿ.ಐ.ಟಿ ಕಾಲೇಜಿನ ರೋಹಿತ್ ಆಶಿಶ್ 43.64 ಮೀ. ಎಸೆದು ಕ್ರಮವಾಗಿ ದ್ವಿತೀಯ ಹಾಗೂ ತೃತೀಯ ಸ್ಥಾನ ಪಡೆದರು.

ಪುರುಷರ ವಿಭಾಗ: 800 ಮೀ. ಓಟದಲ್ಲಿ ಮಂಗಳೂರಿನ ಎಸ್.ಐ.ಟಿ.ಯ ಬಿ.ಎಂ. ಸಂಜಯ್ ಕುಮಾರ್, ಎತ್ತರ ಜಿಗಿತದಲ್ಲಿ ಮೂಡುಬಿದಿರೆ ಆಳ್ವಾಸ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ಆದಿತ್ಯ ಪಿ. ಕೋಟ್ಯಾನ್, ಲಾಂಗ್‌ಜಂಪ್‌ನಲ್ಲಿ ಬೆಂಗಳೂರಿನ ನ್ಯೂ ಹೊರೈಜನ್ ಕಾಲೇಜ್ ಆಫ್ ಎಂಜಿನಿಯರಿಂಗ್‌ನ ವಿಕಾಸ್ ಮೊದಲ ಸ್ಥಾನ ಪಡೆದರು.

ಮಹಿಳೆಯರ ವಿಭಾಗ: ಧಾರವಾಡದ ಎಸ್‌ಡಿಎಂ ಎಂಜಿನಿಯರಿಂಗ್ ಕಾಲೇಜಿನ ಶ್ರೀನಿಧಿ ಸೂರಗೊಂಡ ಮಹಿಳೆಯರ ವಿಭಾಗದ 800 ಮೀ. ಮತ್ತು 1,500 ಮೀ. ಓಟದಲ್ಲಿ ಮೊದಲ ಸ್ಥಾನ ಗಳಿಸಿ ಓಟದ ಡಬಲ್ ಪೂರೈಸಿದರು.

400 ಮೀ. ಓಟದಲ್ಲಿ ಬೆಂಗಳೂರಿನ ಎಂ.ಎಸ್‌ಆರ್.ಐ.ಟಿ.ಯ ಎಫ್.ಸಿಮ್ರನ್ ಮೊದಲ ಸ್ಥಾನ ಪಡೆದರು.

ಚೆನ್ನೈನಲ್ಲಿ ಸ್ಕ್ವಾಷ್ ವಿಶ್ವಕಪ್ ಟೂರ್ನಿ

ಚೆನ್ನೈ (ಪಿಟಿಐ): ಸ್ಕ್ವಾಷ್ ವಿಶ್ವಕಪ್ ಟೂರ್ನಿಯು ಜೂನ್ 13ರಿಂದ 17ರವರೆಗೆ ಇಲ್ಲಿ ನಡೆಯಲಿದ್ದು, ಸೌರವ್ ಘೋಷಾಲ್ ಮತ್ತು ಜೋಷ್ನಾ ಚಿಣ್ಣಪ್ಪ ಅವರು ಭಾರತದ ಸವಾಲು ಮುನ್ನಡೆಸಲಿದ್ದಾರೆ. ಭಾರತ ಸ್ಕ್ವಾಷ್ ರ‍್ಯಾಕೆಟ್ ಫೆಡರೇಷನ್ ಸೋಮವಾರ ಈ ವಿಷಯ ತಿಳಿಸಿದೆ.

ಆತಿಥೇಯ ಭಾರತ ಸೇರಿದಂತೆ ಒಂಬತ್ತು ತಂಡಗಳು ಟೂರ್ನಿಯಲ್ಲಿ ಭಾಗವಹಿಸಲಿವೆ. ಹಾಂಗ್‌ಕಾಂಗ್, ಚೀನಾ, ಜಪಾನ್, ಮಲೇಷ್ಯಾ, ಈಜಿಪ್ಟ್, ದಕ್ಷಿಣ ಆಫ್ರಿಕಾ, ಆಸ್ಟ್ರೇಲಿಯಾ ಮತ್ತು ಕೊಲಂಬಿಯಾ ಟೂರ್ನಿಯಲ್ಲಿ ಪಾಲ್ಗೊಳ್ಳಲಿರುವ ಇನ್ನುಳಿದ ತಂಡಗಳು.

ಸೌರವ್, ಅಭಯ್ ಸಿಂಗ್, ಜೋಷ್ನಾ ಮತ್ತು ತನ್ವಿ ಖನ್ನಾ ಭಾರತ ತಂಡದಲ್ಲಿದ್ದಾರೆ.

ಜೋಷ್ನಾ ಚಿಣ್ಣಪ್ಪ

ವಿನೀಸಿಯಸ್‌ಗೆ ಮತ್ತೆ ಜನಾಂಗೀಯ ನಿಂದನೆ

ಮ್ಯಾಡ್ರಿಡ್ (ರಾಯಿಟರ್ಸ್/ ಎಪಿ): ರಿಯಲ್ ಮ್ಯಾಡ್ರಿಡ್ ಫುಟ್‌ಬಾಲ್ ತಂಡದ ಬ್ರೆಜಿಲ್‌ನ ಆಟಗಾರ ವಿನೀಸಿಯಸ್ ಜೂನಿಯರ್ ಅವರು ಮತ್ತೆ ಜನಾಂಗೀಯ ನಿಂದನೆಗೆ ಗುರಿಯಾದ ಆರೋಪ ಕೇಳಿಬಂದಿದೆ.

ಭಾನುವಾರ ನಡೆದ ವಲೆನ್ಸಿಯಾ ವಿರುದ್ಧದ ಲಾ ಲಿಗಾ ಪಂದ್ಯದಲ್ಲಿ ಈ ಘಟನೆ ನಡೆದಿದೆ. ಪಂದ್ಯದಲ್ಲಿ ವಲೆನ್ಸಿಯಾ 1–0 ಗೋಲಿನಿಂದ ರಿಯಲ್ ಮ್ಯಾಡ್ರಿಡ್ ತಂಡವನ್ನು ಮಣಿಸಿತ್ತು.

ಪಂದ್ಯದ 70ನೇ ನಿಮಿಷದಲ್ಲಿ ಪ್ರೇಕ್ಷಕರಲ್ಲೊಬ್ಬ ವಿನೀಸಿಯಸ್ ಅವರನ್ನು ಗುರಿಯಾಗಿಸಿ ಜನಾಂಗೀಯವಾಗಿ ನಿಂದಿಸಿದ್ದಾರೆ ಎಂದು ಆರೋಪಿಸಲಾಗಿದೆ.

'ಇಂತಹ ಘಟನೆ ಇದೇ ಮೊದಲಲ್ಲ. ಪದೇ ಪದೇ ನಡೆಯುತ್ತಿದೆ. ಲಾ ಲಿಗಾದಲ್ಲಿ ಜನಾಂಗೀಯತೆ ಸಾಮಾನ್ಯವಾಗಿದೆ. ಒಂದು ಕಾಲದಲ್ಲಿ ರೊನಾಲ್ಡಿನೊ, ರೊನಾಲ್ಡೊ, ಕ್ರಿಸ್ಟಿಯಾನೊ (ರೊನಾಲ್ಡೊ) ಮತ್ತು ಮೆಸ್ಸಿ ಅವರಿಗೆ ಸೇರಿದ್ದ ಲೀಗ್ (ಲಾ ಲಿಗಾ) ಈಗ ಜನಾಂಗೀಯವಾದಿಗಳಿಗೆ ಸೇರಿದೆ. ಆದರೆ ಅವರ ವಿರುದ್ಧ ನನ್ನ ಹೋರಾಟ ಮುಂದುವರಿಯಲಿದೆ' ಎಂದು 22 ವರ್ಷದ ವಿನೀಸಿಯಸ್ ಅವರು 'ಟ್ವೀಟ್' ಮಾಡಿದ್ದಾರೆ.

ತನಿಖೆ ಆರಂಭ: ಜನಾಂಗೀಯ ನಿಂದನೆ ಘಟನೆ ಬಗ್ಗೆ ರಿಯಲ್ ಮ್ಯಾಡ್ರಿಡ್ ತಂಡದ ವ್ಯವಸ್ಥಾಪನಾ ಮಂಡಳಿಯು ವಲೆನ್ಸಿಯಾದ ಅಟಾರ್ನಿ ಜನರಲ್ ಕಚೇರಿಯಲ್ಲಿ ದೂರು ನೀಡಿದ್ದು, ಸ್ಪೇನ್‌ನ ಪ್ರಾಸಿಕ್ಯೂಟರ್‌ಗಳು ಸೋಮವಾರ ತನಿಖೆ ಆರಂಭಿಸಿದ್ದಾರೆ.

ವಿನೀಸಿಯಸ್ ಜೂನಿಯರ್

ಡಬ್ಲ್ಯುಟಿಸಿ ಫೈನಲ್: ಏಳು ಆಟಗಾರರು ಇಂದು ಲಂಡನ್‌ಗೆ

ನವದೆಹಲಿ (ಪಿಟಿಐ): ವಿರಾಟ್ ಕೊಹ್ಲಿ ಸೇರಿದಂತೆ ಭಾರತ ತಂಡದ ಏಳು ಆಟಗಾರರ ಮೊದಲ ಬ್ಯಾಚ್, ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್‌ನ (ಡಬ್ಲ್ಯುಟಿಸಿ) ಫೈನಲ್‌ನಲ್ಲಿ ಪಾಲ್ಗೊಳ್ಳಲು ಮಂಗಳವಾರ ಬೆಳಿಗ್ಗೆ ಲಂಡನ್‌ಗೆ ಪ್ರಯಾಣಿಸಲಿದೆ.

ಕೊಹ್ಲಿ, ಮೊಹಮ್ಮದ್ ಸಿರಾಜ್, ಆರ್.ಅಶ್ವಿನ್, ಅಕ್ಷರ್ ಪಟೇಲ್, ಶಾರ್ದೂಲ್ ಠಾಕೂರ್, ಉಮೇಶ್ ಯಾದವ್ ಮತ್ತು ಜೈದೇವ್ ಉನದ್ಕತ್ ಅಲ್ಲದೆ ರಾಹುಲ್ ದ್ರಾವಿಡ್ ನೇತೃತ್ವದ ಕೋಚಿಂಗ್ ಸಿಬ್ಬಂದಿ ಕೂಡಾ ತೆರಳಲಿದ್ದಾರೆ ಎಂದು ಬಿಸಿಸಿಐ ಮೂಲಗಳು ಹೇಳಿವೆ.

ಭಾರತ ಮತ್ತು ಆಸ್ಟ್ರೇಲಿಯಾ ನಡುವಣ ಡಬ್ಲ್ಯುಟಿಸಿ ಫೈನಲ್, ಓವಲ್‌ನಲ್ಲಿ ಜೂನ್ 7 ರಿಂದ 11ರ ವರೆಗೆ ನಡೆಯಲಿದೆ. ಭಾರತ ತಂಡದ ಸದಸ್ಯರು 2–3 ಬ್ಯಾಚ್‌ಗಳಲ್ಲಿ ತೆರಳುವ ಸಾಧ್ಯತೆಯಿದೆ.

ಐಪಿಎಲ್‌ನಲ್ಲಿ ಪ್ಲೇ ಆಫ್ ಪ್ರವೇಶಿಸಿರುವ ತಂಡಗಳಲ್ಲಿರುವ ರೋಹಿತ್ ಶರ್ಮಾ, ರವೀಂದ್ರ ಜಡೇಜ, ಇಶಾನ್ ಕಿಶನ್, ಶುಭಮನ್ ಗಿಲ್, ಮೊಹಮ್ಮದ್ ಶಮಿ, ಕೆ.ಎಸ್.ಭರತ್ ಮತ್ತು ಅಜಿಂಕ್ಯ ರಹಾನೆ ಮುಂದಿನ ದಿನಗಳಲ್ಲಿ ಪ್ರಯಾಣಿಸಲಿದ್ದಾರೆ.

ಟಿಟಿ: ಸತ್ಯನ್ ಮುನ್ನಡೆ

ಡರ್ಬನ್ (ಪಿಟಿಐ): ಭಾರತದ ಜಿ. ಸತ್ಯನ್ ಅವರು ಶರತ್ ಕಮಲ್ ಮತ್ತು ಮಣಿಕಾ ಬಾತ್ರಾ ಅವರ ಜತೆಗೂಡಿ ವಿಶ್ವ ಟೇಬಲ್ ಟೆನಿಸ್ ಚಾಂಪಿಯನ್‌ಷಿಪ್‌ನಲ್ಲಿ ಕ್ರಮವಾಗಿ ಪುರುಷರ ಡಬಲ್ಸ್ ಹಾಗೂ ಮಿಕ್ಸೆಡ್ ಡಬಲ್ಸ್ ವಿಭಾಗದ ಪ್ರಿ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು.

ಸೋಮವಾರ ನಡೆದ 32ರ ಸುತ್ತಿನ ಪಂದ್ಯದಲ್ಲಿ ಸತ್ಯನ್– ಶರತ್ ಜೋಡಿ 11-5, 11-4, 15-13 ರಲ್ಲಿ ಡೆನ್ಮಾರ್ಕ್‌ನ ಬೆನ್ನಿ ಮೆಯೊರೊಸ್– ಆ್ಯಂಡರ್ಸ್ ಲಿಂಡ್ ಅವರನ್ನು ಮಣಿಸಿತು.

ಬಳಿಕ ನಡೆದ ಮಿಕ್ಸೆಡ್ ಡಬಲ್ಸ್ ವಿಭಾಗದ ಪಂದ್ಯದಲ್ಲಿ ಸತ್ಯನ್– ಮಣಿಕಾ 8-11, 11-7, 11-6, 11-6 ರಲ್ಲಿ ಬ್ರೆಜಿಲ್‌ನ ಎರಿಕ್ ಜೌತಿ– ಲುಕಾಕುಮಹರ ಅವರನ್ನು ಸೋಲಿಸಿತು.

ಜಾವೆಲಿನ್: ಅಗ್ರಸ್ಥಾನಕ್ಕೆ ನೀರಜ್

ನವದೆಹಲಿ (ಪಿಟಿಐ): ಭಾರತದ ನೀರಜ್ ಚೋಪ್ರಾ ಅವರು ಪುರುಷರ ಜಾವೆಲಿನ್‌ನ ವಿಶ್ವ ರ‍್ಯಾಂಕಿಂಗ್‌ನಲ್ಲಿ ಅಗ್ರಸ್ಥಾನಕ್ಕೇರುವ ಮೂಲಕ ಐತಿಹಾಸಿಕ ಸಾಧನೆ ಮಾಡಿದ್ದಾರೆ.

'ವೃತ್ತಿಜೀವನದ ಅತ್ಯುತ್ತಮ ರ‍್ಯಾಂಕಿಂಗ್ ಪಡೆದ ನೀರಜ್‌ಗೆ ಅಭಿನಂದನೆಗಳು' ಎಂದು ಎಸ್‌ಎಐ ಮೀಡಿಯಾ 'ಟ್ವೀಟ್' ಮಾಡಿದೆ. ಭಾರತದ ಅಥ್ಲೀಟ್, ಗ್ರೆನೇಡಾದ ಆ್ಯಂಡರ್ಸನ್ ಪೀಟರ್ಸ್ ಅವರನ್ನು ಹಿಂದಿಕ್ಕಿದ್ದಾರೆ.

ಅಂತರರಾಷ್ಟ್ರೀಯ ಅಥ್ಲೆಟಿಕ್ ಫೆಡರೇಷನ್‌ನ ರ‍್ಯಾಂಕಿಂಗ್ ಪಟ್ಟಿಯಲ್ಲಿ ನೀರಜ್ 1,455 ಪಾಯಿಂಟ್ಸ್ ಹೊಂದಿದ್ದಾರೆ. ಪೀಟರ್ಸ್ ಬಳಿ 1,433 ಪಾಯಿಂಟ್ಸ್‌ಗಳಿವೆ.

ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಚಿನ್ನ ಗೆದ್ದಿದ್ದ ನೀರಜ್, ಆ ಬಳಿಕ ವಿಶ್ವ ಅಥ್ಲೆಟಿಕ್ ಚಾಂಪಿಯನ್‌ಷಿಪ್ ಮತ್ತು ಡೈಮಂಡ್ ಲೀಗ್‌ನಲ್ಲಿ ಉತ್ತಮ ಪ್ರದರ್ಶನ ನೀಡಿದ್ದರಿಂದ ನಂ.1 ಸ್ಥಾನಕ್ಕೇರಿದರು.

ನೀರಜ್ ಚೋಪ್ರಾ

ಬ್ರಿಜ್ ಭೂಷಣ್ ಸವಾಲು ಎದುರಿಸಿದ ಕುಸ್ತಿಪಟು

ಮಂಪರು ಪರೀಕ್ಷೆಗೆ ಸಿದ್ಧ: ಬಜರಂಗ್

ನವದೆಹಲಿ (ಪಿಟಿಐ): ಮಂಪರು ಪರೀಕ್ಷೆ ಒಳಗಾಗಲು ತಾವೂ ಸಿದ್ಧ ಎಂದು ಹೇಳುವ ಮೂಲಕ ಒಲಿಂಪಿಕ್ ಕಂಚಿನ ಪದಕ ವಿಜೇತ ಬಜರಂಗ್ ಪೂನಿಯಾ ಅವರು, ಭಾರತ ಕುಸ್ತಿ ಫೆಡರೇಷನ್ ಮಾಜಿ ಅಧ್ಯಕ್ಷ ಬ್ರಿಜ್‌ಭೂಷಣ್ ಶರಣ್ ಸಿಂಗ್ ಹಾಕಿರುವ ಸವಾಲನ್ನು ಸ್ವೀಕರಿಸಿದ್ದಾರೆ.

'ಕುಸ್ತಿಪಟುಗಳಿಗೆ ಲೈಂಗಿಕ ಕಿರುಕುಳ ನೀಡಿದ್ದೇನೆಂಬ ಆರೋಪಕ್ಕೆ ಸಂಬಂಧಿಸಿದಂತೆ ನಾನು ಮಂಪರು ಪರೀಕ್ಷೆ, ಸುಳ್ಳು ಪತ್ತೆ ಪರೀಕ್ಷೆ (ಪಾಲಿಗ್ರಾಫ್ ಟೆಸ್ಟ್) ಎದುರಿಸಲು ಸಿದ್ಧ. ಆದರೆ ವಿನೇಶಾ ಫೋಗಟ್ ಮತ್ತು ಬಜರಂಗ್ ಪೂನಿಯಾ ಅವರೂ ಪರೀಕ್ಷೆ ಎದುರಿಸಬೇಕು ಎಂಬುದು ನನ್ನ ಷರತ್ತು' ಎಂದು ಬ್ರಿಜ್‌ಭೂಷಣ್ ಭಾನುವಾರ ಫೇಸ್‌ಬುಕ್ ಪೋಸ್ಟ್ ಹಾಕಿದ್ದರು.

'ನಾವೂ ಮಂಪರು ಪರೀಕ್ಷೆಗೆ ಸಿದ್ಧ. ಆದರೆ ಅವರು (ಬ್ರಿಜ್ ಭೂಷಣ್) ಈ ಪರೀಕ್ಷೆಯನ್ನು ಸುಪ್ರೀಂ ಕೋರ್ಟ್ ಮೇಲ್ವಿಚಾರಣೆಯಲ್ಲಿ ರಾಷ್ಟ್ರೀಯ ವಾಹಿನಿಯ ನೇರಪ್ರಸಾರದಲ್ಲಿ ಎದುರಿಸಬೇಕು ಎಂಬುದು ನಮ್ಮ ಒತ್ತಾಯ' ಎಂದು ಬಜರಂಗ್ ಪ್ರತಿಕ್ರಿಯಿಸಿದ್ದಾರೆ.

'ಏನು ಪ್ರಶ್ನೆ ಕೇಳಲಾಗುತ್ತದೆ ಎಂಬುದನ್ನು ನಾವೂ ನೋಡಬಯಸುತ್ತೇವೆ. ನಾನು ಮತ್ತು ವಿನೇಶಾ ಅವರೂ ಮಂಪರು ಪರೀಕ್ಷೆ ಎದುರಿಸಬೇಕೆಂದು ಅವರು ಕೇಳಿದ್ದಾರೆ. ನಾವಿಬ್ಬರೇ ಏಕೆ?, ಅವರ ವಿರುದ್ಧ ದೂರು ಸಲ್ಲಿಸಿದ ಎಲ್ಲ ಮಹಿಳಾ ಕುಸ್ತಿಪಟುಗಳೂ ಪರೀಕ್ಷೆಗೆ ಒಳಗಾಗಲಿ' ಎಂದು ಜಂತರ್ ಮಂಥರ್‌ನ ಧರಣಿ ಸ್ಥಳದಿಂದ ಬಜರಂಗ್ ಹೇಳಿದ್ದಾರೆ.

ಬಜರಂಗ್

ಮೋದಿ ಸ್ವಾಗತಿಸಲು ಅಮೆರಿಕದ 20 ನಗರಗಳಲ್ಲಿ ಏಕತಾ ಜಾಥಾ

ವಾಷಿಂಗ್ಟನ್ (ಪಿಟಿಐ): ಅಮೆರಿಕ ಅಧ್ಯಕ್ಷ ಜೋ ಬೈಡನ್ ಅವರ ಆಹ್ವಾನದ ಮೇರೆಗೆ ಪ್ರಧಾನಿ ನರೇಂದ್ರ ಮೋದಿ ಅವರು ಜೂನ್ 21ರಂದು ಅಮೆರಿಕಕ್ಕೆ ಭೇಟಿ ನೀಡುತ್ತಿರುವುದು ಅಲ್ಲಿಯ ಅನಿವಾಸಿ ಭಾರತೀಯರ ಸಂಭ್ರಮಕ್ಕೆ ಕಾರಣವಾಗಿದೆ. ಅಮೆರಿಕದಾದ್ಯಂತ 20 ನಗರಗಳಲ್ಲಿ ಜೂನ್ 18ರಂದು 'ಭಾರತೀಯ ಏಕತಾ ದಿನ' ಜಾಥಾ ಮೂಲಕ ಮೋದಿ ಸ್ವಾಗತಿಸಲು ಭಾರತೀಯ ಸಮುದಾಯ ಯೋಜನೆ ರೂಪಿಸಿದೆ ಎಂದು ಕಾರ್ಯಕ್ರಮದ ಆಯೋಜಕರು ತಿಳಿಸಿದ್ದಾರೆ.

ವಾಷಿಂಗ್ಟನ್‌ನ ರಾಷ್ಟ್ರೀಯ ಸ್ಮಾರಕದ ಬಳಿ ಭಾರತೀಯ ಸಮುದಾಯದ ಸದಸ್ಯರು 18 ರಂದು ಒಟ್ಟು ಸೇರಲಿದ್ದಾರೆ. ಅಲ್ಲಿಂದ ಲಿಂಕನ್ ಸ್ಮಾರಕದ ವರೆಗೂ ಜಾಥಾ ಸಾಗಲಿದೆ. ಅಮೆರಿಕದ ಹಲವು ಸ್ಥಳಗಳಲ್ಲೂ ಜಾಥಾ ನಡೆಯಲಿದೆ ಎಂದು ಓವರ್‌ಸೀಸ್ ಫ್ರೆಂಡ್ಸ್ ಆಫ್ ಬಿಜೆಪಿ, ಯುಎಸ್‌ಎ ಸಂಘಟನೆಯ ರಾಷ್ಟ್ರೀಯ ಅಧ್ಯಕ್ಷ ಅಡಪ ಪ್ರಸಾದ್ ತಿಳಿಸಿದ್ದಾರೆ.

ಮೋದಿ ಜೂನ್ 21ರ ಮಧ್ಯಾಹ್ನ ನ್ಯೂಯಾರ್ಕ್ ತಲುಪಲಿದ್ದಾರೆ. ಸಂಜೆ ಅವರು ವಾಷಿಂಗ್ಟನ್‌ಗೆ ತೆರಳಲಿದ್ದಾರೆ. ಅದೇ ದಿನ ರಾತ್ರಿ ಶ್ವೇತಭವನದ ಆವರಣದಲ್ಲಿ ಭಾರತೀಯ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ನಿರ್ಧರಿಸಲಾಗಿದೆ. ಭಾರತದ ಸಾಧನೆಗಳ ಕುರಿತ ಧ್ವನಿ ಮತ್ತು ದೃಶ್ಯ ಪ್ರದರ್ಶನವನ್ನೂ ಈ ವೇಳೆ ಹಮ್ಮಿಕೊಳ್ಳಲಾಗುತ್ತದೆ.

ಜೂನ್ 22ರಂದು ಅಧ್ಯಕ್ಷ ಬೈಡನ್ ಅವರು ಶ್ವೇತಭವನದ ಆವರಣದಲ್ಲಿ ಆಯೋಜಿಸಿರುವ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಸಾವಿರಾರು ಭಾರತೀಯರಿಗೆ ಆಮಂತ್ರಣ ನೀಡಲಾಗಿದೆ. ಮೊದಲ ಬಾರಿಗೆ ಬೇರೆ ದೇಶದ ಸಮುದಾಯವನ್ನು ಆಮಂತ್ರಿಸಲಾಗಿದೆ ಎಂದು ಪ್ರಸಾದ್ ಹೇಳಿದ್ದಾರೆ.

ಎಫ್‌ಐಪಿಐಸಿ ಸಮ್ಮೇಳನ: ಪೆಸಿಫಿಕ್ ದ್ವೀಪ ರಾಷ್ಟ್ರಗಳ ನಾಯಕರಿಗೆ ಮೋದಿ ಅಭಯ

'ನಿಮ್ಮೊಂದಿಗೆ ಸದಾ ನಾವಿರುವೆವು'

ಪೋರ್ಟ್ ಮೊರೆಸ್ಬಿ (ಪಪುವಾ ನ್ಯೂ ಗಿನಿ) (ಪಿಟಿಐ): 'ನಿಮಗೆ ನಾವು ಎಲ್ಲಾ ರೀತಿಯಿಂದಲೂ ಸಹಾಯ ಹಸ್ತ ಚಾಚಲಿದ್ದೇವೆ. ನಿಮ್ಮೊಂದಿಗೆ ಸದಾ ಇರುತ್ತೇವೆ' ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಪೆಸಿಫಿಕ್ ದ್ವೀಪ ರಾಷ್ಟ್ರಗಳ 14 ಮಂದಿ ನಾಯಕರಿಗೆ ಅಭಯ ನೀಡಿದ್ದಾರೆ.

ಇದೇ ಮೊದಲ ಬಾರಿಗೆ ಪಪುವಾ ನ್ಯೂ ಗಿನಿಗೆ ಭೇಟಿ ನೀಡಿರುವ ಅವರು ಭಾರತ–ಪೆಸಿಫಿಕ್ ದ್ವೀಪ ರಾಷ್ಟ್ರಗಳ ಸಹಕಾರ ವೇದಿಕೆಯ (ಎಫ್‌ಐಪಿಐಸಿ) ಸಮ್ಮೇಳನವನ್ನು ಉದ್ದೇಶಿಸಿ ಸೋಮವಾರ ಮಾತನಾಡಿದ್ದಾರೆ. ಪೆಸಿಫಿಕ್ ದ್ವೀಪ ರಾಷ್ಟ್ರಗಳ ಪಾಲಿಗೆ ಭಾರತವೇ ನಂಬಿಕಸ್ಥ ದೇಶ ಎಂಬುದನ್ನು ಆ ರಾಷ್ಟ್ರಗಳ ನಾಯಕರಿಗೆ ಮನವರಿಕೆ ಮಾಡಿಕೊಡಲೂ ಅವರು ಪ್ರಯತ್ನಿಸಿದ್ದಾರೆ.

ಮೋದಿ– ಹಿಪ್ಕಿನ್ಸ್ ಚರ್ಚೆ

ಪೋರ್ಟ್ ಮೊರೆಸ್ಬಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರು ನ್ಯೂಜಿಲೆಂಡ್ ಪ್ರಧಾನಿ ಕ್ರಿಸ್ ಹಿಪ್ಕಿನ್ಸ್ ಅವರನ್ನು ಸೋಮವಾರ ಭೇಟಿ ಮಾಡಿ ದ್ವಿಪಕ್ಷೀಯ ಒಪ್ಪಂದಗಳ ಕುರಿತು ಮಾತುಕತೆ ನಡೆಸಿದರು. ವ್ಯಾಪಾರ, ವಾಣಿಜ್ಯ, ಶಿಕ್ಷಣ ಮತ್ತು ಕ್ರೀಡೆ, ತಂತ್ರಜ್ಞಾನ ಮತ್ತು ಪ್ರವಾಸೋದ್ಯಮ ಕ್ಷೇತ್ರಗಳಲ್ಲಿ ಪರಸ್ಪರ ಸಹಕಾರ ನೀಡುವುದಾಗಿ ಉಭಯ ನಾಯಕರು ತಿಳಿಸಿದರು.

ಭಾರತ ಮತ್ತು 14 ಪೆಸಿಫಿಕ್ ದ್ವೀಪರಾಷ್ಟ್ರಗಳ ನಡುವಣ ದ್ವಿಪಕ್ಷೀಯ ಸಂಬಂಧ ವೃದ್ಧಿ ಉದ್ದೇಶದ ಶೃಂಗದಲ್ಲಿ ಪಾಲ್ಗೊಳ್ಳಲು ಪ್ರಧಾನಿ ಮೋದಿ ಭಾನುವಾರ ಪಪುವಾ ನ್ಯೂಗಿನಿಗೆ ಬಂದಿದ್ದು, ಶೃಂಗದ ನಡುವೆ ಹಿಪ್ಕಿನ್ಸ್ ಅವರನ್ನು ಭೇಟಿ ಮಾಡಿದರು.

'ನಾವು ನಮ್ಮ ಸಾಮರ್ಥ್ಯ ಹಾಗೂ ಅನುಭವವನ್ನು ಯಾವುದೇ ಸಂಕೋಚವಿಲ್ಲದೆ ನಿಮ್ಮೊಂದಿಗೆ ಹಂಚಿಕೊಳ್ಳಲು ಸಿದ್ಧವಿದ್ದೇವೆ' ಎಂದೂ ಅವರು ಭರವಸೆ ನೀಡಿದ್ದಾರೆ.

ಕೋವಿಡ್‌ನಿಂದ ಎದುರಾಗಿದ್ದ ಸವಾಲುಗಳು ಹಾಗೂ ಇತರ ಜಾಗತಿಕ ಬೆಳವಣಿಗೆಗಳನ್ನು ಪ್ರಸ್ತಾಪಿಸಿ ಮಾತನಾಡಿದ ಅವರು, 'ಸವಾಲಿನ ಸಂದರ್ಭಗಳಲ್ಲಿ ಭಾರತವು ಪೆಸಿಫಿಕ್ ದ್ವೀಪ ರಾಷ್ಟ್ರಗಳ ನೆರವಿಗೆ ನಿಂತಿದೆ. ಮಾನವೀಯ ನೆಲೆಯಲ್ಲಿ ನಮ್ಮಿಂದ ಯಾವುದೇ ಸಹಕಾರವನ್ನಾದರೂ ಪಡೆದುಕೊಳ್ಳಿ. ಇದಕ್ಕೆ ಸಂಕೋಚ ಬೇಡ. ನಾವು ನಿಮ್ಮ ಆದ್ಯತೆಯನ್ನು ಗೌರವಿಸುತ್ತೇವೆ' ಎಂದು ತಿಳಿಸಿದ್ದಾರೆ.

'ನಾವು ಯಾರನ್ನು ನಂಬಿಕಸ್ಥರು ಎಂದು ಪರಿಗಣಿಸಿದ್ದೆವೊ ಅವರು ಕಷ್ಟಕಾಲದಲ್ಲಿ ನಮ್ಮ ನೆರವಿಗೆ ಧಾವಿಸಲಿಲ್ಲ. 'ಕಷ್ಟಕಾಲದಲ್ಲಿ ನೆರವಾಗುವವನೇ ನಿಜವಾದ ಸ್ನೇಹಿತ' ಎಂಬ ಮಾತು ಈ ವಿಚಾರದಲ್ಲಿ ಅಕ್ಷರಶಃ ನಿಜವಾಗಿದೆ' ಎಂದು ಯಾವ ರಾಷ್ಟ್ರಗಳ ಹೆಸರನ್ನೂ ಪ್ರಸ್ತಾಪಿಸದೆಯೇ ದೂರಿದ್ದಾರೆ.

'ಕಷ್ಟ ಕಾಲದಲ್ಲಿ ಲಸಿಕೆ, ಔಷಧ, ಗೋಧಿ ಅಥವಾ ಸಕ್ಕರೆ ಹೀಗೆ ಅಗತ್ಯ ವಸ್ತುಗಳನ್ನು ಪೂರೈಸುವ ಮೂಲಕ ಭಾರತವು ಪೆಸಿಫಿಕ್ ದ್ವೀಪದ ಮಿತ್ರ ರಾಷ್ಟ್ರಗಳ ಬೆನ್ನಿಗೆ ನಿಂತಿದೆ. ಇದು ಸಂತಸದ ವಿಚಾರ. ಭಾರತವು ಇಡಿ ಜಗತ್ತನ್ನೇ ಒಂದು ಕುಟುಂಬವೆಂದು ಪರಿಗಣಿಸುತ್ತದೆ. ನಿಮ್ಮನ್ನು ಸಣ್ಣ ದ್ವೀಪ ರಾಷ್ಟ್ರಗಳೆಂದು ಭಾವಿಸಿಲ್ಲ' ಎಂದಿದ್ದಾರೆ.

ಶಾಲಾ ವಸತಿ ನಿಲಯದಲ್ಲಿ ಬೆಂಕಿ: 19 ವಿದ್ಯಾರ್ಥಿಗಳು ಸಾವು

ಜಾರ್ಜ್‌ಟೌನ್ (ಎಪಿ): ಗಯಾನಾದ ಶಾಲಾ ವಸತಿ ನಿಲಯದಲ್ಲಿ ಸೋಮವಾರ ಮುಂಜಾನೆ ಸಂಭವಿಸಿದ ಅಗ್ನಿ ದುರಂತದಲ್ಲಿ ಕನಿಷ್ಠ 19 ವಿದ್ಯಾರ್ಥಿಗಳು ಮೃತಪಟ್ಟಿದ್ದು, ಹಲವರು ಗಾಯಗೊಂಡಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ರಾಜಧಾನಿ ಜಾರ್ಜ್‌ಟೌನ್‌ನಿಂದ ದಕ್ಷಿಣಕ್ಕೆ 200 ಮೈಲಿ ದೂರದಲ್ಲಿರುವ ಮದಿಯಾ ನಗರದ ಮಾಧ್ಯಮಿಕ ಶಾಲೆಯ ವಸತಿ ನಿಲಯದ ಕಟ್ಟಡದಲ್ಲಿ ಬೆಂಕಿ ಅವಘಡ ಸಂಭವಿಸಿದೆ.

'ಅಗ್ನಿಶಾಮಕ ದಳ ಸಿಬ್ಬಂದಿ 20 ಮಕ್ಕಳನ್ನು ರಕ್ಷಿಸುವಲ್ಲಿ ಯಶಸ್ವಿಯಾದರು. ಸ್ಥಳದಲ್ಲಿ 14 ವಿದ್ಯಾರ್ಥಿಗಳು ಮೃತಪಟ್ಟರೆ, ಐವರು ಸ್ಥಳೀಯ ಆಸ್ಪತ್ರೆಯಲ್ಲಿ ಸಾವಿಗೀಡಾದರು. ಇಬ್ಬರು ಮಕ್ಕಳ ಸ್ಥಿತಿ ಚಿಂತಾಜನಕವಾಗಿದ್ದು, ನಾಲ್ವರಿಗೆ ಗಂಭೀರ ಗಾಯಗಳಾಗಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಹೆಚ್ಚಿನ ಚಿಕಿತ್ಸೆಗಾಗಿ ಆರು ವಿದ್ಯಾರ್ಥಿಗಳನ್ನು ಜಾರ್ಜ್‌ಟೌನ್‌ಗೆ ಕರೆದೊಯ್ಯಲಾಗಿದ್ದು, ಇನ್ನೂ 10 ವಿದ್ಯಾರ್ಥಿಗಳ ಮೇಲೆ ನಿಗಾ ವಹಿಸಲಾಗಿದೆ ಎಂದು ಹೇಳಿದ್ದಾರೆ.

'ಇದೊಂದು ದೊಡ್ಡ ವಿಪತ್ತು. ಅವಘಡದಲ್ಲಿ ಹಲವು ಮಕ್ಕಳನ್ನು ಕಳೆದುಕೊಂಡಿದ್ದೇವೆ. ಗಾಯಾಳು ವಿದ್ಯಾರ್ಥಿಗಳು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಅವಘಡ ಸಂಭವಿಸಿದ ಸ್ಥಳಕ್ಕೆ ಖಾಸಗಿ ಮತ್ತು ಮಿಲಿಟರಿ ವಿಮಾನಗಳನ್ನು ಕಳುಹಿಸಲಾಗಿದೆ' ಎಂದು ಅಧ್ಯಕ್ಷ ಇರ್ಫಾನ್ ಅಲಿ ಹೇಳಿದ್ದಾರೆ.

ರಾಷ್ಟ್ರೀಯ ಭದ್ರತಾ ಸಲಹೆಗಾರ ಜೆರಾಲ್ಡ್ ಗೌವಿಯಾ, 'ಮಧ್ಯರಾತ್ರಿ ನಂತರ ಬೆಂಕಿ ಕಾಣಿಸಿಕೊಂಡಿರಬಹುದು' ನಿಖರ ಕಾರಣ ಏನು ಎಂಬುದು ಗೊತ್ತಿಲ್ಲ' ಎಂದು ಹೇಳಿದರು.